ವಿಶ್ವವಾಣಿ
ವಿಶ್ವಾಸವೇ ವಿಶ್ವ

ಸೊಂಪಾದ ಪುಟಗಳು

ಕ್ಷಯ ಚಿಕಿತ್ಸೆಯು ನಡೆದು ಬಂದ ದಾರಿ
ಹಿಂದಿರುಗಿ ನೋಡಿದಾಗ
ಡಾ. ನಾ.ಸೋಮೇಶ್ವರ 6

ಆಯೋಗದ ಮೇಲೆ ಆಯೋಗ, ಆಕ್ಸಿಜನ್ ಸಂತ್ರಸ್ತರಿಗಿಲ್ಲ ಯೋಗ!
ಲೋಕಮತ
ಲೋಕೇಶ್ ಕಾಯರ್ಗ 7

ದಾರಿದೀಪೋಕ್ತಿ

ಯಾರಾದರೂ ನಿಮ್ಮನ್ನು ಕಟುವಾಗಿ ಟೀಕಿಸಿದರೂ ಅದನ್ನು ಸಂಪೂರ್ಣವಾಗಿ ಸ್ವೀಕರಿಸಿ. ಆದರೆ ಯಾರಾದರೂ ನಿಮ್ಮನ್ನು ಅಸಭ್ಯ ಅಥವಾ ಅಗೌರವವಾಗಿ ನಡೆಸಿಕೊಂಡರೆ, ಅದನ್ನು ಯಾವ ಕಾರಣಕ್ಕೂ ಒಪ್ಪಿಕೊಳ್ಳಬೇಡಿ. ನಿಮ್ಮನ್ನು ಕೀಳಾಗಿ ನೋಡುವವರ ಬಗ್ಗೆ ಗೌರವ ಇಟ್ಟುಕೊಳ್ಳುವುದು ನಿಮ್ಮನ್ನು ನೀವು ಅವಮಾನಿಸಿಕೊಂಡಂತೆ.

ವಕ್ರತುಂಡೋಕ್ತಿ

ಕಾಮನ್ ಸೆನ್ಸ್ ಎಂಬುದು ಒಂದು ವಿಶೇಷ ಗುಣವಲ್ಲ, ಅದೊಂದು ಶಿಕ್ಷೆ. ಯಾಕೆಂದರೆ ಅದು ಯಾರಲ್ಲಿ ಇರುವುದಿಲ್ಲವೋ ಅಂಥವರ ಜತೆಗೆ ನೀವು ಹೆಣಗಬೇಕಾಗುತ್ತದೆ.

ಮುಡಾ: ಇಡಿ ತನಿಖೆಗೆ ಹೈಕೋರ್ಟ್ ಅಸ್ತು, ಮೇಲ್ಮನವಿಗೆ ಅವಕಾಶ

ಮೇ 7ರ ತನಕ ಸಿಎಂಗೆ ನಿರಾಳ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಮುಡಾ ಹಗರಣಕ್ಕೆ ಸಂಬಂಧಿಸಿ ದಂತೆ ಲೋಕಾಯುಕ್ತ ಪೊಲೀಸರು ಸಲ್ಲಿಸಿರುವ ಬಿ ರಿಪೋರ್ಟ್ ಬಗ್ಗೆ ಸದ್ಯಕ್ಕೆ ಯಾವುದೇ ತೀರ್ಪು ನೀಡುವುದಿಲ್ಲ ಎಂದಿರುವ ಕರ್ನಾಟಕ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯವು ತನಿಖೆ ಮುಂದುವರಿಸಲು ಲೋಕಾಯುಕ್ತಕ್ಕೆ ಆದೇಶ ನೀಡಿದೆ. ಅಲ್ಲದೆ, ಸಿಎಂ ವಿರುದ್ಧ ಸಲ್ಲಿಸಿರುವ ಬಿ-ವರದಿ ಪ್ರಶ್ನಿಸಿ ಇ.ಡಿ ಅರ್ಜಿ ಸಲ್ಲಿಸಬಹುದು ಎಂದು ಆದೇಶಿಸಿದೆ.

ಮುಡಾ ಪ್ರಕರಣದಲ್ಲಿ ಲೋಕಾಯುಕ್ತ ಪೊಲೀಸರು ಸಲ್ಲಿಸಿರುವ ಬಿ ವರದಿ ವಿರೋಧಿಸಿ ದೂರುದಾರ ಸ್ನೇಹಮಯಿ ಕೃಷ್ಣ ಸಲ್ಲಿಸಿರುವ ಅರ್ಜಿಗೆ ಸಂಬಂಧಿಸಿದಂತೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದ ನ್ಯಾಯಾಲಯದ ನ್ಯಾಯಾಧೀಶ ಗಜಾನನ ಭಟ್ ಅವರು ಮಂಗಳವಾರ ವಿಚಾರಣೆ ನಡೆಸಿದ್ದು, ಪ್ರಕರಣದ ಸಂಬಂಧ ಲೋಕಾಯುಕ್ತರು ತನಿಖೆ ಪೂರ್ಣಗೊಳಿಸಿ, ಮೇ 7ಕ್ಕೆ ಅಂತಿಮ ವರದಿ ಸಲ್ಲಿಸಬೇಕು ಎಂದು ಆದೇಶ ನೀಡಿದ್ದಾರೆ. ಅಲ್ಲದೆ, ಜಾರಿ ನಿರ್ದೇಶನಾಲಯವು ಕೂಡ ನೊಂದ ವ್ಯಕ್ತಿ ಎಂದ ನ್ಯಾಯಾಲಯವು ಅರ್ಜಿ ಸಲ್ಲಿಸಲು ಅರ್ಹ ಎಂದು ತಿಳಿಸಿದೆ.

ಮುಡಾ ನಿವೇಶನ ಹಂಚಿಕೆ ಅಕ್ರಮದ ಪ್ರಕರಣದಲ್ಲಿ ಮೊದಲ ಆರೋಪಿಯಾಗಿದ್ದ ಸಿಎಂ ಸಿದ್ದರಾಮಯ್ಯ ಅವರ ವಿರುದ್ಧ ಅಪರಾಧ ಸಾಬೀತುಪಡಿಸುವ ಯಾವುದೇ ಅಂಶಗಳಿಲ್ಲ ಎಂಬ ಷರಾ ಬರೆದಿರುವ ಅಂತಿಮ ವರದಿಯ ಬಿ ರಿಪೋರ್ಟ್ ಅನ್ನು ಲೋಕಾಯುಕ್ತ ಪೊಲೀಸರು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ಫೆಬ್ರವರಿ 20ರಂದು ಸಲ್ಲಿಸಿದ್ದರು. ಆ ವರದಿಯನ್ನು ನ್ಯಾಯಾಲಯವು ಅಂಗೀಕಾರ ಮಾಡಿದ್ದರೆ ಸಿದ್ದರಾಮಯ್ಯಗೆ ದೊಡ್ಡ ರಿಲೀಫ್ ಸಿಗುತ್ತಿತ್ತು. ಆದರೆ, ಈ ಬಗ್ಗೆ ಮೇ 7ಕ್ಕೆ ತೀರ್ಮಾನ ಮಾಡಲಾಗುವುದು ಎಂದು ನ್ಯಾಯಾಲಯ ಹೇಳಿದ್ದು, ಸದ್ಯ ಸಿಎಂಗೆ ಮೇ 7ರವರೆಗೆ ರಿಲೀಫ್ ಸಿಕ್ಕಿದೆ.

- ಮುಡಾ ಹಗರಣಕ್ಕೆ ಸಂಬಂಧಿಸಿದಂತೆ ಲೋಕಾಯುಕ್ತ ತನಿಖೆ ಮುಂದುವರಿಸಲು ನ್ಯಾಯಾಲಯ ಸೂಚನೆ
- ಲೋಕಾಯುಕ್ತರ ಬಿ ವರದಿ ನ್ಯಾಯಾಲಯದಲ್ಲಿ ಅಂಗೀಕಾರವಾಗುವ ನಿರೀಕ್ಷೆಯಲ್ಲಿದ್ದ ಸಿಎಂಗೆ ನಿರಾಸೆ
- ಮೇ 7ಕ್ಕೆ ಅಂತಿಮ ವರದಿ ನೀಡಲು ಲೋಕಾಯುಕ್ತಕ್ಕೆ ನ್ಯಾಯಾಲಯ ಸೂಚನೆ

ಏನಿದು ಪ್ರಕರಣ?

ಮೈಸೂರು ತಾಲೂಕಿನ ಕೆಸರೆ ಗ್ರಾಮದ ಸರ್ವೇ ನಂಬರ್ 464ರಲ್ಲಿನ 3.16 ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಾಗಿತ್ತು. ಇದಕ್ಕೆ ಬದಲಾಗಿ ಮುಡಾದಿಂದ 14 ನಿವೇಶನಗಳನ್ನು ಪಡೆಯುವ ಪ್ರಕ್ರಿಯೆಯಲ್ಲಿ ಅಕ್ರಮ ನಡೆದಿದೆ ಎಂದು ಆರೋಪಿಸಲಾಗಿತ್ತು. ಈ ಬಗ್ಗೆ ಲೋಕಾಯುಕ್ತ ಪೊಲೀಸರು ತನಿಖೆ ನಡೆಸಿದರು. ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಅವರ ಪತ್ನಿ, ಸಂಬಂಧಿ ಹಾಗೂ ಜಮೀನಿನ ಮಾಲೀಕರ ವಿರುದ್ಧದ ತನಿಖೆಯನ್ನು ಮೈಸೂರು ಲೋಕಾಯುಕ್ತ ಪೊಲೀಸರು ನಡೆಸಿದ್ದರು. ಆದರೆ, ಈ ನಾಲ್ವರು ಅಕ್ರಮ ಎಸಗಿರುವ ಬಗ್ಗೆ ಯಾವುದೇ ಸಾಕ್ಷ್ಯ ಸಿಕ್ಕಿಲ್ಲ ಎಂದು ಲೋಕಾಯುಕ್ತರು ನ್ಯಾಯಾಲಯಕ್ಕೆ 'ಬಿ' ರಿಪೋರ್ಟ್ ಸಲ್ಲಿಸಿದ್ದರು. ಈ 'ಬಿ' ರಿಪೋರ್ಟ್ ಅನ್ನು ಪ್ರಶ್ನಿಸಿ ಸ್ನೇಹಮಯಿ ಕೃಷ್ಣ ಅವರು ನ್ಯಾಯಾಲಯಕ್ಕೆ ತಕರಾರು ಅರ್ಜಿ ಸಲ್ಲಿಸಿದ್ದರು. ಇದರಿಂದಾಗಿ ಪ್ರಕರಣ ಮತ್ತೆ ಮುನ್ನೆಲೆಗೆ ಬಂದಿದೆ.

ಸಮಾಚಾರ ಸಣ್ಣದಲ್ಲ

ಪ್ರೊ.ತಾರಾನಾಥ ಒಬ್ಬ ಶ್ರೇಷ್ಠ ಪ್ರಾಧ್ಯಾಪಕ

ಹುನಗುಂದ: ಪ್ರೊ. ಕೆ. ತಾರಾನಾಥರು ಹಿಂದಿ ವಿಷಯದ ಪ್ರಾಧ್ಯಾಪಕರಾಗಿ, ಚಿಂತಕರಾಗಿ, ಚುಟುಕು ಸಾಹಿತ್ಯಕ್ಕೆ ಅನನ್ಯ ಕೊಡುಗೆ ನೀಡಿ ಒಬ್ಬ ಶ್ರೇಷ್ಠ ಪ್ರಾಧ್ಯಾಪಕರಾಗಿದ್ದಾರೆ. ಎಂದು ಹೇಳಿದರು.

ನಗರದಲ್ಲಿ ತಾಲೂಕಾ ಶರಣ ಸಾಹಿತ್ಯ ಪರಿಷತ್ತು, ಕದಳಿ ಮಹಿಳಾ ವೇದಿಕೆಯ ಸಹಯೋಗದಲ್ಲಿ ದತ್ತಿ ಉಪನ್ಯಾಸ, ಕೃತಿ ಲೋಕಾರ್ಪಣೆ ಮಾಡಿ ಮಾತನಾಡಿದರು. ಡಾ. ಲಲಿತಾ ಹೊಸಪ್ಯಾಟಿಯವರ 'ನದಿ ನದಿ ಎಲ್ಲಿ ಹೋತು' ಕೃತಿ ಲೋಕಾರ್ಪಣೆಯನ್ನು ಕ್ಯಾಪ್ಟನ್ ಅರ್ಜುನ ಕೋರಿ , ಪೂಜ್ಯರು ಗಣ್ಯರಿಂದ ಬಿಡುಗಡೆ ಕಾರ್ಯಕ್ರಮ ನಡೆಯಿತು. ಸಭೆಯಲ್ಲಿ ದತ್ತಿ ಉಪನ್ಯಾಸ ನೀಡಿದ ಪ್ರೊ.ಸಿ.ಜಿ.ಹವಾಲ್ದಾರ ಮಾತನಾಡಿ ಪ್ರೊ. ತಾರಾನಾಥರು ವಿ.ಮ ಕಾಲೇಜನಲ್ಲಿ 40 ವರ್ಷಗಳ ಕಾಲ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ ಇವರ ಶಿಷ್ಯಂದಿರು ನಾನಾಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ ಎಂದರು. ಕೃತಿ ಅವಲೋಕನ ಮಾಡಿದ ಹಿರಿಯ ಸಾಹಿತಿ ಹಳ್ಳೂರ ಅವರು ಡಾ.ಲಲಿತಾ ಹೊಸಪ್ಯಾಟಿಯವರು ಮಕ್ಕಳ ಸಾಹಿತ್ಯದ 14 ನೇ ಕೃತಿ ನದಿ ನದಿ ಎಲ್ಲಿ ಹೋತು ಕೃತಿ ಮುಂದಿನ ದಿನಮಾನಗಳಲ್ಲಿ ನದಿಯನ್ನು ಹುಡುಕುವ ಪರಿಕಲ್ಪನೆಯೇ ಮುಖಪುಟದ ಹೆಸರು ಈ ಪುಸ್ತಕ ಪ್ರಾಥಮಿಕ ಶಾಲೆಯ ಮಕ್ಕಳು ಕಲಿಯಲು ಯೋಗ್ಯವಾಗಿದೆ ಎಂದರು. ವಿಶ್ವ ಮಹಿಳಾ ದಿನಾಚರಣೆಯ ಪ್ರಯುಕ್ತ ಮಹಿಳಾ ಕವಿಯತ್ರಿಯರ ಕವಿಗೋಷ್ಠಿ ನಡೆಯಿತು 9 ಮಹಿಳಾ ಕವಿಯತ್ರಿಯರು ಕವನ ವಾಚನ ಮಾಡಿದರು.

ಸಂಭ್ರಮದ ಶಿವಶರಣರ ಮಠದ ರಥೋತ್ಸವ

ಗುಳೇದಗುಡ್ಡ: ಅಕ್ಕಲಕೋಟೆಯ ಚಿಕ್ಕ ರೇವಣಸಿದ್ದ ಶಿವಶರಣರ ಮಠದ ರಥೋತ್ಸವ ಶನಿವಾರ ಭಕ್ತರ ಹರ್ಷೋದ್ಗಾರದ ನಡುವೆ ಸಂಭ್ರಮದಿಂದ ನಡೆಯಿತು. ಬೆಳಿಗ್ಗೆ ಕರ್ತೃ ಗದ್ದುಗೆಗೆ ರುದ್ರಾಭಿಷೇಕ ಸೇರಿದಂತೆ ನಾನಾ ಧಾರ್ಮಿಕ ಕಾರ್ಯಗಳು ನಡೆದವು. ಮಧ್ಯಾಹ್ನ ಶ್ರೀಗಳ ಭಾವಚಿತ್ರದ ಅಡ್ಡಪಲ್ಲಕ್ಕಿ ಮೆರವಣಿಗೆ ಪಟ್ಟಣದ ಪ್ರಮುಖ ಬೀದಿಗಳಲ್ಲಿ ನಡೆಯಿತು. ನಂತರ ಸಂಜೆ 6.30ಗಂಟೆಗೆ ರೇವಣಸಿದ್ದ ಶಿವಶರಣರ ರಥೋತ್ಸವ ಜರುಗಿತು. ನಂತರ ಕೈಲಾಸ ಮಂಟಪ ಪೂಜೆ ನೆರವೇರಿಸಲಾಯಿತು. ಈ ಜಾತ್ರಾಮಹೋತ್ಸವದಲ್ಲಿ ಆಳಂದದ ಶಿವಶರಣಮಠದ ಚನ್ನಬಸವಪಟ್ಟದೇವರು, ಮೈಂದರಗಿಯ ಅಭಿನವ ರೇವಣಸಿದ್ದಪಟ್ಟದೇವರು ಸಾನಿಧ್ಯ ವಹಿಸಿದ್ದರು.

ಒಗ್ಗಟ್ಟಿನಿಂದ ದೇಶದ ಅಭಿವೃದ್ಧಿ ಸಾಧ್ಯ

ಬೈಲಹೊಂಗಲ: ದೇಶ ಅಭಿವೃದ್ಧಿಯಾಗಬೇಕಾದರೆ ನಾವೆಲ್ಲ ಒಂದಾಗಿರಬೇಕು ಎಂದು ಜಿಲ್ಲಾಧಿಕಾರಿ ಮೊಹಮ್ಮದ ರೋಷನ್ ಹೇಳಿದರು.

ಅವರು ಪಟ್ಟಣದ ಮುರಗೋಡ ರಸ್ತೆಯ ಶ್ರೀ ಮಾತಾ ದುರ್ಗಾ ಮಾತಾ ಪರಮೇಶ್ವರಿ ದೇವಸ್ಥಾನದ 15ನೇ ವರ್ಷದ ಜಾತ್ರಾ ಮಹೋತ್ಸವ ಹಾಗೂ ಧರ್ಮ ಸಭೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಮಠ ಮಾನ್ಯಗಳ ಮಾರ್ಗದರ್ಶನದಲ್ಲಿ ಮಾನವ ಕುಲ ಒಂದಾಗಿ ಬಾಳಬೇಕು. ಶ್ರೀ ದುರ್ಗಾ ಮಾತೆ ಆಶೀರ್ವಾದದಿಂದ ಈ ನಾಡಿಗೆ ಸಕಾಲಕ್ಕೆ ಮಳೆ ಬೆಳೆಗಳಾಗಿ ಎಲ್ಲರೂ ಸಮೃದ್ಧಿ ಸಂತೃಪ್ತಿಯಿಂದ ಜೀವನ ನಡೆಸಲಿ. ಹುಕ್ಕೇರಿ ಹಿರೇಮಠದ ಡಾ. ಚಂದ್ರಶೇಖರ ಶಿವಾ ಚಾರ್ಯ ಸ್ವಾಮೀಜಿ, ಮುರಗೋಡ ನೀಲಕಂಠ ಸ್ವಾಮೀಜಿ, ಕಿತ್ತೂರು ಕಲ್ಮಠದ ಮಡಿವಾಳ ರಾಜಯೋಗಿಂದ್ರ ಸ್ವಾಮೀಜಿ ಸಾನಿಧ್ಯವಹಿಸಿದ್ದರು. ರಾಜ್ಯ ಸಭಾ ಸದಸ್ಯ ಈರಣ್ಣ ಕಡಾಡಿ, ಶಾಸಕರಾದ ಮಹಾಂತೇಶ ಕೌಜಲಗಿ, ಬಾಬಾಸಾಹೇಬ ಪಾಟೀಲ ಮಾತನಾಡಿದರು. ಮಾಜಿ ಶಾಸಕರಾದ ಡಾವಿಶ್ವನಾಥ ಪಾಟೀಲ, ಜಗದೀಶ ಮೆಟಗುಡ್ಡ, ಪುರಸಭೆ ಅಧ್ಯಕ್ಷ ವಿಜಯ ಬೋಳನ್ನವರ, ಶಿವಾನಂದ ಕುಡಸೋಮನ್ನವರ, ಪುರಸಭೆ ಸದಸ್ಯ ಬಸವರಾಜ ಜನ್ಮಟ್ಟಿ, ಎಫ್.ಎಸ್. ಸಿದ್ದನಗೌಡರ, ಶಂಕರ ಮಾಡಲಗಿ, ಡಾ.ಎಸ್.ಎಸ್. ಸಿದ್ದನ್ನವರ, ಕ್ಷೇತ್ರ ಶಿಕ್ಷಣಾಧಿಕಾರಿ ಎ.ಎನ್.ಪ್ಯಾಟಿ, ಸೋಮನಾಥ ಸೊಪ್ಪಿಮಠ, ಪ್ರಮೋದಕುಮಾರ ವಕ್ಕುಂದಮಠ, ಹಿರಿಯ ಪತ್ರಕರ್ತ ಈಶ್ವರ ಹೋಟಿ, ರಾಜು ಕುಡಸೋಮನ್ನವರ, ಶ್ರೀಶೈಲ ಯಡಳ್ಳಿ, ಬಿಗ್ ಬಾಸ್ ಕಲಾವಿದೆ ಗೌತಮಿ ಜಾಧವ, ಅನೇಕರು ಇದ್ದರು. ಧರ್ಮಾಧಿಕಾರಿ ಡಾ.ಮಹಾಂತೇಶಶಾಸ್ತ್ರಿ ಆರಾದ್ರಿಮಠ ಸ್ವಾಗತಿಸಿದರು. ಮುತ್ತುರಾಜ ಮತ್ತಿಕೊಪ್ಪ ನಿರೂಪಿಸಿದರು.

ಅಂಬೇಡ್ಕರ್ ಜಯಂತಿ ಅದ್ದೂರಿ ಆಚರಣೆ

ಕೆರೂರ: ಪಟ್ಟಣ ಪಂಚಾಯಿತಿ ಕಾರ್ಯಾಲಯದಲ್ಲಿ ಭಾರತದ ಸಂವಿಧಾನ ಶಿಲ್ಪಿ ಡಾ ಬಿ ಆರ್ ಅಂಬೇಡ್ಕರ ಅವರ 134ನೇ ಜಯಂತೋತ್ಸವ ಆಚರಿಸಲಾಯಿತು. ಮುಖ್ಯಾಧಿಕಾರಿ ರಮೇಶ ಮಾಡಬಾಳ ಸೇರಿ ಸಿಬ್ಬಂದಿ,ಸದಸ್ಯರು ಪ್ರಮುಖರು ಉಪಸ್ಥಿರಿದ್ದರು,

{ಪ್ರತಾಪ್ ಸಿಂಹ } ಮಾಜಿ ಸಂಸದ

ಸಿಎಂ ಸಿದ್ದರಾಮಯ್ಯ ಒಡೆಯುತ್ತಿರುವುದು ಯಾವುದೇ ಒಂದು ಜಾತಿಯನ್ನಲ್ಲ. ಒಟ್ಟಾರೆ ಹಿಂದೂ ಧರ್ಮವನ್ನು ಒಡೆಯುವುದಕ್ಕೇ ಸಿಎಂ ಹೊರಟ್ಟಿದ್ದಾರೆ. ಹಿಂದೂಗಳಲ್ಲಿನ ಎಲ್ಲಾ ಜಾತಿಗಳನ್ನು ಒಡೆಯುತ್ತಿದ್ದಾರೆ. ಲಿಂಗಾಯತರು, ಒಕ್ಕಲಿಗರು, ಒಬಿಸಿ ಸಂಖ್ಯೆ ಕಡಿಮೆ ಆಗಿದೆ ಎನ್ನುವುದನ್ನಷ್ಟೇ ನೋಡಬೇಡಿ, ಒಟ್ಟಾರೆಯಾಗಿ ಹಿಂದೂಗಳ ಸ್ಥಿತಿ ಏನಾಗಿದೆ ನೋಡಿ.

ಶೇ.24ರಷ್ಟು ಹೆಚ್ಚುವರಿ ಪ್ರಗತಿ | 10 ಲಕ್ಷ ರು.ರೈತರ ಕಲ್ಯಾಣ ನಿಧಿಗೆ ಪಾವತಿ | ಶಾಸಕ ಬಾಲಚಂದ್ರ ಜಾರಕಿಹೊಳಿ

ಬೆಮುಲ್‌ಗೆ 13.20 ಕೋಟಿ ರು. ಲಾಭ

ಬೆಳಗಾವಿ: ಬೆಳಗಾವಿ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ತಮ್ಮ ಒಂದು ವರ್ಷದ ಅಧಿಕಾರವಧಿಯಲ್ಲಿ ರು. 13.20 ಕೋಟಿ ಲಾಭಗಳಿಸುವ ಮೂಲಕ ನಿರೀಕ್ಷೆಗೂ ಮೀರಿದ ಸಾಧನೆ ಮಾಡಿದೆ ಎಂದು ಬೆಮುಲ್ ಅಧ್ಯಕ್ಷ, ಅರಭಾವಿ ಶಾಸಕ ಬಾಲಚಂದ್ರ ಜಾರಕಿಹೊಳಿ ತಿಳಿಸಿದರು.

ನಗರದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ಬಾರಿ ಒಕ್ಕೂಟವು ರು. 68 ಲಕ್ಷ ಲಾಭ ಹೊಂದಿತ್ತು. ಆದರೆ, ಈ ಬಾರಿ ರು. 13.20 ಕೋಟಿ ಲಾಭಗಳಿಸಿದೆ. ಇದಕ್ಕೆ ಭ್ರಷ್ಟಾಚಾರ ರಹಿತ ಆಡಳಿತ ನೀಡಿರುವುದು, ವಾರ್ಷಿಕ ಸಾಮಾನ್ಯ ಸಭೆಗೆ ಶೂನ್ಯ ನಿಧಿ ಬಳಕೆ ಮಾಡಿರುವುದು, ಆಡಳಿತ ಮಂಡಳಿ ಸದಸ್ಯರು ಟಿಎ, ಡಿಎ ಪಡೆಯದಿರುವುದು ಸೇರಿದಂತೆ ಮತ್ತಿತರ ಸುಧಾರಣಾ ಕ್ರಮಗಳು ಕಾರಣವಾಗಿವೆ ಎಂದರು.

ಒಟ್ಟು ರು. 399.50 ಕೋಟಿ ವಹಿವಾಟು ಆಗಿದೆ. ಕಳೆದ ಸಾಲಿನಲ್ಲಿ ರು. 320.83 ಕೋಟಿ ವಹಿವಾಟು ಆಗಿತ್ತು. ಈ ಮೂಲಕ ಶೇ. 24 ರಷ್ಟು ಹೆಚ್ಚುವರಿ ಪ್ರಗತಿ ಸಾಧಿಸಲಾಗಿದೆ. ಒಕ್ಕೂಟದ ಇತಿಹಾಸದಲ್ಲೇ ಅತೀ ಹೆಚ್ಚಿನ ವಹಿವಾಟು ಹೊಂದಿ ದಾಖಲೆ ನಿರ್ಮಿಸಿದೆ . ಅಂದಾಜು ರು. 13.26 ಕೋಟಿ ಲಾಭಾಂಶ ಆಗಿದೆ. ಈ ಮೊತ್ತವನ್ನು ಹಾಲು ಉತ್ಪಾದಕರು, ಸಂಘಗಳು, ಗುತ್ತಿಗೆ ಕಾರ್ಮಿಕರು, ಭದ್ರತಾ ರಕ್ಷಕರ ಶ್ರೇಯೋಭಿವೃದ್ಧಿಗಾಗಿ ಹಂಚಿಕೆ ಮಾಡಲಾಗುವುದು ಎಂದರು.

ಸುದ್ದಿಗೋಷ್ಠಿಯಲ್ಲಿ ಶಾಸಕ ಬಾಲಚಂದ್ರ ಜಾರಕಿಹೊಳಿ ಅವರು ಮಾತನಾಡಿದರು.

ವಾರ್ಷಿಕ ಸಾಮಾನ್ಯಸಭೆಗೆ ರು. 40 ಲಕ್ಷ ವೆಚ್ಚ ಮಾಡಲಾಗುತ್ತಿತ್ತು. ಆಡಳಿತ ಮಂಡಳಿ ಸದಸ್ಯರು ಪಡೆಯದ ಟಿಎ, ಡಿಎ ರು. 10 ಲಕ್ಷ ಹಣವನ್ನು ರೈತರ ಕಲ್ಯಾಣ ನಿಧಿಗೆ ಪಾವತಿಸಲಾಗಿದೆ ಎಂದರು.

ಒಕ್ಕೂಟವು ಜಿಲ್ಲೆಯಲ್ಲಿ ಒಟ್ಟು 1002 ಹಾಲು ಉತ್ಪಾದಕರ ಸಹಕಾರ ಸಂಘಗಳನ್ನು ಸ್ಥಾಪಿಸಿದೆ. ಈ ಪೈಕಿ 610 ಹಾಲು ಉತ್ಪಾದಕರ ಸಹಕಾರ ಸಂಘಗಳು ಕಾರ್ಯಾಚರಣೆಯಲ್ಲಿವೆ. ಈ ಪೈಕಿ 160 ಮಹಿಳಾ ಸಂಘಗಳಿವೆ. ಈವರೆಗೆ ಒಟ್ಟು ರು. 622.10 ಲಕ್ಷ ಷೇರು ಬಂಡವಾಳ ಸಂಗ್ರಹಿಸಲಾಗಿದೆ. ಬೆಳಗಾವಿಯಲ್ಲಿ 1.50 ಲಕ್ಷ ಲೀಟರ್ ಸಾಮರ್ಥ್ಯದ ಮುಖ್ಯ ಡೇರಿ, ರಾಮದುರ್ಗ ಮತ್ತು ಅಥಣಿಯಲ್ಲಿ ತಲಾ 30 ಸಾವಿರ ಲೀಟರ್ ಸಾಮರ್ಥ್ಯದ ಶೀತಲ ಕೇಂದ್ರಗಳಿವೆ. ರಾಯಬಾಗದಲ್ಲಿ 60 ಸಾವಿರ ಲೀಟರ್ ಸಾಮರ್ಥ್ಯದ ಸಂಸ್ಕರಣ ಘಟಕವನ್ನು ಹೊಂದಿದೆ. ಕೇಂದ್ರ ಸರಕಾರದ ಶುದ್ಧ ಹಾಲು ಉತ್ಪಾದನೆ ಮತ್ತು ವಿಶೇಷ ಪ್ಯಾಕೇಜ್ ಯೋಜನೆಗಳಡಿ ಒಟ್ಟು 39 ಬಿಎಂಸಿ ಘಟಕಗಳನ್ನು ಸ್ಥಾಪಿಸಿದೆ. ಫ್ಲೆಕ್ಸಿ ಪ್ಯಾಕ್ ಘಟಕವು ನಿತ್ಯ 80 ಸಾವಿರ ಲೀಟರ್‌ನಷ್ಟು ಹಾಲು ಪ್ಯಾಕಿಂಗ್ ಸಮರ್ಥವನ್ನು ಹೊಂದಿದೆ ಎಂದರು.

2024–25ನೇ ಸಾಲಿನಲ್ಲಿ 43 ಸಂಖ್ಯೆ ನೂತನ ಸಂಘಗಳನ್ನು ಸ್ಥಾಪಿಸಿದೆ. ಜಿಲ್ಲೆಯಲ್ಲಿ 610 ಸಂಘಗಳಿವೆ. ನಿತ್ಯ ಸರಾಸರಿ 2.10 ಲಕ್ಷ ಕೆ.ಜಿ. ಹಾಲು ಶೇಖರಿಸಲಾಗುತ್ತಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಶೇ. 22 ರಷ್ಟು ಪ್ರಗತಿ ಹೊಂದಲಾಗಿದೆ. ಅಲ್ಲದೇ, ಒಟ್ಟು 12797 ರಾಸುಗಳಿಗೆ ಒಕ್ಕೂಟದಿಂದ ಶೇ. 75 ರಷ್ಟು ರಿಯಾಯಿತಿ ದರದಲ್ಲಿ ವಿಮಾ ಸೌಲಭ್ಯ ಒದಗಿಸಲಾಗಿದೆ. ವಿಮೆಗೆ ಒಳಪಟ್ಟು ಮರಣ ಹೊಂದಿದ 245 ರಾಸುಗಳ ಫಲಾನುಭವಿಗಳಿಗೆ ರು. 1.22 ಕೋಟಿ ವಿಮಾ ಪರಿಹಾರ ನೀಡಲಾಗಿದೆ. 134138 ರಾಸುಗಳಿಗೆ ಕೃತಕ ಗರ್ಭಧಾರಣೆ ಸೇವೆ ಒದಗಿಸಲಾಗಿದೆ ಎಂದರು.

> **ಒಕ್ಕೂಟವು ಮುಂಬೈ ಮಾರುಕಟ್ಟೆಗೆ ಎಮ್ಮೆ ಹಾಲವನ್ನು ಬಿಡುಗಡೆ ಮಾಡಿದ್ದು, ನಿತ್ಯ 5 ಸಾವಿರ ಲೀಟರ್ ಹಾಲು ಮಾರಾಟ ಮಾಡಲಾಗುತ್ತಿದೆ. ಕಳೆದ ಫೆಬ್ರುವರಿ ತಿಂಗಳಲ್ಲಿ 130 ಎಂಎಲ್ ಪ್ಯಾಕ್‌ನ 2.50 ಲಕ್ಷ ಮಜ್ಜಿಗೆ ಪ್ಯಾಕೇಟ್‌ಗಳನ್ನು ಸವದತ್ತಿ ಶ್ರೀ ಯಲ್ಲಮ್ಮ ದೇವಸ್ಥಾನಕ್ಕೆಪೂರೈಸಲಾಗಿದೆ. ಖರ್ಚು ವೆಚ್ಚಗಳಲ್ಲಿ ವಾರ್ಷಿಕ ರು. 2.52 ಕೋಟಿ ಉಳಿತಾಯ ಮಾಡಲಾಗಿದೆ.**
>
> -ಬಾಲಚಂದ್ರ ಜಾರಕಿಹೊಳಿ, ಶಾಸಕ

ಫ್ಲೆಕ್ಸಿ ಘಟಕದಿಂದ 80 ಲಕ್ಷ ಲೀಟರ್ ಹಾಲನ್ನು ಸ್ಥಳೀಯ ಮತ್ತು ಆಂದ್ರಪ್ರದೇಶ ರಾಜ್ಯಕ್ಕೆ ಮಾರಾಟ ಮಾಡಲಾಗಿದೆ.ಕಳೆದ ಸಾಲಿನ ಮಾರಾಟಕ್ಕೆ ಹೋಲಿಸಿದರೆ ಶೇ. 196 ರಷ್ಟು ಹೆಚ್ಚುವರಿ ಪ್ರಗತಿ ಸಾಧಿಸಲಾಗಿದೆ. 380516 ಲೀಟರ್ ತುಪ್ಪ ಮಾರಾಟ ಮಾಡಲಾಗಿದೆ. 4112820 ಲೀಟರ್ ಮೊಸರನ್ನು ಮಾರಾಟ ಮಾಡಲಾಗಿದೆ. 173746 ಕೆ.ಜಿ. ಪನೀರ್ ಮಾರಾಟ ಮಾಡಲಾಗಿದೆ. 74245 ಕೆ.ಜಿ. ಕುಂದಾ ಮಾರಾಟ ಮಾಡಲಾಗಿದೆ. ಹೊಸದಾಗಿ 10 ಕೆಜಿ ಬಕೇಟ್ ಮೊಸರು ಮಾರಾಟ ಪ್ರಾರಂಭಿಸಲಾಗಿದೆ. ಬೆಳಗಾವಿ ಜಿಲ್ಲೆ ಮತ್ತು ಗೋವಾ ರಾಜ್ಯದ ಮಾರುಕಟ್ಟೆಗೆ ನಿತ್ಯ 50 ರಿಂದ 100 ಬಕೇಟ್ ಮೊಸರು ಪ್ಯಾಕಿಂಗ್ ಮಾಡಿ ಮಾರಾಟ ಮಾಡಲಾಗುತ್ತಿದೆ ಎಂದರು.

ಒಕ್ಕೂಟವು ಮುಂಬೈ ಮಾರುಕಟ್ಟೆಗೆ ಎಮ್ಮೆ ಹಾಲವನ್ನು ಬಿಡುಗಡೆ ಮಾಡಿದ್ದು, ನಿತ್ಯ 5 ಸಾವಿರ ಲೀಟರ್ ಹಾಲು ಮಾರಾಟ ಮಾಡಲಾಗುತ್ತಿದೆ. ಕಳೆದ ಫೆಬ್ರುವರಿ ತಿಂಗಳಲ್ಲಿ 130 ಎಂಎಲ್ ಪ್ಯಾಕ್‌ನ 2.50 ಲಕ್ಷ ಮಜ್ಜಿಗೆ ಪ್ಯಾಕೇಟ್‌ಗಳನ್ನು ಸವದತ್ತಿ ಶ್ರೀ ಯಲ್ಲಮ್ಮ ದೇವಸ್ಥಾನಕ್ಕೆ ಪೂರೈಸಲಾಗಿದೆ. ಖರ್ಚು ವೆಚ್ಚಗಳಲ್ಲಿ ವಾರ್ಷಿಕ ರು. 2.52 ಕೋಟಿ ಉಳಿತಾಯ ಮಾಡಲಾಗಿದೆ ಎಂದರು.

ಸಂಕೇಶ್ವರ ಬಳಿಯ ರಾಷ್ಟ್ರೀಯ ಹೆದ್ದಾರಿ 4ರ ಬಳಿ ಮೆಗಾ ಡೇರಿ ಸ್ಥಾಪಿಸಲು ಜಾಗೆಯನ್ನು ಗುರುತಿಸಲಾಗಿದ್ದು, ರು. 350 ಕೋಟಿ ವೆಚ್ಚದಲ್ಲಿ ನೂತನ ತಂತ್ರಜ್ಞಾನವುಳ್ಳ ಹೈಟೆಕ್ ಮೆಗಾಡೇರಿಯನ್ನು ನಿರ್ಮಿಸಲಾಗುವುದು ಎಂದರು.

ಸುದ್ದಿಗೋಷ್ಠಿಯಲ್ಲಿ ಬೆಮುಲ್ ನಿರ್ದೇಶಕರಾದ ಬಾಬು ಬಸವಂತಪ್ಪ ಕಟ್ಟಿ, ಮಲ್ಲಪ್ಪ ಪಾಟೀಲ, ಕಲ್ಲಪ್ಪ ಪಾಟೀಲ, ಬಸವರಾಜ ಪರಗಣ್ಣವರ, ಬಾಬುರಾವ್ ವಾಘಮೊಡೆ, ವಿರುಪಾಕ್ಷಿ ಈಟಿ,ರಾಯಪ್ಪ ಡೂಗ,ಪ್ರಕಾಶ ಅಂಬೋಜ, ಮಹಾದೇವಬಿಳಿಕುರಿ, ಸಂಜಯ ಶಿಂತ್ರೆ, ರಮೇಶ ಅಣ್ಣಿಗೇರಿ, ಶಂಕರ ಇಟ್ನಾಳ, ಖಾನಪ್ಪಗೋಳ, ವ್ಯವಸ್ಥಾಪಕ ನಿರ್ದೇಶಕ ಡಾ.ಶ್ರೀಕಾಂತ ವಿ.ಎನ್. ಉಪಸ್ಥಿತರಿದ್ದರು.

ಮೇ 5ಕ್ಕೆ ಗುರುಮಂದಿರ ಲೋಕಾರ್ಪಣೆ

ಅಥಣಿ: ತಾಲೂಕಿನ ಸಪ್ತಸಾಗರ ಗ್ರಾಮದಲ್ಲಿ ನೂತನವಾಗಿ ನಿರ್ಮಾಣಗೊಂಡ ಶ್ರೀ ಶಿವ ಬಸವ ಗುರುಮಂದಿರ ಲೋಕಾರ್ಪಣೆ ಕಾರ್ಯಕ್ರಮ ಬರುವ ಮೇ 5 ರಂದು ಅದ್ದೂರಿಯಾಗಿ ಜರುಗಲಿದೆ ಎಂದು ಶೇಗುಣ ಸಿ ವಿರಕ್ತಮಠದ ಡಾ. ಮಹಾಂತಪ್ರಭು ಸ್ವಾಮೀಜಿ ಹೇಳಿದರು.

ಭಾನುವಾರ ಸಪ್ತಸಾಗರ ಗ್ರಾಮದಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದರು. ಹಾವೇರಿಯ ಹುಕ್ಕೇರಿಮಠದ ಶ್ರೀ ಶಿವಬಸವ ಶಿವಯೋಗಿಗಳ ಜನ್ಮಸ್ಥಳ ಸಪ್ತಸಾಗರ ಗ್ರಾಮದಲ್ಲಿ ಮೇ. 1 ರಿಂದ 5 ರ ವರೆಗೆ ಐದು ದಿನಗಳವರೆಗೆ ಶ್ರೀ ಶಿವಬಸವ ಗುರುಮಂದಿರ ಲೋಕಾರ್ಪಣೆ ಹಿನ್ನಲೆಯಲ್ಲಿ ವಿವಿಧ ಧಾರ್ಮಿ ಕ ಕಾರ್ಯಕ್ರಮ ಆಯೋಜಿಸಲಾ ಗಿದೆ. ಈ ಹಿನ್ನಲೆಯಲ್ಲಿ ಪ್ರವಚನ, ಜ್ಯೋತಿ ರತಯಾತ್ರೆ, ಸಾವಯವ ಕೃಷಿ ಚಿಂತನ, ಬೈಕ್ ರ್‍ಯಾಲಿ, ಮಹಿಳಾ ಸಮಾವೇಶ ಸೇರಿದಂತೆ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿವೆ ಎಂದರು.

ಶ್ರೀ ಶಿವಬಸವ ಗುರುಮಂದಿರ ಲೋಕಾರ್ಪಣೆ ಕಾರ್ಯಕ್ರಮದ ಆಮಂತ್ರಣ ಪತ್ರಿಕೆಯನ್ನು ಸ್ವಾಮೀಜಿಗಳ ಉಪಸ್ಥಿತಿಯಲ್ಲಿ ಬಿಡುಗಡೆಗೊಳಿಸಲಾಯಿತು.

ಮೇ. 5 ರಂದು ನೂತನವಾಗಿ ನಿರ್ಮಾಣಗೊಂಡ ಶ್ರೀ ಶಿವಬಸವ ಗುರುಮಂದಿರದಲ್ಲಿ ಕಳಸಾರೋಹಣ, ಮೂರ್ತಿ ಪ್ರತಿಷ್ಠಾಪನೆ ಹಾಗೂ ಶ್ರೀಗಳ ಭಾವಚಿತ್ರ ಮೆರವಣಿಗೆ ಕಾರ್ಯಕ್ರಮ ಜರುಗಲಿವೆ ಎಂದು ಡಾ. ಮಹಾಂತಪ್ರಭು ಸ್ವಾಮೀಜಿ ತಿಳಿಸಿದರು.

ಹಾವೇರಿಯ ಹುಕ್ಕೇರಿಮಠದ ಸದಾಶಿವ ಮಹಾಸ್ವಾಮೀಜಿ ಮಾತನಾಡಿ, ಶ್ರೀ ಶಿವಬಸವ ಶಿವಯೋಗಿಗಳು ಸಪ್ತಸಾಗರ ಗ್ರಾಮದಲ್ಲಿ ಜನಿಸಿ ಲೋಕ ಕಲ್ಯಾಣಕ್ಕೆ ತಮ್ಮನ್ನು ಸಮರ್ಪಿಸಿ ಕೊಂಡ ಮಹಾನ್ ಸಂತ. ಇಂದು ಅವರ ಸ್ಮರಣಾರ್ಥವಾಗಿ ಹುಟ್ಟೂರಿನಲ್ಲಿ ಮಠದ ಲೋಕಾರ್ಪಣೆ ಕಾರ್ಯಕ್ರಮವನ್ನು ಭಕ್ತರು ಯಶಸ್ವಿಗೊಳಿಸಬೇಕು ಎಂದರು.

ಈ ಸಂದರ್ಭದಲ್ಲಿ ಹಲ್ಯಾಳ ವಿರಕ್ತಮಠದ ಗುರುಸಿದ್ದ ಮಹಾಸ್ವಾಮೀಜಿ, ಸಪ್ತಸಾಗರ ಗ್ರಾಮದ ಹಿರಿಯರು ಹಾಗೂ ಶ್ರೀಮಠದ ಭಕ್ತರು ಉಪಸ್ಥಿತರಿದ್ದರು.

ಉದ್ಯೋಗ ಮೇಳದ ಲಾಭ ಪಡೆಯಿರಿ

ರಾಮದುರ್ಗ: ತಂತ್ರಜ್ಞಾನ ವೃದ್ಧಿಯಾದಂತೆ ನಿರುದ್ಯೋಗ ಸಮಸ್ಯೆ ಉದ್ಭವಾಗುತ್ತಿದೆ. ವಿದ್ಯಾರ್ಥಿಗಳು ತಮ್ಮ ಶೈಕ್ಷಣಿಕ ಸಾಧನೆಯ ನಂತರ ಸರಕಾರಿ ಕೆಲಸದ ಜೊತೆಗೆ ಸ್ವಂತ ಉದ್ಯೋಗ ಮಾಡುವ ಯೋಜನೆಯನ್ನು ಹಾಕಿಕೊಳ್ಳಬೇಕು. ಅಂದಾಗ ನಿರುದ್ಯೋಗ ಸಮಸ್ಯೆ ನಿವಾರಣೆ ಸಾಧ್ಯವಿದೆ ಎಂದು ವಿಧಾನಸಭೆ ಮುಖ್ಯ ಸಚೇತಕ ಹಾಗೂ ಶಾಸಕ ಅಶೋಕ ಪಟ್ಟಣ ಹೇಳಿದರು.

ಪಟ್ಟಣದ ಹೊರವಲಯದ ಶ್ರೀಮತಿ ಈರಮ್ಮ ಶಿವಲಿಂಗಪ್ಪ ಯಾದವಾಡ ಸರಕಾರಿ ಪ್ರಥಮ ದರ್ಜೆ ಪದವಿ ಮಹಾವಿದ್ಯಾಲಯದಲ್ಲಿ ಮಂಗಳವಾರ ಹಮ್ಮಿಕೊಂಡ ಉದ್ಯೋಗ ಮೇಳ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಶೀಘ್ರದಲ್ಲಿ ಗಾರ್ಮೆಂಟ್ಸ್ ಸ್ಥಾಪನೆ ಮಾಡಲು ಪ್ರಯತ್ನಿಸುತ್ತೇನೆ ಎಂದರು. ನಿವೃತ್ತ ಪ್ರಾಚಾರ್ಯ ಎಸ್.ಜಿ. ಚಿಕ್ಕನರಗುಂದ ಮಾತನಾಡಿ, ವಿದ್ಯಾರ್ಥಿಗಳು ಕಾಲೇಜು ಪ್ರವೇಶ ಪಡೆಯುವ ಸಂದರ್ಭದಲ್ಲಿ ತಮ್ಮ ಭವಿಷ್ಯದ ಆಶಕ್ತ ಉದ್ಯೋಗಕ್ಕೆ ಸ್ಫೂರ್ತಿ ನೀಡಬಲ್ಲ ಕೋರ್ಸ್‌ಗಳನ್ನು ಆಯ್ಕೆ ಮಾಡಿದಲ್ಲಿ ಉಜ್ವಲ ಭವಿಷ್ಯ ರೂಪಿಸಿಕೊಳ್ಳಲು ಸಾಧ್ಯವಿದೆ ಎಂದರು.

ಉದ್ಯೋಗ ಮೇಳ ಕಾರ್ಯಕ್ರಮವನ್ನು ವಿಧಾನಸಭೆ ಮುಖ್ಯ ಸಚೇತಕ ಅಶೋಕ ಪಟ್ಟಣ ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಕಾಲೇಜು ಸಿಡಿಸಿ ಕಮಿಟಿಯ ಸದಸ್ಯರಾದ ಜಿ.ಬಿ. ರಂಗನಗೌಡ್ರ, ಜಯರಾಮ ಕೋಣಿ ಸೇರಿದಂತೆ ವಿವಿಧ ಕಂಪನಿಗಳ ಪ್ರತಿನಿಧಿಗಳು, ಕಾಲೇಜಿನ ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳು ಇದ್ದರು. ಉಪನ್ಯಾಸಕಿ ರಾಜೇಶ್ವರಿ ಪಾಟೀಲ ಸ್ವಾಗತಿಸಿದರು. ಶೋಭಾ ಹಾಲೋಳ್ಳಿ ಕಾರ್ಯಕ್ರಮ ನಿರೂಪಿಸಿದರು.

ಸಿಇಐಆರ್ ಪೋರ್ಟಲ್‌ನಿಂದ 40 ಮೊಬೈಲ್ ಪತ್ತೆ

ಅಥಣಿ: ಅಥಣಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಕಳೆದು ಹೋಗಿದ್ದ 40 ಮೊಬೈಲ್ ಗಳನ್ನು ಪತ್ತೆ ಹಚ್ಚಿ ವಾರಸುದಾರಿಗೆ ಹಸ್ತಾಂತರಿಸಲಾಗಿದೆ.

ಸಿಇಐಆರ್ ಪೋರ್ಟಲ್ ಮೂಲಕ ಕಳುವಾಗಿದ್ದ ಮೋಬೈಲ್ ಫೋನ್ ಗಳನ್ನು ಪತ್ತೆ ಹಚ್ಚಿರುವ ಪೊಲೀಸರು ವಾರಸುದಾರಿಗೆ ಹಸ್ತಾಂತರಿಸಿದ್ದಾರೆ.

ಈ ಸಂದರ್ಭದಲ್ಲಿ ಅಥಣಿ ವಲಯದ ಡಿವೈಎಸ್ಪಿ ಪ್ರಶಾಂತ ಮುನ್ನೊಳ್ಳಿ, ಸಿಪಿಐ ಸಂತೋಷ ಹಳ್ಳೂರ, ಪಿಎಸ್‌ಐ ಗಿರಿಮಲ್ಲಪ್ಪ ಉಪ್ಪಾರ್ ಸೇರಿದಂತೆ ಠಾಣೆ ಸಿಬ್ಬಂದಿ ಉಪಸ್ಥಿತರಿದ್ದರು.

ಸಿಇಐಆರ್ ಪೋರ್ಟಲ್ ಮೂಲಕ ಕಳುವಾಗಿದ್ದ ಮೊಬೈಲ್‌ಗಳನ್ನು ಅಥಣಿ ಠಾಣಾ ಪೊಲೀಸರು ಪತ್ತೆ ಹಚ್ಚಿದ್ದಾರೆ.

ಆಂಜನೇಯಸ್ವಾಮಿ ರಥೋತ್ಸವ

ರಾಮದುರ್ಗ : ಐತಿಹಾಸಿಕ ಉಲ್ಲೇಖ ಹೊಂದಿರುವ ತಾಲೂಕಿನ ನಂದಿಹಾಳ ಗ್ರಾಮದ ಆಂಜನೇಯಸ್ವಾಮಿ ದೇವಸ್ಥಾನದ ರಥೋತ್ಸವ ಅದ್ದೂರಿಯಾಗಿ ಜರುಗಿತು.

ಶತಮಾನಗಳ ಹಿಂದೆ ನಾನಾ ಕಾರಣಕ್ಕೆ ಆಂಜನೇಯಸ್ವಾಮಿ ರಥೋತ್ಸವ ನಿಂತುಹೋಗಿದೆ ಎಂಬ ನಂಬಿಕೆ ಮಧ್ಯೆ ಏಪ್ರಿಲ್ 14 ರಂದು ಶ್ರೀಆಂಜನೇಯಸ್ವಾಮಿ ದೇವರ ರಥೋತ್ಸವ ಹಲವು ಶತಮಾನಗಳ ನಂತರ ಸಾವಿರಾರು ಭಕ್ತರು ಸಮ್ಮುಖದಲ್ಲಿ ಯಶಸ್ವಿಯಾಗಿ ನಡೆಯಿತು. ಈ ರಥೋತ್ಸವದ ಪ್ರಯುಕ್ತ ನಿತ್ಯ ಅನ್ನ ಸಂತರ್ಪಣೆ ಹಾಗೂ ಪೂಜ್ಯ ಶ್ರೀಗಳಿಂದ ಆಶೀರ್ವಚನ ಹಾಗೂ ರಣರಂಗದಲ್ಲಿ ರುದ್ರ ತಾಂಡವ ಎಂಬ ನಾಟಕ ಪ್ರದರ್ಶನವಾಯಿತು. ರಥೋತ್ಸವಕ್ಕೆ ಸುತ್ತಮುತ್ತ ಗ್ರಾಮದ ಜನರು ಭಾಗವಹಿಸಿದ್ದರು.

ನಂದಿಹಾಳ ಗ್ರಾಮದ ಆಂಜನೇಯಸ್ವಾಮಿ ದೇವಸ್ಥಾನದ ರಥೋತ್ಸವ ಅದ್ದೂರಿಯಾಗಿ ಜರುಗಿತು.

ಮುರುಘೇಂದ್ರ ಶಿವಯೋಗಿಗಳ ಜಾತ್ರೆಯ ಸಂಭ್ರಮ

ಅಣ್ಣಾಸಾಬ ತೆಲಸಂಗ

ಅಥಣಿ: ಇಲ್ಲಿನ ಸುಕ್ಷೇತ್ರ, ಗಚ್ಚಿನಮಠದ ಮಹಾತಪಸ್ವಿ, ಶ್ರೀ ಶಿವಯೋಗಿ ಮುರುಘೇಂದ್ರ ಸ್ವಾಮೀಜಿ ಅವರ ಜಾತ್ರಾ ಮಹೋತ್ಸವ ಸಂಭ್ರಮದಿಂದ ಜರುಗುತ್ತಿದೆ. ಶ್ರೀ ಮಠದಲ್ಲಿ ಜಾತ್ರೆಯ ನಿಮಿತ್ತ ವಿವಿಧ ಧಾರ್ಮಿಕ ಕಾರ್ಯಕ್ರಮಗಳು, ಅನ್ನ ಸಂತರ್ಪಣೆ, ಜಾನುವಾರುಗಳ ಪ್ರದರ್ಶನ ಹಾಗೂ ಮಾರಾಟ, ವಿವಿಧ ಸ್ಪರ್ಧೆಗಳು ಹಾಗೂ ಮನರಂಜನೆಗಾಗಿ ಭಜನೆ ಹಾಗೂ ಬೈಲಾಟಗಳನ್ನು ಆಯೋಜಿಸಲಾಗಿದೆ.

ಜಾತ್ರೆಯ ನಿಮಿತ್ತ ಸುಕ್ಷೇತ್ರ ಗಚ್ಚಿನ ಮಠದಿಂದ ಅಥಣಿ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಶ್ರೀ ಶಿವಯೋಗಿಗಳ ಪಲ್ಲಕ್ಕಿ ಉತ್ಸ ವ ಸಂಭ್ರಮ ಸಡಗರದಿಂದ ಜರುಗಿತು. ರವಿ ವಾರ ಇಡೀ ದಿನ ರಾತ್ರಿ ವೇಳೆ ಭವ್ಯರಥೋ ತ್ಸವ ಜರುಗಿತು. ಹೂಮಾಲೆ ಹಾಗೂ ದೀಪಾ ಲಂಕಾರಗಳಿಂದ ಅಲಂಕರಿಸಿದ ರಥೋತ್ಸವಕ್ಕೆ ಗಚ್ಚಿನ ಮಠದ ಪೀಠಾಧ್ಯಕ್ಷರಾದ ಶಿವಬಸವ ಸ್ವಾಮೀಜಿ ಹಾಗೂ ವಿವಿಧ ಮಠಾಧೀಶರು ಚಾಲನೆ ನೀಡಿದರು.

ಗಚ್ಚಿನಮಠದಿಂದ ಆರಂಭವಾದ ರಥೋ ತ್ಸವ ಮುರುಗೇಂದ್ರ ಬ್ಯಾಂಕ್, ಸಿದ್ದೇಶ್ವರ ರಸ್ತೆ ಮಾರ್ಗವಾಗಿ ಅನೇಕ ಕಲಾತಂಡಗಳ ವಿವಿಧ ವಾದ್ಯ ಮೇಲು ಗಳೊಂದಿಗೆ, ಲಕ್ಷಾಂತರ ಭಕ್ತರ ಜೈ ಘೋಷ ಹಾಗೂ ಹರ್ಷೋದ್ಗಾರದೊಂದಿಗೆ ಸೋಮವಾರ ಮುಂಜಾನೆ ಶಿವಯೋಗಿಗಳು ಅನುಷ್ಠಾನಗೈದ ಗವಿಮಠದ ಹತ್ತಿರದ ಪುರಾತನೇಶ್ವರ ದೇವಸ್ಥಾನಕ್ಕೆ ತಲುಪಿತು. ಮಂಗಳವಾರ ಮತ್ತೆ ಪಲ್ಲಕ್ಕಿ ಉತ್ಸವದೊಂದಿಗೆ ಅಲಂಕೃತ ರಥವನ್ನು ಗಚ್ಚಿನ ಮಠಕ್ಕೆ ವೈಭವದಿಂದ ಬರಮಾಡಿಕೊಳ್ಳಲಾಯಿತು.

ಅಥಣಿ ಮುರುಘೇಂದ್ರ ಶಿವಯೋಗಿಗಳ ಭವ್ಯ ರಥೋತ್ಸವದ ದೃಶ್ಯ.

ಸಿದ್ದೇಶ್ವರ ದೇಗುಲದಲ್ಲಿ ಅನ್ನ ಸಂತರ್ಪಣೆ:

ಅಥಣಿ ಶಿವಯೋಗಿಗಳ ಜಾತ್ರಾ ಮಹೋತ್ಸವದ ಅಂಗವಾಗಿ ಪ್ರತಿ ವರ್ಷದಂತೆ ಈ ವರ್ಷವೂ ಶ್ರೀ ಸಿದ್ದೇಶ್ವರ ದೇವಸ್ಥಾನ ದಾಸೋಹ ಸಮಿತಿ ವತಿಯಿಂದ ಐದು ದಿನಗಳವರೆಗೆ ನಿರಂತರ ಅನ್ನಸಂತರ್ಪಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು, ಪಟ್ಟಣ ದ ಗಣ್ಯ ವ್ಯಾಪಾರಸ್ಥರು, ಉದ್ಯಮಿಗಳು, ಸಾಮಾಜಿಕ ಕಾರ್ಯಕರ್ತರು ಮತ್ತು ರೈತರು ಸ್ವಯಂಸೇವಕರಾಗಿ ಕಾರ್ಯ ನಿರ್ವಹಿಸುವು ದರ ಜೊತೆಗೆ ಜಾತ್ರೆಗೆ ಬರುವ ಸಾವಿರಾರು ಸಂಖ್ಯೆಯ ಭಕ್ತಾದಿಗಳಿಗೆ ಅನ್ನ ಸಂತರ್ಪಣೆಯನ್ನು ಮಾಡುವಲ್ಲಿ ನಿರತರಾಗಿದ್ದಾರೆ.

ಕಲಾವಿದರನ್ನು ಪ್ರೋತ್ಸಾಹಿಸಿ ಗೌರವಿಸಿ

ಬೈಲಹೊಂಗಲ: ಧರ್ಮ ಜಾಗೃತಿ ಜೊತೆಗೆ ಕಲಾವಿದರನ್ನು ಗುರುತಿಸಿ ಅವರನ್ನು ಪ್ರೋತ್ಸಾಹಿಸುತ್ತಿರುವ ಡಾ.ಮಹಾಂತೇಶ ಶಾಸ್ತ್ರಿಗಳ ಕಾರ್ಯ ಶ್ಲಾಘನೀಯವಾದದ್ದು ಎಂದು ಚಿತ್ರನಟ ರವಿಚಂದ್ರನ ಹೇಳಿದರು.

ಅವರು ಪಟ್ಟಣದ ಮುರಗೋಡ ರಸ್ತೆಯ ಶ್ರೀ ಮಾತಾ ದುರ್ಗಾ ಪರಮೇಶ್ವರಿ ದೇವಸ್ಥಾನದ ಜಾತ್ರಾ ಮಹೋತ್ಸವ ಕಾರ್ಯಕ್ರಮದಲ್ಲಿ ಗುರು ರಕ್ಷೆ ಸ್ವೀಕರಿಸಿ ಮಾತನಾಡಿ, ಯಾಂತ್ರೀಕತ ಬದುಕಿಗೆ ಮಾರು ಹೋಗಿ ಮನುಷ್ಯತ್ವವನ್ನೇ ಮರೆಯುತ್ತಿದ್ದೇವೆ. ಪ್ರತಿದಿನ ಸಂಜೆ ಮೂರು ಗಂಟೆಗಳ ಕಾಲ ಮೊಬೈಲ್ ಸ್ವಿಚ್ ಆಫ್ ಮಾಡಿ ಕುಟುಂಬ ದೊಂದಿಗೆ ಕಾಲ ಕಳೆಯುವ ದರಿಂದ ಒತ್ತಡದಿಂದ ಹೊರ ಬರಲು ಸಾಧ್ಯ ಎಂದರು.

ವೀರರಾಣಿ ಕಿತ್ತೂರು ಚನ್ನಮ್ಮ, ಸಂಗೊಳ್ಳಿ ರಾಯಣ್ಣರಂತ ಸ್ವಾತಂತ್ರ್ಯ ಹೋರಾಟಗಾರರ ಈ ಪುಣ್ಯಭೂಮಿಯಲ್ಲಿ ಜನರ ಉದ್ದಾರಕ್ಕಾಗಿ ಧಾರ್ಮಿಕ, ಅಧ್ಯಾತ್ಮಿಕ, ಸಾಮಾಜಿಕ ಕಾರ್ಯಗಳಿಂದ ಡಾ.ಮಹಾಂತೇಶ ಶಾಸ್ತ್ರಿಗಳವರು ಜನೋಪಯೋಗಿ ಯಾಗಿ ಮಾದರಿಯಾಗಿದ್ದಾರೆ. ಬೈಲ ಹೊಂಗಲ ಕಂಪನ್ನು ಎಲ್ಲೆಡೆ ಪಸರಿಸುತ್ತಿರುವ ಅವರ ಕಾರ್ಯಗಳಿಗೆ ನಾವು ಸಹ ಸದಾ ಬೆಂಬಲವಾಗಿದ್ದೇವೆ ಎಂದರು.

ಬೈಲಹೊಂಗಲದ ಎಲ್ಲ ಜನತೆಯ ತುಂಬು ಪ್ರೀತಿಗೆ ಸೋತ ರವಿಚಂದ್ರನ್ ನನ್ನ ಹೊಸ ಅಧ್ಯಾಯ. ಹೊಸ ಹುಮ್ಮಸ್ಸು ಚಿಗುರಿದೆ. ನಾನು ಬದುಕಿರು ವವರೆಗೆ ಸಿನಿಮಾ ಮೂಲಕ ನಿಮ್ಮ ಮುಂದೆ ಬರುತ್ತೇನೆ ನಿಮ್ಮ ಹಾರೈಕೆ. ಪ್ರೀತಿ ಅಭಿಮಾನ ಹೀಗೆ ನನ್ನ ಮೇಲೆ ಇರಲಿ ಅಂದಾಗ ನೆರೆದಿದ್ದ ಕ್ರೇಜಿಸ್ಟಾರ ಅಭಿಮಾನಿಗಳು ಶಿಳ್ಳೆ ಕೇಕೆ ಹಾಕಿದರು. ಇದೇ ವೇಳೆ ಜಿಟಿವಿ ಕಾಮಿಡಿ ಕಿಲಾಡಿಗಳಾದ ಸೂರಜ, ಸೂರ್ಯ ಕುಂದಾಪುರ, ದಿವ್ಯಾಚ, ಹಿತೇಶ ಗಿಲ್ಲಿ ನಟ, ಗಗನಾ ಪ್ರೇಕ್ಷಕರನ್ನು ನಕ್ಕು ನಗಿಸಿದರು.

ದುರ್ಗಾ ಪರಮೇಶ್ವರಿ ದೇವಸ್ಥಾನದ ಜಾತ್ರಾ ಮಹೋತ್ಸವ ಕಾರ್ಯಕ್ರಮದಲ್ಲಿ ಚಿತ್ರನಟ ರವಿಚಂದ್ರನ ಅವರಿಗೆ ಗುರುರಕ್ಷೆ ನೀಡಲಾಯಿತು.

ಡಾ.ಅಂಬೇಡ್ಕರ್ ಜೀವನ ದಾರಿದೀಪ

ಅಥಣಿ: ಡಾ.ಬಿ.ಆರ್.ಅಂಬೇಡ್ಕರ್ ಅವರು ಕೇವಲ ಒಬ್ಬ ವ್ಯಕ್ತಿಯಲ್ಲ, ಅವರು ನವ ಭಾರತ ನಿರ್ಮಾಣದ ದೊಡ್ಡ ಶಕ್ತಿಯಾಗಿದ್ದಾರೆ. ಅವರ ವಿಚಾರಧಾರೆಗಳು ನಮ್ಮೆಲ್ಲರಿಗೆ ಸ್ಫೂರ್ತಿಯಾಗಬೇಕು ಎಂದು ಎಬಿವಿಪಿ ನಗರ ಸಂಚಾಲಕ ಸುದೀಪ್ ನಾಯಕ ಹೇಳಿದರು.

ಅವರು ಅಥಣಿ ಪಟ್ಟಣದಲ್ಲಿ ಮಹಾ ಮಾನವತಾವಧಿ, ಭಾರತ ರತ್ನ , ಸಂವಿಧಾನ ಶಿಲ್ಪಿ ಡಾ. ಬಿ ಆರ್ ಅಂಬೇಡ್ಕರ್ ಅವರ 134 ನೇ ಜಯಂತಿ ಅಂಗವಾಗಿ ಅಂಬೇಡ್ಕರ್ ಅವರ ಪುತ್ತಳಿಗೆ ಮಾಲಾರ್ಪಣೆ ಮಾಡಿ ಮಾತನಾಡಿ ನವ ಭಾರತ ನಿರ್ಮಾಣನದಲ್ಲಿ ಅಂಬೇಡ್ಕರ್ ಪಾತ್ರ ಅಮೂಲ್ಯ ಎಂದು ಹೇಳಿದರು

ಎಬಿವಿಪಿ ತಾಲೂಕ ಅಧ್ಯಕ್ಷ ಪ್ರೊ ರಾವಸಾಬ ಅಂಬಿ ಮಾತನಾಡಿ ಯುವಕರು ಅಂಬೇಡ್ಕರ ಜೀವನ ಮಾದರಿಯಾಗಿ ತೆಗೆದುಕೊಳ್ಳಬೇಕು, ಸಾಮಾಜಿಕ ಸಮಾನತೆಯನ್ನು ಎತ್ತಿ ಹಿಡಿಯಬೇಕು. ಜಗತ್ತಿನಲ್ಲಿಯೇ ಶ್ರೇಷ್ಠವಾದ ಮತ್ತು ದೊಡ್ಡ ಸಂವಿಧಾನವನ್ನು ಕೊಟ್ಟಿರುವ ಅಂಬೇಡ್ಕರ್ ಅವರ ವಿಚಾರಧಾರೆಗಳನ್ನು ಪಾಲಿಸುವ ಮೂಲಕ ಸಂವಿಧಾನದ ಆಶಯಗಳನ್ನು ಎತ್ತಿ ಹಿಡಿಯಬೇಕೆಂದು ಕರೆ ನೀಡಿದರು.

ನೊಂದವರು, ಬಡವರು, ಅಸ್ಪೃಶ್ಯರು, ಮಹಿಳೆಯರ ಪರವಾಗಿ ನ್ಯಾಯ ಒದಗಿಸಿಕೊಡಲು ಶ್ರಮಿಸಿದ ಕೀರ್ತಿ ಅಂಬೇಡ್ಕರ್ ಅವರಿಗೆ ಸಲ್ಲುತ್ತದೆ ಎಂದರು.

ಡಾ.ಬಿ.ಆರ್.ಅಂಬೇಡ್ಕರ್‌ಗೆ ಭಾರತ ರತ್ನ ನೀಡದೆ ಕಾಂಗ್ರೆಸ್ ಅಗೌರವ

ನಿಪ್ಪಾಣಿ: ಡಾ. ಅಂಬೇಡ್ಕರ್ ಜೀವಿತಾವಧಿಯಲ್ಲಿ ಕಾಂಗ್ರೆಸ್ ಪಕ್ಷದಿಂದ ಸಾಕಷ್ಟು ಅವಮಾನಕ್ಕೆ ಒಳಗಾದವರು. ಪ್ರತಿ ಹಂತದಲ್ಲಿಯೂ ಅಂಬೇಡ್ಕರ್ ಅವರಿಗೆ ತೊಂದರೆ ನೀಡಿದ ಕಾಂಗ್ರೆಸ್ ಸಾವಿನ ನಂತರ ಸಮಾಧಿಗೆ ಜಾಗ ನೀಡಿದೆ ಕಠೋರವಾಗಿ ನಡೆದುಕೊಂಡಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ ವಿಜಯೇಂದ್ರ ಹೇಳಿದರು.

ಡಾ.ಬಾಬಾಸಾಹೇಬ ಅಂಬೇಡ್ಕರ್ ಅವರು ನಿಪ್ಪಾಣಿ ಭೇಟಿ ಹಿನ್ನಲೆಯಲ್ಲಿ ಬಿಜೆಪಿ ವತಿಯಿಂದ ನಿಪ್ಪಾಣಿ ನಗರದಲ್ಲಿ ಮಂಗಳವಾರ ಆಯೋಜಿಸಿದ್ದ ಭೀಮಹೆಜ್ಜೆ ಶತಮಾನದ ಸಂಭ್ರಮ ಐತಿಹಾಸಿಕ ಕಾರ್ಯಕ್ರಮದ ಸಮಾರೋಪ ಕಾರ್ಯಕ್ರಮದಲ್ಲಿ ಮಾತನಾಡಿದರು.

ಪ್ರಪಂಚವೇ ಅಂಬೇಡ್ಕರ್ ಅವರನ್ನು ಕೊಂಡಾಡುತ್ತದೆ. ಆದರೆ ಕಾಂಗ್ರೆಸ್ ಅವಮಾನ ಮಾಡಿತು. ಚುನಾವಣೆಯಲ್ಲಿ ಸೋಲಿಸಲಾಯಿತು. ಅಷ್ಟೇ ಅಲ್ಲದೆ ಭಾರತ ರತ್ನ ನೀಡದೆ ಕಾಂಗ್ರೆಸ್ ದ್ರೋಹ ಎಸಗಿದೆ. ಅಂಬೇಡ್ಕರ್ ನಿಪ್ಪಾಣಿ ಭೇಟಿ ನೂರು ವರ್ಷದ ಈ ಅದ್ಭುತ ಸಂದರ್ಭದಲ್ಲಿ ಕಾರ್ಯಕ್ರಮ ಮಾಡದೆ ಕಾಂಗ್ರೆಸ್ ಸರಕಾರ ಮಾಡಿರುವ ಅವಮಾನವನ್ನು ಬಿಜೆಪಿ ಖಂಡಿಸುತ್ತದೆ ಎಂದರು.

ಬೆಲೆ ಏರಿಕೆಯಿಂದ ರಾಜ್ಯದ ಜನ ಸಾಕಷ್ಟು ಸಂಕಷ್ಟಕ್ಕೆ ಸಿಲುಕಿದ್ದಾರೆ. ಈ ಹಿನ್ನಲೆಯಲ್ಲಿ ಬಿಜೆಪಿ ವತಿಯಿಂದ ರಾಜ್ಯಾದ್ಯಂತ ಜನಾಕ್ರೋಶ ಯಾತ್ರೆ ನಡೆಯುತ್ತಿದೆ. ಭ್ರಷ್ಟ ಕಾಂಗ್ರೆಸ್ ಸರಕಾರದ ವಿರುದ್ಧ ನಮ್ಮ ಹೋರಾಟ ನಿರಂತರವಾಗಿ ಸಾಗಲಿದೆ. ಈ ಸರಕಾರ ತಗೆದುಹಾಕಲು ನಿರಂತರವಾಗಿ ಶ್ರಮಿಸಬೇಕು ಎಂದು ವಿಜಯೇಂದ್ರ ಕಾರ್ಯಕರ್ತರಿಗೆ ಕರೆ ನೀಡಿದರು.

ಭೀಮಹೆಜ್ಜೆ ಶತಮಾನದ ಸಂಭ್ರಮ ಐತಿಹಾಸಿಕ ಕಾರ್ಯಕ್ರಮದ ಸಮಾರೋಪವನ್ನು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ ವಿಜಯೇಂದ್ರ ಅವರು ಉದ್ಘಾಟಿಸಿದರು.

ವಿಪಕ್ಷ ನಾಯಕ ಆರ್ ಅಶೋಕ್ ಮಾತನಾಡಿ. ದಲಿತರ ಕುರಿತು ಮಾತನಾಡುವ ಕಾಂಗ್ರೆಸ್ ದಲಿತರಿಗೆ ಮೀಸಲಿಟ್ಟ ಹಣ ದುರ್ಬಳಕೆ ಮಾಡಿಕೊಂಡಿದ್ದನ್ನು ಜನ ನೋಡಿದ್ದಾರೆ. ದಲಿತರ ಕುರಿತು ಈ ಹಿಂದಿನಿಂದಲೂ ಕಾಂಗ್ರೆಸ್ ಮೊಸಳೆ ಕಣ್ಣೀರು ಸುರಿಸುತ್ತಾ ಬಂದಿದೆ. ಅಂಬೇಡ್ಕರ್ ಅವರಿಗೆ ನಿರಂತರವಾಗಿ ಕಾಂಗ್ರೆಸ್ ಅನ್ಯಾಯ ಮಾಡುತ್ತಾ ಬಂದಿದ್ದು ರಾಜ್ಯದ ಜನ ಯಾವತ್ತೂ ಕ್ಷಮಿಸಲ್ಲ ಎಂದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ನಿಪ್ಪಾಣಿ ಶಾಸಕಿ ಶಶಿಕಲಾ ಜೊಲ್ಲೆ ಮಾತನಾಡಿ ಬಾಬಾಸಾಹೇಬ ಅಂಬೇಡ್ಕರ್ ನೀಡಿರುವ ಶ್ರೇಷ್ಠ ಸಂವಿಧಾನದ ಫಲವಾಗಿ ಇಂದು ನಾನು ಮೂರು ಬಾರಿ ಶಾಸಕಿಯಾಗಲು ಸಾಧ್ಯವಾಗಿದೆ,ಅಂತಹ ಮಹಾನ್ ವ್ಯಕ್ತಿ ನಿಪ್ಪಾಣಿಗೆ ಭೇಟಿ ನೀಡಿದ್ದು ನಮ್ಮ ಪುಣ್ಯಭೂಮಿಯಲ್ಲಿ ಎಂದು ಹೇಳಲು ನನಗೆ ಹೆಮ್ಮೆ ಎನ್ನಿಸುತ್ತದೆ ಎಂದರು.

ಡಾ.ಅಂಬೇಡ್ಕರ್ 1925 ಏಪ್ರಿಲ್ 11 ರಂದು ನಿಪ್ಪಾಣಿಗೆ ಭೇಟಿ ನೀಡಿದ್ದು,ಬಹಿಷ್ಕೃತ ಹಿತಕಾರಣಿ ಸಭೆ ನಡೆಸಿದ್ದರು.ಬಾಬಾಸಾಹೇಬರ ವಾಯು ವಿಹಾರ ನಡೆಸಿದ ಸ್ಥಳವಾದ ಗವಾನ ಎಂಬ ಸ್ಥಳದಲ್ಲಿ ಭವ್ಯ ಮೂರ್ತಿ ಸ್ಥಾಪಿಸಿ, ಸುಂದರ ಉದ್ಯನವನ,ವಸತಿ ಶಾಲೆ, ಬೌದ್ದಸ್ತೂಪ, ಅಂಬೇಡ್ಕರ್ ಅವರ ಇತಿಹಾಸ ಸಾರುವ ಮೂಸಿಯಂ ,ಒಟ್ಟು ಮೂರು ಕೋಟಿ ರು. ವೆಚ್ಚದಲ್ಲಿ ನಿರ್ಮಾಣ ಮಾಡಲಾಗುವುದು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಸಂಸದ ಗೋವಿಂದ ಕಾರಜೋಳ, ಪರಿಷತ್ ವಿಪಕ್ಷ ನಾಯಕ ಚಲುವಾದಿ ನಾರಾಯಣಸ್ವಾಮಿ, ಶಾಸಕರಾದ ದುರ್ಯೋಧನ ಐಹೊಳೆ, ನಿಖಿಲ್ ಕತ್ತಿ, ಅವಿನಾಶ ಜಾದವ್, ಚಂದ್ರು ಲಮಾಣಿ, ಹನುಮಂತ ನಿರಾಣಿ, ಎನ್ ರವಿಕುಮಾರ, ಮಾಜಿ ಸಂಸದೆ ಮಂಗಲ ಅಂಗಡಿ ಉಪಸ್ಥಿತರಿದ್ದರು.

₹ 6 @vishwavaninews epaper.vishwavani.news vishwavani.news ಬೆಂಗಳೂರು | ಹುಬ್ಬಳ್ಳಿ | ಮಂಗಳೂರು | ದಾವಣಗೆರೆ | ಕಲಬುರಗಿ | **ಬೆಳಗಾವಿ** ಬುಧವಾರ 16.04.2025 ಸಂಪುಟ: 67 ಸಂಚಿಕೆ: 342 ಪುಟಗಳು: 12 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ
ವಿಶ್ವಾಸವೇ ವಿಶ್ವ

ಐಸಿಸಿ ತಿಂಗಳ ಆಟಗಾರ ಪ್ರಶಸ್ತಿಗೆ ಶ್ರೇಯಸ್ ಅಯ್ಯರ್ ಆಯ್ಕೆ

ಭಾರತ ಚಾಂಪಿಯನ್ಸ್ ಟ್ರೋಫಿ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದ ಮಧ್ಯಮ ಕ್ರಮಾಂಕದ ಬ್ಯಾಟರ್ ಶ್ರೇಯಸ್ ಅಯ್ಯರ್ ಅವರು ಐಸಿಸಿ ಮಾರ್ಚ್ ತಿಂಗಳ ಆಟಗಾರ ಪ್ರಶಸ್ತಿಗೆ ಪಾತ್ರರಾಗಿದ್ದಾರೆ. 30 ವರ್ಷ ವಯಸ್ಸಿನ ಅಯ್ಯರ್ ಆ ಟೂರ್ನಿಯಲ್ಲಿ 243 ರನ್ ಹೊಡೆದಿದ್ದರು. ಭಾರತ ಸತತ ಎರಡನೇ ತಿಂಗಳು ಈ ಗೌರವಕ್ಕೆ ಪಾತ್ರವಾಗಿದೆ. ಫೆಬ್ರವರಿಯಲ್ಲಿ ಶುಭಮನ್ ಗಿಲ್ ಈ ಪ್ರಶಸ್ತಿಗೆ ಪಾತ್ರರಾಗಿದ್ದರು.

ಇಂದು, ನಾಳೆ ಸಿಇಟಿ ಪರೀಕ್ಷೆ

ಬೆಂಗಳೂರು: ಎಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ಏ.16 ಮತ್ತು 17ರಂದು ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ) ನಡೆಯುತ್ತಿದ್ದು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಬಿಗಿ ಕ್ರಮಗಳನ್ನು ಕೈಗೊಂಡಿದೆ. ಏ.16ರಂದು ಭೌತ ವಿಜ್ಞಾನ (ಬೆಳಗ್ಗೆ 10.30ರಿಂದ 11.50) ಮತ್ತು ರಸಾಯನ ವಿಜ್ಞಾನ (ಮಧ್ಯಾಹ್ನ 12.30 ರಿಂದ 3.50) ಹಾಗೂ ಏ.17ರಂದು ಗಣಿತ (ಬೆಳಗ್ಗೆ 10.30ರಿಂದ 11.50) ಮತ್ತು ಜೀವ ವಿಜ್ಞಾನ (ಮಧ್ಯಾಹ್ನ 12.30ರಿಂದ 3.50) ವಿಷಯಗಳ ಪರೀಕ್ಷೆಗಳು ನಡೆಯಲಿವೆ.

ಟಿಸಿಎಸ್‌ಗೆ 99 ಪೈಸೆಗೆ ಜಮೀನು

ಅಮರಾವತಿ: ಪ್ರಮುಖ ಐಟಿ ಹೂಡಿಕೆಗಳನ್ನು ಆಕರ್ಷಿಸುವ ಕ್ರಮವಾಗಿ ಆಂಧ್ರಪ್ರದೇಶ ಸರಕಾರವು ವಿಶಾಖಪಟ್ಟಣದಲ್ಲಿ 21.16 ಎಕರೆ ಭೂಮಿಯನ್ನು ಟಾಟಾ ಕನ್ಸಲ್ಟೆನ್ಸಿ ಸರ್ವೀಸಸ್‌ಗೆ (ಟಿಸಿಎಸ್)ಕೇವಲ 99 ಪೈಸೆಯ ಸಾಂಕೇತಿಕ ಬೆಲೆಗೆ ಮಂಜೂರು ಮಾಡಿದೆ.

ಫನ್‌ತರಂಗ
- ರಘುಪತಿ ಶೃಂಗೇರಿ -

ಒಕ್ಕಲಿಗ, ಲಿಂಗಾಯತ ಸಮುದಾಯದಿಂದ ತೀವ್ರ ವಿರೋಧ
ವರದಿ ಕುರಿತು ಚರ್ಚೆಗೆ ಸಂಪುಟ ಉಪಸಮಿತಿ ರಚನೆ ನಿರೀಕ್ಷೆ
ಜಾತಿ ಗಣತಿ: ಟೈಂಪಾಸ್ ಸೂತ್ರ

ಬೆಂಗಳೂರು: ಜಾತಿ ಗಣತಿಯ ಬಹಿರಂಗದ ಬೆನ್ನಲ್ಲೇ ನಿರೀಕ್ಷೆಯಂತೆ ರಾಜ್ಯ ರಾಜಕೀಯದಲ್ಲಿ ತೀವ್ರ ತಲ್ಲಣ ಶುರುವಾಗಿದ್ದು, ಇದೀಗ 'ಟೆಸ್ಟ್ ಡೋಸ್'ನಿಂದ ಎಚ್ಚೆತ್ತಿರುವ ರಾಜ್ಯ ಸರಕಾರ ವಿಶೇಷ ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಿ, ಬಳಿಕ ಸಂಪುಟ ಉಪಸಮಿತಿ ರಚಿಸಿ ಅಧ್ಯಯನದ ನೆಪದಲ್ಲಿ ಕಾಲ ದೂಡುವ ಸಾಧ್ಯತೆಯಿದೆ ಎನ್ನಲಾಗಿದೆ.

ಜಾತಿ ಗಣತಿಗೆ ಸಂಬಂಧಿಸಿದಂತೆ ಈಗಾಗಲೇ ಒಕ್ಕಲಿಗ, ಲಿಂಗಾಯತ ಸಮುದಾಯದಿಂದ ತೀವ್ರ ವಿರೋಧ ವ್ಯಕ್ತವಾಗಿದೆ. ಒಕ್ಕಲಿಗ ಸಂಘದವರು ಜಾತಿ ಗಣತಿ ಮಂಡಿಸಲು ಮುಂದಾದರೆ ಕಾನೂನಾತ್ಮಕ ಹೋರಾಟದ ಜತೆಜತೆಗೆ ಕರ್ನಾಟಕ ಬಂದ್‌ನಂತಹ ಕಠಿಣ ಹೋರಾಟಕ್ಕೆ ಧುಮುಕುವ ಎಚ್ಚರಿಕೆ ನೀಡಿದ್ದಾರೆ. ಇದರೊಂದಿಗೆ ಬಹುತೇಕ ಮಠಾಧೀಶರು ತಮ್ಮ ತಮ್ಮ ಸಮುದಾಯದ ಸಚಿವರಿಗೆ ಯಾವುದೇ ಕಾರಣಕ್ಕೂ ಜಾತಿ ಗಣತಿ ಅನುಮೋದನೆಯಾಗದಂತೆ ನೋಡಿಕೊಳ್ಳುವಂತೆ ನಿರ್ದೇಶನ ನೀಡಿದ್ದಾರೆ. ಈ ಎಲ್ಲವನ್ನೂ ಗಮನಿಸಿದ ಸಿಎಂ ಸಿದ್ದರಾಮಯ್ಯ, ಸಾಧಕ-ಬಾಧಕದ ಬಗ್ಗೆ ಚರ್ಚಿಸಲು ಸಂಪುಟ ಉಪಸಮಿತಿ ರಚಿಸುವ ಲೆಕ್ಕಾಚಾರದಲ್ಲಿದ್ದಾರೆ ಎನ್ನಲಾಗಿದೆ.

ಜಾತಿ ಗಣತಿ ಪರವಾಗಿ ಅಲ್ಪಸಂಖ್ಯಾತ, ಪರಿಶಿಷ್ಟ ಸೇರಿ ಹಲವು ಹಿಂದುಳಿದ ವರ್ಗದ ಸಮುದಾಯಗಳಿವೆ. ಆದರೂ, ರಾಜಕೀಯವಾಗಿ ಪ್ರಬಲವಾಗಿರುವ ಸಮುದಾಯಗಳು ವಿರೋಧಿಸುತ್ತಿರುವುದರಿಂದ ಉಪಸಮಿತಿಯ ಹೆಸರಲ್ಲಿ ಬೀಸುವ ದೊಣ್ಣೆಯಿಂದ ತಪ್ಪಿಸಿಕೊಳ್ಳುವ ಲೆಕ್ಕಾಚಾರದಲ್ಲಿ ಸಿಎಂ ಇದ್ದಾರೆ ಎನ್ನಲಾಗಿದೆ. ಆದರೆ ಗುರುವಾರ ವಿಶೇಷ ಸಚಿವ ಸಂಪುಟ ಸಭೆಯಲ್ಲಿ ಸಚಿವರು ಯಾವೆಲ್ಲ ವಿಷಯಗಳನ್ನು ಚರ್ಚಿಸಲಿದ್ದಾರೆ ಎನ್ನುವುದನ್ನು ಗಮನಿಸಿ ಮುಂದಿನ ತೀರ್ಮಾನ ಮಾಡಲು ನಿರ್ಧರಿಸಿದ್ದಾರೆ ಎಂದು ತಿಳಿದುಬಂದಿದೆ.

- ಜಾತಿ ಗಣತಿ ವಿರೋಧಿಸಿ ಒಂದಾಗಲು ಸಜ್ಜಾಗಿರುವ ಲಿಂಗಾಯತ-ಒಕ್ಕಲಿಗ ಸಮುದಾಯ
- ಶೀಘ್ರದಲ್ಲಿಯೇ ಎರಡೂ ಸಮುದಾಯಗಳ ಪ್ರಮುಖ ಮಠಾಧೀಶರ ನೇತೃತ್ವದಲ್ಲಿ ಸಭೆ
- ಒಕ್ಕಲಿಗ, ಲಿಂಗಾಯತ ಶಾಸಕರಿಂದ ಪ್ರತ್ಯೇಕ ಸಭೆ; ಸಂಪುಟದಲ್ಲಿ ವಿರೋಧಿಸಲು ತೀರ್ಮಾನ
- ಡ್ಯಾಮೇಜ್ ಕಂಟ್ರೋಲ್‌ಗೆ ಇಂದು ಎಚ್.ಎಂ.ರೇವಣ್ಣ ನೇತೃತ್ವದಲ್ಲಿ ಜಂಟಿ ಸುದ್ದಿಗೋಷ್ಠಿ



ಡಿಕೆ ನೇತೃತ್ವದಲ್ಲಿ ಕೈ ಶಾಸಕರ ಸಭೆ

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ನೇತೃತ್ವದಲ್ಲಿ ಅಧಿಕೃತ ನಿವಾಸದಲ್ಲಿ ಕಾಂಗ್ರೆಸ್ ಒಕ್ಕಲಿಗ ಸಮುದಾಯದ ಶಾಸಕರೊಂದಿಗೆ ಸಭೆ ನಡೆಸಿದ್ದಾರೆ. ಈ ವೇಳೆ ಈ ಗಣತಿಯಿಂದ ಸಮುದಾಯದಲ್ಲಿ ಸಮಸ್ಯೆಯಾಗಲಿದೆ. ಇದರಿಂದ ಡ್ಯಾಮೇಜ್ ಆಗುತ್ತದೆ. ಆದ್ದರಿಂದ ಪಕ್ಷ ಹೈಕಮಾಂಡ್ ಮಾತಿಗೂ ಸಮಸ್ಯೆಯಾಗದಂತೆ, ಸಮುದಾಯಕ್ಕೂ ಬೇಸರವಾಗದಂತೆ ಎಚ್ಚರವಹಿಸಬೇಕು. ಈ ಸಮಯದಲ್ಲಿ ಈ ಸಮೀಕ್ಷೆಯನ್ನು ಮಂಡಿಸುವ ಅಗತ್ಯತೆಯಿರಲಿಲ್ಲ ಎಂದು ಹಲವು ಶಾಸಕರು ಆರೋಪಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಜಂಟಿ ಹೋರಾಟಕ್ಕೆ ಸಜ್ಜಾದ ಮಠಾಧೀಶರು

ಈಗಾಗಲೇ ಒಕ್ಕಲಿಗ ಹಾಗೂ ಲಿಂಗಾಯತ ಸಮುದಾಯದ ನಾಯಕರು ಈ ವಿಷಯಕ್ಕೆ ಸಂಬಂಧಿಸಿದಂತೆ ಅನೌಪಚಾರಿಕವಾಗಿ ಚರ್ಚೆ ನಡೆಸಿದ್ದು, ಇನ್ನೆರಡು ದಿನಗಳಲ್ಲಿ ಎರಡೂ ಸಮುದಾಯದ ಪ್ರಮುಖ ಮಠಾಧೀಶರನ್ನು ಒಂದೇ ವೇದಿಕೆಯಲ್ಲಿ ಸೇರಿಸುವ ಮೂಲಕ ಬಲಪ್ರದರ್ಶನ ಮಾಡಲು ತೀರ್ಮಾನಿಸಲಾಗಿದೆ. ಈಗಿರುವ ಅಂಕಿ-ಸಂಖ್ಯೆಯನ್ನೇ ಒಪ್ಪಿ ಕೊಂಡರೆ ಭವಿಷ್ಯದಲ್ಲಿ ರಾಜಕೀಯವಾಗಿ ಈ ಎರಡೂ ಸಮುದಾಯಗಳಿಗೆ ಆಗಬಹುದಾದ ಅನಾಹುತ ಊಹಿಸಲಾಗಿದೆ. ಆದ್ದರಿಂದ ಈ ವಿಷಯದಲ್ಲಿ ಎರಡೂ ಸಮುದಾಯಗಳು ಒಗ್ಗಟ್ಟಿನ ಮಂತ್ರ ಪಠಿಸಲು ತೀರ್ಮಾನಿಸಿವೆ ಎಂದು ತಿಳಿದುಬಂದಿದೆ.

ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಗೆ ಸಂಬಂಧಿಸಿದಂತೆ ಚರ್ಚಿಸಲು ಪ್ರತ್ಯೇಕ ವಿಧಾನಮಂಡಲ ಅಧಿವೇಶನ ಕರೆದು ಚರ್ಚಿಸುವುದು ಸೂಕ್ತ. ಈ ವರದಿ ಕುರಿತಂತೆ ಮುಕ್ತವಾಗಿ ಚರ್ಚಿಸಲು ಅವಕಾಶ ನೀಡಿದರೆ ಒಳ್ಳೆಯದು.
- ಸತೀಶ್ ಜಾರಕಿಹೊಳಿ, ಸಚಿವ

ರಾಜ್ಯ ಸರಕಾರ ಜಾತಿ ಗಣತಿಯನ್ನು ಸಂಪುಟದಲ್ಲಿ ಮಂಡಿಸಿ, ಚರ್ಚಿಸಲು ವಿಶೇಷ ಸಂಪುಟ ಕರೆದಿದೆ. ಆದರೆ ಮರು ಸಮೀಕ್ಷೆಯ ಅಗತ್ಯವಿದೆ. ಜಾತಿ ಜನಗಣತಿ ಹತ್ತು ವರ್ಷಗಳ ಹಳೆಯ ವರದಿ. ಮರು ಸರ್ವೆ ನಡೆಸಬೇಕು ಎಂಬ ಕೆಲವರ ಬೇಡಿಕೆಯನ್ನು ಒಪ್ಪಬಹುದು.
- ಕೆ.ಎನ್.ರಾಜಣ್ಣ, ಸಚಿವ

ನ್ಯಾಷನಲ್ ಹೆರಾಲ್ಡ್ ಕೇಸ್ ಕುರಿತು ಆರೋಪಪಟ್ಟಿ ಸಲ್ಲಿಸಿದ ಇ.ಡಿ
ಏಪ್ರಿಲ್ 25ರಂದು ವಿಚಾರಣೆಯ ದಿನಾಂಕ ನಿಗದಿಪಡಿಸಿದ ಕೋರ್ಟ್
ಸೋನಿಯಾ, ರಾಹುಲ್ ಗಾಂಧಿ ವಿರುದ್ಧ ಚಾರ್ಜ್‌ಶೀಟ್ ಸಲ್ಲಿಕೆ

ದೆಹಲಿ: ನ್ಯಾಷನಲ್ ಹೆರಾಲ್ಡ್ ಹಣ ವರ್ಗಾವಣೆ ಕೇಸ್‌ಗೆ ಸಂಬಂಧಿಸಿದಂತೆ ಕಾಂಗ್ರೆಸ್ ರಾಜ್ಯಸಭೆ ಸದಸ್ಯೆ ಸೋನಿಯಾ ಗಾಂಧಿ, ಲೋಕಸಭೆ ಪ್ರತಿಪಕ್ಷದ ನಾಯಕ ರಾಹುಲ್ ಗಾಂಧಿ ಹಾಗೂ ಪಕ್ಷದ ಸಾಗರೋತ್ತರ ಘಟಕದ ಮುಖ್ಯಸ್ಥ ಸ್ಯಾಮ್ ಪಿತ್ರೋಡಾ ವಿರುದ್ಧ ಜಾರಿ ನಿರ್ದೇಶನಾಲಯವು ಮಂಗಳವಾರ ದೆಹಲಿಯ ರೋಸ್ ಅವೆನ್ಯೂ ಕೋರ್ಟ್‌ಗೆ ಆರೋಪಪಟ್ಟಿ ಸಲ್ಲಿಸಿದೆ. ವಿಚಾರಣೆ ನಡೆಸಿದ ವಿಶೇಷ ನ್ಯಾಯಾಧೀಶ ವಿಶಾಲ್ ಗೋಗ್ನೆ, ಆರೋಪ ಪಟ್ಟಿ ಅಂಗೀಕರಿಸುವ ಕುರಿತು ನಿರ್ಧರಿಸಲು ಮುಂದಿನ ವಿಚಾರಣೆಯನ್ನು ಏಪ್ರಿಲ್ 25ಕ್ಕೆ ಮುಂದೂಡಿದ್ದಾರೆ. ಇದೇ ಮೊದಲ ಬಾರಿ ನ್ಯಾಷನಲ್ ಹೆರಾಲ್ಡ್ ಹಗರಣದಲ್ಲಿ ಸೋನಿಯಾ, ರಾಹುಲ್ ವಿರುದ್ಧ ಜಾರ್ಜ್‌ಶೀಟ್ ದಾಖಲಾಗಿದೆ.

ಅಸೋಸಿಯೇಟೆಡ್ ಜರ್ನಲ್ ಲಿಮಿಟೆಡ್‌ಗೆ ಸೇರಿದ 661 ಕೋಟಿ ರುಪಾಯಿ ಮೌಲ್ಯದ ಆಸ್ತಿಯನ್ನು ಸ್ವಾಧೀನಪಡಿಸಿಕೊಳ್ಳುವ ಕುರಿತು ಇ.ಡಿ ನೋಟಿಸ್ ಜಾರಿಗೊಳಿಸಿದ ಬೆನ್ನಲ್ಲೇ ಕೋರ್ಟ್‌ಗೆ ಚಾರ್ಜ್‌ಶೀಟ್ ಸಲ್ಲಿಕೆಯಾಗಿದ್ದು, ರಾಹುಲ್ ಗಾಂಧಿ ಹಾಗೂ ಸೋನಿಯಾ ಗಾಂಧಿ ಅವರಿಗೆ ಸಂಕಷ್ಟ ಶುರುವಾಗಿದೆ.

ಏನಿದು ನ್ಯಾಷನಲ್ ಹೆರಾಲ್ಡ್ ಕೇಸ್?

ಭಾರತದ ಮೊದಲ ಪ್ರಧಾನಿ ಜವಾಹರಲಾಲ್ ನೆಹರು ಮತ್ತು ಇತರ ಸ್ವಾತಂತ್ರ್ಯ ಹೋರಾಟಗಾರರು 1938ರಲ್ಲಿ ನ್ಯಾಷನಲ್ ಹೆರಾಲ್ಡ್ ಪತ್ರಿಕೆಯನ್ನು ಸ್ಥಾಪಿಸಿದ್ದರು. ಇದರ ಮಾಲೀಕತ್ವವನ್ನು ಅಸೋಸಿಯೇಟೆಡ್ ಜರ್ನಲ್ ಲಿಮಿಟೆಡ್ ಹೊಂದಿತ್ತು. ಸ್ವಾತಂತ್ರ್ಯ ಬಳಿಕ ಅದು ಕಾಂಗ್ರೆಸ್‌ನ ಮುಖವಾಣಿ ಯಾಗಿದೆ. ಸದ್ಯ ಎಜೆಎಲ್ ಯಂಗ್ ಇಂಡಿ ಯನ್ ಪ್ರೈವೇಟ್ ಲಿಮಿಟೆಡ್ ಒಡೆತನದಲ್ಲಿದೆ. ಎಜೆಎಲ್‌ನ ಆಸ್ತಿಯನ್ನು ಕಾಂಗ್ರೆಸ್‌ನ ವಿವಿಧ ನಾಯಕರು ಕಡಿಮೆ ಮೌಲ್ಯಕ್ಕೆ ವಶಪಡಿಸಿ ಕೊಂಡಿದ್ದರು ಎಂಬ ಆರೋಪ ಇದೆ. ಈ ಕುರಿತು 2014ರಲ್ಲಿ ದೆಹಲಿ ನ್ಯಾಯಾಲಯಕ್ಕೆ ದೂರು ಸಲ್ಲಿಸಿದ ಬಿಜೆಪಿ ನಾಯಕ ಸುಬ್ರಮಣಿ ಯನ್ ಸ್ವಾಮಿ, ಸೋನಿಯಾ, ರಾಹುಲ್ ಗಾಂಧಿ ಮತ್ತು ಇತರ ಹಿರಿಯ ಕಾಂಗ್ರೆಸ್ ನಾಯಕರು ಅಸೋಸಿಯೇಟೆಡ್ ಜರ್ನಲ್ಸ್ ಲಿಮಿಟೆಡ್‌ನ ಸುಮಾರು 2000 ಕೋಟಿ ರು. ಮೌಲ್ಯದ ಆಸ್ತಿ ಯಂಗ್ ಇಂಡಿಯಾ ಲಿಮಿ ಟೆಡ್ ಮೂಲಕ ಕೇವಲ 50 ಲಕ್ಷ ರುಪಾಯಿ ಗಳಿಗೆ ವಶಪಡಿಸಿಕೊಂಡಿದ್ದಾರೆ ಎಂದು ಉಲ್ಲೇಖಿಸಿದ್ದರು. 2021ರಲ್ಲಿ ಜಾರಿ ನಿರ್ದೇಶನಾಲಯವು ಪ್ರಕರಣದ ವಿಚಾರಣೆ ಯನ್ನು ಅಧಿಕೃತವಾಗಿ ಶುರು ಮಾಡಿತು. ಹಲವು ಸ್ಥಳಗಳಲ್ಲಿ ಶೋಧ ನಡೆಸಿ, ಅಕ್ರಮ ನಡೆದಿರುವ ಬಗ್ಗೆ ದಾಖಲೆಗಳನ್ನು ವಶಪಡಿಸಿ ಕೊಂಡಿತ್ತು. ಈಗ ಸೋನಿಯಾ ಹಾಗೂ ರಾಹುಲ್ ಗಾಂಧಿ ವಿರುದ್ಧ ಚಾರ್ಜ್‌ಶೀಟ್ ಸಲ್ಲಿಸಿದೆ.

ಲಾರಿ ಮುಷ್ಕರ: ಸರಕು ಸಾಗಣೆಯಲ್ಲಿ ವ್ಯತ್ಯಯ

ಬೆಂಗಳೂರು: ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಲಾರಿ, ಟ್ರಕ್ ಹಾಗೂ ಗೂಡ್ಸ್ ವಾಹನಗಳು ಸೋಮವಾರ ಮಧ್ಯರಾತ್ರಿಯಿಂದಲೇ ಸಂಚಾರ ಸ್ಥಗಿತಗೊಳಿಸಿ ಮುಷ್ಕರ ಆರಂಭಿಸಿದ್ದು, ಸರಕು ಸಾಗಾಣಿಕೆಯಲ್ಲಿ ವ್ಯತ್ಯಯವಾಗಿದೆ.

ಸಿಎಂ ಸಿದ್ದರಾಮಯ್ಯ ನೇತೃತ್ವದಲ್ಲಿ ಲಾರಿ ಸಂಘಟನೆಯ ಪ್ರಮುಖರೊಂದಿಗೆ ಸಭೆ ನಡೆದರೂ, ಮುಷ್ಕರವನ್ನು ಹಿಂಪಡೆಯುವ ಬಗ್ಗೆ ಯಾವುದೇ ಸ್ಪಷ್ಟನೆ ಸಿಕ್ಕಿಲ್ಲ. ರಾಜ್ಯಾದ್ಯಂತ ಸರಕು ಸಾಗಾಣಿಕೆ ವಾಹನಗಳ ಸಂಚಾರ ಸ್ಥಗಿತಗೊಂಡಿರುವುದರಿಂದ ಹೊರರಾಜ್ಯಗಳಿಂದ ಯಾವುದೇ ರೀತಿಯ ಸರಕು ಸಾಗಾಣಿಕೆಯ ಲಾರಿಗಳು ಕರ್ನಾಟಕಕ್ಕೆ ಆಗಮಿಸುತ್ತಿಲ್ಲ. ನಿರಂತರ ಬೆಲೆ ಏರಿಕೆಯಿಂದ ಸಮಸ್ಯೆಯಾಗುತ್ತಿದ್ದು, ಇದರ ನಡುವೆ ಲಾರಿ ಮುಷ್ಕರದಿಂದ ಉಂಟಾಗಿರುವ ಸರಕು ಸಾಗಾಣಿಕೆ ವ್ಯತ್ಯಯದಿಂದ ಸಾರ್ವಜನಿಕರಿಗೆ ಗಾಯದ ಮೇಲೆ ಬರೆ ಎಳೆದಂತಾಗುತ್ತದೆ ಎನ್ನುವ ಆತಂಕ ಶುರುವಾಗಿದೆ. ಮುಷ್ಕರದ ಹಿನ್ನೆಲೆ ಬೆಂಗಳೂರಿನ ಯಶವಂತಪುರ ಎಪಿಎಂಸಿ ಸೇರಿದಂತೆ ರಾಜ್ಯದ ಹಲವೆಡೆ ಟ್ರಕ್ ನಿಲ್ದಾಣಗಳಲ್ಲಿ ವಾಹನಗಳು ನಿಂತಿವೆ.

ಜಲ್ಲಿ, ಮರಳು, ಕಲ್ಲು, ಸಿಮೆಂಟು, ಕಬ್ಬಿಣ ಮತ್ತಿತರ ವಸ್ತುಗಳ ಸಾಗಾಟ ಸ್ಥಗಿತಗೊಂಡಿದ್ದು, ಹಾಲು, ಔಷಧಿ, ತರಕಾರಿ ಹೊರತುಪಡಿಸಿ ಎಲ್ಲ ವಸ್ತುಗಳ ಸಾಗಾಟ ನಿಂತುಹೋಗಿದೆ. ಮಾರುಕಟ್ಟೆ ರಾಷ್ಟ್ರೀಯ ಹೆದ್ದಾರಿ ಸೇರಿದಂತೆ ಎಲ್ಲೆಡೆ ಲಾರಿಗಳು, ಗೂಡ್ಸ್ ವಾಹನಗಳು ನಿಂತಲ್ಲೇ ನಿಂತಿವೆ. ಮುಷ್ಕರಕ್ಕೆ ಸುಮಾರು 69 ಸಂಘಟನೆಗಳು ಬೆಂಬಲ ನೀಡಿದ್ದು 6 ಲಕ್ಷ ಲಾರಿಗಳು ಸಂಚಾರ ಸ್ತಬ್ಧಗೊಳಿಸಿವೆ.
- ಜಿ.ಆರ್.ಷಣ್ಮುಗಪ್ಪ ಲಾರಿ ಮಾಲೀಕರ ಸಂಘದ ಅಧ್ಯಕ್ಷ

ಕರ್ನಾಟಕ ಸರ್ಕಾರ

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು

ಬೆಂಗಳೂರು-ಬೀದರ್ ವಿಮಾನಯಾನ ಸೇವೆಯ ಪುನರಾರಂಭ
ಹಾಗೂ
ಬೀದರ್ ಜಿಲ್ಲೆಯಲ್ಲಿ ರೂ. 2025 ಕೋಟಿ ಮೌಲ್ಯದ ವಿವಿಧ ಮೂಲಸೌಕರ್ಯ ಅಭಿವೃದ್ಧಿ ಯೋಜನೆ/ ಕಾಮಗಾರಿಗಳ ಉದ್ಘಾಟನೆ ಮತ್ತು ಶಂಕುಸ್ಥಾಪನೆ ಸಮಾರಂಭ

ಕ್ರೀಡಾ ಸಮುಚ್ಛಯ

ಪ್ರಜಾಸೌಧ

ಪ್ರಗತಿ ಪರಿಶೀಲನಾ ಸಭೆಯಲ್ಲಿ ಸಚಿವರಾದ ಶ್ರೀ ಈಶ್ವರ ಬಿ ಖಂಡ್ರೆ, ಶ್ರೀ ರಹೀಂಖಾನ್ ಮತ್ತು ಸಂಸತ್ ಸದಸ್ಯ ಶ್ರೀ ಸಾಗರ್ ಈ ಖಂಡ್ರೆ

ಹೊನ್ನಿಕೇರಿ ಪರಿಸರ ಪ್ರವಾಸೋದ್ಯಮ

150 ಹಾಸಿಗೆಗಳ ಸುಸಜ್ಜಿತ ಆಸ್ಪತ್ರೆ

ಸರ್ವರಿಗೂ ಆತ್ಮೀಯ ಸ್ವಾಗತ

ಸ್ಥಳ: ನೆಹರೂ ಕ್ರೀಡಾಂಗಣ, ಬೀದರ್
ದಿ.: 16.04.2025, ಬುಧವಾರ ಸಂಜೆ 4.00 ಗಂಟೆಗೆ

ಭಾಲ್ಕಿ: 400 ಮನೆಗಳ ಹಸ್ತಾಂತರ

220 ಕೆವಿ ಉಪಕೇಂದ್ರ

ಬ್ರಿಮ್ಸ್ ಹೃದ್ರೋಗ ಚಿಕಿತ್ಸಾ ಘಟಕ

ಸಮಾಚಾರ ಸಣ್ಣದಲ್ಲ

ಕಾಂಗ್ರೆಸ್‌ನಿಂದ ಅಂಬೇಡ್ಕರ್‌ಗೆ ಅನ್ಯಾಯ

ಬೆಳಗಾವಿ: ಅಂಬೇಡ್ಕರ್ ಅವರನ್ನು ಚುನಾವಣೆಯಲ್ಲಿ ಸೋಲಿಸಿದ್ದು ಸಾವರ್ಕರ್ ಎಂದು ಸಿದ್ದರಾಮಯ್ಯ ಹೇಳುತ್ತಾರೆ. ಆಗ ಸಿದ್ದರಾಮಯ್ಯ ಕುಟುಂಬದವರು ಚುನಾವಣಾ ವೀಕ್ಷಕರಾಗಿದ್ದರಾ?. ಕಾಂಗ್ರೆಸ್ ಸುಳ್ಳಿನ ಮೂಲಕ ಇತಿಹಾಸ ತಿರುಚುವ ಕೆಲಸ ಮಾಡುತ್ತಿದೆ ಎಂದು ವಿಪಕ್ಷ ನಾಯಕ ಆರ್. ಅಶೋಕ್ ಹೇಳಿದರು.ಸುದ್ದಿಗಾರರೊಂದಿಗೆ ಮಾತನಾಡಿ, ಅಂಬೇಡ್ಕರ್ ಅವರಿಗೆ ಕಾಂಗ್ರೆಸ್ ಸದಾಕಾಲವೂ ಅನ್ಯಾಯ ಎಸಗಿದೆ. ನಿಪ್ಪಾಣಿಗೆ ಭೇಟಿ ನೀಡಿ ನೂರು ವರ್ಷ ಕಳೆದ ನೆನಪಿನಲ್ಲಿ ಕಾರ್ಯಕ್ರಮ ಮಾಡಲಿಲ್ಲ. ಬ್ರಿಟಿಷರಂತೆ ದೇಶ ಒಡೆದ ಕಾಂಗ್ರೆಸ್ ಪಕ್ಷಕ್ಕೆ ಅಂಬೇಡ್ಕರ್ ನೆನಪಾಗುವುದಿಲ್ಲ ಎಂದರು. ಜಾತಿ ಗಣತಿ ವಿಚಾರದಲ್ಲೂ ಕಾಂಗ್ರೆಸ್ ಮುಸ್ಲಿಂ ಸಮುದಾಯದ ಓಲೈಕೆಗೆ ಮುಂದಾಗಿದೆ. ರಾಜ್ಯದಲ್ಲಿ ಅದೇ ಸಮುದಾಯ ಮೊದಲ ಸ್ಥಾನದಲ್ಲಿ ಇದೆ ಎಂದು ತೋರಿಸುವ ಪ್ರಯತ್ನ ನಡೆದಿದೆ. ಮುಸ್ಲಿಂ ಸಮುದಾಯ ಹೆಚ್ಚಿದ್ದರೆ ಅಲ್ಪಸಂಖ್ಯಾತ ಮೀಸಲಾತಿ ತೆಗೆದು ಹಾಕಿ. ತಮಗೆ ಬೇಕಾದ ರೀತಿಯಲ್ಲಿ ಜಾತಿ ಗಣತಿ ವರದಿಯನ್ನು ಕಾಂಗ್ರೆಸ್ ಸರಕಾರ ಸಿದ್ಧಪಡಿಸಿದೆ ಎಂದು ಆರೋಪಿಸಿದರು.

ಮಹಿಳೆ ಮೇಲೆ ಹಲ್ಲೆ: ಆರು ಜನರ ಬಂಧನ

ದಾವಣಗೆರೆ: ಅನೈತಿಕ ಸಂಬಂಧ ಕುರಿತು ಪಂಚಾಯ್ತಿ ನಡೆಸುವ ವೇಳೆಯೇ ಮಹಿಳೆಯ ಮೇಲೆ ಹಾಡುಹಗಲೇ ನಡುರಸ್ತೆಯಲ್ಲಿ ಸಾಮೂಹಿಕವಾಗಿ ಹಲ್ಲೆ ನಡೆಸಿರುವ ಘಟನೆ ಚನ್ನಗಿರಿ ತಾಲೂಕಿನ ತಾವರಕೆರೆ ಗ್ರಾಮದಲ್ಲಿ ನಡೆದಿದ್ದು, ತಡವಾಗಿ ಬೆಳಕಿಗೆ ಬಂದಿದೆ. ಮಹಿಳೆಯೊಬ್ಬರ ಮೇಲೆ ಅಕ್ರಮ ಸಂಬಂಧ ಶಂಕೆ ಹಿನ್ನೆಲೆಯಲ್ಲಿ ಮಹಿಳೆಯನ್ನು ಪಂಚಾಯಿತಿ ಮಾಡಲು ಮಸೀದಿಗೆ ಕರೆಸಲಾಗಿತ್ತು. ಆಗ ಕಮಿಟಿಯ ಕೆಲವರು ಮಹಿಳೆಯನ್ನು ನಡುರಸ್ತೆಗೆ ಎಳೆದುತಂದು ಮನಬಂದಂತೆ ಹಲ್ಲೆ ಮಾಡಿದ್ದಾರೆನ್ನಲಾಗಿದೆ. ಈ ಸಂಬಂಧ ಹಲ್ಲೆ ನಡೆಸಿದ ಸ್ಥಳೀಯರಾದ ಮೊಹಮ್ಮದ್ ನಯಾಜ್, ಮೊಹಮ್ಮದ್ ಗೌಸ್ ಪೀರ್ , ಚಾಂದ್ ಪೀರ್, ಇನಾಯಿತ್ ಉಲ್ಲಾ, ದಸ್ತಗೀರ್ ಹಾಗೂ ರಸೂಲ್ ಟಿಆರ್ ಎಂಬುವವರನ್ನು ಬಂಧಿಸಿ, ವಿಚಾರಣೆ ನಡೆಸಲಾಗುತ್ತಿದೆ. ಪ್ರಕರಣ ಏ. 9ರಂದೇ ನಡೆದಿದ್ದು, ಹಲ್ಲೆ ಮಾಡಿದ ವಿಡಿಯೊವನ್ನು ಸ್ಥಳೀಯರು ಮೊಬೈಲ್‌ನಲ್ಲಿ ಚಿತ್ರೀಕರಿಸಿದ್ದರು. ಈ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆದ ಬಳಿಕ ಪ್ರಕರಣ ತಡವಾಗಿ ಬೆಳಕಿಗೆ ಬಂದಿದೆ. ಈ ಕುರಿತು ನೊಂದ ಮಹಿಳೆ ಏ.11ರಂದು ಚನ್ನಗಿರಿ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

ಕಲಬುರಗಿಯಲ್ಲಿ ವಿಭಾಗ ಮಟ್ಟದ ಉದ್ಯೋಗ ಮೇಳ | 22 ಸಾವಿರ ಜನರಿಂದ ನೋಂದಣಿ, 280ಕ್ಕೂ ಹೆಚ್ಚು ಕಂಪನಿಗಳು ಭಾಗಿ | ಒಂದು ಲಕ್ಷ ಉದ್ಯೋಗ ಒದಗಿಸುವ ಗುರಿ

ಬೃಹತ್ ಉದ್ಯೋಗ ಮೇಳಕ್ಕೆ ತೊಗರಿಯ ಕಣಜ ಸಜ್ಜು

ವಿಶ್ವವಾಣಿ ಸುದ್ದಿಮನೆ ಕಲಬುರಗಿ

ಕಲ್ಯಾಣ ಕರ್ನಾಟಕದ ಯುವಕರಿಗೆ ಉದ್ಯೋಗ ಒದಗಿಸುವ ನಿಟ್ಟಿನಲ್ಲಿ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಹಾಗೂ ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮದ ವತಿಯಿಂದ ಕಲಬುರಗಿಯ ಕೆಸಿಟಿ ಕಾಲೇಜು ಆವರಣದಲ್ಲಿ ಬುಧವಾರ ಬೃಹತ್ ಉದ್ಯೋಗ ಮೇಳ ಆಯೋಜನೆ ಮಾಡಲಾಗಿದೆ. ಬೆಳಗ್ಗೆ 9 ರಿಂದ ಸಾಯಂಕಾಲ 5ಗಂಟೆವರೆಗೂ ಉದ್ಯೋಗ ಮೇಳ ನಡೆಯಲಿದೆ.

ಸಚಿವ ಪ್ರಿಯಾಂಕ್ ಖರ್ಗೆ ಮಾತನಾಡಿ, ಕಲಬುರಗಿ ಜಿಮ್ಸ್ ಆಸ್ಪತ್ರೆಯ 8 ರಿಂದ 10ನೇ ಮಹಡಿಯಲ್ಲಿ 116 ಕೋಟಿ ರು. ವೆಚ್ಚದಲ್ಲಿ ನಿರ್ಮಿಸಿರುವ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಉದ್ಘಾಟನೆ ಜತೆಗೆ 492 ಕೋಟಿ ರು. ಮೊತ್ತದ ವಿವಿಧ 9 ಕಾಮಗಾರಿಗಳಿಗೆ ಸಿಎಂ ಸಿದ್ದರಾಮಯ್ಯ ಉದ್ಘಾಟನೆ ಮಾಡಲಿದ್ದು, ಅವರೊಂದಿಗೆ ರಾಜ್ಯಸಭೆ ವಿಪಕ್ಷ ನಾಯಕ ಮಲ್ಲಿಕಾರ್ಜುನ ಖರ್ಗೆ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಸಾಥ್ ನೀಡಲಿದ್ದಾರೆ. ಕಿದ್ವಾಯಿ ಆಸ್ಪತ್ರೆಯಲ್ಲಿನ ಅತ್ಯಾಧುನಿಕ ಬ್ರಾಕಿಥೆರಪಿ ಸೇವೆಗೆ ಸಹ ಇದೇ ಸಂದರ್ಭದಲ್ಲಿ ಸಿಎಂ ಅವರು ಚಾಲನೆ ನೀಡಲಿದ್ದಾರೆ ಎಂದು ಮಾಹಿತಿ ನೀಡಿದರು.

ಸಚಿವ ಡಾ.ಶರಣಪ್ರಕಾಶ್ ಪಾಟೀಲ್ ಮಾತನಾಡಿ, ಕಲಬುರಗಿಯಲ್ಲಿ ನಡೆಯಲಿರುವ ಉದ್ಯೋಗ ಮೇಳದಲ್ಲಿ ಸುಮಾರು 1 ಲಕ್ಷ ಉದ್ಯೋಗ ಒದಗಿಸುವ ಗುರಿ ಹೊಂದಲಾಗಿದ್ದು, ಈಗಾಗಲೇ 22,000 ಕ್ಕೂ ಅಧಿಕ ಅಭ್ಯರ್ಥಿಗಳು ಹೆಸರು ನೋಂದಾಯಿಸಿದ್ದಾರೆ. ಒಟ್ಟು 280ಕ್ಕೂ ಅಧಿಕ ಕಂಪನಿಗಳು ಭಾಗವಹಿಸಲಿದ್ದು, ಅಭ್ಯರ್ಥಿಗಳ ವಿದ್ಯಾಭ್ಯಾಸಕ್ಕೆ ಅನುಗುಣವಾಗಿ ಅಯ್ಕೆ ಮಾಡಿ ಅಂತವರಿಗೆ ನೇಮಕಾತಿ ಆದೇಶ ನೀಡಲಾಗುವುದು ಎಂದು ಹೇಳಿದರು.

ಈ ವೇಳೆ ಶಾಸಕರಾದ ಕನೀಜ್ ಫಾತಿಮಾ, ಅಲ್ಲಮಪ್ರಭು ಪಾಟೀಲ, ವಿಧಾನ ಪರಿಷತ್ ಸದಸ್ಯರಾದ ತಿಪ್ಪಣ್ಣಪ್ಪ ಕಮಕನೂರು, ಜಗದೇವ ಗುತ್ತೇದಾರ, ಜಿಲ್ಲಾಧಿಕಾರಿ ಫೌಜಿಯಾ ತರನ್ನುಮ್, ಕಮೀಷನರ್ ಡಾ.ಶರಣಪ್ಪಎಸ್.ಡಿ, ಜಿಲ್ಲಾ ಪಂಚಾಯತ್ ಸಿಇಒ ಭಂವರ್ ಸಿಂಗ್ ಮೀನಾ, ಎಸ್.ಪಿ ಅಡ್ಡೂರು ಶ್ರೀನಿವಾಸಲು ಸೇರಿ ಮತ್ತಿತರಿದ್ದರು.

ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ, ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ್ ಪಾಟೀಲ್, ಕೆಕೆಆರಡಿಬಿ ಅಧ್ಯಕ್ಷ ಡಾ.ಅಜಯ್ ಸಿಂಗ್ ಅವರು ಮಾತನಾಡಿದರು.

ಉದ್ಯೋಗ ಮೇಳದಲ್ಲಿ ಈಗಾಗಲೇ, ಯುವನಿಧಿ ಯೋಜನೆಯಡಿಯಲ್ಲಿ ಹೆಸರು ದಾಖಲಿಸಿಕೊಂಡ ಅಭ್ಯರ್ಥಿಗಳಿಗೆ ಸಹ ಭಾಗವಹಿಸಲು ಅವಕಾಶ ಕಲ್ಪಿಸಲಾಗಿದೆ. ಕಕ ಭಾಗದ ಸುಮಾರು 75,000 ಅಭ್ಯರ್ಥಿಗಳಿಗೆ ಈ ಉದ್ಯೋಗ ಮೇಳದಲ್ಲಿ ಭಾಗವಹಿಸಲು ಮೆಸೇಜ್ ಕಳಿಸಲಾಗಿದೆ. ಕಲಬುರಗಿ ನಂತರ, ಮೈಸೂರು ಹಾಗೂ ಬೆಳಗಾವಿ ವಿಭಾಗದಲ್ಲಿಯೂ ಉದ್ಯೋಗ ಮೇಳ ಆಯೋಜಿಸಲಾಗುವುದು.

ಡಾ.ಶರಣಪ್ರಕಾಶ್ ಪಾಟೀಲ್, ಸಚಿವ

ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ವತಿಯಿಂದ 2023-24,2024-26ನೇ ಸಾಲಿನಲ್ಲಿ ಶೇ.25% ಹಣ ಶಿಕ್ಷಣಕ್ಕಾಗಿ ಮೀಸಲಿಟ್ಟಿದೆ. ಶೈಕ್ಷಣಿಕ ವರ್ಷ ಎಂದು ಮುಂದುವರಿಸಲಾಗಿದೆ. ಕಲ್ಯಾಣ ಕರ್ನಾಟಕ ಭಾಗದ ಸಮಗ್ರ ಅಭಿವೃದ್ಧಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದ ಕಾಂಗ್ರೆಸ್ ಸರಕಾರ ಬದ್ಧವಾಗಿದ್ದು, ಕಲ್ಯಾಣ ಭಾಗದ ಯುವ ಜನತೆಗೆ ಅನುಕೂಲವಾಗುವ ನಿಟ್ಟಿನಲ್ಲಿ ಬೃಹತ್ ಉದ್ಯೋಗ ಮೇಳ ನಡೆಯುತ್ತಿದೆ.

-ಡಾ.ಅಜಯ್ ಧರ್ಮಸಿಂಗ್, ಅಧ್ಯಕ್ಷ, ಕೆಕೆಆರ್‌ಡಿಬಿ

ಉದ್ಯೋಗ ಮೇಳ ಸ್ಥಳಕ್ಕೆ ಭೇಟಿ, ಪರಿಶೀಲನೆ

ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ, ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ್ ಪಾಟೀಲ್, ಕೆಕೆಆರಡಿಬಿ ಅಧ್ಯಕ್ಷ ಡಾ.ಅಜಯ್ ಸಿಂಗ್ ಅವರು ಮಂಗಳವಾರ ಉದ್ಯೋಗ ಮೇಳ ನಡೆಯಲಿರುವ ಕೆಸಿಟಿ ಕಾಲೇಜಿನ ಆವರಣಕ್ಕೆ ಭೇಟಿ ನೀಡಿ ಸಿದ್ದತೆಗಳ ಪರಿಶೀಲಿಸಿದರು. ಉದ್ಯೋಗ ಅರಿಸಿ ಬರುವ ಅಭ್ಯರ್ಥಿಗಳಿಗಾಗಿ ಕೌಂಟರ್, ಊಟದ ವ್ಯವಸ್ಥೆಯನ್ನು ಪರಿಶೀಲಿಸಿದರು. ಬಳಿಕ ಸಿಎಂ ಸಿದ್ದರಾಮಯ್ಯ ಹಾಗೂ ರಾಜ್ಯಸಭಾ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರು ಆಸ್ಪತ್ರೆಯನ್ನು ಉದ್ಘಾಟಿಸಲಿರುವ ಕಲಬುರಗಿಯ ಜಿಮ್ಸ್ ಆಸ್ಪತ್ರೆಯಲ್ಲಿ ಸ್ಥಾಪಿಸಲಾಗಿರುವ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು ವೀಕ್ಷಿಸಿದರು.

ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮೀ ಭೇಟಿ
ಮೃತ ಬಾಲಕಿಯ ಪೋಷಕರಿಗೆ ಸಾಂತ್ವನ

ವರದಿ ನಂತರ ಮಗುವಿನ ಸಾವಿನ ನಿಖರತೆ ಸ್ಪಷ್ಟ

ಮೃತ ಬಾಲಕಿ ಮನೆಗೆ ರಾಜ್ಯ ಮತ್ತು ಮಕ್ಕಳ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮೀ ಚೌಧರಿ ಭೇಟಿ ನೀಡಿ ಪೋಷಕರಿಗೆ ಧೈರ್ಯ ತುಂಬಿದರು.

ಹುಬ್ಬಳ್ಳಿ: ನಗರದಲ್ಲಿ ಬಾಲಕಿಯ ಮೃತದೇಹದ ಮರಣೋತ್ತರ ಪರೀಕ್ಷೆಯ ಪ್ರಾಥಮಿಕ ವರದಿಯಲ್ಲಿ ಮಗುವಿನ ಗುಪ್ತಾಂಗ ಹಾಗೂ ದೇಹದ ಇತರೆಡೆ ಗಾಯವಾಗಿರುವ ಬಗ್ಗೆ ಮಾಹಿತಿ ಲಭ್ಯವಾಗಿವೆ. ಆದರೆ ಈ ಬಗ್ಗೆ ವರದಿ ನಂತರವೂ ವಿಧಿ ವಿಜ್ಞಾನ ಪ್ರಯೋಗಾಲಯ ಇದನ್ನು ಪರೀಕ್ಷಿಸಿ ನೀಡಿದ ವರದಿಯಲ್ಲಿ ಎಲ್ಲವೂ ಬಹಿರಂಗಗೊಳ್ಳಲಿದೆ ಎಂದು ರಾಜ್ಯ ಮತ್ತು ಮಕ್ಕಳ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮೀ ಚೌಧರಿ ಹೇಳಿದರು.

ಹುಬ್ಬಳ್ಳಿಯಲ್ಲಿರುವ ಮೃತ ಬಾಲಕಿ ಮನೆಗೆ ಭೇಟಿ ನೀಡಿ ಮೃತ ಬಾಲಕಿ ಪೋಷಕರಿಗೆ ಧೈರ್ಯ ಹೇಳಿದ ನಂತರ ಸುದ್ದಿಗಾರರೊಂದಿಗೆ ಅವರು ಮಾತನಾಡಿ, ವರದಿ ನಂತರ ಮಗುವಿನ ಸಾವಿನ ನಿಖರತೆ ಸ್ಪಷ್ಟಗೊಳ್ಳಲಿದೆ. ಮಗು ಯಾವುದೋ ಕಾಯಿಲೆಯಿಂದ ಸತ್ತಿಲ್ಲ. ಅವಳ ಮೇಲೆ ದೌರ್ಜನ್ಯ ಎಸಗುವಾಗ ನೋವಿನಿಂದ ಕೂಗಿ ಒದ್ದಾಡಿದ್ದಾಳೆ. ಆಗ ಹಂತಕ ಅವಳ ಕತ್ತು ಹಿಸುಕಿ ಸಾಯಿಸಿರುವ ಶಂಕೆ ಇದೆ ಎಂದರು.

ಬಾಲಕಿ ಮೇಲೆ ಬರ್ಬರವಾಗಿ ಹತ್ಯೆ ಮಾಡಿರುವ ಪ್ರಕರಣ ಜನರ ಮನಸ್ಸಿಗೆ ತುಂಬಾ ಘಾಸಿಗೊಳಿಸಿದೆ. ಈ ರೀತಿ ಪ್ರಕರಣ ನಡೆಯಬಾರದಿತ್ತು, ಮೃತ ಬಾಲಕಿ ಕುಟುಂಬಕ್ಕೆ 25 ಲಕ್ಷ ಪರಿಹಾರ ನೀಡಬೇಕು. ಈ ರೀತಿ ಪ್ರಕರಣದಲ್ಲಿ ಪೊಲೀಸ್ ಇಲಾಖೆ ನ್ಯಾಯ ಕೊಡಿಸಿರುವುದು ಅತ್ಯಂತ ಶ್ಲಾಘನೀಯ.

ಜಗದೀಶ್ ಶೆಟ್ಟರ್, ಸಂಸದ

ಹುಬ್ಬಳ್ಳಿ ಘಟನೆ ಬಗ್ಗೆ ಬಹಳಷ್ಟು ನೋವಿದೆ.ನೊಂದ ಕುಟುಂಬಕ್ಕೆ ನ್ಯಾಯ ಕೊಡಿಸುವ ಕೆಲಸವಾಗಬೇಕಿದೆ. ಈ ನಿಟ್ಟಿನಲ್ಲಿ ರಾಜ್ಯ ಮತ್ತು ಕೇಂದ್ರ ಸರಕಾರ ಹಾಗೂ ರಾಷ್ಟ್ರೀಯ ಮಹಿಳಾ ಆಯೋಗಕ್ಕೂ ಈ ಕುರಿತು ಪತ್ರ ಬರೆಯುತ್ತೇನೆ.

-ನಾಗಲಕ್ಷ್ಮೀ ಚೌಧರಿ, ರಾಜ್ಯ ಮತ್ತು ಮಕ್ಕಳ ಆಯೋಗದ ಅಧ್ಯಕ್ಷೆ

ಹುಬ್ಬಳ್ಳಿಗೆ ಸಿಐಡಿ ಅಧಿಕಾರಿಗಳ ತಂಡ ಆಗಮನ

ಬಾಲಕಿ ಕೊಲೆ ಮಾಡಿದ ಅತ್ಯಾಚಾರಿಯ ಎನ್‌ಕೌಂಟರ್ ಪ್ರಕರಣದಲ್ಲಿ ಸಿಐಡಿ ಅಧಿಕಾರಿಗಳ ತಂಡದಿಂದ ತನಿಖೆ ಶುರುವಾಗಿದೆ. ಐದು ವರ್ಷದ ಬಾಲಕಿ ಮರ್ಡರ್ ಪ್ರಕರಣದ ತನಿಖೆ ಸಿಐಡಿಗೆ ವರ್ಗಾವಣೆ ಗೊಂಡಿದ್ದು, ವಾಣಿಜ್ಯನಗರಿ ಹುಬ್ಬಳ್ಳಿಗೆ ಸಿಐಡಿ ಅಧಿಕಾರಿಗಳು ಮಂಗಳವಾರ ಆಗಮಿಸಿದರು. ಆರೋಪಿ ಫೈರಿಂಗ್ ನಲ್ಲಿ ಸಾವು ಹಿನ್ನೆಲೆಯಲ್ಲಿ ಪ್ರಕರಣ ಸಿಐಡಿಗೆ ವರ್ಗಾವಣೆಯಾಗಿದ್ದು, ಆರೋಪಿ ಸಾವು ಪ್ರಕರಣದಲ್ಲಿ ಸಿಐಡಿ ತನಿಖೆ ನಡೆಯಲಿದೆ. ಸಿಐಡಿ ಎಸ್.ಪಿ ವೆಂಕಟೇಶ್, ಡಿವೈಎಸ್‌ಪಿ ಪುನೀತ್‌ಕುಮಾರ, ಇನ್ಸ್‌ಪೆಕ್ಟರ್ ಮಂಜುನಾಥ ಅಧಿಕಾರಿಗಳನ್ನ ಒಳಗೊಂಡ ಸಿಐಡಿ ತಂಡ ಹುಬ್ಬಳ್ಳಿಗೆ ಆಗಮಿಸಿ, ಪ್ರಕರಣದ ಸಂಪೂರ್ಣತೆ ಬಗ್ಗೆ ಸ್ಥಳೀಯ ಪೊಲೀಸ್ ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡಿದ್ದಾರೆ.

ಕಿಮ್ಸ್‌ನಲ್ಲಿ ಔಷಧ ಕೊರತೆಯಿಂದ ಮಗು ಸಾವು

ಹುಬ್ಬಳ್ಳಿ: ಕಿಮ್ಸ್ ಆಸ್ಪತ್ರೆಯನ್ನು ಉತ್ತರ ಕರ್ನಾಟಕದ ಸಂಜೀವಿನಿ ಎಂದು ಕರೆಯುತ್ತಾರೆ. ಆದರೆ ಇಂತಹ ಆಸ್ಪತ್ರೆಯಲ್ಲಿ ಔಷಧ ಕೊರತೆಯಿಂದ ಪುಟ್ಟ ಮಗುವೊಂದು ಸಾವನ್ನಪ್ಪಿದ ದುರಂತ ಘಟನೆಯೊಂದು ನಡೆದಿದೆ.

ಹಳೇ ಹುಬ್ಬಳ್ಳಿಯ ಆನಂದ ನಗರದ ನಿವಾಸಿ ಬಶೀರ್ ಅಹ್ಮದ್ ಬಳ್ಳಾರಿ ಹಾಗೂ ನಿಕ್ಕತ್ ಬಳ್ಳಾರಿ ದಂಪತಿ ಮಗು ಸಾವನ್ನಪ್ಪಿದೆ. ಮಗು ಸಾವಿಗೆ ಕಿಮ್ಸ್ ಆಸ್ಪತ್ರೆಯ ವೈದ್ಯಾಧಿಕಾರಿಗಳು ಹಾಗೂ ಆಡಳಿತ ಮಂಡಳಿ ಕಾರಣ ಎಂದು ಕುಟುಂಬಸ್ಥರು ಗಂಭೀರ ಆರೋಪ ಮಾಡಿದ್ದಾರೆ.

ಮಗು ಪಿಟ್ಸ್ ಬಂದು ಕಳೆದ 16 ದಿನಗಳಿಂದ ಕಿಮ್ಸ್‌ನಲ್ಲಿ ಚಿಕಿತ್ಸೆ ಪಡೆಯುತ್ತಿತ್ತು, ಸೋಮವಾರ ಬೆಳಗ್ಗೆ ಮಗುವಿನ ಆರೋಗ್ಯದಲ್ಲಿ ಚೇತರಿಕೆಯಾಗಿದೆ ಎಂದು ವೈದ್ಯರು ತಿಳಿಸಿದ್ದರಂತೆ. ಆದರೆ ರಾತ್ರಿ 9 ಗಂಟೆಗೆ ಮಗು ಮೃತಪಟ್ಟಿದೆ ಎಂದು ಕುಟುಂಬಸ್ಥರಿಗೆ ಮಾಹಿತಿ ತಿಳಿದಿದೆ. ಇದಕ್ಕೆ ಮುಖ್ಯ ಕಾರಣವೇ ಕಳೆದ ನಾಲ್ಕು ದಿನಗಳಿಂದ ಔಷಧಕ್ಕೆ ಆ ಮಗುವಿನ ಕುಟುಂಬಸ್ಥರು ಪರದಾಟ ನಡೆಸಿದ್ದರು. ಬೇಕಾದ ಔಷಧ ಕೇಳಲು ಹೋದಾಗ ನೋ ಸ್ಟಾಕ್ ಅಂತ ಔಷಧ ವಿಭಾಗದ ಸಿಬ್ಬಂದಿ ಬರೆದು ಕೊಡುತ್ತಿದ್ದರಂತೆ. ಐಸಿಯುನ ವೆಂಟಿಲೇಟರ್ ಮೇಲೆ ಇಟ್ಟು ಮಗುವಿಗೆ ಚಿಕಿತ್ಸೆ ನೀಡಲಾಗುತ್ತಿತ್ತು. ಹೈ ಡೋಸ್ ನಿಂದ ಮಗು ಕೋಮಾಗೆ ಹೋಗಿತ್ತು ಎಂದು ಕುಟುಂಬಸ್ಥರ ಗಂಭೀರ ಆರೋಪ ಮಾಡಿದ್ದಾರೆ.

ಆರೋಪಿ ಕಾಲಿಗೆ ಗುಂಡೇಟು

ಶಿವಮೊಗ್ಗ: ಬಂಧಿಸಲು ತೆರಳಿದ್ದ ಪೊಲೀಸರ ಮೇಲೆ ಹಲ್ಲೆ ನಡೆಸಿ ಪರಾರಿಯಾಗಲು ಯತ್ನಿಸಿದ ಆರೋಪಿಯೊಬ್ಬನ ಕಾಲಿಗೆ ಪೊಲೀಸರು ಗುಂಡು ಹಾರಿಸಿರುವ ಘಟನೆ ಭದ್ರಾವತಿಯಲ್ಲಿ ನಡೆದಿದೆ.

ಆರೋಪಿ ನಝುರುಲ್ಲಾ ಕಾಲಿಗೆ ಪೊಲೀಸರ ಗುಂಡು ಹಾರಿಸಿದ್ದಾರೆ. ಗಾಂಜಾ ಮಾರಾಟ ಪ್ರಕರಣದಲ್ಲಿ ಆರೋಪಿ ಆಗಿರುವ ನಝುರುಲ್ಲಾ ನನ್ನು ಪೊಲೀಸರು ಬಂಧಿಸಲು ತೆರಳಿದ್ದರು. ಈ ವೇಳೆ ಆರೋಪಿ ಪೊಲೀಸ್ ಸಿಬ್ಬಂದಿ ಮೇಲೆ ಹಲ್ಲೆಗೆ ಮುಂದಾಗಿದ್ದಾನೆ ಎನ್ನಲಾಗಿದ್ದು, ಆತ್ಮರಕ್ಷಣೆಗಾಗಿ ಪೊಲೀಸರು ಆರೋಪಿ ಕಾಲಿಗೆ ಗುಂಡು ಹೊಡೆದಿದ್ದಾರೆ ಎಂದು ತಿಳಿದು ಬಂದಿದೆ. ಭದ್ರಾವತಿ ಹಳೆ ನಗರ ಪೊಲೀಸ್ ಠಾಣೆಯಲ್ಲಿ ಆರೋಪಿ ಮೇಲೆ ಗಾಂಜಾ ಪ್ರಕರಣ ದಾಖಲಾಗಿತ್ತು.

ಇಬ್ಬರು ಬಾಲಕರು ನೀರುಪಾಲು

ಮಂಗಳೂರು: ಸಮುದ್ರದಲ್ಲಿ ಈಜಲು ತೆರಳಿದ್ದ ಇಬ್ಬರು ಬಾಲಕರು ನೀರುಪಾಲಾಗಿರುವ ಘಟನೆ ಮಂಗಳೂರು ಹೊರವಲಯದ ಸುರತ್ಕಲ್‌ನ ಎನ್‌ಐಟಿಕೆ ಬೀಚ್‌ನಲ್ಲಿ ನಡೆದಿದೆ.

ಧ್ಯಾನ್ ಬಂಜನ್(18), ಹನೀಶ್ ಕುಲಾಲ್(15) ಸಮುದ್ರಪಾಲಾದ ಬಾಲಕರು. ಬುಧವಾರ ಸೂರಿಂಜೆಯ ಕುಟುಂಬವೊಂದರ ಮನೆಯಲ್ಲಿ ವಿವಾಹ ಕಾರ್ಯಕ್ರಮವಿದ್ದುದರಿಂದ ಕುಟುಂಬದ ಸದಸ್ಯರು ಮುಂಬೈನಿಂದ ಬಂದಿದ್ದರು. ಮದುಮಗಳ ಸಹೋದರನ ಜತೆಗೆ ಹತ್ತು ಮಂದಿ ಸಂಜೆ ಬೀಚ್‌ಗೆ ತೆರಳಿದ್ದರು. ಈ ವೇಳೆ ಬಾಲಕರಿಬ್ಬರು ಸಮುದ್ರ ಪಾಲಾಗಿದ್ದಾರೆ. ತಕ್ಷಣ ಲೈಫ್ ಗಾರ್ಡ್‌ಗಳು ಧ್ಯಾನ್‌ನ್ನ ರಕ್ಷಿಸಿದರೂ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾನೆ. ಸದ್ಯ ಹನೀಶ್ ಸಮುದ್ರ ಪಾಲಾಗಿದ್ದು, ಈಜುಗಾರರ ತಂಡದಿಂದ ಹುಡುಕಾಟ ನಡೆಯುತ್ತಿದೆ. ಸುರತ್ಕಲ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ,
ಲೋಕೋಪಯೋಗಿ ಇಲಾಖೆ, ತುಮಕೂರು.
ಕ್ರ.ಸಂ:ಕಾಇಂ:ಲೋಇವಿ:ತುವು:ಕಿಇಂ-3:ಟೆಂಡರ್01/2025-26
ದಿನಾಂಕ : 11.04.2025

ಟೆಂಡರ್ ಪ್ರಕಟಣೆ ಸಂ.01/2025-26
ದಿನಾಂಕ: 11.04.2025

ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ: 01/2025-26:ದಿನಾಂಕ 05-04-2025 ರಂದು ತುಮಕೂರು ವಿಭಾಗದ ವ್ಯಾಪ್ತಿಯಲ್ಲಿ ಲೆಕ್ಕ ಶೀರ್ಷಿಕೆ: 5054-04-337-0-01-154 ಜಿಲ್ಲಾ ಮುಖ್ಯ ರಸ್ತೆಗಳ ಸುಧಾರಣೆ ಮತ್ತು 3054-04-337-1-10-200 ಜಿಲ್ಲಾ ಮುಖ್ಯ ರಸ್ತೆ ನಿರ್ವಹಣೆ ಅಡಿಯಲ್ಲಿ 3 ಕಾಮಗಾರಿಗಳಿಗೆ KPPP-Portal ಮೂಲಕ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಗರಿಷ್ಟ ಟೆಂಡರಿಗಿಟ್ಟ ಮೊತ್ತ ರೂ.140.78ಲಕ್ಷಗಳು, ಮತ್ತು ಕನಿಷ್ಟ ಟೆಂಡರಿಗಿಟ್ಟ ರೂ.81.17ಲಕ್ಷಗಳು, ಗರಿಷ್ಟ ಇ.ಎಂ.ಡಿ ಮೊತ್ತ ರೂ.2,11,184/- ಮತ್ತು ಕನಿಷ್ಟ ಇ.ಎಂ.ಡಿ ಮೊತ್ತ ರೂ.81,870/- ಅರ್ಹ ಗುತ್ತಿಗೆದಾರರು 3ನೇ ದರ್ಜೆ ಮೇಲ್ಪಟ್ಟು, ಕಾಲಾವಧಿ: 6 ತಿಂಗಳುಗಳು ಸಂಬಂಧಿಸಿದ ವಿಚಾರಣೆ ಮತ್ತು ಸ್ಪಷ್ಟೀಕರಣಗಳಿಗೆ ಕೊನೆ ದಿನಾಂಕ ಮತ್ತು ವೇಳೆ: 25-04-2025 ರ 17-00 ಗಂಟೆಗೆ, KPPP-Portal ಮೂಲಕ ಟೆಂಡರ್‌ಅನ್ನು ದಿನಾಂಕ 11-04-2025 ರಿಂದ 28-04-2025ರ 16.00 ಗಂಟೆವರೆಗೆ ಪಡೆಯಬಹುದಾಗಿದೆ. ಟೆಂಡರ್‌ಅನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ವೇಳೆ: 28-04-2025 ರ 16-00 ಗಂಟೆವರೆಗೆ, ತಾಂತ್ರಿಕ ಬಿಡ್‌ಅನ್ನು ತೆರೆಯುವ ದಿನಾಂಕ ಮತ್ತು ವೇಳೆ: 29-04-2025 ರ 16-30 ಗಂಟೆಗೆ, ಆರ್ಥಿಕ ಬಿಡ್‌ಅನ್ನು ತೆರೆಯುವ ದಿನಾಂಕ ಮತ್ತು ವೇಳೆ: 02-05-2025 ರ 11-00 ಗಂಟೆಗೆ, ಹೆಚ್ಚಿನ ವಿವರಗಳನ್ನು ಸದರಿ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿದೆ ಹಾಗೂ ವೆಬ್‌ಸೈಟ್ ಸಂ:https://kppp.karnataka.gov.in ರಲ್ಲಿ ಪಡೆಯಬಹುದಾಗಿದೆ.
ಸೂಚನೆ: ಆರ್ಥಿಕ ವಹಿವಾಟಿನ ಪತ್ರದಲ್ಲಿ ಯು.ಡಿ.ಐ.ಎನ್ ಸಂಖ್ಯೆಯನ್ನು ನಮೂದಿಸಿಲ್ಲದಿರುವ ಆರ್ಥಿಕ ವಹಿವಾಟನ್ನು ಪರಿಗಣಿಸುವುದಿಲ್ಲ. ಸದರಿ ಟೆಂಡರ್ ಪ್ರಕಟಣೆಯಲ್ಲಿ ಆಗುವಂತಹ ಮುಂದಿನ ಬದಲಾವಣೆಗಳನ್ನು ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ ನೋಡಿಕೊಳ್ಳುವುದು
ಸಹಿ/-ಕಾರ್ಯಪಾಲಕ ಇಂಜಿನಿಯರ್,
ಲೋಕೋಪಯೋಗಿ ಇಲಾಖೆ ವಿಭಾಗ, ತುಮಕೂರು.
DIPR/TUM/18/KSMCA/2025-26

ವಿರಾಮ ಪ್ರತಿ ಭಾನುವಾರ

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರು,
ಪಂಚಾಯತ್ ರಾಜ್ ಇಂಜಿನೀರಿಂಗ್ ವಿಭಾಗ, ಬೆಳಗಾವಿ
ಕ್ರ.ಸಂ.:ಪಂರಾಇಂ/ವಿಬೆ/ಪಿಬಿ-3/ಟೆಂಡರ-03/2025-26/145
ದಿನಾಂಕ: 15-04-2025

ಗುತ್ತಿಗೆ ಆಹ್ವಾನ ಪ್ರಕಟಣೆ (ಇ-ಪ್ರೊಕ್ಯೂರ್ಮೆಂಟ್)

ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಬೆಳಗಾವಿ ಅಡಿಯಲ್ಲಿ ಐಟಂವಾರು ಗುತ್ತಿಗೆಗಳನ್ನು ಇ-ಪ್ರೊಕ್ಯೂರ್ಮೆಂಟ್ ವೇದಿಕೆ ಮೂಲಕ ಪಂಚಾಯತ್ ರಾಜ್ ಇಂಜಿನೀಯರಿಂಗ್ ಇಲಾಖೆಯ ಚಾಲ್ತಿ ನೋಂದಾಯಿತ ಗುತ್ತಿಗೆದಾರರಿಗಾಗಿ ಸ್ಟ್ಯಾಂಡರ್ಡ ಟೆಂಡರ ಡಾಕ್ಯೂಮೆಂಟ್ ಕೆ. ಡಬ್ಲ್ಯೂ-3 ರಲ್ಲಿ ಒಟ್ಟು 01 ಕಾಮಗಾರಿಯ ಟೆಂಡರ ಗುತ್ತಿಗೆಯನ್ನು ಕರೆಯಲಾಗಿದ್ದು ಗರಿಷ್ಠ ಅಂದಾಜು ಮೊತ್ತ ಅನುಕ್ರಮವಾಗಿ ರೂ. 100.00 ಹಾಗೂ ಮುಂಗಡ ಠೇವಣಿ ಮೊತ್ತ ಅನುಕ್ರಮವಾಗಿ ರೂ. 1,00,000 ಇರುತ್ತದೆ. ಆಕ್ಷೇಪಣೆಗಳಿದ್ದಲ್ಲಿ ಖುದ್ದಾಗಿ ಕಚೇರಿಗೆ ಹಾಜರಾಗಿ ಸಲ್ಲಿಸುವ ಕೊನೆಯ ದಿನಾಂಕ: 22-04-2025 ಸಂಜೆ 17:00 ರೊಳಗಾಗಿ. ಗುತ್ತಿಗೆದಾರರಿಂದ ಅರ್ಜಿಗಳನ್ನು ಆನ್ ಲೈನ್ ಮೂಲಕ ಮನವಿ ಮಾಡಿಕೊಳ್ಳುವ ಕೊನೆಯ ದಿನಾಂಕ: 22-04-2025 ಸಂಜೆ 17.30 ಗಂಟೆಯವರೆಗೆ, ತಾಂತ್ರಿಕ ಆರ್ಥಿಕ ಬಿಡ್ ತೆರೆಯುವ ದಿನಾಂಕ: 24-04-2025. ಸಂಜೆ 11:00 ಗಂಟೆಯ ನಂತರ ಹಾಗೂ ಆರ್ಥಿಕ ಬಿಡ್ ತೆರೆಯುವ ದಿನಾಂಕ: 24-04-2025 ರಂದು 11.30 ಗಂಟೆಗೆ ಇರುತ್ತದೆ. ಪರಿಷ್ಕೃತ ವೇಳಾ ಪಟ್ಟಿ/ತಿದ್ದುಪಡಿಗಳು/ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದವರ ಕಚೇರಿಯಲ್ಲಿ ಹಾಗೂ ಅಂತರ್ಜಾಲದ ಮೂಲಕ ಪಡೆಯಬಹುದು. ವೆಬ್‌ಸೈಟ್ ವಿಳಾಸ : www.kppp.karnataka.gov.in
ಸಹಿ/-
ಕಾರ್ಯನಿರ್ವಾಹಕ ಅಭಿಯಂತರು,
ಪಂ. ರಾ. ಇಂ. ವಿಭಾಗ, ಬೆಳಗಾವಿ.
DIPR/BGM/ RO No.89/2024-25

ಮಂಗಳೂರು ಮಹಾನಗರಪಾಲಿಕೆ
DMA/2025-26/WORK INDENT NO.38718, 38719, 38720, 38721, 38722, 38723, 38724, 38725, 38726, 38727, 38728, 38729, 38730, 38731, 38732, 38789, 38790, 38791, 38792, 38793, 37741 ದಿನಾಂಕ: 09-04-2025
ಅಲ್ಪಾವಧಿ ಟೆಂಡರ್ ಪ್ರಕಟಣೆ
E-PROCUREMENT OF KARNATAKA
ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯ ಸಾಮಾನ್ಯ ನಿಧಿಯಲ್ಲಿ ಈ ಕಛೇರಿ ಟೆಂಡರ್ ಸಂಖ್ಯೆ: DMA/2025-26/WORK INDENT NO.38718, 38719, 38720, 38721, 38722, 38723, 38724, 38725, 38726, 38727, 38728, 38729, 38730, 38731, 38732, 38789, 38790, 38791, 38792, 38793, 37741 ಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ. 21 ಕಾಮಗಾರಿಗಳ ಒಟ್ಟು ಮೊತ್ತ ರೂಪಾಯಿ 160.58 ಲಕ್ಷಗಳಾಗಿರುತ್ತದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 22-04-2025 ಅಪರಾಹ್ನ 4.00 ಗಂಟೆ. ಹೆಚ್ಚಿನ ವಿವರವನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ kppp.karnataka.gov.in ಮುಖಾಂತರ ಪಡೆಯಬಹುದು.
ಸಹಿ/- ಕಾರ್ಯಪಾಲಕ ಅಭಿಯಂತರರು,
ಮಹಾನಗರಪಾಲಿಕೆ, ಮಂಗಳೂರು
DIPR/MNG/KSMCA/65/25-26 dt: 15.04.2025

ದಾವಣಗೆರೆ ಸ್ಮಾರ್ಟ್ ಸಿಟಿ ಲಿಮಿಟೆಡ್, ದಾವಣಗೆರೆ -577006
No: DSCL/EE-1/CR-125& 13/2024-25/ Date: 11-04-2025
ಅಲ್ಪಾವಧಿ ಟೆಂಡರ್ ಪ್ರಕಟಣೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ)
ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 1999-2000 ರ (ತಿದ್ದುಪಡಿ) ಪ್ರಕಾರ ಆಕ್ಟ್ 2000 ರ ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್‌ಗಳ ಅನ್ವಯ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಟೆಂಡರ್‌ನ್ನು ಎರಡು ಕವರ್ ಪದ್ಧತಿಯಲ್ಲಿ ಈ ಕೆಳಗೆ ಸಹಿ ಮಾಡಿರುವವರು ಆಹ್ವಾನಿಸಿರುತ್ತಾರೆ. ಅರ್ಹ ಗುತ್ತಿಗೆದಾರರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ವೆಬ್ ಸೈಟ್ www.kppp.karnataka.gov.in ನಲ್ಲಿ ಟೆಂಡರ್‌ಗಾಗಿ ಭಾಗವಹಿಸಬಹುದು ಹಾಗೂ ವಿವರಗಳನ್ನು ಪಡೆಯಬಹುದಾಗಿದೆ. ಹೆಚ್ಚಿನ ವಿವರಗಳಿಗೆ ಕಛೇರಿ ದೂರವಾಣಿ ಸಂಖ್ಯೆ: 08192-222383 ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಸಹಾಯಕ ದೂರವಾಣಿ ಸಂಖ್ಯೆ: +91 8046010000,+91 8068948777 ರಿಂದ ಮಾಹಿತಿ ಪಡೆಯಬಹುದು.

ಕ್ರ ಸ	ಇಂಡೆಟ್ ನಂಬರ್	ಕಾಮಗಾರಿಯ ವಿವರ	ಟೆಂಡರ್‌ಗಿಟ್ಟ ಮೊತ್ತ (ಲಕ್ಷಗಳಲ್ಲಿ)	ಮುಂಗಡ ಠೇವಣಿ (ರೂ. ಲಕ್ಷಗಳಲ್ಲಿ)	ಟೆಂಡರ್ ನಮೂನೆ
1	DSCL/2024-25/ RD/WORK_ INDENT9/ CALL-2	Construction of CC road works in Vinayak nagara, Shanti nagara, Budihal main road to Gowdru yard, Vijayanagar badavane 1st main 1st cross and back side of Shibara Mailara Lingeswara temple road in Davanagere city.	137.16	2.06	KW-4
2	DSCL/2024-25/ IND0005/ CALL-2	Construction of CC road works in H.K.G.N. Masjid road, B.N. layout and SPS nagara 2nd Phase (Door No.606 opposite to Budihal road) in Davanagere city.	121.00	2.00	
3	DSCL/2024-25/ IND0005/ CALL-2	Procurement of additional Servers & Storage for the Existing ICCC Setup at Davanagere Smart City Limited.	586.24	8.80	KG-3

ಸೂಚನೆ : ಈ ಪ್ರಕಟಣೆಯಲ್ಲಿ ಯಾವುದಾದರೂ ಬದಲಾವಣೆ ಇದ್ದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ಪ್ರಕಟಿಸಲಾಗುವುದು ಮತ್ತು ಯಾವುದೇ ಪತ್ರಿಕಾ ಪ್ರಕಟಣೆಗಳನ್ನು ಹೊರಡಿಸಲಾಗುವುದಿಲ್ಲ ಹಾಗು ಟೆಂಡರ್ ದಾಖಲೆಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ದಿನಾಂಕ: 11-04-2025 ರಂದು ಡೌನ್ ಲೋಡ್ ಮಾಡಿಕೊಳ್ಳಬಹುದು.
ಪ್ರಿ ಬಿಡ್ ಮೀಟಿಂಗ್ ದಿನಾಂಕ & ವೇಳೆ : 16-04-2025 ಸಮಯ : 11.30
ಟೆಂಡರ್ ಬಗ್ಗೆ ಮಾಹಿತಿ ಪಡೆಯಲು ಕೊನೆಯ ದಿನಾಂಕ & ವೇಳೆ : 16-04-2025 ಸಮಯ : 17.30
ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ : 19-04-2025 ಸಮಯ : 16.00
ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ವೇಳೆ : 21-04-2025 ಸಮಯ : 11:00
ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ವೇಳೆ : 23-04-2025 ಸಮಯ : 11.30
ಸಹಿ/- ಕಾರ್ಯಪಾಲಕ ಅಭಿಯಂತರರು,
ದಾವಣಗೆರೆ ಸ್ಮಾರ್ಟ್ ಸಿಟಿ ಲಿಮಿಟೆಡ್. ದಾವಣಗೆರೆ
ಸಹಿ/- ವ್ಯವಸ್ಥಾಪಕ ನಿರ್ದೇಶಕರು ಹಾಗೂ ಕಾರ್ಯನಿರ್ವಹಣಾಧಿಕಾರಿಗಳು, ದಾವಣಗೆರೆ ಸ್ಮಾರ್ಟ್ ಸಿಟಿ ಲಿಮಿಟೆಡ್,
ವಾಸಾಇ/ದಾವಣಗೆರೆ/20/ಕೆಎಸ್‌ಎಂಸಿಎ/2025-26

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ,
ಸಾಮಾಜಿಕ ಅರಣ್ಯ ಉಪ ವಿಭಾಗ, ತಿಪಟೂರು
ಸಂ:ಸ.ಅ.ಸಂ/ಸಾಅಉವಿ/ತಿಪ/ಕಾಮಗಾರಿಟೆಂಡರ್25-26/ವಿವ-48/2025-26
ದಿನಾಂಕ: 29.03.2025
ಹೊರಗುತ್ತಿಗೆ ನೌಕರರನ್ನು ಒದಗಿಸಲು ಇ-ಟೆಂಡರ್ ಪ್ರಕಟಣೆ
ಈ ಮೂಲಕ ಸಾರ್ವಜನಿಕರ ಗಮನಕ್ಕೆ ತರಬಯಸುವುದೇನೆಂದರೆ, 2025-26ನೇ ಸಾಲಿಗೆ ತಿಪಟೂರು ಸಾಮಾಜಿಕ ಅರಣ್ಯ ಉಪ ವಿಭಾಗದ ಚಿಕ್ಕನಾಯಕನಹಳ್ಳಿ, ಗುಬ್ಬಿ, ತುರುವೇಕೆರೆ ವಲಯ ಕಛೇರಿ ಮತ್ತು ತಿಪಟೂರು ಉಪ ವಿಭಾಗ ಕಛೇರಿಗಳಿಗೆ ಬೇಕಾದ ಡಾಟಾ ಎಂಟ್ರಿ ಆಪರೇಟರ್ ಮತ್ತು ವಾಹನ ಚಾಲಕರ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಪೂರೈಸಲು ಮಾನವ ಸಂಪನ್ಮೂಲ ಸೇವೆಗಳನ್ನು ಒದಗಿಸುವ ಸಂಸ್ಥೆಗಳಿಂದ KPPP ಪೋರ್ಟಲ್ ಮುಖಾಂತರ ಇ-ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಸೇವೆಗಳನ್ನು ಒದಗಿಸುವ ಒಟ್ಟು ಅಂದಾಜು ಮೊತ್ತ ರೂ.15,15,000/-ಗಳಿಗೆ ಇ.ಎಂ.ಡಿ ಮೊತ್ತ ರೂ.30,300/-ಗಳನ್ನು ಪಾವತಿಸಿ ಟೆಂಡರ್‌ನಲ್ಲಿ ಭಾಗವಹಿಸಬೇಕು. ಟೆಂಡರ್ ಸ್ವೀಕರಿಸುವ ಮೊದಲ ದಿನಾಂಕ: 19/04/2025 ರಂದು ಮಧ್ಯಾಹ್ನ 3.00 ಗಂಟೆಯವರೆಗೆ, ತಾಂತ್ರಿಕ ಬಿಡ್ಡು ದಿನಾಂಕ: 21/04/2025ರಂದು ಮಧ್ಯಾಹ್ನ 3.00 ಗಂಟೆಗೆ ಹಾಗೂ ಆರ್ಥಿಕ ಬಿಡ್ಡು ದಿನಾಂಕ: 22/04/2025 ರಂದು ಮಧ್ಯಾಹ್ನ 4.00 ಗಂಟೆಗೆ, ಆ ಸಮಯದಲ್ಲಿ ಹಾಜರಿರುವ ಟೆಂಡರ್‌ದಾರರ ಸಮಕ್ಷಮ ತೆರೆಯಲಾಗುವುದು. ಸದರಿ ದಿನದಂದು ಯಾರು ಭಾಗವಹಿಸದಿದ್ದಲ್ಲಿ ಟೆಂಡರ್ ಸ್ವೀಕರಿಸುವ Extension ಅವಧಿಯನ್ನು ದಿನಾಂಕ: 25/04/2024 ರಂದು ಮಧ್ಯಾಹ್ನ 3.00 ಗಂಟೆಯವರೆಗೆ ನಿಗಧಿಪಡಿಸಿದೆ. ಕಾಮಗಾರಿ ವಿವರ, ಇ.ಎಂ.ಡಿ ಹಾಗೂ ಇನ್ನಿತರ ಹೆಚ್ಚಿನ ವಿವರಗಳಿಗೆ ಈ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ ಮತ್ತು ಅಂತರ್ಜಾಲದ ಮೂಲಕ ಪಡೆಯಬಹುದಾಗಿದೆ. ವೆಬ್ ಸೈಟ್ ವಿಳಾಸ: https://kppp.karnataka.gov.in
ಸಹಿ/- ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ,
ಸಾಮಾಜಿಕ ಅರಣ್ಯ ಉಪ ವಿಭಾಗ, ತಿಪಟೂರು.
DIPR/TUM/15/KSMCA/2025-26

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ,
ಸಾಮಾಜಿಕ ಅರಣ್ಯ ಉಪ ವಿಭಾಗ, ತಿಪಟೂರು
ಸಂ:ಸ.ಅ.ಸಂ/ಸಾಅಉವಿ/ತಿಪ/ಕಾಮಗಾರಿಟೆಂಡರ್25-26/ವಿವ-48/2025-26
ದಿನಾಂಕ: 29.03.2025
ಅರಣ್ಯ ಕಾಮಗಾರಿಗಳ ಇ-ಟೆಂಡರ್ ಪ್ರಕಟಣೆ
ಈ ಮೂಲಕ ಸಾರ್ವಜನಿಕರ ಗಮನಕ್ಕೆ ತರಬಯಸುವುದೇನೆಂದರೆ 2025-26ನೇ ಸಾಲಿನಲ್ಲಿ ತಿಪಟೂರು ಸಾಮಾಜಿಕ ಅರಣ್ಯ ಉಪ ವಿಭಾಗದ ವ್ಯಾಪ್ತಿಯ ತಿಪಟೂರು, ಚಿಕ್ಕನಾಯಕನಹಳ್ಳಿ, ಗುಬ್ಬಿ, ಕುಣಿಗಲ್ ಮತ್ತು ತುರುವೇಕೆರೆ ವಲಯಗಳಲ್ಲಿ 2025-26ನೇ ಸಾಲಿನಲ್ಲಿ ವಿವಿಧ ಯೋಜನೆಗಳಡಿ ನೆಡುತೋಪು ಬೆಳೆಸುವುದು, ನೆಡುತೋಪುಗಳ ನಿರ್ವಹಣೆ ಮತ್ತು ಸಸಿಗಳನ್ನು ಬೆಳೆಸುವ ಕಾಮಗಾರಿಗಳನ್ನು ಕೈಗೊಳ್ಳಲು ಅರ್ಹ ಅರಣ್ಯ ಗುತ್ತಿಗೆದಾರರಿಂದ ಕೆ.ಪಿ.ಪಿ.ಪಿ ಪೋರ್ಟಲ್ ಮುಖಾಂತರ ಐಟಂವಾರು ಇ-ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಒಟ್ಟು 59 ಕಾಮಗಾರಿಗಳ ಪೈಕಿ ಗರಿಷ್ಠ ಅಂದಾಜು ಮೊತ್ತ ರೂ.11,47,900./-ಗಳಿಗೆ ಇ.ಎಂ.ಡಿ ಮೊತ್ತ ರೂ.28,697/-ಗಳನ್ನು ಹಾಗೂ ಕನಿಷ್ಠ ಅಂದಾಜು ಮೊತ್ತ ರೂ.1,09,200/-ಗಳಿಗೆ ಇ.ಎಂ.ಡಿ ಮೊತ್ತ ರೂ.2,730/-ಗಳನ್ನು ಪಾವತಿಸಿ ಟೆಂಡರ್‌ನಲ್ಲಿ ಭಾಗವಹಿಸಬೇಕು. ಟೆಂಡರ್ ಸ್ವೀಕರಿಸುವ ದಿನಾಂಕ:19/04/2025 ರಂದು ಮಧ್ಯಾಹ್ನ 1.00 ಗಂಟೆಯವರೆಗೆ, ತಾಂತ್ರಿಕ ಬಿಡ್ ದಿನಾಂಕ:21/04/2025ರಂದು ಮಧ್ಯಾಹ್ನ 3.00 ಗಂಟೆಗೆ ಹಾಗೂ ಆರ್ಥಿಕ ಬಿಡ್ ದಿನಾಂಕ:22/04/2025 ರಂದು ಮಧ್ಯಾಹ್ನ 4.00 ಗಂಟೆಗೆ ತೆರೆಯಲಾಗುವುದು. ಸದರಿ ದಿನದಂದು ಯಾರು ಭಾಗವಹಿಸದಿದ್ದಲ್ಲಿ ಟೆಂಡರ್ ಸ್ವೀಕರಿಸುವ Extension ಅವಧಿಯನ್ನು ದಿನಾಂಕ:25/04/2025 ರಂದು ಮಧ್ಯಾಹ್ನ 1.00 ಗಂಟೆಯವರೆಗೆ ನಿಗಧಿಪಡಿಸಿದೆ. ಕಾಮಗಾರಿ ವಿವರ, ಇ.ಎಂ.ಡಿ ಹಾಗೂ ಇನ್ನಿತರ ಹೆಚ್ಚಿನ ವಿವರಗಳಿಗೆ ಈ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ ಮತ್ತು ಅಂತರ್ಜಾಲದ ಮೂಲಕ ಪಡೆಯಬಹುದಾಗಿದೆ. ವೆಬ್ ಸೈಟ್ ವಿಳಾಸ: https://kppp. karnataka. gov.in
ಸಹಿ/- ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ,
ಸಾಮಾಜಿಕ ಅರಣ್ಯ ಉಪ ವಿಭಾಗ, ತಿಪಟೂರು.
DIPR/TUM/16/KSMCA/2025-26

ಟ್ವೀಟೂ-ಖಾರಾ

ಆರ್.ಅಶೋಕ್, ವಿಪಕ್ಷ ನಾಯಕ

ಸಂಕಟ ಬಂದಾಗ ವೆಂಕಟರಮಣ ಎಂಬಂತೆ ಸಿಎಂ siddaramaiah ಅವರು ತಮ್ಮ ಕುರ್ಚಿಗೆ ಕಂಟಕ ಬಂದಾಗಲೆಲ್ಲಾ ಜಾತಿ ಜನಗಣತಿ ವರದಿ ಎಂಬ ಮಂಕು ಬೂದಿ ಎರಚಿ ಜನರ ಗಮನ ಬೇರೆಡೆ ಸೆಳೆಯುವ ಪ್ರಯತ್ನ ಮಾಡೋ ಕುತಂತ್ರ ಈಗ ಗುಟ್ಟಾಗಿ ಏನು ಉಳಿದಿಲ್ಲ. ಇತ್ತೀಚೆಗೆ ನಡೆದ ಎಐಸಿಸಿ ಅಧಿವೇಶನದ ಸಂದರ್ಭದಲ್ಲಿ, ದೆಹಲಿ ಪ್ರವಾಸದ ವೇಳೆ ಸಿಎಂ ಸಿದ್ದರಾಮಯ್ಯನವರಿಗೆ ಭಾರಿ ಹಿನ್ನಡೆ ಆಗಿದೆ. ಹನಿಟ್ರ್ಯಾಪ್ ಸೇರಿದಂತೆ ಸರಕಾರದ ಸಾಲು ಸಾಲು ವೈಫಲ್ಯಗಳ ಬಗ್ಗೆ, ಎಡವಟ್ಟುಗಳು ವಿಚಾರವಾಗಿ ಹೈಕಮಾಂಡ್ ಸಿದ್ದರಾಮಯ್ಯನವರ ಬಣದ ಕಿವಿ ಹಿಂಡಿದೆ. ಆದ್ದರಿಂದಲೇ ಈಗ ಸಿದ್ದರಾಮಯ್ಯನವರು ಧಿಡೀರನೆ ಜಾತಿ ಜನಗಣತಿ ಜಪ ಮಾಡುತ್ತಿದ್ದಾರೆ ಎನ್ನುವ ಗುಸುಗುಸು ಕಾಂಗ್ರೆಸ್ ವಲಯದಲ್ಲೇ ಕೇಳಿಬರುತ್ತಿದೆ.

ಮುರಳಿ ಜಿ ಅಪ್ಪಿ

ಜಾತಿಗೊಂದು ಭವನ ಬೇಕು, ಜಾತಿಗೊಂದು ಸ್ಮಶಾನ ಬೇಕು , ಜಾತಿಗೊಂದು ಮಠ ಬೇಕು, ಜಾತಿಗೊಂದು ಊರಲ್ಲಿ ವೃತ್ತಗಳು ಬೇಕು, ಜಾತಿಗೊಂದು ಕಾಲೋನಿ ಬೇಕು, ಆದರೆ ಜಾತಿ ಗಣತಿ ಮತ್ತು ಸಮೀಕ್ಷೆ ಬೇಡ ಅಂತೆ.

ಒಕ್ಕಲಿಗ ಸಂಘದಿಂದ ನಡೆದಿರುವ ಮಹತ್ವದ ಸಭೆ | ಇತರೆ ಸಮುದಾಯಗಳನ್ನು ವಿಶ್ವಾಸಕ್ಕೆ ಪಡೆದು ಮುಂದಿನ ತೀರ್ಮಾನ

ಜಾತಿ ಗಣತಿಗೆ ಮುಂದಾದರೆ ಕರ್ನಾಟಕ ಬಂದ್ ಎಚ್ಚರಿಕೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯದಲ್ಲಿ ಜಾತಿ ಗಣತಿಯ ಮಂಡನೆಯಾದ ಬಳಿಕ ಇದೇ ಮೊದಲ ಬಾರಿಗೆ ಒಕ್ಕಲಿಗ ಸಮುದಾಯ ಕಠಿಣ ಸಂದೇಶವನ್ನು ರವಾನಿಸಿದ್ದು, ಒಂದು ವೇಳೆ ಹಿಂಪಡೆಯದಿದ್ದರೆ 'ಕರ್ನಾಟಕ ಬಂದ್'ನ ಎಚ್ಚರಿಕೆಯನ್ನು ನೀಡಿದೆ.

ಸಾಮಾಜಿಕ-ಶೈಕ್ಷಣಿಕ ಸಮೀಕ್ಷೆಗೆ ಸಂಬಂಧಿಸಿದಂತೆ ಗುರುವಾರ ನಡೆಯಲಿರುವ ವಿಶೇಷ ಸಚಿವ ಸಂಪುಟ ಸಭೆಯ ಹಿನ್ನಲೆಯಲ್ಲಿ ಮಂಗಳವಾರ ಬೆಂಗಳೂರಿನ ರಾಜ್ಯ ಒಕ್ಕಲಿಗರ ಸಂಘದಲ್ಲಿ ಮಹತ್ವದ ಸಭೆ ನಡೆದಿದ್ದು, ಹಿಂದುಳಿದ ವರ್ಗದ ಆಯೋಗದ ಈ ಸಮೀಕ್ಷೆಯನ್ನು ತಿರಸ್ಕರಿಸಿ, ವೈಜ್ಞಾನಿಕವಾಗಿ ಮರುಗಣತಿ ನಡೆಸಬೇಕು. ಇಲ್ಲದಿದ್ದರೆ ಮುಂದಿನ ದಿನದಲ್ಲಿ ರಾಜ್ಯ ಸರಕಾರದ ವಿರುದ್ಧ ಹೋರಾಟದ ಜತೆಗೆ ಕರ್ನಾಟಕ ಬಂದ್ ಮಾಡುವ ಎಚ್ಚರಿಕೆಯನ್ನು ನೀಡಿದೆ.

ಹಳೇ ಮೈಸೂರು ಭಾಗ ಸೇರಿದಂತೆ ಹಲವು ಭಾಗದಲ್ಲಿ ಒಕ್ಕಲಿಗ ಸಮುದಾಯ ನಿರ್ಣಾಯಕವಾಗಿದೆ. ಆದರೂ, ಜಾತಿ ಗಣತಿಯ ವರದಿಯಲ್ಲಿ ಒಕ್ಕಲಿಗ ಸಮುದಾಯ ವನ್ನು ಕಡೆಗಣಿಸಲಾಗಿದೆ. ಅತಿ ಹೆಚ್ಚು ಸಂಖ್ಯೆಯಲ್ಲಿದ್ದರೂ ಕಡಿಮೆ ಸಂಖ್ಯೆಯನ್ನು ತೋರಿಸಲಾಗಿದೆ. ಆದ್ದರಿಂದ ಅವೈಜ್ಞಾನಿಕವಾಗಿ ನಡೆದಿರುವ ಈ ವರದಿಯನ್ನು ತಿರಸ್ಕರಿಸಬೇಕು ಎನ್ನುವ ನಿರ್ಣಯವನ್ನು ತೆಗೆದು ಕೊಂಡಿದ್ದು, ಈ ನಿರ್ಣಯವನ್ನು ಸಮುದಾಯದ ಸಚಿವರುಗಳಿಂದ ಸರಕಾರಕ್ಕೆ ತಲುಪಿಸಲು ನಿರ್ಧರಿಸಲಾಗಿದೆ.

ಸಭೆಯ ಬಳಿಕ ಮಾತನಾಡಿರುವ ಒಕ್ಕಲಿಗರ ಸಂಘದ ಅಧ್ಯಕ್ಷ ವಿ.ಕೆಂಚಪ್ಪಗೌಡ, ರಾಜ್ಯ ಸರಕಾರ ಒಂದು ವೇಳೆ ಜಾತಿ ಗಣತಿ ವರದಿಯನ್ನು ಅನುಷ್ಠಾನ ಮಾಡಲು ಮುಂದಾದರೆ ಅದರ ವಿರುದ್ಧ ಹೋರಾಟ, ಪ್ರತಿಭಟನೆ ನಡೆಸುತ್ತೇವೆ. ಹಾಗೆಯೇ ಕರ್ನಾಟಕ ಬಂದ್ ನಡೆಸಲು ಹಿಂಜರಿಯುವುದಿಲ್ಲ. ರಾಜ್ಯ ಸಚಿವ ಸಂಪುಟದಲ್ಲಿರುವ ಒಕ್ಕಲಿಗ ಸಚಿವರು, ಶಾಸಕರು ಈ ಜಾತಿ ಗಣತಿ ವಿರುದ್ಧ ಗಟ್ಟಿಯಾಗಿ ಮಾತನಾಡಬೇಕು. ಸಂಘದ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಜಾತಿ ಗಣತಿ ವರದಿ ದೋಷಪೂರಿತವಾಗಿದೆ. ಯಾವುದೇ ಕಾರಣಕ್ಕೂ ಇದನ್ನು ಒಪ್ಪಬಾರದು ಎಂಬ ತೀರ್ಮಾನ ಮಾಡಿದ್ದೇವೆ. ಸರಕಾರ ಹೊಸದಾಗಿ ಸಮೀಕ್ಷೆ ನಡೆಸಿ ಜಾತಿ ಗಣತಿ ಮಾಡಿದರೆ ಅದಕ್ಕೆ ನಮ್ಮ ತಕರಾರಿಲ್ಲ ಎಂದು ಸ್ಪಷ್ಟಪಡಿಸಿದರು.

ಇತರ ಸಮುದಾಯದ ಜತೆಗೂಡಿ ಹೋರಾಟ

ನಿರೀಕ್ಷೆಯಂತೆ ಒಕ್ಕಲಿಗ ಸಮುದಾಯ ಲಿಂಗಾಯತರು ಸೇರಿದಂತೆ ಜಾತಿ ಗಣತಿಗೆ ವಿರುದ್ಧವಿರುವ ಎಲ್ಲ ಸಮುದಾಯಗಳೊಂದಿಗೆ ಸಮನ್ವಯ ಸಾಧಿಸಲು ತೀರ್ಮಾನಿಸಿದೆ. ಜಾತಿ ಗಣತಿಯಲ್ಲಿ ಲಿಂಗಾಯತ ಸಮುದಾಯ ಸೇರಿದಂತೆ ಬೇರೆ ಸಮುದಾಯಗಳಿಗೂ ಅನ್ಯಾಯವಾಗಿದೆ. ಹಾಗಾಗಿ ಲಿಂಗಾಯತ ಸಮುದಾಯ ಸೇರಿದಂತೆ ಇತರ ಸಮುದಾಯಗಳ ಜತೆಗೂ ಸೇರಿ ನಾವು ಒಗ್ಗಟ್ಟಾಗಿ ಹೋರಾಟ ಮಾಡುತ್ತೇವೆ. ಒಂದು ವೇಳೆ ಜಾತಿ ಗಣತಿ ವರದಿಯನ್ನು ಅನುಷ್ಠಾನಗೊಳಿಸಿದರೆ ಇದರ ವಿರುದ್ಧ ಕಾನೂನು ಹೋರಾಟವನ್ನು ನಡೆಸುತ್ತೇವೆ. ಅವೈಜ್ಞಾನಿಕ ಹಾಗೂ ಕಾನೂನಾತ್ಮಕವಲ್ಲದ ವರದಿ ರದ್ದು ಮಾಡುವಂತೆ ನ್ಯಾಯಾಲಯದ ಮೊರೆ ಹೋಗುತ್ತೇವೆ ಎಂದು ಕೆಂಚಪ್ಪಗೌಡ ಎಚ್ಚರಿಸಿದರು.

ಮೂಲಗಳ ಪ್ರಕಾರ ಈಗಾಗಲೇ ಒಕ್ಕಲಿಗ ಹಾಗೂ ಲಿಂಗಾಯತ ಸಮುದಾಯದ ನಾಯಕರು ಈ ವಿಷಯಕ್ಕೆ ಸಂಬಂಧಿಸಿದಂತೆ ಅನೌಪಚಾರಿಕವಾಗಿ ಚರ್ಚೆ ನಡೆಸಿದ್ದು, ಇನ್ನೆರೆಡು ದಿನದಲ್ಲಿ ಎರಡೂ ಸಮುದಾಯದ ಪ್ರಮುಖ ಮಠಾಧೀಶರನ್ನು ಒಂದೇ ವೇದಿಕೆಯಲ್ಲಿ ಸೇರಿಸುವ ಮೂಲಕ ಬಲಪ್ರದರ್ಶನ ಮಾಡಲು ತೀರ್ಮಾನಿಸಿದ್ದಾರೆ. ಈಗಿರುವ ಅಂಕಿ-ಸಂಖ್ಯೆಯನ್ನೇ ಒಪ್ಪಿಕೊಂಡರೆ ಭವಿಷ್ಯದಲ್ಲಿ ರಾಜಕೀಯವಾಗಿ ಈ ಎರಡು ಸಮುದಾಯಗಳಿಗೆ ಆಗಬಹುದಾದ 'ಅನಾಹುತ'ವನ್ನು ಊಹಿಸಲಾಗಿದೆ. ಆದ್ದರಿಂದ ಈ ವಿಷಯದಲ್ಲಿ ಎರಡೂ ಸಮುದಾಯಗಳು ಒಗ್ಗಟ್ಟಿನ ಮಂತ್ರ ಪಠಿಸಲು ತೀರ್ಮಾನಿಸಿವೆ ಎಂದು ತಿಳಿದುಬಂದಿದೆ.

ಜಾತಿ ಗಣತಿ ವರದಿಯನ್ನು ಒಕ್ಕಲಿಗರನ್ನು ತುಳಿಯುವ ಪ್ರಯತ್ನ ನಡೆದಿದೆ. ಜಾತಿ ಗಣತಿ ಹೆಸರಿನಲ್ಲಿ ರಾಜಕೀಯ ಮಾಡಬಾರದು. ಈಗಾಗಲೇ ಸೋರಿಕೆಯಾಗಿರುವ ವರದಿಯಲ್ಲಿ ರಾಜ್ಯದಲ್ಲಿ 61 ಲಕ್ಷ ಒಕ್ಕಲಿಗರು ಇದ್ದಾರೆ ಎಂದು ತೋರಿಸಿದ್ದಾರೆ. ಇದು ಸರಿಯಲ್ಲ. ವಿಧಾನಸಭಾ ಕ್ಷೇತ್ರವಾರು ಪರಿಗಣಿಸಿದರೂ ಒಕ್ಕಲಿಗರ ಸಂಖ್ಯೆ ಹೆಚ್ಚಿದೆ. ಹಿಂದುಳಿದ ವರ್ಗಗಳ ಆಯೋಗ ಆರೋಗ್ಯಕರವಾದ ವರದಿ ನೀಡಿಲ್ಲ. ಜತೆಗೆ 10 ವರ್ಷಗಳ ಹಿಂದಿನ ವರದಿಯನ್ನು ಈಗ ಅನುಷ್ಠಾನಗೊಳಿಸುತ್ತಿರುವುದು ಸರಿಯಲ್ಲ.

-ಕೆಂಚಪ್ಪಗೌಡ, ರಾಜ್ಯ ಒಕ್ಕಲಿಗರ ಸಂಘದ ಅಧ್ಯಕ್ಷ

ಕುರುಬ ಸಮುದಾಯದಿಂದ ಸಭೆ

ಈ ನಡುವೆ ಜಾತಿ ಗಣತಿಯನ್ನು ಸ್ವಾಗತಿಸಿರುವ ಕುರುಬ ಸಮುದಾಯದ ಮುಖಂಡರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಬೆಂಬಲಿಸುವ ನಿಟ್ಟಿನಲ್ಲಿ ಹಾಗೂ ಮುಂದಿನ ದಿನದಲ್ಲಿ ಈ ವಿಷಯದಲ್ಲಿ ಯಾವ ರೀತಿಯಲ್ಲಿ ನಡೆದುಕೊಳ್ಳಬೇಕು ಎನ್ನುವ ಬಗ್ಗೆ ಚರ್ಚಿಸಲು ಮಂಗಳವಾರ ಸಂಜೆ ಸಭೆ ನಡೆಸಿದ್ದಾರೆ. ಇದೇ ರೀತಿ ಗ್ಯಾರಂಟಿ ಅನುಷ್ಠಾನ ಸಮಿತಿ ರಾಜ್ಯಾಧ್ಯಕ್ಷ ಎಚ್.ಎಂ. ರೇವಣ್ಣ ನೇತೃತ್ವದಲ್ಲಿ ಮಂಗಳವಾರ ಜಂಟಿ ಸುದ್ದಿಗೋಷ್ಠಿ ಕರೆದಿದ್ದು, ಈ ಮೂಲಕ ಜಾತಿಗಣತಿಯನ್ನು ಸಮರ್ಥಿಸಿಕೊಳ್ಳುವ ಸಾಧ್ಯತೆಯಿದೆ ಎನ್ನಲಾಗಿದೆ.

ಲಿಂಗಾಯತ ಶಾಸಕರ ಸಭೆ?

ಜಾತಿ ಗಣತಿ ಕಿಚ್ಚು ಜೋರಾಗುತ್ತಿದ್ದಂತೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಒಕ್ಕಲಿಗ ಶಾಸಕರ ಸಭೆ ನಡೆಸಿದ್ದಾರೆ. ಇದರ ಬೆನ್ನಲ್ಲೇ, ಲಿಂಗಾಯತ ಸಮುದಾಯದ ಶಾಸಕರು ಸಭೆ ನಡೆಸಲು ಚಿಂತನೆ ನಡೆಸಿದ್ದಾರೆ ಎನ್ನಲಾಗಿದೆ. ಜಾತಿ ಗಣತಿ ವರದಿಗೆ ಈಗಾಗಲೇ ಅಖಿಲ ಭಾರತ ವೀರಶೈವ ಮಹಾಸಭಾದ ಅಧ್ಯಕ್ಷರು ಹಾಗೂ ಕಾಂಗ್ರೆಸ್ ಶಾಸಕರಾದ ಶಾಮನೂರು ಶಿವಶಂಕರಪ್ಪ ಸೇರಿದಂತೆ ಬಹುತೇಕ ಕಾಂಗ್ರೆಸ್ ಶಾಸಕರು ವಿರೋಧ ವ್ಯಕ್ತಪಡಿಸಿದ್ದಾರೆ. ಆದ್ದರಿಂದ ಲಿಂಗಾಯತ ಶಾಸಕರ ಸಭೆ ಕರೆದು ಜಾತಿ ಗಣತಿ ವರದಿ ಬಗ್ಗೆ ಮುಂದಿನ ನಡೆ ಏನಿರಬೇಕು ಎಂಬ ಬಗ್ಗೆಯೂ ಲಿಂಗಾಯತ ಶಾಸಕರುಗಳು ನಿರ್ಧರಿಸುವರು ಎಂದು ಹೇಳಲಾಗಿದೆ.

ಸ್ವಾಮೀಜಿಗಳ ಸಭೆ



ಜಾತಿ ಗಣತಿಯನ್ನು ಮಂಡಿಸಿರುವ ರಾಜ್ಯ ಸರಕಾರ ವಿಶೇಷ ಸಂಪುಟದಲ್ಲಿ ಚರ್ಚಿಸಿ ಅನುಮೋದನೆ ನೀಡುವ ಆತಂಕವಿರುವುದರಿಂದ ಈ ವಿಷಯಕ್ಕೆ ಸಂಬಂಧಿಸಿದಂತೆ ಬುಧವಾರ ಅಥವಾ ಗುರುವಾರ ಆದಿಚುಂಚನಗಿರಿ ಪೀಠಾಧ್ಯಕ್ಷರಾದ ಡಾ. ಶ್ರೀ ನಿರ್ಮಲಾನಂದ ನಾಥ ಸ್ವಾಮೀಜಿಯವರ ನೇತೃತ್ವದಲ್ಲಿ ಸಮುದಾಯದ ಸ್ವಾಮೀಜಿಗಳ ಸಭೆ ನಡೆಸಿ ಅವರ ಮಾರ್ಗದರ್ಶನವನ್ನು ಪಡೆಯುವ ತೀರ್ಮಾನವನ್ನು ಒಕ್ಕಲಿಗರ ಸಂಘ ತೀರ್ಮಾನಿಸಿದ್ದು, ಈ ಸಭೆಯಲ್ಲಿ ಸ್ವಾಮೀಜಿಗಳ ಸಭೆಯಲ್ಲಿ ಪಟ್ಟನಾಯಕನಹಳ್ಳಿಯ ನಂಜಾವಧೂತ ಸ್ವಾಮೀಜಿ, ವಿಶ್ವ ಒಕ್ಕಲಿಗರ ಸಮುದಾಯದ ಮಠದ ಚಂದ್ರಶೇಖರನಾಥ ಸ್ವಾಮೀಜಿ ಸೇರಿದಂತೆ ಎಲ್ಲ ಸ್ವಾಮೀಜಿಗಳನ್ನು ಆಹ್ವಾನಿಸಿದ್ದೇವೆ. ಒಕ್ಕಲಿಗ ಸಮುದಾಯದ ಮುಖಂಡರು ಸಹ ಈ ಸಭೆಯಲ್ಲಿ ಪಾಲ್ಗೊಳ್ಳುತ್ತಿದ್ದೇವೆ. ಈ ಸಭೆಯಲ್ಲೆ ಸ್ವಾಮೀಜಿಗಳ ಮಾರ್ಗದರ್ಶನದಂತೆ ಜಾತಿ ಗಣತಿ ವಿರುದ್ಧ ಮುಂದಿನ ಹೋರಾಟದ ರೂಪುರೇಷೆ ತೀರ್ಮಾನವಾಗಲಿದೆ. ಈ ಸಭೆಯಲ್ಲಿ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೇರಿದಂತೆ ಒಕ್ಕಲಿಗ ಸಮುದಾಯದ ಸಚಿವರು, ಶಾಸಕರನ್ನು ಆಹ್ವಾನಿಸುವ ಸಾಧ್ಯತೆಯಿದೆ ಎನ್ನಲಾಗಿದೆ.

ಕುರ್ಚಿಗಾಗಿ ಜಾತಿಗಣತಿ ನಾಟಕ: ಪ್ರತಾಪ್ ಸಿಂಹ

ಮೈಸೂರು: ಜಾತಿಗಣತಿ ವರದಿ ಮುನ್ನಲೆಗೆ ತರುವ ಸಿಎಂ ಸಿದ್ದರಾಮಯ್ಯ ಕುರ್ಚಿ ಉಳಿಸಿಕೊಳ್ಳುವ ನಾಟಕ ಆಡುತ್ತಿದ್ದಾರೆ ಎಂದು ಮಾಜಿ ಸಂಸದ ಪ್ರತಾಪ್ ಸಿಂಹ ಟೀಕಿಸಿದರು.

ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಜಾತಿಗಣತಿ ಸಂಖ್ಯೆಯನ್ನು ಹೊರ ಹಾಕಿ ಸಿಎಂ ಸಿದ್ದರಾಮಯ್ಯ ತನ್ನ ಪಕ್ಷ ಹಾಗೂ ಪ್ರತಿ ಪಕ್ಷ ಇಬ್ಬರನ್ನೂ ಕುರಿ ಮಾಡಿದ್ದಾರೆ. ವಾಸ್ತವ ವಿಚಾರಗಳನ್ನು ಮರೆಮಾಚಲು ಜಾತಿ ಗಣತಿ ಮುನ್ನೆಲೆಗೆ ಬಿಟ್ಟಿದ್ದಾರೆ ಎಂದು ಆರೋಪಿಸಿದರು.

ನಮ್ಮ ಜಾತಿಯ ಸಂಖ್ಯೆ ಕಡಿಮೆ ಆಗಿದೆ ಎಂದು ಪರಸ್ಪರ ಮಂಗ್ಯಾಗಳ ಥರ ಕಿತ್ತಾಡಬೇಡಿ. ಹಿಂದೂಗಳಾಗಿ ಈ ಜಾತಿಗಣತಿ ನೋಡಿ ಎಂದು ಮಾರ್ಮಿಕವಾಗಿ ನುಡಿದರು. ಕಾಂಗ್ರೆಸ್ ನಲ್ಲಿ 36 ಜನ ವೀರಶೈವ ಲಿಂಗಾಯತ ಶಾಸಕರಿದ್ದಾರೆ. ಅವರೆಲ್ಲರೂ ಸಿಎಂ ಸ್ಥಾನ ಬಿಟ್ಟು ಕೊಡುವಂತೆ ಸಿದ್ದರಾಮಯ್ಯ ಬಳಿ ಕೇಳಲಿ ಎಂದರು.

ಸಿಎಂ ಎಲ್ಲರನ್ನು ಕುರಿ ಮಾಡುತ್ತಿದ್ದಾರೆ. ಆಗ ಅಹಿಂದ ಅಂತಾ ಒಂದು ವರ್ಗ ಒಡೆದರು. ಈಗ ಜಾತಿಗಣತಿ ಹೆಸರಲ್ಲಿ ಇಡೀ ಹಿಂದೂ ಧರ್ಮ ಒಡೆಯುತ್ತಿದ್ದಾರೆ. ಗ್ಯಾರಂಟಿ ಯೋಜನೆಗಳು ಹಳ್ಳ ಹಿಡಿದಿವೆ. ಬೆಲೆ ಏರಿಕೆಯಾಗಿದೆ. ಮುಡಾ ಹಗರಣ, ವಾಲ್ಮೀಕಿ ಹಗರಣ ನಡೆದಿದೆ. ಇವೆಲ್ಲವನ್ನು ಮರೆ ಮಾಚಲು ಜಾತಿಗಣತಿ ಬಿಚ್ಚಿಟ್ಟಿದ್ದಾರೆ. ಸಿದ್ದರಾಮಯ್ಯ ಅವರಿಗೆ ತಮ್ಮ ಕುರ್ಚಿ ಬಿಟ್ಟು ಕೊಡುತ್ತಾರಾ? ಲಿಂಗಾಯತರಿಗೆ, ಒಕ್ಕಲಿಗರು, ಒಬಿಸಿ ಎಲ್ಲದರಲ್ಲೂ ಉಪಜಾತಿ ಲೆಕ್ಕ ಹಾಕಲಾಗಿದೆ. ಮುಸ್ಲಿಂ, ಕ್ರಿಶ್ಚಿಯನ್‌ರಲ್ಲಿ ಉಪಜಾತಿ ಯಾಕೆ ಲೆಕ್ಕ ಹಾಕಿಲ್ಲ ಎಂದು ಪ್ರಶ್ನಿಸಿದರು.

ಮುಕ್ತ ಚರ್ಚೆಗೆ ಅವಕಾಶ ನೀಡಿದರೆ ಒಳ್ಳೆಯದು

ಜಾತಿಗಣತಿ: ಅಧಿವೇಶನ ಕರೆದು ಚರ್ಚಿಸುವುದು ಸೂಕ್ತ

ಬೆಳಗಾವಿ: ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ-2015ರ ವರದಿ ಕುರಿತಂತೆ ಚರ್ಚಿಸಲು ಪ್ರತ್ಯೇಕ ವಿಧಾನಮಂಡಲ ಅಧಿವೇಶನ ಕರೆದು ಚರ್ಚಿಸುವುದು ಸೂಕ್ತ. ಈ ವರದಿ ಕುರಿತಂತೆ ಮುಕ್ತವಾಗಿ ಚರ್ಚಿಸಲು ಅವಕಾಶ ನೀಡಿದರೆ ಒಳ್ಳೆಯದು ಎಂದು ಲೋಕೋಪಯೋಗಿ ಇಲಾಖೆ ಸಚಿವ ಸತೀಶ್ ಜಾರಕಿಹೊಳಿ ಅವರು ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಸಮೀಕ್ಷೆಯ ಅಂಕಿ ಸಂಖ್ಯೆ, ಅಧ್ಯಯನದ ಬಗ್ಗೆ ಅನುಮಾನ, ಆರೋಪವಿದ್ದರೆ ಸದನದಲ್ಲೇ ಚರ್ಚಿಸಲಿ, ಈ ವಿಚಾರವಾಗಿ ಒಂದು ಬಾರಿ ಸಮಗ್ರವಾಗಿ ಚರ್ಚೆಯಾದರೆ ಯಾರಿಗೂ ಅನುಮಾನ ಉಳಿಯುವುದಿಲ್ಲ, ಈ ಕುರಿತು ರಾಜ್ಯದ ಜನತೆಗೂ ಗೊತ್ತಾಗಲಿ ಎಂದು ತಿಳಿಸಿದರು.

ಡಿಸಿಎಂ ಡಿ.ಕೆ. ಶಿವಕುಮಾರ್ ಒಕ್ಕಲಿಗ ಶಾಸಕರ ಸಭೆ ನಡೆಸಿರುವ ಕುರಿತು ಪ್ರತಿಕ್ರಿಯೆ ನೀಡಿ, ಡಿಸಿಎಂ ಡಿ.ಕೆ. ಶಿವಕುಮಾರ್ ಒಕ್ಕಲಿಗ ಸಮಾಜದ ನಾಯಕರು. ಹೀಗಾಗಿ ಸಭೆ ನಡೆಸಿ ವರದಿ ಕುರಿತು ಚರ್ಚಿಸಿದರೆ ತಪ್ಪೇನೆಂದು ಪ್ರಶ್ನಿಸಿದರು.

ಕುಡಿಯುವ ನೀರಿಗಾಗಿ ಕೊಯ್ನಾ ಜಲಾಶಯದಿಂದ ಕೃಷ್ಣಾ ನದಿಗೆ ನೀರು ಬಿಡುವಂತೆ ಮಹಾರಾಷ್ಟ್ರ ಸಿಎಂ ದೇವೇಂದ್ರ ಫಡ್ನವಿಸ್‌ಗೆ ಸಿಎಂ ಸಿದ್ದರಾಮಯ್ಯ ಪತ್ರ ಬರೆದಿದ್ದಾರೆ.ಈ ಬಗ್ಗೆ ಶೀಘ್ರವೇ ಸರಕಾರ ನಿರ್ಧಾರ ಕೈಗೊಳ್ಳಲಿದೆ ಎಂದು ಮಾಹಿತಿ ನೀಡಿದರು.

ಬಿಜೆಪಿ ಕೇಂದ್ರದ ವಿರುದ್ಧ ಪ್ರತಿಭಟನೆ ಮಾಡಲಿ

ಬಿಜೆಪಿ, ಜೆಡಿಎಸ್ ಜನಾಕ್ರೋಶ ಯಾತ್ರೆ ಬಗ್ಗೆ ಮಾತನಾಡಿದ ಸಚಿವರು, ಪೆಟ್ರೋಲ್, ಡೀಸೆಲ್, ಗ್ಯಾಸ್ ಸೇರಿದಂತೆ ಅನೇಕ ವಸ್ತುಗಳ ಬೆಲೆಗಳನ್ನು ಕೇಂದ್ರ ಸರಕಾರವೇ ಏರಿಕೆ ಮಾಡಿದೆ. ಹೀಗಿದ್ದಾಗ ನಮ್ಮ ಸರಕಾರದ ಬಗ್ಗೆ ಜನಾಕ್ರೋಶ ಯಾತ್ರೆ ಮಾಡುತ್ತಿರುವ ಬಿಜೆಪಿಯವರ ನಿಲುವು ಎಷ್ಟರ ಮಟ್ಟಿಗೆ ಸರಿ?. ಬಿಜೆಪಿಯವರು ಧರಣಿ ಮಾಡುವುದಿದ್ದರೆ ಕೇಂದ್ರ ಸರಕಾರದ ವಿರುದ್ಧವೂ ಪ್ರತಿಭಟಿಸಲಿ ಎಂದು ವ್ಯಂಗ್ಯವಾಡಿದರು.

ಜಾತಿಗಣತಿ ಹತ್ತು ವರ್ಷಗಳ ಹಳೆಯ ವರದಿ

ಮರು ಸರ್ವೇ ಬೇಡಿಕೆ ಸಮರ್ಥನೀಯ: ರಾಜಣ್ಣ

ತುಮಕೂರು: ಜಾತಿಗಣತಿ ಹತ್ತು ವರ್ಷಗಳ ಹಳೆಯ ವರದಿ. ಮರು ಸರ್ವೇ ನಡೆಸಬೇಕು ಎಂಬ ಕೆಲವರ ಬೇಡಿಕೆಯನ್ನು ಒಪ್ಪಬಹುದು ಎಂದು ಸಹಕಾರ ಸಚಿವ ಕೆ.ಎನ್.ರಾಜಣ್ಣ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಮರು ಸರ್ವೇ ಮಾಡಬೇಕು ಎಂದು ಹೇಳಿದ ತಕ್ಷಣ ಅವರ ಬೇಡಿಕೆಯನ್ನು ಒಪ್ಪಿದ್ದೇನೆ ಎಂದಲ್ಲ ಎಂದರು.

ಸಮೀಕ್ಷೆ ನಡೆಸಿದ ಸಮಯದಲ್ಲಿ ರಾಜ್ಯದ ಜನಸಂಖ್ಯೆ 5.50 ಕೋಟಿ ಇತ್ತು. ಈಗ 7.50 ಕೋಟಿಗೆ ಏರಿಕೆಯಾಗಿದೆ. ಆಗಲೂ ಕೆಲವರ ಸಮೀಕ್ಷೆ ಆಗಿಲ್ಲ. ಈಗಿನ ಪರಿಸ್ಥಿತಿಗೆ ಹೋಲಿಸಿದರೆ ಇನ್ನೂ 2 ಕೋಟಿಗೂ ಹೆಚ್ಚು ಜನ ಸರ್ವೇ ವ್ಯಾಪ್ತಿಗೆ ಬಂದಿಲ್ಲ. ಹತ್ತು ವರ್ಷಗಳಿಗೆ ಒಮ್ಮೆ ಜನ ಗಣತಿ ನಡೆಯುತ್ತದಲ್ಲವೆ? ಅದೇ ರೀತಿ ಇದನ್ನೂ ಪರಿಗಣಿಸಬಹುದು ಎಂದು ತಿಳಿಸಿದರು.

ಜಾತಿ ಜನಗಣತಿ ವಿರೋಧಿಸಿ ಒಕ್ಕಲಿಗ ಸಮುದಾಯ ಸಭೆ ನಡೆಸಿ, ಚರ್ಚಿಸುವುದಕ್ಕೆ ನನ್ನ ಅಭ್ಯಂತರವಿಲ್ಲ. ಅದರಲ್ಲಿ ಯಾವ ಅಂಶ ತಮಗೆ ಇಷ್ಟವಾಗಿಲ್ಲ ಎಂಬುದನ್ನು ಸ್ಪಷ್ಟಪಡಿ ಸಲಿ. ಅದನ್ನು ಸರಿಪಡಿಸುವ ಕೆಲಸವನ್ನು ಸರಕಾರ ಮಾಡಲಿದೆ' ಎಂದು ಹೇಳಿದರು.

ತೆಲಂಗಾಣದಲ್ಲಿ ಒಳ ಮೀಸಲಾತಿ ಜಾರಿಯಾದಂತೆ ರಾಜ್ಯದಲ್ಲೂ ಜಾರಿಯಾಗಲಿದೆ. ಎರಡು ತಿಂಗಳಲ್ಲಿ ಜಾರಿ ಮಾಡಲು ಸರಕಾರ ಬದ್ಧವಾಗಿದೆ. ಅಲ್ಲಿಯವರೆಗೂ ಸರಕಾರದ ಹುದ್ದೆಗಳಿಗೆ ನೇಮಕಾತಿ ನಡೆಯುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಜಾತಿ ಜನಗಣತಿ ವರದಿ ಸುಮಾರು 8-10 ಸಂಪುಟ ಇದೆ. ಇದನ್ನು ಸಂಪೂರ್ಣವಾಗಿ ಓದಲು ಮೂರು ತಿಂಗಳು ಬೇಕು. ಎಲ್ಲ ಸಚಿವರಿಗೂ ವರದಿಯ ಸಾರಾಂಶದ ಪ್ರತಿ ನೀಡಲಾಗಿದೆ. ಬಿಜೆಪಿಯವರು ಮೀಸಲಾತಿ ವಿರೋಧಿಗಳು ಹಾಗಾಗಿ ಜಾತಿ ಜನಗಣತಿ ವಿರೋಧಿಸುತ್ತಿದ್ದಾರೆ.

-ಕೆ.ಎನ್.ರಾಜಣ್ಣ, ಸಹಕಾರ ಸಚಿವ

ನಾಡ ಸಮಸ್ಯೆಗೆ ಸಿಎಂ ಪರಿಹಾರ

- **ಸ್ಥಳ : ಬೆಂಗಳೂರು**

ಸಮಸ್ಯೆಯೇನು..?

- ಕೂಡ್ಲು-ಹರಳೂರು ಮುಖ್ಯರಸ್ತೆಯು ಹಾಳಾಗಿರುವ ಬಗ್ಗೆ.
- **ಪರಿಹಾರ:** ಬೊಮ್ಮನಹಳ್ಳಿ ವ್ಯಾಪ್ತಿಯ ಕೂಡ್ಲು-ಹರಳೂರು ಮುಖ್ಯರಸ್ತೆಯಲ್ಲಿ ಜಲಮಂಡಳಿಯಿಂದ 110 ಹಳ್ಳಿಗಳಿಗೆ ಕುಡಿಯುವ ನೀರು ಹಾಗೂ ಒಳಚರಂಡಿ ವ್ಯವಸ್ಥೆ ಕಲ್ಪಿಸಲು ಕಾಮಗಾರಿ ನಡೆಯುತ್ತಿದೆ. ಸದರಿ ಕಾಮಗಾರಿ ಮುಗಿದ ನಂತರ ಕೂಡ್ಲು-ಹರಳೂರು ಮುಖ್ಯರಸ್ತೆಗೆ ಡಾಂಬರೀಕರಣ ಮಾಡಲಾಗುವುದು.

ಡಿಸೆಂಬರ್‌ನಲ್ಲಿ ಆಯೋಜನೆ: ನಾಡೋಜ ಡಾ.ಮಹೇಶ್ ಜೋಶಿ

ಬಳ್ಳಾರಿಯಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ

ಬಳ್ಳಾರಿ: 67 ವರ್ಷಗಳ ಬಳಿಕ ಬಳ್ಳಾರಿಯಲ್ಲಿ 88ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಡಿಸೆಂಬರ್‌ನಲ್ಲಿ ಆಯೋಜಿಸಲು ತೀರ್ಮಾನಿಸಲಾಗಿದೆ ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ರಾಜ್ಯಾಧ್ಯಕ್ಷ ನಾಡೋಜ ಡಾ.ಮಹೇಶ್ ಜೋಶಿ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ಬಳ್ಳಾರಿ ಕನ್ನಡದ ಅಸ್ಮಿತೆ ತೋರಿದ ಜಿಲ್ಲೆಯಾಗಿದೆ. ಸಾಂಸ್ಕೃತಿಕವಾಗಿ ಬಳ್ಳಾರಿ ಮತ್ತು ವಿಜಯನಗರ ಒಂದೇ ಜಿಲ್ಲೆಯಾಗಿದೆ. ಈ ಜಿಲ್ಲೆಯಲ್ಲಿ ಈವರೆಗೆ ನಾಲ್ಕು ಬಾರಿ ಸಾಹಿತ್ಯ ಸಮ್ಮೇಳನ ನಡೆದಿದೆ. ಹೊಸಪೇಟೆಯಲ್ಲಿ 1920ರಲ್ಲಿ ಆರನೇ ಸಾಹಿತ್ಯ ಸಮ್ಮೇಳನ, 1926 ರಲ್ಲಿ 12ನೇ, 1947ರಲ್ಲಿ 30ನೇ ಮತ್ತು 1958ರಲ್ಲಿ 50ನೇ ಸಾಹಿತ್ಯ ಸಮ್ಮೇಳನ ಆಯೋಜನೆ ಮಾಡಲಾಗಿತ್ತು. ಇದೀಗ ಸುದೀರ್ಘ 67 ವರ್ಷದ ಬಳಿಕ 88ನೇ ಸಾಹಿತ್ಯ ಸಮ್ಮೇಳನ ಬಳ್ಳಾರಿಯಲ್ಲಿ ಆಯೋಜನೆ ಮಾಡಲಾಗಿದೆ ಎಂದು ಅವರು ಮಾಹಿತಿ ನೀಡಿದರು.

ಇನ್ನೂ ಬಳ್ಳಾರಿಯಲ್ಲಿ ಕೋಟೆ, ಬಿಸಿಲು, ಗಣಿ, ಗಡಿ ಇರುವಂತಹದ್ದು. ಹೀಗಾಗಿ ಡಿಸೆಂಬರ್‌ನಲ್ಲಿ ಹವಾಮಾನಕ್ಕೆ ಅನುಗುಣವಾಗಿ ಸಾಹಿತ್ಯ ಸಮ್ಮೇಳನ ಆಯೋಜನೆ ಮಾಡಲಾಗಿದೆ. ಈ ಬಗ್ಗೆ ಸಿಎಂ ಸಿದ್ದರಾಮಯ್ಯ ಜತೆ ಚರ್ಚಿಸಲಾಗಿದೆ ಎಂದರು.

ಈ ಬಾರಿ ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು. ವಿದೇಶದಲ್ಲಿನ ಕನ್ನಡಿಗರನ್ನು ಆಹ್ವಾನಿಸಲಾಗಿದ್ದು, ವಿಶೇಷವಾಗಿ ಬಳ್ಳಾರಿ ಮೊದಲ ಜಿಲ್ಲಾಧಿಕಾರಿ ಥಾಮಸ್ ಮನ್ರೋ ಅವರ ಕುಟುಂಬದವರನ್ನು ಆಹ್ವಾನಿಸಲು ನಿರ್ಧರಿಸಲಾಗಿದೆ. ಯಾಕೆಂದರೆ ಕನ್ನಡದಲ್ಲಿ ಆಡಳಿತ ನಡೆಸಿದ್ದ ಹಿನ್ನೆಲೆ ಅವರ ಕುಟುಂಬದವರನ್ನು ಆಹ್ವಾನಿಸಿ ಗೌರವಿಸಲಾಗುವುದು.

-ನಾಡೋಜ ಡಾ.ಮಹೇಶ್ ಜೋಶಿ, ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ

ಸಿದ್ದರಾಮಯ್ಯ ವಿರುದ್ಧ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಕಿಡಿ

ಧರ್ಮ ಒಡೆಯಲು ಸರಕಾರ ಮುಂದಾಗಿದೆ

ಬೆಳಗಾವಿ: ಸ್ವಾತಂತ್ರ್ಯ ನಂತರದಲ್ಲಿ ಕಾಂಗ್ರೆಸ್ ಸರಕಾರ ಬ್ರಿಟಿಷರಂತೆ ಒಡೆದಾಳುವ ನೀತಿ ಅನುಸರಿಸುತ್ತಿದೆ. ಈ ಹಿಂದೆ ಲಿಂಗಾಯತ ಪ್ರತ್ಯೇಕ ಧರ್ಮ ಎಂದು ಬೆಂಕಿ ಹಚ್ಚುವ ಕೆಲಸ ಮಾಡಲಾಯಿತು. ಈಗ ಧರ್ಮಗಳನ್ನು ಒಡೆ ಯಲು ಸಿದ್ದರಾಮಯ್ಯ ಸರಕಾರ ಮುಂದಾಗಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ ವಿಜಯೇಂದ್ರ ಆಕ್ರೋಶ ಹೊರಹಾಕಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ರಾಜ್ಯದಲ್ಲಿ ಹಿಂದುಳಿದ ಸಮುದಾಯಗಳಿಗೆ ನ್ಯಾಯ ಕೊಡಿಸುವ ಬದ್ಧತೆಯನ್ನು ಬಿಜೆಪಿ ಹೊಂದಿದೆ. ಈ ಹಿಂದೆ ಅಧಿಕಾರಲ್ಲಿ ಇದ್ದಾಗ ಸಿದ್ದರಾಮಯ್ಯ ಅವರಿಗೆ ಜಾತಿಗಣತಿ ವರದಿ ನೆನಪಾಗಲಿಲ್ಲ. ಎರಡನೇ ಅವಧಿಗೆ ಸಿಎಂ ಆದ ಎರಡು ವರ್ಷಗಳ ನಂತರ ಜಾತಿ ಗಣತಿ ವರದಿ ಮಂಡಿಸಲು ಮುಂದಾಗಿದ್ದಾರೆ. ತಮ್ಮ ಮುಖ್ಯಮಂತ್ರಿ ಹುದ್ದೆ ಗಟ್ಟಿಗೊಳಿಸುವ ಉದ್ದೇಶಕ್ಕೆ ಬೆಂಕಿ ಹಚ್ಚುವ ಕೆಲಸಕ್ಕೆ ಮುಂದಾಗಿದ್ದಾರೆ ಎಂದರು.

ಬೆಲೆ ಏರಿಕೆ ಹಾಗೂ ಕಾಂಗ್ರೆಸ್ ಸರಕಾರದ ದುರಾಡಳಿತದ ವಿರುದ್ಧ ಬಿಜೆಪಿ ಬೀದಿಗಿಳಿದು ಹೋರಾಟ ಮಾಡುತ್ತಿದೆ. ಜನರಿಗೆ ಅಭೂತಪೂರ್ವ ಬೆಂಬಲ ವ್ಯಕ್ತವಾಗಿದೆ. ಬೆಲೆ ಏರಿಕೆಯಿಂದ ಜನ ಹೈರಾಣಾಗಿದ್ದು ರಾಜ್ಯ ಸರಕಾರಕ್ಕೆ ಕಟ್ಟಿಗೆಯಿಂದ ಜನ ಹೊಡೆಯುವ ಸಮಯ ದೂರವಿಲ್ಲ. ಬೆಳಗಾವಿ ಸೇರದಂತೆ ರಾಜ್ಯದ ವಿವಿಧ ಭಾಗಗಳಲ್ಲಿ ಜನಾಕ್ರೋಶ ಯಾತ್ರೆ ಯಶಸ್ವಿಯಾಗಿ ಸಾಗಲಿದೆ ಎಂದರು.

ಸಿದ್ದರಾಮಯ್ಯ ಸರಕಾರ ಅಧಿಕಾರಕ್ಕೆ ಬಂದ ನಂತರದಿಂದ ಇಂದನ ಸೇರಿದಂತೆ ವಸ್ತುಗಳ ಬೆಲೆ ಏರಿಕೆ ಜಾಸ್ತಿಯಾಗಿದೆ. ಡೀಸೆಲ್ ಬೆಲೆ ಆರು ರು. ಏರಿಕೆ ಮಾಡಿ ಇದರಿಂದ ರಾಜ್ಯದ ಅಭಿವೃದ್ಧಿ ಮಾಡುತ್ತಾರಾ. ಉತ್ತರ ಕರ್ನಾಟಕ ಭಾಗದ ನೀರಾವರಿ ಯೋಜನೆಗೆ ಹಣ ಬಿಡುಗಡೆ ಮಾಡದ ಸರಕಾರ ಕೇವಲ ಬೆಲೆ ಏರಿಕೆಯಿಂದ ಜನರಿಗೆ ಸಂಕಷ್ಟ ನೀಡಿದೆ.

-ಬಿ.ವೈ ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

ಸಮಾಚಾರ ಸಣ್ಣದಲ್ಲ

ನವ ವಿವಾಹಿತೆ ಆತ್ಮಹತ್ಯೆ

ಗದಗ: ಡೆತ್‌ನೋಟ್ ಬರೆದಿಟ್ಟು ನವ ವಿವಾಹಿತೆ ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡ ಘಟನೆ ಜಿಲ್ಲೆಯ ಬೆಟಗೇರಿ ಶರಣ ಬಸವೇಶ್ವರ ನಗರದಲ್ಲಿ ನಡೆದಿದೆ. ಪೂಜಾ ಅಮರೇಶ ಅಯ್ಯನಗೌಡರ್(27) ಮೃತ ಮಹಿಳೆ. ಪೂಜಾ, ಡೆತಟ್ ಬರೆದಿಟ್ಟು ಮನೆಯಲ್ಲೇ ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಪೂಜಾಗೆ ಅತ್ತೆ ಶಶಿಕಲಾ, ಬಾವ ವೀರನಗೌಡ ಹಾಗೂ ಮಾವ ನಿತ್ಯ ಕಿರುಕುಳ ನೀಡುತ್ತಿ ದ್ದರು. ಆಕೆ ಸ್ವಲ್ಪ ಕಪ್ಪು ಇದ್ದುದ ರಿಂದ ಅತ್ತೆ ಅಪಹಾಸ್ಯ ಮಾಡುತ್ತಿದ್ದರು ಎಂದು ಪೂಜಾ ಕುಟುಂಬಸ್ಥರು ಆರೋಪಿಸಿದ್ದಾರೆ. ಅಲ್ಲದೇ ಅತ್ತೆ, ಮಾವ, ಬಾವ ಒಟ್ಟಾಗಿ ಆಕೆಯನ್ನು ನೇಣು ಹಾಕಿರುವುದಾಗಿ ಕುಟುಂಬಸ್ಥರು ಆರೋಪಿಸಿ, ಬಾವ ವೀರನಗೌಡನಿಗೆ ಥಳಿಸಿದ್ದಾರೆ. ಸ್ಥಳದಲ್ಲಿ ಯುವತಿ ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿದೆ. ಪೂಜಾ, 4 ತಿಂಗಳ ಹಿಂದೆಯಷ್ಟೇ ಅಮರೇಶ ಎಂಬುವವರನ್ನು ಮದುವೆಯಾಗಿದ್ದರು. ಪತಿ ಅಮರೇಶ ಖಾಸಗಿ ಕಂಪನಿಯಲ್ಲಿ ಉದ್ಯೋಗಿಯಾಗಿದ್ದು, ಸೋಮವಾರವಷ್ಟೇ ಚೆನ್ನೈಗೆ ಕೆಲಸಕ್ಕೆ ತೆರಳಿದ್ದರು. ಸ್ಥಳಕ್ಕೆ ಬೆಟಗೇರಿ ಪೊಲೀಸರು ಭೇಟಿ ನೀಡಿ, ಪರಿಶೀಲನೆ ನಡೆಸಿದರು. ಬೆಟಗೇರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿರಾಮ
ಪ್ರತಿ ಭಾನುವಾರ

ಈವರೆಗೆ ಮುಖ್ಯಮಂತ್ರಿ ಸ್ಥಾನದಲ್ಲಿ ಒಕ್ಕಲಿಗ, ಲಿಂಗಾಯತರದ್ದೇ ಪ್ರಾಬಲ್ಯ | ರಾಜಕೀಯ ಸ್ಥಿತ್ಯಂತರಕ್ಕೂ ಕಾರಣವಾಗುವುದೇ ಈ ವರದಿ

ಜಾತಿ ಗಣತಿಯ ಬಳಿಕ ರಾಜಕೀಯ ಅಸ್ತಿತ್ವದಲ್ಲಿಯೂ ಏರುಪೇರು?

ಬೆಂಗಳೂರು: ಕಾಂತರಾಜು ಅವರ ನೇತೃತ್ವದ ಸಾಮಾಜಿಕ ಹಾಗೂ ಶೈಕ್ಷಣಿಕ ಸಮೀಕ್ಷೆಗೆ ಸಂಬಂಧಿಸಿದಂತೆ ತೀವ್ರ ಚರ್ಚೆ ಹಾಗೂ ಪ್ರಬಲ ಸಮುದಾಯಗಳ ಪ್ರಬಲ ವಿರೋಧಕ್ಕೆ ಪ್ರಮುಖ ಕಾರಣ ಭವಿಷ್ಯದ ರಾಜಕೀಯ 'ಸ್ಥಿತ್ಯಂತರ'ದ ಆತಂಕ ಎನ್ನಲಾಗುತ್ತಿದೆ.

ಈವರೆಗೆ ಕರ್ನಾಟಕದಲ್ಲಿ ಒಕ್ಕಲಿಗ ಹಾಗೂ ಲಿಂಗಾಯತ ಸಮುದಾಯದವರೇ ನಿರ್ಣಾ ಯಕ ಎನ್ನುವ ಕಾರಣಕ್ಕೆ ರಾಜಕೀಯವಾಗಿ ಈ ಎರಡು ಸಮುದಾಯವರು ಸದಾ ಆಯಕಟ್ಟಿನ ಸ್ಥಾನದಲ್ಲಿ ಕೂರುತ್ತಿದ್ದರು. ಇದಕ್ಕೆ ಪೂರಕ ಎನ್ನುವಂತೆ ಕಾಂಗ್ರೆಸ್‌ನೊಂದಿಗೆ ಕೆಲ ಸಮುದಾಯ, ಬಿಜೆಪಿಯೊಂದಿಗೆ ಕೆಲವೊಂದಷ್ಟು ಹಾಗೂ ಜೆಡಿಎಸ್‌ನೊಂದಿಗೆ ಇನ್ನುಳಿದ ಸಮುದಾಯ ಎಂದು ಹಂಚಿಕೆಯಾಗಿತ್ತು.

ಆದ ರೀಗ ಜಾತಿ ಗಣತಿಯಿಂದ ಸಮುದಾ ಯವಾರು ಸಂಖ್ಯೆಗಳು ಬಹಿರಂಗವಾ ಗಿರುವುದರಿಂದ, ಭವಿಷ್ಯದಲ್ಲಿ ಈವರೆಗೆ ಇದ್ದ ರಾಜಕೀಯ ಗಣಿತ ಸಂಪೂರ್ಣ ಬದಲಾಗುವ ಸಾಧ್ಯತೆಯಿದೆ ಎನ್ನಲಾಗಿದೆ.

ಸಚಿವ ಸಂಪುಟದಲ್ಲಿ ಮಂಡಿಸಿರುವ ಕೆಲ ಅಂಕಿ-ಅಂಶಗಳು ಬಹಿರಂಗವಾಗಿದೆ. ಇದನ್ನು ಒಪ್ಪುವುದಕ್ಕೆ ಹಲವರ ವಿರೋಧವಿರುವುದರಿಂದ, ಅನುಮೋದನೆಯಾಗುವುದೋ ಅಥವಾ ಮತ್ತೊಂದು ಸುತ್ತಿನ ಪರಿಶೀಲನೆಗೆ ಸರಕಾರ ಮುಂದಾಗುವುದೋ ಎನ್ನುವುದು ಗುರುವಾರ ಬಹಿರಂಗವಾಗಲಿದೆ.

ಆದರೆ ರಾಜಕೀಯವಾಗಿ ಮಾತ್ರ ಈ ವರದಿ ಭಾರಿ ಪರಿಣಾಮ ಬೀರಲಿದೆ ಎನ್ನುವ ಮಾತುಗಳು ಈಗಾಗಲೇ ಶುರುವಾಗಿದೆ.

ಹೆಸರು	ಸಿಎಂ ಆಗಿದ್ದ ಅವಧಿ	ಸಮುದಾಯ
ಎಸ್.ನಿಜಲಿಂಗಪ್ಪ	ನ.1, 1956 ರಿಂದ ಮೇ.15, 1958	ಲಿಂಗಾಯತ
ಬಿ.ಡಿ.ಜತ್ತಿ	ಮೇ.16, 1958 ರಿಂದ ಮಾ.13, 1962	ಲಿಂಗಾಯತ
ಎಸ್.ಆರ್.ಕಂಠಿ	ಮಾ.14, 1962 ರಿಂದ ಜೂ.20, 1962	ಲಿಂಗಾಯತ
ಎಸ್.ನಿಜಲಿಂಗಪ್ಪ	ಜೂ.21, 1962 ರಿಂದ ಮೇ.28 1968	ಲಿಂಗಾಯತ
ವೀರೇಂದ್ರ ಪಾಟೀಲ್	ಮೇ.29, 1968 ರಿಂದ ಮಾ.19, 1971	ಲಿಂಗಾಯತ
ಡಿ.ದೇವರಾಜ್ ಅರಸ್	ಮಾ.20, 1972 ರಿಂದ ಡಿ.31, 1977	ಅರಸು
ಡಿ.ದೇವರಾಜ್ ಅರಸ್	ಫೆ.28, 1978 ರಿಂದ ಜ.11, 1980	ಅರಸು
ಆರ್.ಗುಂಡೂರಾವ್	ಜ.12, 1980 ರಿಂದ ಜ.9, 1983	ಬ್ರಾಹ್ಮಣ
ರಾಮಕೃಷ್ಣ ಹೆಗ್ಡೆ	ಜ.10, 1983 ರಿಂದ ಆ.8, 1988	ಬ್ರಾಹ್ಮಣ
ಎಸ್.ಆರ್.ಬೊಮ್ಮಾಯಿ	ಆ.13,1988 ರಿಂದ ಏ.21, 1989	ಲಿಂಗಾಯತ
ವೀರೇಂದ್ರ ಪಾಟೀಲ್	ನ.30, 1989 ರಿಂದ ಅ.10, 1990	ಲಿಂಗಾಯತ
ಎಸ್.ಬಂಗಾರಪ್ಪ	.17, 1990 ರಿಂದ ನ.18, 1992	ಈಡಿಗ
ಎಂ.ವೀರಪ್ಪ ಮೊಯ್ಲಿ	ನ.19, 1992 ರಿಂದ ಡಿ.10, 1994	ದೇವಡಿಗ
ಎಚ್.ಡಿ.ದೇವೇಗೌಡ	ಡಿ.11, 1994 ರಿಂದ ಮೇ.30, 1996	ಒಕ್ಕಲಿಗ

ಲಿಂಗಾಯತ,ಒಕ್ಕಲಿಗರನ್ನು ಕೈಬಿಡದ ಸ್ಥಿತಿಯಲ್ಲಿ ಕೈ: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಡಿಸಿರುವ ಜಾತಿ ಗಣತಿಯಿಂದ, ಲಿಂಗಾಯತ-ಒಕ್ಕಲಿಗ ಸಮುದಾಯದ ಕೆಂಗಣ್ಣಿಗೆ ಕಾರಣವಾಗಿದೆ. ಆದರೆ ಸದ್ಯದ ಪರಿಸ್ಥಿತಿಯಲ್ಲಿ ಕಾಂಗ್ರೆಸ್ ಲಿಂಗಾಯತ ಹಾಗೂ ಒಕ್ಕಲಿಗ ಸಮುದಾಯವನ್ನು ಕೈಬಿಟ್ಟು ಚುನಾವಣೆ ಹೋಗುವ ಪರಿಸ್ಥಿತಿಯಲ್ಲಿಲ್ಲ. ಕಾಂಗ್ರೆಸ್‌ನೊಂದಿಗೆ ಮುಸ್ಲಿಮರು ಶೇ.88ರಷ್ಟು ನಿಂತಿದ್ದರೆ, ಕುರುಬ ಸಮುದಾಯ ಶೇ.66ರಷ್ಟು, ಪರಿಶಿಷ್ಟ ಜಾತಿ 60, ಪಂಗಡ 40ರಷ್ಟು ಜತೆಗಿದ್ದಾರೆ. ಆದ್ದರಿಂದ ಅಹಿಂದ ಸಮುದಾಯವನ್ನು ಜತೆಯಾಗಿ ತೆಗೆದುಕೊಂಡು ಹೋದರೆ ಮಾತ್ರ, ಪಕ್ಷಕ್ಕೆ ಅನುಕೂಲವಾಗಲಿದೆ. ಆದರೆ ಒಂದು ವೇಳೆ ಒಕ್ಕಲಿಗ-ಲಿಂಗಾಯತ ಸಮುದಾಯಗಳೆರಡೂ ಒಂದಾಗಿ ಕಾಂಗ್ರೆಸ್ ಅನ್ನು ವಿರೋಧಿಸಿದರೆ ಪಕ್ಷಕ್ಕೆ ಸಮಸ್ಯೆಯಾಗಲಿದೆ ಎನ್ನುವುದು ರಾಜಕೀಯ ವಿಶ್ಲೇಷಕರ ಅಭಿಪ್ರಾಯವಾಗಿದೆ.

ಹೆಸರು	ಸಿಎಂ ಆಗಿದ್ದ ಅವಧಿ	ಸಮುದಾಯ
ಜೆ.ಎಚ್.ಪಟೇಲ್	ಮೇ.31, 1996 ರಿಂದ ಅ.10, 1999	ಲಿಂಗಾಯತ
ಎಸ್.ಎಂ.ಕೃಷ್ಣ	ಅ.11, 1999 ರಿಂದ ಮೇ.27, 2004	ಒಕ್ಕಲಿಗ
ಧರ್ಮ ಸಿಂಗ್	ಮೇ.28, 2004 ರಿಂದ ಫೆ.2, 2006	ರಜಪೂತ್
ಎಚ್.ಡಿ.ಕುಮಾರಸ್ವಾಮಿ	ಫೆ.3, 2006 ರಿಂದ ಅ.11, 2007	ಒಕ್ಕಲಿಗ
ಬಿ.ಎಸ್.ಯಡಿಯೂರಪ್ಪ	ನ.12, 2007 ರಿಂದ ನ.19, 2007	ಲಿಂಗಾಯತ
ಬಿ.ಎಸ್.ಯಡಿಯೂರಪ್ಪ	ಮೇ.30, 2008 ರಿಂದ ಆ.3, 2011	ಲಿಂಗಾಯತ
ಸದಾನಂದ ಗೌಡ	ಆ.4, 2011 ರಿಂದ ಜು.12, 2012	ಒಕ್ಕಲಿಗ
ಜಗದೀಶ್ ಶೆಟ್ಟರ್	ಜು.12, 2012 ರಿಂದ ಮೇ.12, 2013	ಲಿಂಗಾಯತ
ಸಿದ್ದರಾಮಯ್ಯ	ಮೇ.13, 2013 ರಿಂದ ಮೇ.16, 2018	ಕುರುಬ
ಬಿ.ಎಸ್.ಯಡಿಯೂರಪ್ಪ	ಜು.26, 2018 ರಿಂದ ಮೇ.22, 2018	ಲಿಂಗಾಯತ
ಎಚ್.ಡಿ.ಕುಮಾರಸ್ವಾಮಿ	ಮೇ.23, 2018 ರಿಂದ ಜು.25, 2019	ಒಕ್ಕಲಿಗ
ಬಿ.ಎಸ್.ಯಡಿಯೂರಪ್ಪ	ಜು.26, 2019 ರಿಂದ ಜು.21, 2021	ಲಿಂಗಾಯತ
ಬಸವರಾಜ ಬೊಮ್ಮಾಯಿ	ಜು.28, 2021 ರಿಂದ ಮೇ.17, 2023	ಲಿಂಗಾಯತ
ಸಿದ್ದರಾಮಯ್ಯ	ಮೇ.18, 2023 ರಿಂದ ಏ.14, 2025	ಕುರುಬ

ಸಿಎಂ ಸ್ಥಾನದಲ್ಲಿ ಒಕ್ಕಲಿಗ, ಲಿಂಗಾಯತರದ್ದೇ ಪ್ರಾಬಲ್ಯ

ಕರ್ನಾಟಕದಲ್ಲಿ ಲಿಂಗಾಯತ ಹಾಗೂ ಒಕ್ಕಲಿಗರ ನಿರ್ಣಾಯಕ ಎನ್ನುವ 'ಸಾಮಾನ್ಯ' ಮಾತಿನ ರೀತಿಯಲ್ಲಿ ರಾಜ್ಯ ರಾಜಕೀಯವೂ ನಡೆದುಕೊಂಡು ಬಂದಿದೆ. 1956ರಿಂದ 2025ರವರೆಗೆ ರಾಜ್ಯದ ಮುಖ್ಯಮಂತ್ರಿ ಸ್ಥಾನದ ಚುಕ್ಕಾಣಿ ಏರಿದವರನ್ನು ಗಮನಿಸಿದರೆ, ಶೇ.54ರಷ್ಟು ಸಮಯ ಒಕ್ಕಲಿಗ, ಲಿಂಗಾಯತ ಸಮುದಾಯದವರೇ ಇದ್ದಾರೆ. ಅದರಲ್ಲಿಯೂ 1956ರಿಂದ 1971ರವರೆಗೆ ಲಿಂಗಾಯತ ಸಮುದಾಯದವರೇ ರಾಜ್ಯವನ್ನು ಆಳಿದ್ದಾರೆ. ಇನ್ನುಳಿದ ಒಕ್ಕಲಿಗ ಸಮುದಾಯದ ದೇವೇಗೌಡ, ಎಸ್.ಎಂ. ಕೃಷ್ಣ, ಸದಾನಂದಗೌಡ, ಕುಮಾರಸ್ವಾಮಿ ಆಳಿದ್ದಾರೆ. ಇನ್ನು ಹಿಂದುಳಿದ ವರ್ಗದ ದೇವರಾಜ ಅರಸು, ಸಿದ್ದರಾಮಯ್ಯ ಅವರೂ ಅತಿಹೆಚ್ಚು ಸಮಯ ಆಳಿದ್ದಾರೆ. ಆದರೆ ಇದೀಗ ಹಿಂದುಳಿದ ವರ್ಗ ಹಾಗೂ ಪರಿಶಿಷ್ಟ ಪ್ರಾಬಲ್ಯ ಹೆಚ್ಚಿದೆ ಎಂದಾದರೆ ಭವಿಷ್ಯದಲ್ಲಿ ಈ ಸಮುದಾಯದವರೂ ಮುಖ್ಯಮಂತ್ರಿ ಸ್ಥಾನಕ್ಕೆ 'ಹಕ್ಕು' ಸ್ಥಾಪಿಸುವ ಸಾಧ್ಯತೆ ದಟ್ಟವಾಗಿದೆ ಎನ್ನಲಾಗಿದೆ.

ವಿಶ್ವವಾಣಿ

ಸಂಪಾದಕೀಯ

ವಂಚಕರಿಗೆ ಇನ್ನು ಉಳಿಗಾಲವಿಲ್ಲ

2008ರ ಮುಂಬೈ ಭಯೋತ್ಪಾದಕ ದಾಳಿಯ ಪ್ರಮುಖ ಸಂಚುಕೋರ ತಹಾವ್ವುರ್ ರಾಣಾನನ್ನು ರಾಷ್ಟ್ರೀಯ ತನಿಖಾ ಸಂಸ್ಥೆಯ ಅಧಿಕಾರಿಗಳು ಈಗಾಗಲೇ ವಿಚಾರಣೆಗೆ ಒಳಪಡಿಸಿದ್ದಾರೆ. ಈ ಕುಕೃತ್ಯಕ್ಕೆ ಯಾವೆಲ್ಲಾ ಶಕ್ತಿಗಳು ಕೈಜೋಡಿಸಿದ್ದವು ಎಂಬುದು ಈ ವಿಚಾರಣೆಯ ವೇಳೆ ಬಯಲಾಗಲಿದೆ ಮತ್ತೊಂದೆಡೆ, ಪಂಜಾಬ್ ನ್ಯಾಷನಲ್ ಬ್ಯಾಂಕ್‌ನಿಂದ 6000 ಕೋಟಿ ರುಪಾಯಿಗೂ ಹೆಚ್ಚಿನ ಸಾಲ ಪಡೆದು ನಾಮ ಹಾಕಿ ಭಾರತದಿಂದ ಪಲಾಯನ ಮಾಡಿದ್ದ ಮೆಹುಲ್ ಚೋಕ್ಸಿಯು ಬೆಲ್ಜಿಯಂನಲ್ಲಿ ಬಂಧನಕ್ಕೊಳಗಾಗಿದ್ದು ಈತನನ್ನೂ ಹೆಡೆಮುರಿ ಕಟ್ಟಿ ಭಾರತಕ್ಕೆ ಎಳೆತರುವ ಕಾಲ ಸನ್ನಿಹಿತವಾಗಿದೆ. ನಮ್ಮ ದೇಶದ ವ್ಯವಸ್ಥೆಯಲ್ಲಿರಬಹುದಾದ ನ್ಯೂನತೆಗಳನ್ನು ಬಳಸಿಕೊಂಡು ಹೇಗೆ ಬೇಕಾದರೂ ಮೆರೆಯಬಹುದು ಎಂಬ ಭ್ರಮೆಯಿಟ್ಟುಕೊಂಡು ಆಟ ಆಡಿದವರಿಗೆ ಮತ್ತು ಆಡುತ್ತಿರುವವರಿಗೆ, ಸಾಲ ಪಡೆದ ಬ್ಯಾಂಕುಗಳಿಗೆ ವಂಚಿಸಿ ಭಾರತದಿಂದ ಪರಾರಿಯಾಗಿ, ದೂರದೇಶದಲ್ಲೆಲ್ಲೋ ಕೂತು ಐಷಾರಾಮಿ ಜೀವನ ನಡೆಸುತ್ತಿರುವ 'ಪ್ರಭಾವಿ'ಗಳಿಗೆ ಈ ಎರಡು ಬೆಳವಣಿಗೆಗಳು ಎಚ್ಚರಿಕೆ ಗಂಟೆಯಾಗಬೇಕು ಹಾಗೂ 'ಕಾನೂನಿನ ಕೈಗಳು ತುಂಬಾ ಉದ್ದವಾಗಿರುತ್ತವೆ ಮತ್ತು ಕಣ್ಣುಗಳು ತುಂಬಾ ತೀಕ್ಷ್ಣವಾಗಿರುತ್ತವೆ' ಎಂಬ ಕಹಿಸತ್ಯದ ರುಚಿ ಇಂಥವರಿಗೆ ಗೊತ್ತಾಗುವಂತಾಗಬೇಕು. ಇಲ್ಲವಾದಲ್ಲಿ, 'ಹಣ-ಅಧಿಕಾರ-ಪ್ರಭಾವ ಇದ್ದುಬಿಟ್ಟರೆ ಈ ದೇಶದಲ್ಲಿ ಏನು ಬೇಕಾದರೂ ಅಕ್ರಮವೆಸಗಿ ದಕ್ಕಿಸಿಕೊಳ್ಳಬಹುದು' ಎಂಬ ಗ್ರಹಿಕೆಯೇ ಕೆಲವರ ಪಾಲಿಗೆ ಸ್ಥಾಯಿಯಾಗಿ ಬಿಡುತ್ತದೆ. 'ದೇವರ ನ್ಯಾಯ ನೀಡಿಕೆಯಲ್ಲಿ ವಿಳಂಬವಾಗಬಹುದು, ಆದರೆ ಅಲ್ಲಿ ಅನ್ಯಾಯಕ್ಕಂತೂ ಆಸ್ಪದವಿಲ್ಲ' ಎಂಬರ್ಥದ ಮಾತೊಂದು ನಮ್ಮಲ್ಲಿ ಚಾಲ್ತಿಯಲ್ಲಿದೆ. ಈ ಮಾತಿಗೆ ಪುಷ್ಟಿ ನೀಡುವಂತೆ, ಕೆಲ ವರ್ಷಗಳ ನಂತರವಾದರೂ 'ವಂಚಕ-ಮಿಕ'ಗಳು ಸಿಕ್ಕಿಬೀಳುತ್ತಿವೆ. ಆರ್ಥಿಕ ನೆಲೆಯಲ್ಲಾಗಲೀ ಸಾಮಾಜಿಕ ನೆಲೆಯಲ್ಲಾಗಲೀ ಭಾರತಕ್ಕೆ ವಂಚಿಸಿದರೆ ಇನ್ನು ಉಳಿಗಾಲವಿಲ್ಲ ಎಂಬುದು ದುರುಳರಿಗೆ ಅರ್ಥವಾದರೆ ಸಾಕು!

ಸೊಂಪಾದಕೀಯ

ಪಂಚರ್ ಆದ ಸರಪಂಚ

ಸಾರ್ವಜನಿಕ ವಾಹನಗಳಲ್ಲಿ ಓಡಾಡೋ ತೊಂದರೆನೇ ಬೇಡ ಅಂತ ಸ್ವಂತ ವಾಹನ ಖರೀದಿ ಮಾಡ್ತಾರೆ ಬಹುತೇಕ ಜನ. ಆದರೆ ಈ ವಾಹನಗಳ ತಲೆನೋವು ಅಷ್ಟಿಷ್ಟಲ್ಲ. ಅದಕ್ಕೆ ದುಡ್ಡು ಕೊಟ್ಟು ಖರೀದಿಸಿ ಟ್ಯಾಕ್ಸ್ ಕಟ್ಟಿ ರೋಡಿಗಿಳಿದರೂ ಸಮಸ್ಯೆ ತೀರಲ್ಲ. ಪೆಟ್ರೋಲ್ ಡೀಸೆಲ್ ಹಾಕಿಸೋದು, ಸರ್ವೀಸ್ ಮಾಡಿಸೋದು ಒಂದು ಕಡೆ ತಲೆನೋವಾದರೆ ಅದಕ್ಕಿಂತ ದೊಡ್ಡ ತಲೆನೋವು ಅಂದ್ರೆ ಟ್ರಾಫಿಕ್ ಪೊಲೀಸರದ್ದು. ಎಲ್ಲ ಸರಿ ಇದ್ರೂ ಏನಾದ್ರೂ ನೆಪ ಹುಡುಕಿ ನಿಮ್ಮ ಹೆಸರಲ್ಲಿ ಚಲನ್ ಕಟ್ ಮಾಡಿ ಫೈನ್ ಕಟ್ಟಿ ಅಂತಾರೆ. ಇಂಥದ್ದೇ ಒಂದು ಪ್ರಕರಣದಲ್ಲಿ ಉತ್ತರಪ್ರದೇಶದ ಕಾರು ಚಾಲಕ ಸಂತ್ರಸ್ತನಾಗಿದ್ದಾನೆ. ಆತ ಟಾಟಾ ಪಂಚ್ ಕಾರು ಖರೀದಿಸಿದ್ದ. ಅವನು ಸರಪಂಚ ಅಂತೆ. ಜತೆಗೆ ಗುರ್ಜರ್ ಜಾತಿಗೆ ಸೇರಿದವ. ಹಾಗಾಗಿ ತನ್ನ ಕ್ರಿಯೇಟಿವಿಟಿ ತೋರಿಸಿ 'ಪಂಚ್' ಅನ್ನೋ ಕಾರಿನ ಹೆಸರಿನ ಹಿಂದೆ 'ಸರ್' ಅಂತ ಹಾಕಿ, 'ಪಂಚ್' ಮುಂದೆ 'ಜೀ' ಅಂತ ಹಾಕಿ ಅದನ್ನು 'ಸರಪಂಚ್ ಜೀ' ಅಂತ ಮಾಡಿದ್ದ. ಜತೆಗೆ ಗುರ್ಜರ್ ಅನ್ನೋ ತನ್ನ ಜಾತಿಯ ಸೂಚಕವನ್ನು ಹಾಕಿಕೊಂಡಿದ್ದ. ಅದನ್ನು ನೋಡಿ ಅವನಿಗೆ ಟ್ರಾಫಿಕ್ ಪೊಲೀಸರು ಪಂಚನಾಮೆ ಮಾಡದೆಯೇ ಫೈನ್ ಹಾಕುವ ಮೂಲಕ ಪಂಚ್ ಕಜ್ಜಾಯ ಕೊಟ್ಟಿದ್ದಾರೆ. ಇದಕ್ಕೆ ಕಾರಣ ಉತ್ತರ ಪ್ರದೇಶದ ಕಾನೂನು. ಅಲ್ಲಿನ ಕಾನೂನುಗಳು ಯಾವಾಗ್ಲೂ ಡಿಫ್ರೆಂಟ್ ಬಿಡಿ. ಅಲ್ಲಿ ವಾಹನಗಳ ಮೇಲೆ ತಮ್ಮ ಜಾತಿ, ಧರ್ಮವನ್ನು ಬರೆಸುವಂತಿಲ್ಲ ಅನ್ನೋ ಕಾನೂನು ತರಲಾಗಿದೆಯಂತೆ. ಅದು ಈ ತರಲೆಗೆ ಕಾರಣ ಆಗಿದೆ. ಇಂಥ ಕಾನೂನೇನಾದರೂ ಕರ್ನಾಟಕದಲ್ಲಿ ಬಂದರೆ ಏನು ಗತಿ ಅಂತ ನಮ್ಮ ಪೊಲೀಸರು ಯೋಚನೆ ಮಾಡುತ್ತಿದ್ದಾರೆ. ಯಾಕಂದ್ರೆ ಜಾತಿ ಹೇಳಿಕೊಳ್ಳೋದ್ರಲ್ಲಿ ನಮ್ಮ ಜನ ಎತ್ತಿದ ಕೈ. ಗಾಡಿಗಳ ಮೇಲೆ ಆ ಊರಿನ ಗೌಡ್ರು, ಈ ಊರಿನ ಗೌಡ್ರು ಅಂತ ಮೀಸೆ ತಿರುವುವವರ ಸಂಖ್ಯೆ ಕಮ್ಮಿ ಏನಿಲ್ಲ. ಅವರಿಗೆಲ್ಲ ಉತ್ತರ ಪ್ರದೇಶದಂತೆ ಫೈನ್ ಹಾಕ್ತಾ ಹೋದ್ರೆ ಪೊಲೀ ಸರು ಮತ್ತು ವಾಹನ ಸವಾರರ ನಡುವೆ ರಸ್ತೆಯಲ್ಲೇ ಕುರುಕ್ಷೇತ್ರ ನಡೆದು ಆ ಬಸವಣ್ಣನವರು ಬಂದ್ರೂ ತಡೆಯೋಕಾಗಲ್ಲ ಅನ್ನೋದಂತೂ ಗ್ಯಾರಂಟಿ.

ಸಂಪಾದಕರ ಸದ್ಯಶೋಧನೆ

ಟೋಕಿಯೋ: ನೀರಿನ ನಗರ

ಜಪಾನ್ ರಾಜಧಾನಿ ಟೋಕಿಯೋ, ವಿಶ್ವದ ಅತಿ ದೊಡ್ಡ ನಗರಗಳಲ್ಲಿ ಒಂದು. ಇದನ್ನು ಬಹುತೇಕರು ಆಧುನಿಕತೆಯ ಸಂಕೇತವಾಗಿ, ತಂತ್ರಜ್ಞಾನ, ಭೌತಿಕ ಮೂಲಸೌಕರ್ಯ ಮತ್ತು ಜನಸಂಚಾರದ ತಾಣವಾಗಿ ಮಾತ್ರ ಕಾಣುತ್ತಾರೆ. ಆದರೆ ಬಹಳಷ್ಟು ಜನರಿಗೆ ಗೊತ್ತಿಲ್ಲದ ಸಂಗತಿಯೆಂದರೆ, ಟೋಕಿಯೋ ಒಂದು 'ನೀರಿನ ನಗರ'ವೂ ಹೌದು. ಇಲ್ಲಿನ ನದಿ, ಕಾಲುವೆ, ಜಲಾಶಯಗಳು ಮತ್ತು ಇತಿಹಾಸ ನೀರಿನ ಸುತ್ತಲೇ ತಿರುಗುತ್ತಿವೆ. ಟೋಕಿಯೋ ಮೊದಲು ಎಡೊ ಎಂಬ ಹೆಸರಿನಿಂದ ಪ್ರಸಿದ್ಧವಿತ್ತು. 1603ರಲ್ಲಿ ಟೋಕುಗಾವಾ ಇಯಾಸು ಶೋಗುನರ ಆಡಳಿತವನ್ನು ಸ್ಥಾಪಿಸಿದಾಗ, ಎಡೊ ಶಕ್ತಿಶಾಲಿ ರಾಜಧಾನಿಯಾಗಿ ಬೆಳೆಯಿತು. ಆ ಕಾಲದಲ್ಲಿ ತಕ್ಷಣವೇ ಮುಖ್ಯವಾದ ಅಗತ್ಯವಾಗಿದ್ದು ನೀರಿನ ವ್ಯವಸ್ಥೆ. ಶೋಧನೆ ಮತ್ತು ಸಾಗಣೆಗೆ ನದಿಗಳು ಅಷ್ಟೇ ಮುಖ್ಯವಾಗಿದ್ದುವು. ಸುಮಿದಾಗವಾ ನದಿ ಮತ್ತು ಇತರ ಉಪನದಿಗಳು ನಗರ ಬದುಕಿನ ಹೃದಯವಾಗಿದ್ದವು. ಇವುಗಳ ಮೂಲಕ ಎಡೊ ನಗರಕ್ಕೆ ಆಹಾರ ಸಾಮಗ್ರಿ ಮತ್ತಿತರ ಅಗತ್ಯ ವಸ್ತುಗಳನ್ನು ಸಾಗಿಸಲಾಗುತ್ತಿತ್ತು. ಕಾಲುವೆಗಳನ್ನು ನಿರ್ಮಿಸುವ ಮೂಲಕ, ನೀರನ್ನು ಮಾತ್ರವಲ್ಲದೇ ಸಾಗಣೆಯ ವ್ಯವಸ್ಥೆಯನ್ನೂ ಸುಧಾರಿಸಲಾಯಿತು. ಟೋಕಿಯೋದ ಭೌಗೋಳಿಕ ಅಂಶವನ್ನು ನೋಡಿದರೆ, ಇದು ನೀರಿನಿಂದ ಆವೃತವಾದ ಪ್ರದೇಶ ಎಂಬುದು ಗೊತ್ತಾಗುತ್ತದೆ. ಇದನ್ನು 'East Capital on Water' ಎಂದೂ ಕರೆದಿದ್ದಾರೆ. ಟೋಕಿಯೋದಲ್ಲಿರುವ ನದಿಗಳಲ್ಲಿ ಅರಾಕಾವಾ ಕೂಡ ಒಂದು. ಅದು ಬಹುದೊಡ್ಡ ನದಿ, ಸುರಿಮಳೆ ಸಮಯದಲ್ಲಿ ಪ್ರವಾಹ ನಿಯಂತ್ರಣ ಸಹ ಅಗತ್ಯ ಕ್ರಮಗಳಲ್ಲೊಂದು. ಹಾಗೆಯೇ ತಾಮಾಗಾವಾ ನದಿ ಟೋಕಿಯೋಗೆ ಕುಡಿಯುವ ನೀರನ್ನು ಪೂರೈಸುವ ಪ್ರಮುಖ ಮೂಲವಾಗಿದೆ. ಟೋಕಿಯೋದ ಕೇಂದ್ರದಲ್ಲಿ ಹರಿಯುವ ಸುಮಿದಾಗವಾ ನದಿ, ಇತಿಹಾಸ, ಪ್ರವಾಸೋದ್ಯಮ ಹಾಗೂ ಸಂಸ್ಕೃತಿಯಲ್ಲಿ ಪ್ರಮುಖ ಪಾತ್ರವಹಿಸಿದೆ. ಹಲವು ನಾವಿಕ ಸೇವೆಗಳ ಕೇಂದ್ರವೂ ಇದಾಗಿದೆ. ಟೋಕಿಯೋದಲ್ಲಿ ವಾಸಿಸುವ ಮೂರೂವರೆ ಕೋಟಿ ಜನರಿಗೆ ಪ್ರತಿದಿನವೂ ಶುದ್ಧ ಕುಡಿಯುವ ನೀರು ಪೂರೈಸುವುದು ಸಾಮಾನ್ಯ ಕೆಲಸವಲ್ಲ. ಟಾಮಾ ಮತ್ತು ಇನಬಾ ಜಲಾಶಯಗಳು ಟೋಕಿಯೋದ ಮುಖ್ಯ ನೀರಿನ ಮೂಲಗಳಾಗಿವೆ. ಟೋಕಿಯೋ ಮೆಟ್ರೊಪಾಲಿಟನ್ ಗವರ್ನ್ಮೆಂಟ್ (TMG) ನಿರ್ವಹಿಸುವ ನೀರಿನ ಶುದ್ಧೀಕರಣ ಘಟಕಗಳು (Water purification plants) ಅತ್ಯಾಧುನಿಕ ಯಂತ್ರೋಪಕರಣಗಳಿಂದ ಕೂಡಿದ್ದು ಇವು ಸಹ ಪ್ರಮುಖ ನೀರಿನ ಮೂಲಗಳಾಗಿವೆ. ಇಲ್ಲಿ ನೀರಿನ ವ್ಯರ್ಥದ ಪ್ರಮಾಣ ಕಡಿಮೆ ಇರುವುದು ಮತ್ತು ಪುನಃ ಬಳಸುವ ನೀರಿನ ಪ್ರಮಾಣ ಹೆಚ್ಚು. ಟೋಕಿಯೋ ಕಡಲ ತೀರದಲ್ಲಿರುವುದರಿಂದಾಗಿ ಪ್ರವಾಹದ ಅಪಾಯವೂ ಹೆಚ್ಚಿದೆ. ಈ ಸಮಸ್ಯೆಗೆ ತೀವ್ರ ಯೋಜನೆಗಳನ್ನು ಜಾರಿಗೆ ತಂದಿದ್ದಾರೆ. The Metropolitan Area Outer Underground Discharge Channelವಿಶ್ವದ ಅತಿ ದೊಡ್ಡ ಭೂಗತ ಜಲಚಾನಲ್ ಯೋಜನೆಯಾಗಿದ್ದು, ಟೋಕಿಯೋಗೆ ಪ್ರವಾಹ ಬಂದಾಗ ಹೆಚ್ಚಿನ ನೀರನ್ನು ಭೂಗತ ಸಾರಣಿಯಿಂದ ಹೊರಹಾಕಲು ಬಳಸಲಾಗುತ್ತದೆ. ಭೂಗತ ಜಲ ಸಂಗ್ರಹಣೆ ಮತ್ತು ಚಾಲನೆ ಮಳೆಗಾಲದ ಸಮಯದಲ್ಲಿ ಒತ್ತಡದ ಸ್ಥಿತಿಯನ್ನು ತಡೆಯಲು, ನಗರದಲ್ಲಿ ಹಲವಾರು ಅಂಡರ್‌ಗ್ರೌಂಡ್ ವಾಟರ್ ಟ್ಯಾಂಕ್ಸ್ ನಿರ್ಮಿಸಲಾಗಿದೆ. ನದಿ ತಟದ ಸುಧಾರಣೆ ಪ್ರವಾಹದ ವೇಗ ಕಡಿಮೆ ಮಾಡುವ ಉದ್ದೇಶದಿಂದ ನದಿ ತಟಗಳನ್ನು ಗಟ್ಟಿ ಮಾಡಲಾಗಿದೆ ಮತ್ತು ನದಿಯ ಹರಿವಿಗೆ ತಡೆಯಿಲ್ಲದೆ ನಿರ್ವಹಣೆ ಮಾಡಲಾಗಿದೆ. ಟೋಕಿಯೋದ ನೀರಿನ ಮೂಲಗಳು ಪ್ರವಾಸಿಗರಿಗೆ ಆಕರ್ಷಣೆಯ ಕೇಂದ್ರವಾಗಿವೆ. ಸುಮಿದಾಗವಾ ನದಿ ಕ್ರೂಜ್ (Sumida River Cruise) ಪ್ರವಾಸಿಗರು ಬೋಟ್‌ನಲ್ಲಿ ನದಿಯ ಬದಿಯಲ್ಲಿ ಇತಿಹಾಸಪೂರ್ಣ ಕಟ್ಟಡಗಳನ್ನು, ಸಕುರಾ ಹೂಗಳ ಋತುವಿನಲ್ಲಿ ವಿಶೇಷ ದೃಶ್ಯಾವಳಿಗಳನ್ನು ಅನುಭವಿಸಬಹುದು. ಪೂರಾ ನಗರವು ನೀರಿನೊಂದಿಗೆ ಕಲಾತ್ಮಕವಾಗಿ ಬೆಸೆದು ಬೆಳೆದಿದೆ. ಜಪಾನಿ ಚಿತ್ರಕಲೆ, ಕವಿತೆ, ಸಂಗೀತ ಇತ್ಯಾದಿಗಳಲ್ಲಿ ನೀರಿನ ಆಕೃತಿ, ನದಿಗಳ ಶಾಂತಿ ಹಾಗೂ ತರಂಗಗಳ ಶಕ್ತಿಯು ವ್ಯಕ್ತವಾಗಿದೆ. ಟೋಕಿಯೋ ತನ್ನ ನೀರಿನ ನಿರ್ವಹಣಾ ಮಾದರಿಯಿಂದ ಇತರೆ ನಗರಗಳಿಗೆ ಪ್ರೇರಣೆ ನೀಡಿದೆ. ನಿರ್ವಹಣೆ, ಶುದ್ಧೀಕರಣ ಮತ್ತು ಪ್ರವಾಹ ನಿಯಂತ್ರಣದ ಕ್ಷೇತ್ರಗಳಲ್ಲಿ ಈ ನಗರ ಮುಂದಿರುವ ಮಾದರಿಯಾಗಿದೆ. ನಿರಂತರವಾಗಿ ಬೆಳೆಯುತ್ತಿರುವ ನಗರದಲ್ಲಿ ನೀರಿನ ಬೇಡಿಕೆ ಕೂಡ ಹೆಚ್ಚುತ್ತಿದೆ. ಟೋಕಿಯೋದ ಬೆಳವಣಿಗೆಗೆ ನೀರಿನ ಪಾತ್ರ ಅಮೂಲ್ಯವಾಗಿದೆ. ಇತಿಹಾಸ, ವಾಣಿಜ್ಯ, ಪ್ರವಾಸೋದ್ಯಮ, ಆರೋಗ್ಯ, ಭದ್ರತೆ ಎಲ್ಲವೂ ನೀರಿನಿಂದಲೇ ನಿರ್ಧಾರವಾಗುತ್ತಿದೆ. ಈ ನಗರವನ್ನೇ 'ಸ್ಮಾರ್ಟ್ ವಾಟರ್ ಸಿಟಿ' ಎನ್ನುತ್ತಾರೆ. ನೀರನ್ನು ಉಳಿಸುವ, ಬದಲಾಯಿಸುವ, ಸಂರಕ್ಷಿಸುವ ಕಾರ್ಯದಲ್ಲಿ ಟೋಕಿಯೋ ನಮ್ಮೆಲ್ಲರಿಗೊಂದು ಮಾದರಿ.

ಕ್ಷಯ ಚಿಕಿತ್ಸೆಯು ನಡೆದು ಬಂದ ದಾರಿ

ಹಿಂದಿರುಗಿ ನೋಡಿದಾಗ

ಡಾ. ನಾ.ಸೋಮೇಶ್ವರ
vveditoped@gmail.com

ಕ್ಷಯ ಬ್ಯಾಕ್ಟೀರಿಯವು ಪೂರ್ವ ಆಫ್ರಿಕದಲ್ಲಿ ಸುಮಾರು 30,000 ವರ್ಷಗಳ ಹಿಂದೆ ಹುಟ್ಟಿರಬಹುದು. ಇದು ಮನುಕುಲವನ್ನು ನವಶಿಲಾಯುಗದಿಂದ ಕಾಡುತ್ತಿದೆ ಎನ್ನುವುದಕ್ಕೆ ಪುರಾವೆಯು ಈಜಿಪ್ಟಿನ ಮಮ್ಮಿಗಳಲ್ಲಿ (ಕ್ರಿ.ಪೂ.3000) ದೊರೆತಿದೆ. ರಾಬರ್ಟ್ ಬರ್ನ್ಸ್, ಜಾನ್ ಕೀಟ್ಸ್, ಬೈರನ್, ಶೆಲ್ಲಿ, ಆಂಟನ್ ಚೆಕಾವ್, ಫ್ರಾಂಜ್ ಕಾಫ್ಕ, ಡಿ.ಎಚ್.ಲಾರೆನ್ಸ್, ಜಾರ್ಜ್ ಆರ್ವೆಲ್, ಅಲೆಕ್ಸಾಂಡರ್ ಪೋಪ್, ಅಲೆಗ್ಸಾಂಡರ್ ಗ್ರಹಾಮ್ ಬೆಲ್, ಫ್ಲಾರೆನ್ಸ್ ನೈಟಿಂಗೇಲ್, ಜಾನ್ ರಸ್ಕಿನ್, ರಾಬರ್ಟ್ ಲೂಯಿ ಸ್ಟೀವನ್ಸನ್, ಶೋಪಿನ್, ಇಮ್ಯಾನ್ಯುಯಲ್ ಕಂಟ್, ಡಿಮಿಟ್ರೀ ಮೆಂಡಲೀವ್, ನಥಾನಿಯಲ್ ಹಾಥೋರ್ನ್, ಹೆನ್ರಿ ಡೇವಿಡ್ ಥೋರು, ಇಮ್ಮಡಿ ನೆಪೋಲಿಯನ್, ಮುಹಮ್ಮದ್ ಅಲಿ ಜಿನ್ನ, ಪೇಶ್ವ ಮಾಧವರಾವ್-1, ನೆಲ್ಸನ್ ಮಂಡೇಲ, ಹೋ ಚಿ ಮಿನ್, ಆನಂದಿ ಗೋಪಾಲ ಜೋಷಿ (ಪ್ರಥಮ ಭಾರತೀಯ ವೈದ್ಯೆ), ಶ್ರೀನಿವಾಸ ರಾಮಾನುಜನ್, ನಂದಳಿಕೆಯ ನಾರಣಪ್ಪ (ಮುದ್ದಣ) ಮುಂತಾದವರೆಲ್ಲ ಈ ಮಾರಕ ರೋಗಕ್ಕೆ ಬಲಿಯಾದವರು.

ಈ ಮಾರಕ ರೋಗವನ್ನು ನಿಯಂತ್ರಣದಲ್ಲಿ ಇಟ್ಟುಕೊಳ್ಳಲು ನೆರವಾದ ಪ್ರಾತಃಸ್ಮರಣೀಯ ವೈದ್ಯರು, ಸಂಶೋಧಕರು ಹಾಗೂ ಅವರ ಸೇವೆಯನ್ನು ಕೃತಜ್ಞತೆಯಿಂದ ಸ್ಮರಿಸಿಕೊಳ್ಳುವುದು ನಮ್ಮ ಕರ್ತವ್ಯವಾಗಿದೆ. ಅಂಥವರಲ್ಲಿ ಬಹಳ ಮುಖ್ಯವಾಗಿರುವವರ ಕೊಡುಗೆಯನ್ನು ಸಂಕ್ಷಿಪ್ತವಾಗಿ ಗಮನಿಸೋಣ.

ಡಾ.ರೆನೆ ಥಿಯೋಫೈಲ್ ಹಯಾಸಿಂಥ್ ಲೆನೆಕ್ (1781-1826) ಓರ್ವ ಫ್ರೆಂಚ್ ವೈದ್ಯ ಹಾಗೂ ಸಂಗೀತ ಕೋವಿದ. ಇವನು ತನಗೆ ಅಗತ್ಯವಾಗಿದ್ದ ಕೊಳಲನ್ನು ತಾನೇ ಸಿದ್ಧಪಡಿಸಿಕೊಳ್ಳುತ್ತಿದ್ದ. ಒಮ್ಮೆ ಓರ್ವ ದಢೂತಿ ಹೆಂಗಸಿನ ಸ್ತನದ ಮೇಲೆ ಕಿವಿಯನ್ನಿಟ್ಟು ಆಕೆಯ ಎದೆ ಬಡಿತವನ್ನು ಆಲಿಸುವುದು ಮುಜುಗರವೆನಿಸಿತು. ಹಾಗಾಗಿ ಅವನು ಕಾಗದವನ್ನು ಸುರುಳಿ ಸುತ್ತಿ ಒಂದು ತುದಿಯನ್ನು ಆಕೆಯ ಎದೆಯ ಮೇಲಿಟ್ಟು ಮತ್ತೊಂದು ತುದಿಯನ್ನು ತನ್ನ ಕಿವಿಗೆ ಹೊಂದಿಸಿ, ಆಕೆಯ ಹೃದಯ ಮಿಡಿತವನ್ನು ಸ್ಪಷ್ಟವಾಗಿ ಆಲಿಸಿದ (1861). ಬಿದಿರಿನಿಂದ ಕೊಳಲನ್ನು ರೂಪಿಸಬಲ್ಲವನಾಗಿದ್ದ ಲೆನೆಕ್, ಸ್ಟೆಥೋಸ್ಕೋಪನ್ನು ರೂಪಿಸಿದ. ಆಧುನಿಕ ವೈದ್ಯಕೀಯ ಕ್ಷೇತ್ರದ ಅತ್ಯಂತ ಸರಳ ಆದರೆ ಅತ್ಯುಪಯುಕ್ತ ಸಾಧನವನ್ನು ನೀಡಿದ. ಆಧುನಿಕ ವೈದ್ಯಕೀಯದಲ್ಲಿ ಆಲಿಸುವಿಕೆ (ಆಸ್ಕಲ್ಟೇಶನ್) ಎಂಬ ಪರೀಕ್ಷಾ ಪದ್ಧತಿಯು ಜಾರಿಗೆ ಬಂದಿತು. ಸ್ಟೆಥೋಸ್ಕೋಪಿನ ಮೂಲಕ ಹೃದಯ ಮತ್ತು ಶ್ವಾಸಕೋಶಗಳ ಕಾರ್ಯಸ್ವರೂಪವನ್ನು ಆತ ಅಧ್ಯಯನ ಮಾಡಿದ. ಅವುಗಳಲ್ಲಿ 'ಪಲ್ಮನರಿ ಥೈಸಿಸ್' ಎಂದು ಹೆಸರಾಗಿದ್ದ ಕ್ಷಯವು ಮುಖ್ಯವಾಗಿತ್ತು. ವೈದ್ಯಕೀಯದಲ್ಲಿ ಬಳಸುವ ರೇಲ್ಸ್, ರಾಂಕೈ, ಕ್ರೆಪಿಟನ್ಸ್, ಇಗೋಫೋನಿ ಮುಂತಾದ ಶ್ವಾಸಕೋಶಗಳ ಭಿನ್ನ ಸ್ಥಿತಿ-ಗತಿಗಳನ್ನು ವಿವರಿಸುವ ತಾಂತ್ರಿಕ ಪರಿಭಾಷೆಗಳ ಜನನಕ್ಕೆ ಈತ ಕಾರಣನಾದ. ಮಾನವನ ಇತಿಹಾಸದಲ್ಲಿ ವೈದ್ಯರು ಮೊದಲ ಬಾರಿಗೆ ಶ್ವಾಸಕೋಶ ಕ್ಷಯವನ್ನು ಪತ್ತೆಹಚ್ಚಲು ಸಾಧ್ಯವಾಯಿತು.

ಡಾ.ರಾಬರ್ಟ್ ಕಾಚ್ (1843-1910) ಜರ್ಮನಿಯ ಹ್ಯಾನೋವರ್‌ನಲ್ಲಿ ಜನಿಸಿದ. ಈತ ಶಾಲೆಗೆ ಹೋಗದೇ, ಕೇವಲ ಪತ್ರಿಕೆಗಳಲ್ಲಿರುವ ಅಕ್ಷರಗಳನ್ನು ಗುರುತಿಸಿ ಓದಲು ಕಲಿತನಂತೆ. ಆಗ ಆತನಿಗೆ ಐದು ವರ್ಷ. ಗಾಂಟಿಂಜನ್ ವಿಶ್ವವಿದ್ಯಾಲಯದಿಂದ ವೈದ್ಯಕೀಯ ಪದವಿಯನ್ನು ಪಡೆದ (1866). ಫ್ರಾಂಕೋ-ಪ್ರಶ್ಯನ್ ಯುದ್ಧದಲ್ಲಿ ಸೇವೆಯನ್ನು ಸಲ್ಲಿಸಿ, ಪೋಲೆಂಡಿನ ವೂಲ್‌ಸ್ಟೈನ್‌ನಲ್ಲಿ ಜಿಲ್ಲಾ ವೈದ್ಯಾಧಿಕಾರಿಯಾಗಿ ನೇಮಿತನಾದ. ಅಲ್ಲಿಯೇ 'ನಮ್ಮ ಕಣ್ಣಿಗೆ ಕಾಣದ ಸೂಕ್ಷ್ಮಜೀವಿಗಳು, ವಾಸ್ತವದಲ್ಲಿ ರೋಗಜನಕಗಳು' ಎಂದು ತರ್ಕಿಸಿ ಸಂಶೋಧನೆಯನ್ನು ಆರಂಭಿಸಿದ. ನೆರಡಿ ರೋಗಕ್ಕೆ (ಆಂಥ್ರಾಕ್ಸ್) ಕಾರಣವಾದ ಬ್ಯಾಕ್ಟೀರಿಯವನ್ನು ಹಾಗೂ ಅವುಗಳ ಬೀಜಕಗಳನ್ನು (ಸ್ಪೋರ್ಸ್) ಗಾಜಿನ ತುಂಡಿನ ಮೇಲೆ ಸ್ಥಿರೀಕರಿಸಿ, ಬಣ್ಣ ಕಟ್ಟಿ, ಅವುಗಳ ಛಾಯಾಚಿತ್ರವನ್ನು ತೆಗೆದ. ಆಂಥ್ರಾಕ್ಸ್ ಬ್ಯಾಕ್ಟೀರಿಯವು, ಒಂದು ಪ್ರಾಣಿಯಿಂದ ಮತ್ತೊಂದು ಪ್ರಾಣಿಗೆ ನೆರಡಿ ರೋಗವನ್ನು ಹರಡುವುದನ್ನು ಪ್ರಾಯೋಗಿಕವಾಗಿ ನಿರೂಪಿಸಿದ. ಆ ಬಗ್ಗೆ ಸಂಶೋಧನಾ ಬರಹವನ್ನು ಪ್ರಕಟಿಸಿದ (1876). ಈ ಪ್ರಬಂಧವು ಅವನಿಗೆ ಕೀರ್ತಿಯನ್ನು ತಂದುಕೊಟ್ಟಿತು, ಬರ್ಲಿನ್ನಿನ 'ಇಂಪೀರಿಯಲ್ ಹೆಲ್ತ್ ಬ್ಯೂರೋ'ನಲ್ಲಿ ಉದ್ಯೋಗವನ್ನು ದೊರಕಿಸಿಕೊಟ್ಟಿತು. ಹೊಸ ಸ್ಥಳದಲ್ಲಿ ದೊರೆತ ಸಂಶೋಧನಾವಕಾಶಗಳನ್ನು ಈತ ಬಳಸಿಕೊಂಡ. ಪಾಲ್ ಎರ್ಲಿಕ್ (1854-1915) ನೆರವಿನಿಂದ ಬ್ಯಾಕ್ಟೀರಿಯಗಳ ಬಣ್ಣಕಟ್ಟುವಿಕೆಯ ತಂತ್ರಜ್ಞಾನವನ್ನು ಕಲಿತುಕೊಂಡ. ಹಾಗೆಯೇ ಜೂಲಿಯ ರಿಚರ್ಡ್ ಪೆಟ್ರಿ (1852-1921: ಗೌರವನಾಮ ಪೆಟ್ರಿಡಿಶ್) ನೆರವಿನಿಂದ ಬ್ಯಾಕ್ಟೀರಿಯಗಳ ಕೃಷಿಕೆಯ (ಕಲ್ಚರ್) ಬಗ್ಗೆ ಪರಿಣತಿಯನ್ನು ಗಳಿಸಿದ. ಇವರಿಬ್ಬರ ನೆರವಿನಿಂದ ಕಾಚ್, ಕ್ಷಯ ಸಂಬಂಧಿತ ಅಧ್ಯಯನಗಳನ್ನು ತ್ವರಿತಗೊಳಿಸಿದ. ಮೊದಲಿಗೆ ಕ್ಷಯವು ಆನುವಂಶಿಕ ಕಾಯಿಲೆ ಅಥವಾ ದೈವ ಪ್ರಕೋಪದ ಕಾಯಿಲೆ ಎನ್ನುವುದನ್ನು ಅಲ್ಲಗಳೆದ. ಕ್ಷಯಕ್ಕೆ ಕಾರಣವಾದ ಮೈಕೋಬ್ಯಾಕ್ಟೀರಿಯಂ ಟ್ಯುಬರ್ಕ್ಯುಲೋಸಿಸ್ ಎಂಬ ಸೂಕ್ಷ್ಮಜೀವಿಯನ್ನು ಪತ್ತೆಹಚ್ಚಿದ. ಈ ಬ್ಯಾಕ್ಟೀರಿಯವು ಒಂದು ಜೀವಿಯಿಂದ ಮತ್ತೊಂದು ಜೀವಿಗೆ ಕ್ಷಯವನ್ನು ಹರಡುತ್ತದೆ ಎನ್ನುವುದನ್ನು ಪುರಾವೆ ಸಹಿತ ನಿರೂಪಿಸಿ 1882ರಲ್ಲಿ ಪ್ರಬಂಧವನ್ನು ಪ್ರಕಟಿಸಿದ. ಕೂಡಲೆ ಅವನಿಗೆ

ಡಾ.ರೆನೆ ಥಿಯೋಫೈಲ್ ಹಯಾಸಿಂಥ್ ಲೆನೆಕ್

ಬರ್ಲಿನ್ ವಿಶ್ವವಿದ್ಯಾಲಯದಿಂದ ಆಹ್ವಾನ ಬಂದಿತು. ಅಲ್ಲಿ ಆರಂಭವಾದ 'ಇನ್‌ಸ್ಟಿಟ್ಯೂಟ್ ಆಫ್ ಹೈಜೀನ್' ಸಂಸ್ಥೆಯ ನಿರ್ದೇಶಕನಾದ. ಕ್ಷಯ ಬ್ಯಾಕ್ಟೀರಿಯದ ಒಡಲಿನಿಂದ ಒಂದು ಔಷಧವನ್ನು ರೂಪಿಸಿ, ಕ್ಷಯವನ್ನು ಗುಣಪಡಿಸುವ ಕನಸನ್ನು ಕಂಡ. ಆದರೆ ಅವನಿಗೆ 'ಟ್ಯುಬರ್ಕ್ಯುಲಿನ್' ಎಂಬ ವಸ್ತುವು ದೊರೆಯಿತು. ಇದರಿಂದ ಮನುಷ್ಯರಲ್ಲಿ ಕ್ಷಯದ ಸೋಂಕನ್ನು ಪತ್ತೆಹಚ್ಚುವುದು ಸುಲಭವಾಯಿತು. ಇದು 'ಮಾಂಟೂ ಪರೀಕ್ಷೆ ಅಥವ ಪಿಪಿಡಿ ಪರೀಕ್ಷೆ' ಎಂದು ಹೆಸರಾಯಿತು. ರಾಬರ್ಟ್ ಕಾಚ್ 1905ರಲ್ಲಿ ನೊಬೆಲ್ ಪಾರಿತೋಷಕದಿಂದ ಪುರಸ್ಕೃತನಾದ.

ಡಾ. ಪಾಲ್ ಎರ್ಲಿಕ್ ಪ್ರಶ್ಯಾ ದೇಶದ ಸಿಲೇಸಿಯದಲ್ಲಿ ಹುಟ್ಟಿದ. 1878ರಲ್ಲಿ ವೈದ್ಯಕೀಯ ಪದವಿಯನ್ನು ಗಳಿಸಿದ. ಬರ್ಲಿನ್ ಮೆಡಿಕಲ್ ಕ್ಲಿನಿಕ್ಕಿನಲ್ಲಿ ಸಂಶೋಧಕನಾಗಿ ಸೇರಿದ ಈತನು ಸೂಕ್ಷ್ಮಜೀವಿಗಳು ಹಾಗೂ ಊತಕಗಳಿಗೆ ಬಣ್ಣ ಕಟ್ಟುವ ತಂತ್ರಜ್ಞಾನವನ್ನು (ಸ್ಟೇಯಿನಿಂಗ್) ಕರಗತಗೊಳಿಸಿಕೊಂಡ. ಈತನ ನೆರವಿನಿಂದ ರಾಬರ್ಟ್ ಕಾಚ್, ಕ್ಷಯ ಬ್ಯಾಕ್ಟೀರಿಯವನ್ನು ಸುಲಭವಾಗಿ ಪತ್ತೆಹಚ್ಚಿದ. ಬಣ್ಣಗಳ ಜತೆಯಲ್ಲಿ ಕೆಲಸ ಮಾಡುತ್ತಿದ್ದ ಎರ್ಲಿಕ್, ಕೆಲವು ಬಣ್ಣಗಳು ರೋಗಜನಕಗಳನ್ನು ನಿಗ್ರಹಿಸಲು ಶಕ್ತವಾಗಿರಬಹುದು ಎಂದು ತರ್ಕಿಸಿದ. ಆತನ ತರ್ಕ ಸುಳ್ಳಾಗಲಿಲ್ಲ, 'ಸ್ಯಾಲ್ವರಸನ್' ಎಂಬ ಹೆಸರಿನ ಸಂಯುಕ್ತವು, ಮ್ಯಾಜಿಕ್ ಬುಲೆಟ್ ರೂಪದಲ್ಲಿ ಸಿಫಿಲಿಸ್ ಕಾಯಿಲೆಯನ್ನು ಗುಣಪಡಿಸಿತು. 1908ರಲ್ಲಿ ನೊಬೆಲ್ ಪಾರಿತೋಷಕವನ್ನು ಪಡೆದ ಎರ್ಲಿಕ್ ರಸಾಯನ ಚಿಕಿತ್ಸೆ (ಕೀಮೋಥೆರಪಿ) ಎಂಬ ಹೊಸ ಚಿಕಿತ್ಸಾ ತಂತ್ರಜ್ಞಾನವು ಹುಟ್ಟಲು ಕಾರಣನಾದ.

ಡಾ.ಸೆಲ್ಮನ್ ವಕ್ಸ್‌ಮನ್ (1888-1973) ರಷ್ಯಾ ಮೂಲದವನಾದರೂ 1910ರಲ್ಲಿ ಅಮೆರಿಕದಲ್ಲಿ ನೆಲೆಸಿದ. ಜೀವಶಾಸ್ತ್ರದಲ್ಲಿ ಪಿಎಚ್‌ಡಿ ಪಡೆದ ಮೇಲೆ ರುಟ್ಗರ್ ವಿದ್ಯಾಲಯದಲ್ಲಿ ಮಣ್ಣಿನ ಸೂಕ್ಷ್ಮಜೀವಿಗಳ ತಜ್ಞನಾಗಿ ಕೆಲಸವನ್ನು ಮಾಡಲಾರಂಭಿಸಿದ. ತನ್ನ ವಿದ್ಯಾರ್ಥಿಗಳ ಜತೆಯಲ್ಲಿ ಸೇರಿ ಮಣ್ಣಿನಲ್ಲಿರುವ ಸೂಕ್ಷ್ಮಜೀವಿಗಳನ್ನು ಬಳಸಿಕೊಂಡು ಹೊಸ ಪ್ರತಿಜೈವಿಕಗಳನ್ನು ರೂಪಿಸುವ ಯೋಜನೆಯನ್ನು ಹಾಕಿಕೊಂಡ. ಆತನು ರೂಪಿಸಿದ 'ನಿಯೋಮೈಸಿನ್' ಪ್ರತಿಜೈವಿಕವು ಇಂದಿಗೂ ಬಳಕೆಯಲ್ಲಿದೆ. ವಕ್ಸ್‌ಮನ್ ಬಳಿ ಆಲ್ಬರ್ಟ್ ಶಾಟ್ಜ್ (1920-2005) ಎಂಬ ಸ್ನಾತಕ ವಿದ್ಯಾರ್ಥಿಯಿದ್ದ. 1943ರಲ್ಲಿ ಈತನು ಮಣ್ಣಿನಲ್ಲಿದ್ದ 'ಸ್ಟ್ರೆಪ್ಟೊಮೈಸೀಸ್ ಗ್ರೈಸಿಯಸ್' ಎಂಬ ಬ್ಯಾಕ್ಟೀರಿಯವನ್ನು ಗುರುತಿಸಿ, ಪ್ರತ್ಯೇಕಿಸಿ, ಶುದ್ಧರೂಪದಲ್ಲಿ ಸಂಗ್ರಹಿಸಿದ. ವಕ್ಸ್‌ಮನ್ ಕೂಡಲೇ ಮೆರ್ಕ್ ಔಷಧ ತಯಾರಿಕಾ ಸಂಸ್ಥೆಯ ಜತೆಯಲ್ಲಿ ಒಪ್ಪಂದವನ್ನು ಮಾಡಿಕೊಂಡ. ಶಿಷ್ಯನು ಕಂಡುಹಿಡಿದ ಬ್ಯಾಕ್ಟೀರಿಯವು ಉತ್ಪಾದಿಸುವ 'ಸ್ಟ್ರೆಪ್ಟೊಮೈಸೀನ್' ಪ್ರತಿಜೈವಿಕವು ಕ್ಷಯವನ್ನು ಗುಣಪಡಿಸಬಲ್ಲದೆ ಎಂಬುದರ ಬಗ್ಗೆ ಕ್ರಮಬದ್ಧ ಸಂಶೋಧನೆಯನ್ನು ನಡೆಸಿದ. 1947ರಲ್ಲಿ ಕ್ಷಯವನ್ನು ಗುಣಪಡಿಸಬಲ್ಲ ಮೊದಲ ಔಷಧವನ್ನು ಜಗತ್ತಿಗೆ ನೀಡಿದ. ಒಂದು ವರ್ಷದ ಒಳಗೆ ಸ್ವೀಡಿಶ್ ವಿಜ್ಞಾನಿ ಜೋರ್ಗನ್ ಲೆಹ್ಮನ್ (1898-1989) ಪ್ಯಾರಾ ಅಮೈನೋ ಸ್ಯಾಲಿಸಿಲಿಕ್ ಆಸಿಡ್ (ಪ್ಯಾಸ್) ಎಂಬ ಔಷಧವನ್ನು ರೂಪಿಸಿದ. ಸ್ಟ್ರೆಪ್ಟೊಮೈಸಿನ್ ಮತ್ತು ಪ್ಯಾಸ್ ಎರಡೂ ಔಷಧಗಳನ್ನು ಒಟ್ಟಿಗೆ ನೀಡಿದಾಗ ಅವು ಕ್ಷಯವನ್ನು ಪರಿಣಾಮಕಾರಿಯಾಗಿ ನಿಗ್ರಹಿಸಿದವು. 1952ರಲ್ಲಿ ವಕ್ಸ್‌ಮನ್‌ನಿಗೆ ಸ್ಟ್ರೆಪ್ಟೊಮೈಸಿನ್ 'ಕಂಡುಹಿಡಿದುದಕ್ಕಾಗಿ' ನೊಬೆಲ್ ಪಾರಿತೋಷಕವು ದೊರೆಯಿತು. ಆದರೆ ನೊಬೆಲ್ ಸಮಿತಿಯು ಶಾಟ್ಜ್ ಮತ್ತು ಲೆಹ್ಮನ್‌ರನ್ನು ಪ್ರಜ್ಞಾಪೂರ್ವಕವಾಗಿ ಮರೆಯಿತು.

ಡಾ.ಆಲ್ಬರ್ಟ್ ಶಾಟ್ಜ್ ಅಮೆರಿಕದ ಕನೆಕ್ಟಿಕಟ್ ಪ್ರದೇಶದಲ್ಲಿ ಜನಿಸಿದ. ಕೃಷಿ ಪದವಿಯನ್ನು ಪಡೆಯಲು ರಟ್ಗರ್ ವಿಶ್ವವಿದ್ಯಾಲಯವನ್ನು ಸೇರಿಕೊಂಡ. ಆದರೆ ವಕ್ಸ್‌ಮನ್ ಸಂಸರ್ಗದಿಂದ ಸೂಕ್ಷ್ಮಜೀವಿಶಾಸ್ತ್ರದಲ್ಲಿ ಆಸಕ್ತಿಯನ್ನು ತಳೆದು ಸಂಶೋಧನೆಗೆ ಇಳಿದ. ವಿಶ್ವದ ಎರಡನೆಯ ಮಹಾಯುದ್ಧದಲ್ಲಿ ಅಲೆಗ್ಸಾಂಡರ್ ಫ್ಲೆಮಿಂಗ್ ಕಂಡುಹಿಡಿದ ಪೆನಿಸಿಲಿನ್, ರೋಧಕತೆಯ (ರೆಸಿಸ್ಟನ್ಸ್) ಕಾರಣ ಕೆಲವರಲ್ಲಿ ವಿಫಲವಾಗಿ, ಸೈನಿಕರು ಸಾಯುವುದನ್ನು ಕಣ್ಣಾರೆ ಕಂಡ. ಹೊಸ ಪ್ರತಿಜೈವಿಕವನ್ನು ಜಗತ್ತಿಗೆ ನೀಡಲು ನಿರ್ಧರಿಸಿದ. ಅದರಂತೆಯೇ ಸ್ಟ್ರೆಪ್ಟೊಮೈಸಿನ್ ಅನ್ನು ರೂಪಿಸಿದ. ಈ ಸಂಶೋಧನೆಯಿಂದ ಅವನಿಗೆ ಸುಲಭವಾಗಿ ಪಿಎಚ್‌ಡಿ ದೊರೆಯಿತು. ಆದರೆ ಮೆರ್ಕ್ ಜತೆಯಲ್ಲಿ ವಕ್ಸ್‌ಮನ್ ಮಾಡಿಕೊಂಡಿದ್ದ ಅಪಾರ ಮೊತ್ತದ ಒಪ್ಪಂದದಲ್ಲಿ ಶಾಟ್ಜ್ ಹೊರಗುಳಿದಿದ್ದ. ಹಾಗಾಗಿ ಅವನಿಗೆ ನ್ಯಾಯಬದ್ಧವಾಗಿ ದೊರೆಯಬೇಕಾಗಿದ್ದ ಹಣ ದೊರೆಯಲಿಲ್ಲ. ಶಾಟ್ಜ್‌ನಿಗೆ ಅಪಾರ ಖೇದವಾಗಿ ಅಮೆರಿಕವನ್ನೇ ಬಿಟ್ಟು ಚಿಲಿ ದೇಶಕ್ಕೆ ಹೋದ. ಆದರೆ ವಕ್ಸ್‌ಮನ್ ಜತೆಯಲ್ಲಿ ವೈಯಕ್ತಿಕವಾಗಿ ಹಾಗೂ ಸಾರ್ವಜನಿಕವಾಗಿ ಸಂಘರ್ಷಕ್ಕಿಳಿದ. ನೊಬೆಲ್ ಸಮಿತಿಯೂ ಶಾಟ್ಜ್‌ನನ್ನು ಸಂಪೂರ್ಣವಾಗಿ ಕಡೆಗಣಿಸಿದಾಗ ಹತಾಶನಾದ. ಅಲ್ಲಿಯೂ ಅವನು ಆರ್ಥಿಕವಾಗಿ ನಷ್ಟವನ್ನು ಅನುಭವಿಸಿದ. 1990ರಲ್ಲಿ ಅಮೆರಿಕದ ಔದ್ಯೋಗಿಕ ಸೂಕ್ಷ್ಮಜೀವಿ ವಿಜ್ಞಾನದ ಸಂಸ್ಥೆ ಹಾಗೂ ಅಮೆರಿಕದ ಎದೆಗೂಡಿನ ತಜ್ಞರ ಸಂಸ್ಥೆಗಳು 'ಕ್ಷಯ ಚಿಕಿತ್ಸೆಯ ಯಶಸ್ಸು ಶಾಟ್ಜ್‌ಗೆ ಸಹ ಸಲ್ಲಬೇಕು' ಎಂದು ಅಧಿಕೃತವಾಗಿ ಸಾರಿದವು.

ಡಾ.ಜಾರ್ಗನ್ ಲೆಹ್ಮನ್, ಡೆನ್ಮಾರ್ಕಿನ ಕೋಪನ್‌ಹೇಗನ್‌ನಲ್ಲಿ ಹುಟ್ಟಿದ. ಲಂಡ್ ವಿಶ್ವವಿದ್ಯಾಲಯದಿಂದ ಅಂಗಕ್ರಿಯಾ ವಿಜ್ಞಾನದಲ್ಲಿ ಪದವಿಯನ್ನು ಪಡೆದ. ಸ್ವೀಡನ್ನಿಗೆ ಬಂದು ಸಂಶೋಧನೆಯಲ್ಲಿ ತೊಡಗಿಕೊಂಡ. ರಕ್ತಗರಣೆಯನ್ನು ಕರಗಿಸಬಲ್ಲ ಡೈಕ್ಯುಮರಾಲ್ ಔಷಧವನ್ನು 1941ರಲ್ಲಿ ರೂಪಿಸಿದ. ಎರಡು ವರ್ಷಗಳ ನಂತರ 'ಪ್ಯಾಸ್' ರೂಪಿಸಿ, ಕ್ಷಯರೋಗಿಗಳ ಮೇಲೆ ಪ್ರಯೋಗಿಸಿದ. ಲೆಹ್ಮನ್ ತನ್ನ ಅಷ್ಟೂ ಅಧ್ಯಯನವನ್ನು ವಿಶ್ವದ ಎರಡನೆಯ ಮಹಾಯುದ್ಧದ ಅವಧಿಯಲ್ಲಿ ನಡೆಸಿದ ಕಾರಣ, ಅವನ ಸಂಶೋಧನೆಯು ಹೊರಜಗತ್ತಿಗೆ ತಿಳಿಯಲಿಲ್ಲ. ವಕ್ಸ್‌ಮನ್‌ನಿಗೂ ಈ ಬಗ್ಗೆ ಮಾಹಿತಿಯಿರಲಿಲ್ಲ. 1948ರ ವೇಳೆಗೆ ಕ್ಷಯ ಬ್ಯಾಕ್ಟೀರಿಯವು ಸ್ಟ್ರೆಪ್ಟೊಮೈಸಿನ್ ಪ್ರತಿಜೈವಿಕಕ್ಕೆ ರೋಧಕತೆಯನ್ನು ಬೆಳೆಸಿಕೊಂಡ ಕಾರಣ, ಎರಡೂ ಔಷಧಗಳನ್ನು ಒಟ್ಟಿಗೆ ಪ್ರಯೋಗಿಸುವ ಅಧ್ಯಯನಗಳು ನಡೆದವು. ಜೋಡಿ ಔಷಧಗಳು ಹೆಚ್ಚು ಪರಿಣಾಮಕಾರಿಯಾದವು. 'ಪ್ಯಾಸ್' ಅನ್ನು ಇಂದಿಗೂ ಬಳಸುತ್ತಿದ್ದೇವಾದರೂ, ಆತ ಸದಾಕಾಲಕ್ಕೂ ನೊಬೆಲ್ ವಂಚಿತನಾಗಿ ಉಳಿಯುತ್ತಾನೆ ಎನ್ನುವುದು ಒಂದು ವಿಪರ್ಯಾಸವಾಗಿದೆ.

ಬೂಮ್‌ರ್‍ಯಾಂಗ್ ಆಗಲಿರುವ ಟ್ರಂಪ್ ಸುಂಕನೀತಿ

ಸುಂಕಸಮರ

ಚೇರ್ಕಾಡಿ ಸಚ್ಚಿದಾನಂದ ಶೆಟ್ಟಿ
vveditoped@gmail.com

ನೂತನ ಸುಂಕನೀತಿಯು ಅಮೆರಿಕಕ್ಕೆ 'ಸ್ವಯಂ ರಕ್ಷಣೆ' ಮತ್ತು 'ಅಸ್ತಿತ್ವದ ಪ್ರಶ್ನೆ'ಯಾಗಿರಬಹುದು. ಆದರೆ ಈ ನೀತಿಯೇ ಅಮೆರಿಕದ ಪಾಲಿಗೆ ಬೂಮ್‌ರ್‍ಯಾಂಗ್ ಅಥವಾ ತಿರುಗೇಟು ಆಗಿ ಪರಿವರ್ತನೆಗೊಳ್ಳಲಿದೆ. ಡೊನಾಲ್ಡ್ ಟ್ರಂಪ್ ಎರಡನೆಯ ಬಾರಿಗೆ ಅಧಿಕಾರಕ್ಕೆ ಬಂದು 3 ತಿಂಗಳು ಕಳೆಯುವುದರೊಳಗೆ, ಅಮೆರಿಕದ ಇತಿಹಾಸದಲ್ಲಿ ಯಾರೂ ಕಂಡು ಕೇಳರಿಯದ ಅಲ್ಲೋಲ ಕಲ್ಲೋಲವನ್ನು ಸೃಷ್ಟಿಸಿದ್ದಾರೆ. ಅಮೆರಿಕದ ಜತೆಯಲ್ಲೇ ಇಡೀ ವಿಶ್ವದಲ್ಲಿ ಕೋಲಾಹಲವೆದ್ದಿದೆ. ತಮ್ಮ ದೇಶದ ಹಿತಾಸಕ್ತಿಯನ್ನು ಕಾಯುವ ನಿಟ್ಟಿನಲ್ಲಿ ಟ್ರಂಪ್ ಉದ್ದೇಶ ಚೆನ್ನಾಗಿದ್ದರೂ, ಅವರ ದುಡುಕಿನ ನಿರ್ಧಾರಗಳು, ಅವೈಜ್ಞಾನಿಕ ಸುಂಕನೀತಿಗಳಿಂದಾಗಿ ಜಗತ್ತಿನಲ್ಲಿ ಆರ್ಥಿಕ ಹಿಂಜರಿತ ಆರಂಭವಾಗುವ ಲಕ್ಷಣಗಳು ಕಾಣುತ್ತಿವೆ. ಟ್ರಂಪ್ ಅವರ ಕ್ರಮವನ್ನು ವಿರೋಧಿಸಿ ಅಮೆರಿಕದಲ್ಲಿಯೇ ಪ್ರತಿಭಟನೆಗಳು ನಡೆದಿವೆ. 'ಸುಂಕ ವಿಧಿಸುವ ಕ್ರಮವು ಅನಗತ್ಯ, ಅವುಗಳಿಂದ ಅಮೆರಿಕಕ್ಕೇ ನಷ್ಟ' ಎಂದೂ ಅಲ್ಲಿನ ಅರ್ಥಶಾಸ್ತ್ರಜ್ಞರು ಹೇಳಿದ್ದಾರೆ.

ಸುಂಕ ವಿಧಿಸುವ ಟ್ರಂಪ್ ಅವರ ಕ್ರಮದಿಂದಾಗಿ ಅಮೆರಿಕಕ್ಕೇ ಲಾಭ ಆಗುವುದಿಲ್ಲ, ಇದರಿಂದ ಹಣದುಬ್ಬರ ಹೆಚ್ಚಾಗುತ್ತದೆ, ಆರ್ಥಿಕ ಹಿಂಜರಿತ ಎದುರಾಗುತ್ತದೆ ಎಂಬ ಬಲವಾದ ಅಭಿಪ್ರಾಯವು ಅಮೆರಿಕದಲ್ಲಿದೆ. ಈ ಸುಂಕನೀತಿ ಯಿಂದಾಗಿ ಅಮೆರಿಕದಲ್ಲಿ ಹಾಗೂ ಜಗತ್ತಿನ ಇತರೆಡೆಗಳಲ್ಲಿ ಆರ್ಥಿಕ ಬೆಳವಣಿಗೆ ದರವು ಕಡಿಮೆಯಾಗುವುದು. ಈಗ ಟ್ರಂಪ್ ಪ್ರತಿಸುಂಕ ಜಾರಿಗೆ 90 ದಿನಗಳ ಗಡುವನ್ನೇನೋ ನೀಡಿ ಉಲ್ಟಾ ಹೊಡೆದಿದ್ದಾರೆ, ಆದರೆ ಶೇ.10ರ ಪ್ರಮಾಣದ ಮೂಲ ಆಮದು ತೆರಿಗೆ ಮುಂದುವರಿಯಲಿದೆ. ಇದೇ ಸಂದರ್ಭದಲ್ಲಿ ಚೀನಾ ಮೇಲಿನ ಸುಂಕವನ್ನು ಅತಿರೇಕದ ಪ್ರಮಾಣದಲ್ಲಿ ಟ್ರಂಪ್ ಏರಿಸುತ್ತಲೇ ಹೋದರು (ಪ್ರಸ್ತುತ ಅದು ಶೇ.145ರ ಮಟ್ಟವನ್ನು ತಲುಪಿದೆ!). ಈ ನಡೆಯನ್ನು ಖಂಡಿಸಿದ ಚೀನಾದ ವಾಣಿಜ್ಯ ಸಚಿವಾಲಯವು, 'ಅಮೆರಿಕದ ವರ್ತನೆ ಹೀಗೆಯೇ ಮುಂದುವರಿದರೆ ನಾವು ಸುಮ್ಮನಿರುವುದಿಲ್ಲ; ನಮಗೂ ದೃಢವಾದ ಇಚ್ಛಾಶಕ್ತಿಯಿದೆ, ಪ್ರತೀಕಾರದ ಕ್ರಮಗಳನ್ನು ಕೈಗೊಳ್ಳಲು ಬೇಕಾದಷ್ಟು ದಾರಿಗಳಿವೆ'' ಎಂದು ಕಟುಶಬ್ದಗಳಲ್ಲಿ ಅಮೆರಿಕಕ್ಕೆ ತಿರುಗೇಟು ನೀಡಿದ್ದನ್ನು ನೀವು ಗಮನಿಸಿರಬಹುದು. ಪ್ರತಿಸುಂಕದ ಹೇರಿಕೆಯನ್ನು ಟ್ರಂಪ್ 90 ದಿನಗಳವರೆಗೆ ತಡೆಹಿಡಿದರೂ, ಜಗತ್ತು ಪ್ರತಿಸುಂಕದ ಹಿಡಿತದಿಂದ ಹೊರಬಂದಿಲ್ಲ. ಅಮೆರಿಕ ಮತ್ತು ಚೀನಾ ನಡುವಿನ ಸುಂಕಸಮರವೂ ಜಗತ್ತಿನ ಅರ್ಥವ್ಯವಸ್ಥೆಯ ಮೇಲೆ ಪ್ರತಿಕೂಲ ಪರಿಣಾಮ ಬೀರಲಿದೆ.

ಸುಂಕವೆಂಬುದು ವಾಣಿಜ್ಯ ವ್ಯವಸ್ಥೆಯ ಕೀಲಿಕೈ. ಪರಸ್ಪರ ಶತ್ರುತ್ವವಿರುವ ದೇಶಗಳ ನಡುವೆಯೂ ವ್ಯಾಪಾರ-ವಾಣಿಜ್ಯ ಚಟುವಟಿಕೆಗಳು ನಡೆಯುತ್ತವೆ. ಆ ಕಾರಣಕ್ಕಾಗಿ ಅಲ್ಲಿ ಸುಂಕದ ಆಟ ನಡೆಯುತ್ತದೆ. ಆದರೆ, ಸುಂಕದೊಡನೆ ಆಡುವ ಆಟವು ಜಗತ್ತನ್ನೇ ತಲ್ಲಣಗೊಳಿಸಿಬಿಡುತ್ತದೆ. ಅಮೆರಿಕದ ಹೊಸ ಸುಂಕನೀತಿ ಜಗತ್ತಿನ ಆರ್ಥಿಕತೆಯ ಮೇಲೆ ವ್ಯತಿರಿಕ್ತ ಪರಿಣಾಮವನ್ನು ಬೀರಿದೆ ಹಾಗೂ ಕರೋನಾ ಕಾಲಘಟ್ಟದ ಬಳಿಕ ಜಾಗತಿಕ ಆರ್ಥಿಕತೆಯನ್ನು ಮತ್ತೆ ಅನಿಶ್ಚಿತತೆಯ ಮಡಿಲಿಗೆ ದೂಡಿದೆ. ಅದರಲ್ಲೂ ಇದು, ಅಭಿವೃದ್ಧಿಶೀಲ ದೇಶಗಳಲ್ಲಿ ಒಂದು ತೂಕ ಹೆಚ್ಚೇ ಎನ್ನಿಸುವಷ್ಟು ಆತಂಕವನ್ನು ಹುಟ್ಟುಹಾಕಿದೆ. ಏಕೆಂದರೆ ಸುಂಕ ಏರಿಕೆಯನ್ನು ತಡೆದು ಕೊಳ್ಳುವ ಶಕ್ತಿ ಎಲ್ಲಾ ರಾಷ್ಟ್ರಗಳಿಗೂ ಇರುವುದಿಲ್ಲ. ದೂರದ ಅಮೆರಿಕದ ಸುಂಕನೀತಿಯು ಜನಸಾಮಾನ್ಯನಿಗೆ ಪ್ರತ್ಯಕ್ಷವಾಗಿ ತಟ್ಟದಿರಬಹುದು; ಆದರೆ ಅದರ ಪರಿಣಾಮವನ್ನು ಆತ ಪರೋಕ್ಷವಾಗಿಯಾದರೂ ಅನುಭವಿಸಲೇಬೇಕಾಗುತ್ತದೆ. ಆದ್ದರಿಂದ ಇದು ಎಲ್ಲರಿಗೂ ಸಂಬಂಧಿಸಿದ ವಿಷಯವೂ ಹೌದು. ಟ್ರಂಪ್ ಜಾರಿಗೊಳಿಸಿದ ಪ್ರತಿಸುಂಕವು ಜಾಗತಿಕ ಅರ್ಥ ವ್ಯವಸ್ಥೆಗೆ ಅಂದಾಜು 120 ಲಕ್ಷ ಕೋಟಿ ರು.ನಷ್ಟು ಹೊರೆ ಹಾಕಲಿದೆ ಎಂಬ ಲೆಕ್ಕಾಚಾರವಿದೆ.

ಅಮೆರಿಕ ಅಧ್ಯಕ್ಷರಾಗಿ ಎರಡನೇ ಬಾರಿಗೆ ಆಯ್ಕೆಯಾದ ನಂತರ ಟ್ರಂಪ್ ಅವರಿಗೆ ಹಲವು ಸವಾಲುಗಳಿದ್ದವು. ಅವುಗಳ ಪೈಕಿ ಕೆಲವು ಅನಿವಾರ್ಯ ಸವಾಲುಗಳಾದರೆ, ಮತ್ತೆ ಕೆಲವು ಅವರೇ ಸೃಷ್ಟಿಸಿಕೊಂಡಂಥವು. ವಲಸೆನೀತಿ ಮತ್ತು ಸುಂಕನೀತಿಗೆ ಸಂಬಂಧಿಸಿ ಅವರು ತಳೆದ ನಿಲುವುಗಳು ಈ ಪೈಕಿ ಎದ್ದು ಕಾಣುವಂಥವು ಎನ್ನಬೇಕು. ಪ್ರಸ್ತುತ ಟ್ರಂಪ್ ಪ್ರತಿಪಾದಿಸಿರುವ ಸುಂಕನೀತಿಯು ಜಾಗತಿಕ ಮಟ್ಟದಲ್ಲಿ ಒಂದಿಷ್ಟು ತಳಮಳವನ್ನು ಹುಟ್ಟಿಸಿದ್ದರೂ, ಹಲವು ದೇಶಗಳು ಸ್ವಾವಲಂಬಿತನದ ಕಡೆಗೆ ಚಿಂತನೆ ನಡೆಸುವುದಕ್ಕೆ ಇದೊಂದು ಸದವಕಾಶ ಎನ್ನಲಡ್ಡಿಯಿಲ್ಲ. ಮೇಲೆ ಉಲ್ಲೇಖಿಸಿರುವಂತೆ, ಚೀನಾದ ಮೇಲೆ ಟ್ರಂಪ್ ಹೇರಿರುವ ಹೆಚ್ಚುವರಿ ಸುಂಕದ ಪ್ರಮಾಣ ಈಗಾಗಲೇ ಶೇ.145ರ ಮಟ್ಟವನ್ನು ಮುಟ್ಟಿದೆ. ಇದಕ್ಕೂ ಮೊದಲು ಟ್ರಂಪ್ ಸದರಿ ಸುಂಕದ ಮಟ್ಟವನ್ನು ಹಂತಹಂತವಾಗಿ ಏರಿಸುತ್ತಲೇ ಹೋದಾಗ ಚೀನಾ, ''ಇದಕ್ಕೆ ನಾವು ಹೆದರುವುದಿಲ್ಲ, ಇದು ಅಮೆರಿಕದ ಬ್ಲ್ಯಾಕ್‌ಮೇಲ್ ತಂತ್ರ'' ಎಂದಿತ್ತು. ಈ ಮಾತಿಗೆ ಪ್ರತಿಯಾಗಿ ಚೀನಾದ ಮೇಲಿನ ಸುಂಕದ ಮಟ್ಟ ಏರುತ್ತಲೇ ಹೋದಾಗ, ''ನಮ್ಮ ಹಕ್ಕುಗಳನ್ನು ರಕ್ಷಿಸಲು ಕ್ರಮ ಕೈಗೊಳ್ಳುತ್ತೇವೆ. ಮಾರುಕಟ್ಟೆಗಳಲ್ಲಿನ ಇಂಥ ಅತಿರೇಕದ ಕ್ರಮಗಳನ್ನು ಎದುರಿಸಲು ಹಾಗೂ ಅಂತಾರಾಷ್ಟ್ರೀಯ ವ್ಯಾಪಾರ ವ್ಯವಸ್ಥೆಯನ್ನು ರಕ್ಷಿಸಲು ಮೈತ್ರಿಕೂಟವೊಂದನ್ನು ರಚಿಸುವ ಆಲೋಚನೆ ನಮಗಿದೆ'' ಎಂದು ಚೀನಾ ಹೇಳಿಕೊಂಡಿತ್ತು ಎಂಬುದನ್ನಿಲ್ಲಿ ಸ್ಮರಿಸಬಹುದು.

ಅಮೆರಿಕದ ದೇಶೀಯ ಉದ್ಯಮಕ್ಕೆ ಆದ್ಯತೆ, ಆರ್ಥಿಕತೆಯ ಹಿತರಕ್ಷಣೆ ಮತ್ತು ನೌಕರಿ ಸೃಷ್ಟಿಯ ಅನಿವಾರ್ಯತೆ ಮುಂತಾದ ಸಬೂಬುಗಳನ್ನು ಹೇಳಿ ಟ್ರಂಪ್ ಅವರು ವಿಶ್ವದ ಅನೇಕ ದೇಶಗಳ ಮೇಲೆ ಹೀಗೊಂದು ಭಾರಿ ಸುಂಕ ಹೇರಿಕೆಯ ಘೋಷಣೆಗೆ ಮುಂದಾಗಿದ್ದು ಎಂಬುದನ್ನು ಗಮನಿಸಬೇಕು. ಇದರಿಂದಾಗಿ, ವಿಶ್ವದ ವಿವಿಧ ದೇಶಗಳಂತೆ ಭಾರತಕ್ಕೂ ಒಂದು ಮಟ್ಟದಲ್ಲಿ ಬಿಸಿ ತಟ್ಟಲಿದೆ. ಸುಂಕ ಹೇರಿಕೆಯಿಂದಾಗಿ ವಿಶ್ವದೆಲ್ಲೆಡೆಯ ಷೇರುಪೇಟೆಗಳಲ್ಲಿ ಭಾರಿ ಕದಲಿಕೆ ಉಂಟಾಗಿದೆಯಾದರೂ, ಸುಂಕ ಹೇರಿಕೆಯ ರದ್ದತಿಗೆ ಟ್ರಂಪ್ ನಿರಾಕರಿಸಿದ್ದಾರೆ. ಅವರೀಗ ಸದ್ಯಕ್ಕೆ ನೀಡಿರುವ 90 ದಿನಗಳ ಗಡುವು ತಾತ್ಕಾಲಿಕ ವಿರಾಮವಷ್ಟೇ. ಬೇಕಿದ್ದರೆ ಇದನ್ನು 'ಸುಂಕ ವಿರಾಮ' ಎಂದು ಕರೆದುಕೊಳ್ಳಬಹುದು! ಸುಮಾರು 180 ರಾಷ್ಟ್ರಗಳ ಮೇಲೆ ಅಮೆರಿಕ ಹೇರಿರುವ ಸುಂಕವನ್ನು ಅವಲೋಕಿಸಿದಾಗ 'ಸ್ತರ'ದ ಆಧಾರದಲ್ಲಿ ಭಾರತವು 10ನೇ ಸ್ಥಾನದಲ್ಲಿದ್ದು, ಭಾರತದಿಂದ ಅಮೆರಿಕಕ್ಕೆ ಆಮದಾಗುವ ವಸ್ತುಗಳ ಮೇಲೆ ಟ್ರಂಪ್ ಶೇ.26ರಷ್ಟು ಹೊರೆಯನ್ನು ಹೇರಿದ್ದಾರೆ. 'ಭಾರತವನ್ನು ಮಣಿಸುವುದು ಕಠಿಣ' ಎಂಬ ಮಾತು ಟ್ರಂಪ್‌ರಿಂದ ಹೊಮ್ಮಿರುವುದುಂಟು; ಇದಕ್ಕೆ ಕಾರಣ, ಅಮೆರಿಕ ತನ್ನ ನಿತ್ಯೋಪಯೋಗಿ ವಸ್ತುಗಳಿಗೆ ಭಾರತವನ್ನು ಅವಲಂಬಿಸಿರುವುದು ಹಾಗೂ ಟ್ರಂಪ್ ಒಬ್ಬ ನಿಪುಣ ವ್ಯಾಪಾರಸ್ಥರಾಗಿರುವುದು. ಅಮೆರಿಕದ ಮಾಹಿತಿ ತಂತ್ರಜ್ಞಾನ (ಐಟಿ) ವಲಯವು ಭಾರತವನ್ನು ಅವಲಂಬಿಸಿರುವುದನ್ನು ಬಿಡಿಸಿ ಹೇಳಬೇಕಿಲ್ಲ.

ತಮ್ಮ ಮೇಲೆ ಹೇರಿರುವ ಸುಂಕದ ಹೊರೆಯನ್ನು ತಗ್ಗಿಸಿ ಅಂತ ಸುಮಾರು 50 ರಾಷ್ಟ್ರಗಳು ಟ್ರಂಪ್ ಆಡಳಿತದ ಜತೆಗೆ ಮಾತುಕತೆ ಆರಂಭಿಸಿವೆ; ತಮ್ಮ ಸುಂಕಹೇರಿಕೆಯ ಕ್ರಮದಿಂದಾಗಿ ಅಮೆರಿಕದ ಬೊಕ್ಕಸಕ್ಕೆ ಬೆಂಕಿ ಬೀಳಬಹುದೆಂಬ ಭೀತಿಯಿಂದಾಗಿಯೇ ಟ್ರಂಪ್ 75 ದೇಶಗಳ ಮೇಲೆ ಹೇರಿದ್ದ ಹೊರೆಗೆ 90 ದಿನಗಳ ಮಟ್ಟಿಗೆ ವಿರಾಮ ನೀಡಿದ್ದಾರೆ ಎನ್ನಲಾಗುತ್ತಿದೆ. ಮುಂದಾಗಬಹುದಾದ ಆರ್ಥಿಕ ಅನಾಹುತ'ಗಳನ್ನು ಮುನ್ನಂದಾಜಿಸಿ ಅಮೆರಿಕದ ಹಣಕಾಸು ಇಲಾಖೆಯು ನೀಡಿದ ಎಚ್ಚರಿಕೆಯೂ ಇದಕ್ಕೊಂದು ಕಾರಣವಾಗಿದೆ. ಡೊನಾಲ್ಡ್ ಟ್ರಂಪ್ ಅಥವಾ ಅಮೆರಿಕ ದೇಶ ಜಗತ್ತನ್ನು ಬಿಟ್ಟು ಬಾಳಲು ಸಾಧ್ಯವಿಲ್ಲ. ಹೀಗಾಗಿ, ಮತ್ತೊಂದು ದೇಶದ ಮೇಲೆ ಹೇರುವ ಸುಂಕವು ತನಗೇ ತಿರುಗುಬಾಣವಾಗಲಿದೆ ಎಂಬುದನ್ನು ಮನಗಂಡು ಈ ಅವೈಜ್ಞಾನಿಕ ನೀತಿಯನ್ನು ಅವರು ಹಿಂಪಡೆಯಬೇಕು. ಒಂದೊಮ್ಮೆ ಹಾಗಾಗದಿದ್ದರೆ, ಅಮೆರಿಕ ಸೇರಿದಂತೆ ವಿಶ್ವದ ಪ್ರಮುಖ ದೇಶಗಳು ಆರ್ಥಿಕ ಹಿಂಜರಿತಕ್ಕೆ ತುತ್ತಾಗಬೇಕಾಗುತ್ತದೆ ಹಾಗೂ ಬಡದೇಶಗಳ ಪರಿಸ್ಥಿತಿ ಮತ್ತಷ್ಟು ಹದಗೆಡುತ್ತದೆ. ಹೀಗಾಗಿ ಈ ಬಿಕ್ಕಟ್ಟಿಗೆ ಶೀಘ್ರ ಪರಿಹಾರದ ಅಗತ್ಯವಿದೆ, ಆ ನಿಟ್ಟಿನಲ್ಲಿ ಅಮೆರಿಕ ಹೆಜ್ಜೆಯಿಡಬೇಕಿದೆ.

ಒಂದು ವೇಳೆ ಸುಂಕ ಸಮರವು ಮುಂದುವರಿದರೆ, ವಿಶ್ವ ವ್ಯಾಪಾರದ ಸಂಬಂಧದಲ್ಲಿ ಚಾಲ್ತಿಯಲ್ಲಿರುವ ಪದ್ಧತಿಗಳಲ್ಲಿ ಬಹಳಷ್ಟು ಬದಲಾವಣೆಗಳಾಗಲಿವೆ. ಮುಖ್ಯವಾಗಿ ವಿವಿಧ ದೇಶಗಳು ದ್ವಿಪಕ್ಷೀಯ ವಾಣಿಜ್ಯ ಒಪ್ಪಂದಗಳನ್ನು ಹೆಚ್ಚಾಗಿ ನೆಚ್ಚಿಕೊಳ್ಳಬೇಕಾಗಿ ಬರಬಹುದು. ಪ್ರತಿ ದೇಶಕ್ಕೂ ತನ್ನ ಹಿತಾಸಕ್ತಿಯನ್ನು ಕಾಯ್ದುಕೊಳ್ಳುವುದು ಆದ್ಯತೆಯ ವಿಷಯವಾಗುತ್ತದೆ, ಹೀಗಾಗಿ ಅದಕ್ಕೆ ಅಗತ್ಯವಾದ ಮಾರ್ಗಗಳನ್ನು ಅನುಸರಿಸುವುದು ಅನಿವಾರ್ಯವಾಗಿ ಪರಿಣಮಿಸುತ್ತದೆ.

(ಲೇಖಕರು ವಿಜಯ ಬ್ಯಾಂಕ್‌ನ ನಿವೃತ್ತ ಮುಖ್ಯ ಪ್ರಬಂಧಕರು)

ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ನಾಲ್ಕಾಣೆ ಕೋಳಿಗೆ...

'ಇದು ಇಂದ್ರನ ಅಮರಾವತಿಯೇ?' ಎಂಬ ಸಂಪಾದಕೀ ಯವು (ಏ.15) 'ನಾಲ್ಕಾಣೆ ಮುರ್ಗಿಗೆ ಹನ್ನೆರಡಾಣೆ ಮಸಾಲೆ' ಎಂಬ ಮಾತನ್ನು ನೆನಪಿಸಿತು. ರಾಜ್ಯದ ರಾಜಧಾನಿ ಸುಸಜ್ಜಿತವಾಗಿರಬೇಕು ಎಂಬುದರಲ್ಲಿ ಎರಡು ಮಾತಿಲ್ಲ; ಆದರೆ ಆಂಧ್ರಪ್ರದೇಶ ರೂಪಿಸಲಿರುವ ಅಮರಾವತಿ ರಾಜಧಾನಿಗೆ ನಿಗದಿಯಾಗಿಟ್ಟ ಮೊತ್ತ ಬರೋಬ್ಬರಿ 65,000 ಕೋಟಿ! ಜತೆಗೆ ವಿಶ್ವವನ್ನೇ ಆಕರ್ಷಿಸಬೇಕೆಂಬ ಹಂಬಲ! ಇದು ನಿಜವಾಗಿಯೂ ಬೇಕಿತ್ತೇ? ಟೋಕಿಯೋ, ಸಿಂಗಾಪುರದಂಥ ನಗರದ ಸೃಷ್ಟಿಯ ಹೆಸರಿನಲ್ಲಿ ಆಂಧ್ರದ ಸರಕಾರವು ರಾಜ್ಯವನ್ನೇ ಒಡವಾಗಿಸಲು ಹೊರಟಿರಬಹುದೇ ಎಂಬ ಅನುಮಾನವೂ ಇಲ್ಲಿ ಕಾಡುತ್ತದೆ. ಅಗತ್ಯವಿರುವುದು ಸುಸಜ್ಜಿತ ವ್ಯವಸ್ಥೆಯೇ ಹೊರತು ಭವ್ಯತೆಯಲ್ಲ. ರಾಜಧಾನಿಯ ನಿಜಸೌಂದರ್ಯ ಅಡಗಿರುವುದು ಅದು ಹೇಗೆ ಕೆಲಸ ಮಾಡುತ್ತದೆ ಎಂಬುದರ ಮೇಲೆಯೇ ಹೊರತು, ಕಣ್ಣು ಕುಕ್ಕುವಂತೆ ರೂಪಿಸುವುದರಲ್ಲಲ್ಲ. ಇದೇ ಮೊತ್ತದ ಕೆಲ ಭಾಗವನ್ನು ಜನಕಲ್ಯಾಣ ಯೋಜನೆಗಳಿಗೆ ಬಳಸುವಂತಾದರೆ, ಅದಕ್ಕಿಂತ ಹೆಚ್ಚು ಸೌಂದರ್ಯ ಬೇರೊಂದಿದೆಯೇ?

ಸಂಪಾದಕರೆಂದಂತೆ, ಒಬ್ಬ ಮನುಷ್ಯನಿಗೆ ಅನ್ನ-ಬಟ್ಟೆ- ವಸತಿ ಎಷ್ಟು ಮುಖ್ಯವೋ ಅದಕ್ಕೆ ಯಥೋಚಿತ ಮಾನ್ಯತೆ ಇದ್ದರೇನೇ ಚಂದ. ಅಷ್ಟಕ್ಕೂ ಇಷ್ಟೆಲ್ಲ ಹಣ ಯಾರದ್ದು, ಸಾಮಾನ್ಯ ತೆರಿಗೆದಾರರದ್ದಲ್ಲವೇ? ಅವರು ಈ ರೀತಿಯ ವೈಭವೋಪೇತ ರಾಜಧಾನಿಗೆ ಸಮ್ಮತಿ ಸೂಚಿಸಬಹುದೇ? ಅದಕ್ಕೆಂದು ಸಾಮಾನ್ಯರನ್ನು ಕೇಳುವವರಾರು? ತೆರಿಗೆ ತುಂಬುವುದೊಂದೇ ಅವರ ಕೆಲಸ! ಮುಂದಿನದು ಆಳುಗರಿಗೇ ಬಿಟ್ಟಿದ್ದು! ಒಂದಂತೂ ನಿಜ, ಈ ರೀತಿಯ ಅತಿರೇಕವನ್ನು ಯಾರೂ ಸಹಿಸರು. ಸಂಬಂಧಪಟ್ಟವರು ಈ ಕುರಿತು ಎಂದಾದರೂ ಆಲೋಚಿಸಬಹುದೇ?

– **ಶಂಕರನಾರಾಯಣ ಭಟ್**, ಮಾಡಗೇರಿ

ಇವರೂ ಸುಂಕವೀರರೇ!

ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಪ್ರತಿಸುಂಕ ವೀರರಾದರೆ ನಮ್ಮ ಬಿಬಿಎಂಪಿ ಅಧಿಕಾರಿಗಳು ಸುಂಕವೀರರು! ಸಾಮಾನ್ಯ ಜನರ ತಲೆಮೇಲೆ ಒಂದಿಲ್ಲೊಂದು ಬಗೆಯ ಸುಂಕವನ್ನು ಹೇರುತ್ತ ಹೋಗುವಲ್ಲಿ ಚತುರರು! ಇದೀಗ ಆ ಸುಂಕಪಟ್ಟಿಗೆ ಕಸ ವಿಲೇವಾರಿ ವಾಹನ ವೆಚ್ಚ ಸೇರಿಸಲ್ಪಡುತ್ತಿದೆ (ಬಿಬಿಎಂಪಿಯೂ ಟ್ರಂಪ್ ಅವರಂತೆ ಸುಂಕಗಳ ಮಾರುದ್ದ ಪಟ್ಟಿಯನ್ನು ಪ್ರದರ್ಶಿಸುವುದು ಒಳ್ಳೆಯದು).

ವಿದ್ಯಾರಣ್ಯಪುರದ ನನ್ನ ಮನೆಯಿರುವ ಬೀದಿಯಲ್ಲಿ ಕಸ ವಿಲೇವಾರಿ ವಾಹನವು ಎರಡು ದಿನಕ್ಕೊಮ್ಮೆ ಬರುತ್ತದೆ. ರಸ್ತೆಯ ಕಸವನ್ನು ಎರಡು, ಮೂರು ತಿಂಗಳಿಗೆ ಒಂದು ಬಾರಿ ಮಾತ್ರ ಬಿಬಿಎಂಪಿ ಕಡೆಯವರು ಗುಡಿಸುತ್ತಾರೆ, ಅದೂ ಕಾಟಾಚಾರಕ್ಕೆ ಗುಡಿಸಿ ಭಕ್ಷೀಸಿಗಾಗಿ ನಮ್ಮ ಬಳಿ ಕೈ ಒಡ್ಡುತ್ತಾರೆ. ನಮ್ಮ ಮನೆಯ ಎದುರು ಒತ್ತುವರಿಯೊಂದಿಗೆ ನಿರ್ಮಿಸಲಾಗಿರುವ ಆಹಾರ ಮಳಿಗೆಯ ಗ್ರಾಹಕರೂ ಸೇರಿದಂತೆ ಯಾರೆಲ್ಲಾ ರಸ್ತೆಮೇಲೆ ಬಿಸಾಡಿದ ತ್ಯಾಜ್ಯಗಳನ್ನು ನಿತ್ಯ ನಾನೇ ಎತ್ತಬೇಕು. ಹಾಗೆ ಎತ್ತಲು ಹೋಗಿಯೇ ಈಚೆಗೆ ಬೀದಿನಾಯಿಯ ಕಡಿತಕ್ಕೂ ಒಳಗಾದೆ.

ಇನ್ನು, ನಮ್ಮ ಬಡಾವಣೆಯ ಮುಖ್ಯರಸ್ತೆಯ ಪಾದಚಾರಿ ಮಾರ್ಗಗಳು ಸಂಪೂರ್ಣ ಅಸ್ತವ್ಯಸ್ತ ಹಾಗೂ ಒತ್ತುವರಿ ಆಗಿದ್ದು ನಡೆದಾಡಲು ಸಾಧ್ಯವೇ ಇಲ್ಲದಂತಾಗಿವೆ. ನಿರ್ಮಾಣ ಹಂತದ ಕಟ್ಟಡಗಳಿಗಾಗಿ ವರ್ಷಗಳ ಕಾಲ ಪಾದಚಾರಿ ಮಾರ್ಗಗಳನ್ನು ಆಕ್ರಮಿಸಲಾಗುತ್ತಿದ್ದು, ಪಾದಚಾರಿಗಳು ಕೈಯಲ್ಲಿ ಜೀವ ಹಿಡಿದುಕೊಂಡು ಮುಖ್ಯರಸ್ತೆಯ ಮೇಲೆ ಓಡಾಡುವಂತಾಗಿದೆ. ಇಷ್ಟೆಲ್ಲಾ 'ಶೌರ್ಯ' ಪ್ರದರ್ಶಿಸುತ್ತಿರುವ ಬಿಬಿಎಂಪಿಗೆ ನಾವೀಗ ಇನ್ನೊಂದಷ್ಟು ಸುಂಕ ತೆರಬೇಕಾಗಿದೆ. 'ಸುಂಕದವನ ಬಳಿ ಸುಖ-ದುಃಖ ಹೇಳಿಕೊಂಡು ಪ್ರಯೋಜನವಿಲ್ಲ' ಎಂಬ ಗಾದೆಮಾತು ಬಿಬಿಎಂಪಿಯ ಮಟ್ಟಿಗಂತೂ ನೂರಕ್ಕೆ ನೂರು ಸತ್ಯ.

– **ಎಚ್. ಆನಂದರಾಮ ಶಾಸ್ತ್ರೀ**, ಬೆಂಗಳೂರು

ತಲೆತಗ್ಗಿಸುವಂಥ ಕೃತ್ಯ

ರಾಷ್ಟ್ರ ಹಾಗೂ ರಾಜ್ಯದ ನಾನಾ ಕಡೆ ಅತ್ಯಾಚಾರದಂಥ ಅಮಾನವೀಯ ಕೃತ್ಯಗಳು ದಿನೇ ದಿನೆ ಹೆಚ್ಚಾಗುತ್ತಿರುವುದು ಕಳವಳಕಾರಿ ಸಂಗತಿಯಾಗಿದೆ. ಹುಬ್ಬಳ್ಳಿಯ ಬಡಾವಣೆಯೊಂದರಲ್ಲಿ ಐದು ವರ್ಷದ ಬಾಲಕಿಯ ಮೇಲೆ ಬಿಹಾರಿ ವ್ಯಕ್ತಿಯೊಬ್ಬ ಅತ್ಯಾಚಾರಕ್ಕೆ ಯತ್ನಿಸಿ ಕೊಲೆ ಮಾಡಿರುವ ಘಟನೆಯು ನಾಗರಿಕ ಸಮಾಜವು ತಲೆತಗ್ಗಿಸುವಂತೆ ಮಾಡಿದೆ.

ಪ್ರೀತಿ, ಮಮತೆ, ವಾತ್ಸಲ್ಯ ಮತ್ತು ಸ್ನೇಹಭಾವವನ್ನು ತುಂಬಿಕೊಂಡಿರಬೇಕಾದ ಮನುಷ್ಯ ಯಾಕೆ ಹೀಗೆ ಮಾನವೀಯತೆಯನ್ನು ಮರೆತು ಮೃಗೀಯ ವರ್ತನೆಯಲ್ಲಿ ತೊಡಗುತ್ತಿದ್ದಾನೆ ಎಂಬುದು ತಿಳಿಯದಾಗಿದೆ. ನೈತಿಕತೆಯನ್ನು ಗಾಳಿಗೆ ತೂರಿ ಇಂಥ ಪಾಪಕೃತ್ಯಗಳಲ್ಲಿ ತೊಡಗಿಸಿಕೊಳ್ಳುವುದು ತರವಲ್ಲ ಎಂಬ ಬುದ್ಧಿಮಾತನ್ನು ಹೇಳುವವರು ಇಲ್ಲದಿರುವುದೇ ಇದಕ್ಕೆ ಕಾರಣವೇ? ಹೆಣ್ಣು ಮಕ್ಕಳ ಮೇಲಿನ ಇಂಥ ಪೈಶಾಚಿಕ ಕೃತ್ಯಗಳು ಇನ್ನಾದರೂ ನಿಲ್ಲಬೇಕಿದೆ. ಇಂಥ ತಪ್ಪು ಮಾಡಿದವರು ಅದೆಂಥ ಪ್ರಭಾವಿಗಳೇ ಆಗಿರಲಿ ಹೆಡೆಮುರಿ ಕಟ್ಟಿ ಶಿಕ್ಷೆ ನೀಡುವ ನಿಟ್ಟಿನಲ್ಲಿ ಪೊಲೀಸ್ ವ್ಯವಸ್ಥೆಯು ಟೊಂಕ ಕಟ್ಟಬೇಕಿದೆ.

– **ಹರಳಹಳ್ಳಿ ಪುಟ್ಟರಾಜು**, ಪಾಂಡವಪುರ

ಜಾಗೃತಿ ಮೂಡಿಸಲಿ

ರಾಜ್ಯದಲ್ಲಿ ಬಹಿರಂಗವಾಗಿರುವ ಜಾತಿಗಣತಿಯ ಅಂಕಿ-ಅಂಶಗಳು ಹಲವಾರು ಪ್ರಶ್ನೆಗಳಿಗೆ, ಅವಲೋಕನಕ್ಕೆ ಎಡೆಮಾಡಿಕೊಡುತ್ತವೆ. ಸಂವಿಧಾನಬದ್ಧವಾಗಿ ಇಷ್ಟು ದಿನಗಳ ಕಾಲ ಯಾವ ಸಮುದಾಯವನ್ನು ಅಲ್ಪಸಂಖ್ಯಾತರು ಎಂದು ಪರಿಗಣಿಸಿ ವಿಶೇಷ ಮಾನ್ಯತೆಯನ್ನು ನೀಡಲಾಗಿತ್ತೋ, ಇಂದು ಅಂಥ ಜಾತಿಗಳೇ ಜನಸಂಖ್ಯೆಯಲ್ಲಿ ಅಗ್ರಸ್ಥಾನದಲ್ಲಿವೆ. ಅಷ್ಟೇ ಅಲ್ಲದೆ ರಾಜಕೀಯ ಹಿತಾಸಕ್ತಿಗಾಗಿ ಕೆಲವು ಜಾತಿಗಳನ್ನು ಹಲವು ಉಪಜಾತಿಗಳನ್ನಾಗಿ ವಿಭಜಿಸಿದ್ದು ಸಾಮಾಜಿಕ ಸಾಮರಸ್ಯಕ್ಕೆ ತೊಡಕಾಗಲಿದೆ. ರಾಜ್ಯದಲ್ಲಿ ಶೇ.2.98ರಷ್ಟು ಜನಸಂಖ್ಯೆ ಹೊಂದಿರುವ ಅಲ್ಪ ಸಂಖ್ಯಾತರ ಮಾನ್ಯತೆ ಹೊಂದಬೇಕಾದ ಬ್ರಾಹ್ಮಣ ಸಮುದಾಯವನ್ನು ಮಾತ್ರ ಸಾಮಾನ್ಯ ವರ್ಗದ ಪಟ್ಟಿಯಲ್ಲಿ ಹೆಸರಿಸಲಾಗಿದೆ.

ಇವೆಲ್ಲಾ ಅಂಕಿ-ಅಂಶಗಳ ಲೆಕ್ಕಾಚಾರಗಳನ್ನು ವಿಶ್ಲೇಷಿಸಿದಾಗ ಅಲ್ಪಸಂಖ್ಯಾತರು ಎಂದು ಕರೆಯಿಸಿಕೊಳ್ಳಲು ಇರಬೇಕಾದ ಮಾನದಂಡಗಳು ಏನು ಎಂಬುದನ್ನು ಸ್ಪಷ್ಟಪಡಿಸಬೇಕಿದೆ ಎನಿಸುತ್ತದೆ. ಜತೆಗೆ ಅಲ್ಪಸಂಖ್ಯಾತರ ಸ್ಥಾನ ಪಡೆದ ಕೆಲವು ಜಾತಿಗಳನ್ನು ಸಾಮಾನ್ಯ ವರ್ಗಕ್ಕೆ ಸೇರಿಸಬೇಕು ಹಾಗೂ ನಿಜವಾದ ಅಲ್ಪಸಂಖ್ಯಾತರನ್ನು ಗುರುತಿಸಿ ಅವರನ್ನು ಸಮಾಜದ ಮುಖ್ಯವಾಹಿನಿಗೆ ಕರೆ ತರುವಂತಾಗಬೇಕು. ಒಟ್ಟಿನಲ್ಲಿ ಈ ಜಾತಿ ಸಮೀಕ್ಷೆ ಮತ್ತು ಗಣತಿಯ ಲೆಕ್ಕಾಚಾರಗಳು ಸಮಾಜದಲ್ಲಿ ಜಾಗೃತಿ ಮೂಡಿಸುವ ಸಾಧನಗಳಾಗಬೇಕಿದೆ.

– **ಸುರೇಂದ್ರ ಪೈ**, ಭಟ್ಕಳ

ಔನ್ನತ್ಯವೋ, ಪತನವೋ?

ವಿವಿಧ ವೃತ್ತಿಪರ ಕೋರ್ಸುಗಳ ಪ್ರವೇಶಕ್ಕೆ ಇಂದು ಮತ್ತು ನಾಳೆ ಪರೀಕ್ಷೆಗಳು ನಡೆಯಲಿದ್ದು, ಈ ವೇಳೆ ಪರೀಕ್ಷಾರ್ಥಿಗಳು ಅನುಸರಿಸಬೇಕಾದ ಕಟ್ಟುಪಾಡುಗಳ ಬಗ್ಗೆ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕರು ವಿವರಿಸಿದ್ದಾರೆ. ಪರೀಕ್ಷಾರ್ಥಿಗಳು ಇಂಥದೇ ವಸ್ತ್ರ ಧರಿಸಬೇಕು, ಷೂ ಬದಲಿಗೆ ಚಪ್ಪಲಿ ಹಾಕಿಕೊಂಡಿರಬೇಕು, ಪರೀಕ್ಷೆ ಪ್ರಾರಂಭವಾಗುವುದಕ್ಕೆ ಒಂದೂವರೆ ಗಂಟೆ ಮುಂಚೆ ಹಾಜರಿದ್ದು ಪೊಲೀಸರಿಂದ/ಗೃಹರಕ್ಷಕ ದಳದವರಿಂದ ತಪಾಸಣೆಗೆ ಅನುವು ಮಾಡಿಕೊಡಬೇಕು ಹೀಗೆ ಇನ್ನೂ ಏನೇನೋ ಇದ್ದೀತು (ಉದಾಹರಣೆಗೆ ಹೆಣ್ಣು ಮಕ್ಕಳು ತಲೆಗೂದಲನ್ನು ಹಾಗೆಯೇ ಇಳಿಬಿಟ್ಟಿರಬೇಕು, ಓಲೆ, ಚಿನ್ನದ ಸರ, ಉಂಗುರ, ಕೈಗಡಿಯಾರ ಧರಿಸುವಂತಿಲ್ಲ ಇತ್ಯಾದಿ!). ಮೊಬೈಲ್ ಮತ್ತಿತರ ಸೂಕ್ಷ್ಮ ವಿದ್ಯುನ್ಮಾನ ಉಪಕರಣಗಳ ನಿಷೇಧ ಅರ್ಥವಾಗುವಂಥದ್ದು. ಆದರೆ ಕೆಲವೇ ಅಪಮಾರ್ಗಿಗಳನ್ನು ಹತ್ತಿಕ್ಕುವ ಸಲುವಾಗಿ ಇತರ ಸಭ್ಯ ಅಭ್ಯರ್ಥಿಗಳನ್ನೂ ತಪಾಸಣೆಗೆ ಒಳಪಡಿಸುವಂತಾಗಿರುವುದು ನೋಡಿದರೆ, ನಮ್ಮ ಪರೀಕ್ಷಾ ಪದ್ಧತಿ ಎತ್ತ ಸಾಗಿದೆ? ಇಷ್ಟೆಲ್ಲಾ ಕಠಿಣ ಕ್ರಮಗಳು ಔನ್ನತ್ಯದ ಸಂಕೇತವೋ ಅಥವಾ ಪತನಗಾಮಿಯೋ? ಎಂದು ಪ್ರಶ್ನಿಸಿಕೊಳ್ಳುವಂತಾಗುತ್ತದೆ.

– **ಸಾಮಗ ದತ್ತಾತ್ರಿ**, ಬೆಂಗಳೂರು

ಭಟ್ಟರ್ ಸ್ಕಾಚ್

- **ರವೀಂದ್ರ ಹೊಸ್ಮನೆ, ಕುಂದಾಪುರ**
ಭಟ್ರೇ, ಬೆಳಗ್ಗೆ ಬೆಳಗ್ಗೆಯೇ ಯಾಕೆ ಪಾರ್ಟಿ ಮಾಡೋದಿಲ್ಲ?
- **ಹಾಗೆ ನೋಡಿದರೆ ನಿಜವಾದ ಪಾರ್ಟಿ ಆರಂಭವಾಗೋದೇ ಬೆಳಗ್ಗೆ!**

- **ಸ್ವಾತಿ, ಮಲ್ಲೇಶ್ವರ**
ಭಟ್ರೇ, ಒಳ್ಳೆಯ ಶಾಂಪೇನ್ ಕುಡಿಯುವುದರ ನಿಜವಾದ ಸಮಸ್ಯೆ ಏನು?
- **ಟೇಬಲ್ ಹತ್ತಿ ಡಾನ್ಸ್ ಮಾಡಬೇಕಾಗುತ್ತದೆ!**

- **ಸುರೇಶ ಮುಮ್ಮಿಗಟ್ಟಿ, ಧಾರವಾಡ**
ಭಟ್ರೇ, ಈ ದಿನಗಳಲ್ಲಿ ಕುಡಿಯದವನೇ ಪಾಪಿಯಂತೆ ಹೌದಾ?
- **ಕುಡಿಯುವವನ ಸೇವಕನೂ ಹೌದು!**

- **ರುದ್ರೇಶ ಬಿ.ವಿ., ಚಾಮರಾಜಪೇಟೆ**
ಭಟ್ರೇ, ಪ್ರೀತಿಯಲ್ಲಿ ಬೀಳಬಾರದು ಅಂತಾರಲ್ಲ?
- **ಅದು ಸೇತುವೆಯಿಂದ ಬೀಳುವುದಕ್ಕಿಂತ ಅಪಾಯ ಅಂತ ಹಾಗೆ ಹೇಳಿರಬೇಕು!**

- **ಶಶಿಕಲಾ ಹೆಗಡೆ, ಸಿದ್ದಾಪುರ**
ಭಟ್ರೇ, ಪ್ರೀತಿ ಕುರುಡು ಮತ್ತು ಮದುವೆ ಒಂದು ಸಂಸ್ಥೆ ಅಂತಾರಲ್ಲ, ಹಾಗಂದ್ರೆ ಏನು?
- **'ಮದುವೆ ಒಂದು ಕುರುಡರ ಸಂಸ್ಥೆ' ಎಂದರ್ಥ!**

- **ರಾಧಾ ಹಿರೇಮಠ, ಬೆಂಗಳೂರು**
ಭಟ್ರೇ, ಗಂಡಸರು ಅವರ ವಿವಾಹ ದಿನವನ್ನು ನೆನಪಿಟ್ಟುಕೊಳ್ಳಲು ಏನು ಮಾಡಬೇಕು?
- **ಅವರ ಜನ್ಮದಿನದಂದೇ ಮದುವೆಯಾಗಬೇಕು!**

- **ರಚನಾ ನಾಯಕ, ಮೈಸೂರು**
ಭಟ್ರೇ, ವಯಸ್ಸಾದ ಬಳಿಕ ಹೆಂಗಸರು ಸೆಕ್ಸ್ ಬಗ್ಗೆ ಆಸಕ್ತಿ ಕಳೆದುಕೊಳ್ಳುತ್ತಾರಾ?
- **ಗಂಡಂದಿರ ಬಗ್ಗೆ ಆಸಕ್ತಿ ಕಳೆದುಕೊಳ್ಳಬಹುದಷ್ಟೆ!**

- **ರಮೇಶ ಗೌಡ, ಮಳವಳ್ಳಿ**
ಭಟ್ರೇ, ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಮುಕುಂದರಾಜ್ ಬಿಜೆಪಿ ಪಾಳಯದಲ್ಲಿ ಕಾಣಿಸಿಕೊಂಡಿದ್ದನ್ನು ನೋಡಿದವರು ಇದ್ದಾರಂತೆ?
- **ಹಾಗೆ ನೋಡಿದವರು ಕಣ್ಣು ಮುಚ್ಚಿಕೊಂಡಿದ್ದಿರಬಹುದು ಅಂತ ಅವರು ಭಾವಿಸಿದ್ದರಂತೆ!**

- **ಗಣೇಶ ಪಿ., ಮಂಡ್ಯ**
ಭಟ್ರೇ, ಗಂಡಸರ ದೊಡ್ಡ ಸಾಧನೆ ಅಂದ್ರೆ ಏನು?
- **ತನ್ನನ್ನು ಮದುವೆಯಾಗುವಂತೆ ಹೆಂಡತಿಯನ್ನು ಒಪ್ಪಿಸಿದ್ದು!**

- **ರಘು, ಮೈಸೂರು**
ಭಟ್ರೇ, ಒಬ್ಬ ಗಂಡಸು ಎಷ್ಟು ಸಲ ಮದುವೆಯಾಗಬಹುದು?
- **ಒಬ್ಬಳ ಜತೆಗಾದರೆ ನಿತ್ಯವೂ ಮದುವೆಯಾಗಬಹುದು!**

ಆಯೋಗದ ಮೇಲೆ ಆಯೋಗ, ಸಂತ್ರಸ್ತರಿಗಿಲ್ಲ ಪರಿಹಾರ ಯೋಗ

ಲೋಕಮತ
ಲೋಕೇಶ್ ಕಾಯರ್ಗ
kaayarga@gmail.com

ನಮ್ಮ ದೇಶದಲ್ಲಿ ಯಾವುದೇ ಹಗರಣ, ದುರಂತ, ಗದ್ದಲಕ್ಕೆ ಕಾರಣವಾದ ಪ್ರಕರಣಗಳು ನಡೆದ ಬಳಿಕ ವಿಚಾರಣಾ ಆಯೋಗ, ತನಿಖಾ ತಂಡ, ಸಮಿತಿ, ಸಂಸ್ಥೆ ರಚಿಸಿದರೆ ಸಾಕು. ಅಲ್ಲಿಗೆ ಎಲ್ಲವೂ ಸಮಾಪ್ತಿ, ಸಮಾಧಿ. ಆಯೋಗ, ತನಿಖಾ ತಂಡ ರಚನೆ ಆಗುವವರೆಗೂ ಹುಯಿಲೆಬ್ಬಿಸುವವರ ಆಗ್ರಹ, ಆಕ್ರೋಶ ಅಥವಾ ರಾಜಕೀಯ ಒತ್ತಾಸೆಗಳು ಆಯೋಗದ ವರದಿ ಬರುವಷ್ಟರಲ್ಲಿ ತಣ್ಣಗಾಗಿರುತ್ತದೆ. ಒಂದು ವೇಳೆ ಇನ್ನೂ ಒಂದಷ್ಟು ಕಾವು ಉಳಿದಿದ್ದರೆ ಆಯೋಗದ ವರದಿ ಅಧ್ಯಯನದ ನೆಪದಲ್ಲಿ ಇನ್ನೊಂದು ಉಪ ಸಮಿತಿ ರಚಿಸಿದರಾಯಿತು. ಆಳುವ ಪಕ್ಷಕ್ಕೆ ವರದಿ ಇಷ್ಟ ಆಗಲಿಲ್ಲ ಎಂದರೆ ವರದಿಯನ್ನು ನೇರವಾಗಿ ಶೈತ್ಯಾಗಾರಕ್ಕೆ ತಳ್ಳಬಹುದು. ಇಲ್ಲವೇ ಮತ್ತೊಂದು ಆಯೋಗ ರಚಿಸಿ ಕಾಲ ಹರಣ ಮಾಡಿದರಾಯಿತು. ಒಟ್ಟಾರೆ ಆಯೋಗ, ತನಿಖಾ ತಂಡಗಳೆಂದರೆ ನಮ್ಮಲ್ಲಿ ಆಳುವವರಿಗೆ ಬೇಕಿರುವುದನ್ನು ಹೊರ ತೆಗೆಯಲು, ಬೇಡವಿಲ್ಲದಿರುವುದನ್ನು ಮುಚ್ಚಲು ಬಳಸುವ ಹಾರೆ, ಗುದ್ದಲಿ ಇದ್ದಂತೆ.

ಹಾಗೆಯೇ ಒಮ್ಮೆ ಹಿಂದಕ್ಕೆ ತಿರುಗಿ ನೋಡಿ. ಕಳೆದ 50 ವರ್ಷಗಳಲ್ಲಿ ರಾಜೀವ್ ಗಾಂಧಿ ಪತನಕ್ಕೆ ಕಾರಣವಾದ ಬೋಫೋರ್ಸ್ ಹಗರಣದಿಂದ ಇಂದಿನವರೆಗೆ ನಾವು ಅದೆಷ್ಟು ರಾಜಕೀಯ ಮತ್ತು ಹಗರಣ, ಅವಾಂತರಗಳಿಗೆ ಸಾಕ್ಷಿಯಾಗಿಲ್ಲ ? ಆದರೆ ಆಯೋಗದ ವಿಚಾರಣಾ ವರದಿ ಇಲ್ಲವೇ ತನಿಖಾ ತಂಡದ ವರದಿಯನ್ನು ಆಧರಿಸಿ ಸಂತ್ರಸ್ತರಿಗೆ ನ್ಯಾಯ ದೊರಕಿದ, ತಪ್ಪಿತಸ್ಥರಿಗೆ ಶಿಕ್ಷೆಯಾದ ಉದಾಹರಣೆಗಳು ಇವೆಯೇ ಎಂದರೆ ನಮಗೆ ಬೆರಳೆಣಿಕೆಯಷ್ಟು ಉದಾಹರಣೆಗಳೂ ಸಿಗುವುದಿಲ್ಲ. ಇದಕ್ಕೊಂದು ಉತ್ತಮ ಉದಾಹರಣೆ ಎಂದರೆ ಚಾಮರಾಜನಗರ ಆಕ್ಸಿಜನ್ ದುರಂತ.

ಇನ್ನೆರಡು ವಾರ ಕಳೆದರೆ ಈ ಘಟನೆಗೆ ಭರ್ತಿ ನಾಲ್ಕು ವರ್ಷ. 2021ರ ಮೇ 2ರಂದು ಚಾಮರಾಜನಗರ ಜಿಲ್ಲಾಸ್ಪತ್ರೆಯಲ್ಲಿ ಅಂದು ನಡೆದ ಘೋರ ದುರಂತ ಜನರ ನೆನಪಿನಿಂದ ಇನ್ನೂ ಮಾಸಿಲ್ಲ. 30ಕ್ಕೂ ಹೆಚ್ಚು ಜನರ ಸಾವಿಗೆ ಕಾರಣವಾದ ಈ ಘಟನೆ ಸುಲಭವಾಗಿ ಮರೆಯುವಂಥದಲ್ಲ. ಸಂತ್ರಸ್ತರ ನೋವಿಗೆ ಸರಕಾರ ಸರಿಯಾಗಿ ಸ್ಪಂದಿಸಿದ್ದರೆ ಈ ನೋವು ಸ್ವಲ್ಪ ಮಟ್ಟಿಗಾದರೂ ಕಡಿಮೆಯಾಗ ಬಹುದಿತ್ತು. ಆದರೆ ಸಂತ್ರಸ್ತರಿಗೆ ಸೂಕ್ತ ಪರಿಹಾರ ಇನ್ನೂ ದೊರೆತಿಲ್ಲ. ಉದ್ಯೋಗ ಅವಕಾಶದ ಭರವಸೆಯೂ ಪೂರ್ತಿಯಾಗಿ ಈಡೇರಿಲ್ಲ. ಕಾಂಗ್ರೆಸ್ ಸರಕಾರದ ಅವಧಿಯಲ್ಲೂ ಪರಿಹಾರ ಪೂರ್ತಿಯಾಗಿ ಸಿಕ್ಕಿಲ್ಲ ಎನ್ನುವುದು ಸಂತ್ರಸ್ತರ ನೋವನ್ನೂ ಇನ್ನಷ್ಟು ಹೆಚ್ಚಿಸಿದೆ.

ಸಿದ್ದರಾಮಯ್ಯ ಸರಕಾರ ನಾಲ್ಕು ವರ್ಷಗಳ ಬಳಿಕ ಘಟನೆಯ ಬಗ್ಗೆ ಮತ್ತೊಮ್ಮೆ ತನಿಖೆ ನಡೆಸಲು ಮುಂದಾಗಿದೆ. ಕೋವಿಡ್ ಕಾಲದ ಖರೀದಿ ಹಗರಣಗಳ ಬಗ್ಗೆ ತನಿಖೆ ನಡೆಸುತ್ತಿರುವ ಮೈಕೆಲ್ ಡಿ'ಕುನ್ಹಾ ನೇತೃತ್ವದ ಆಯೋಗಕ್ಕೆ ಆಕ್ಸಿಜನ್ ದುರಂತದ ಬಗ್ಗೆಯೂ ವರದಿ ನೀಡಲು ಸರಕಾರ ಸೂಚಿಸಿದೆ. ಈ ಮಧ್ಯೆ ನಿವೃತ್ತ ನ್ಯಾಯಮೂರ್ತಿ ಬಿ.ಎ.ಪಾಟೀಲ್ ನೇತೃತ್ವದ ಆಯೋಗ ಈ ಸಂಬಂಧ ನೀಡಿದ ವರದಿಯನ್ನು ಸರಕಾರ ತಿರಸ್ಕರಿಸಿದೆ. ಬಿಜೆಪಿ ಸರಕಾರ ನೇಮಿಸಿದ ಈ ಆಯೋಗದ ವರದಿಯಲ್ಲಿ ಏನಿದೆ ಎಂಬುವುದು ಹಾಲಿ ಸರಕಾರಕ್ಕಷ್ಟೇ ಗೊತ್ತು. ಈ ಪ್ರಕರಣದ ಬಗ್ಗೆ ಎಷ್ಟಾದರೂ ತನಿಖೆ ನಡೆಯಲಿ, ನಮ್ಮ ಜೀವನೋಪಾಯಕ್ಕೆ ಅವಕಾಶ ಕಲ್ಪಿಸಿ ಕೊಡಿ ಎನ್ನುವುದು ಸಂತ್ರಸ್ತರ ಆಗ್ರಹ. ಆದರೆ ಬಿಜೆಪಿ ಸರಕಾರ ಅವಧಿಯ ಈ ದುರಂತದ ಬಗ್ಗೆ ತನಿಖೆ ನಡೆಸುವಲ್ಲಿ ಸರಕಾರಕ್ಕಿರುವ ಆಸಕ್ತಿ ಸಂತ್ರಸ್ತರ ಮೇಲೆ ಇದ್ದಂತಿಲ್ಲ.

ಅಧಿಕಾರಿ, ಆಡಳಿತದ ನಿರ್ಲಕ್ಷ್ಯದ ಸಾವು

ಜನಮಾನಸದಿಂದ ತುಸು ಮರೆಯಾಗಿರುವ ಈ ಘಟನೆಯನ್ನು ಮತ್ತೊಮ್ಮೆ ನೆನಪಿಸಿಕೊಳ್ಳಿ. ಕೊರೊನಾ ಹಾವಳಿಯಿಂದ ತತ್ತರಿಸಿದ್ದ ಕಾಲಘಟ್ಟವದು. ಜಿಲ್ಲಾಸ್ಪತ್ರೆಗಳನ್ನು ಕೊರೊನಾ ಆಸ್ಪತ್ರೆಗಳನ್ನಾಗಿ ಪರಿವರ್ತಿಸಲಾಗಿತ್ತು. 2021ರ ಮೇ 2ರಂದು ಚಾಮರಾಜನಗರ ಜಿಲ್ಲಾಸ್ಪತ್ರೆಯ ತೀವ್ರ ನಿಗಾ ವಿಭಾಗ ಸೇರಿದಂತೆ ಎಲ್ಲ ವಿಭಾಗಗಳೂ ಭರ್ತಿಯಾಗಿದ್ದವು. ಆಸ್ಪತ್ರೆಯಲ್ಲಿ ಆಮ್ಲಜನಕದ ಕೊರತೆ ಇರುವ ಬಗ್ಗೆ ವೈದ್ಯರಿಗೆ ಮತ್ತು ಅಧಿಕಾರಿಗಳಿಗೆ ಮೊದಲೇ ಮಾಹಿತಿ ಇತ್ತು. ಮೈಸೂರಿನಿಂದ ಬರಬೇಕಾದ ಆಮ್ಲಜನಕ ಸಿಲಿಂಡರ್ ಇನ್ನೂ ಬಂದಿರಲಿಲ್ಲ. ಆದರೆ ಆಕ್ಸಿಜನ್ ಖಾಲಿಯಾದರೆ ಆಗಬಹುದಾದ ದುರಂತಗಳ ಬಗ್ಗೆ ಅರಿವಿದ್ದ ಅಧಿಕಾರಿಗಳು,ವೈದ್ಯರು ಯಾವುದೇ ಆತಂಕವಿಲ್ಲದೆ ಮನೆಗೆ ತೆರಳಿದ್ದರು.

ರಾತ್ರಿ 10:30ರ ಬಳಿಕ ಆಸ್ಪತ್ರೆಯಲ್ಲಿ ಮರಣ ಮೃದಂಗ ಆರಂಭವಾಗಿತ್ತು. ವೆಂಟಿಲೇಟರ್‌ನಲ್ಲಿದ್ದ ರೋಗಿಗಳು ಉಸಿರಾಡಲು ಒದ್ದಾಟ ನಡೆಸುತ್ತಿದ್ದರು. ಆಗ ಬೆಂಕಿ ಬಿದ್ದ ಮೇಲೆ ಬಾವಿ ತೋಡುವ ಕೆಲಸ ಆರಂಭವಾಗಿತ್ತು. ಮೈಸೂರಿನಿಂದ ಹೆಚ್ಚುವರಿಯಾಗಿ ಆಕ್ಸಿಜನ್ ಸಿಲಿಂಡರ್‌ಗಳನ್ನು ಪೂರೈಸುವ ಕೆಲಸ ನಡೆಯಿತಾದರೂ ತೀವ್ರ ನಿಗಾ ಘಟಕದಲ್ಲಿದ್ದ ಹಲವು ರೋಗಿಗಳು ಅಷ್ಟರಲ್ಲಿ ಉಸಿರು ಚೆಲ್ಲಿದ್ದರು. ಕೆಲವರನ್ನು ರೋಗಿಗಳ ಸಂಬಂಧಿಕರು ಕರೆದೊಯ್ದು ಬೇರೆ ಆಸ್ಪತ್ರೆಗೆ ಸೇರಿಸಿದ್ದರು. ಇನ್ನು ಕೆಲವರು ಬೆಡ್ ಬಿಟ್ಟು ಏದುಸಿರು ಬಿಡುತ್ತಲೇ ಆಸ್ಪತ್ರೆ ಆವರಣಕ್ಕೆ ಬಂದು ಪ್ರಾಣ ಬಿಟ್ಟಿದ್ದರು. ಗಂಭೀರ ಸ್ಥಿತಿಯಲ್ಲಿ ಆಸ್ಪತ್ರೆ ಸೇರಲು ಬಂದವರೂ ದಾಖಲಾತಿ ಸಿಗದೇ ಆ್ಯಂಬುಲೆನ್ಸ್‌ಗಳಲ್ಲಿ ಬಾರದ ಲೋಕ ಸೇರಿದ್ದರು.

ಮುಚ್ಚಿ ಹಾಕುವ ಯತ್ನ

ಮರುದಿನ ಈ ಘಟನೆ ರಾಷ್ಟ್ರವ್ಯಾಪಿ ಸುದ್ದಿಯಾಗುತ್ತಿದ್ದಂತೆಯೇ ಸಚಿವರು, ಹಿರಿಯ ಅಧಿಕಾರಿಗಳು ಓಡೋಡಿ ಬಂದರು. ಆಕ್ಸಿಜನ್ ಕೊರತೆಯಿಂದ ಕೇವಲ ಮೂವರು ಮೃತಪಟ್ಟಿದ್ದಾರೆಂದು ಸಚಿವರು ಮಾಹಿತಿ ನೀಡಿದರು. ಮೃತರ ಸಂಬಂಧಿಕರನ್ನು ಭೇಟಿಯಾಗುವ, ಸ್ಥಳದಲ್ಲಿಯೇ ಪರಿಹಾರ ನೀಡುವ ಕನಿಷ್ಠ ಸೌಜನ್ಯವನ್ನೂ ತೋರಿಸಲಿಲ್ಲ. ಐಎಎಸ್ ಅಧಿಕಾರಿ, ಕೆಎಸ್ಆರ್ಟಿಸಿ ವ್ಯವಸ್ಥಾಪಕ ನಿರ್ದೇಶಕ ಶಿವಯೋಗಿ ಕಳಸದ್ ಅವರ ನೇತೃತ್ವದಲ್ಲಿ ತನಿಖೆಗೆ ಆದೇಶಿಸಿ ಬೊಮ್ಮಾಯಿ ಸರಕಾರ ಸುಮ್ಮನಾಯಿತು.

ಆದರೆ ಮರುದಿನವೇ ಈ ಪ್ರಕರಣವನ್ನು ಸ್ವಯಂಪ್ರೇರಿತವಾಗಿ ಕೈಗೆತ್ತಿಕೊಂಡ ಹೈಕೋರ್ಟ್ ಇದರ ಬಗ್ಗೆ ವಿಚಾರಣೆ ನಡೆಸಿ ವರದಿ ನೀಡಲು ನಿವೃತ್ತ ನ್ಯಾಯಮೂರ್ತಿ ವೇಣುಗೋಪಾಲಗೌಡ ನೇತೃತ್ವದಲ್ಲಿ ಕಾನೂನು ಸೇವೆಗಳ ಪ್ರಾಧಿಕಾರದ ಮೂವರು ಸದಸ್ಯರ ಸಮಿತಿಯನ್ನು ನೇಮಿಸಿತ್ತು. ಅದೇ ದಿನ ರಾಜ್ಯ ಸರಕಾರ ನ್ಯಾಯಾಂಗ ತನಿಖೆಗೆ ಆದೇಶಿಸಿತ್ತು. ನಿವೃತ್ತ ನ್ಯಾಯಮೂರ್ತಿ ಬಿ.ಎ.ಪಾಟೀಲ್ ನೇತೃತ್ವದ ಆಯೋಗಕ್ಕೆ ತನಿಖೆ ನಡೆಸಿ ಒಂದು ತಿಂಗಳ ಒಳಗೆ ವರದಿ ನೀಡಲು ಸರಕಾರ ಸೂಚಿಸಿತ್ತು. ಸರಕಾರ ನೇಮಿಸಿದ ಸಮಿತಿ ದುರ್ಘಟನೆಯಲ್ಲಿ 24 ಮಂದಿ ಮೃತಪಟ್ಟಿದ್ದಾರೆ ಹೈಕೋರ್ಟ್ ನೇಮಿಸಿದ ತನಿಖಾ ಸಮಿತಿ 36 ಮಂದಿ ಮೃತಪಟ್ಟಿದ್ದಾರೆ ಎಂದು ವರದಿ ನೀಡಿತ್ತು..

ಹೈಕೋರ್ಟ್‌ನ ಸೂಚನೆಯಂತೆ, ಮೃತಪಟ್ಟ 24 ಮಂದಿಯ ಕುಟುಂಬಗಳಿಗೆ 2021ರ ಜೂನ್ ತಿಂಗಳ ಆರಂಭದಲ್ಲಿ ತಲಾ 2 ಲಕ್ಷ ರು. ಬಳಿಕ ಆಗಸ್ಟ್ ಎರಡನೇ ವಾರದಲ್ಲಿ 13 ಮಂದಿಗೆ ಹೆಚ್ಚುವರಿಯಾಗಿ ತಲಾ 3 ಲಕ್ಷ ಹಣವನ್ನು ತಾತ್ಕಾಲಿಕ ಪರಿಹಾರವಾಗಿ ಜಿಲ್ಲಾಡಳಿತ ವಿತರಿಸಿತು. ಹೈಕೋರ್ಟ್ ನೇಮಿಸಿದ ತ್ರಿಸದಸ್ಯ ಸಮಿತಿ, ಆಮ್ಲಜನಕ ಪೂರೈಕೆ ಜಿಲ್ಲಾಡಳಿತ ಮತ್ತು ಆಸ್ಪತ್ರೆ ಅಧಿಕಾರಿಗಳ ಜವಾಬ್ದಾರಿ. ಆಸ್ಪತ್ರೆಯ ಆಡಳಿತ ಜಾಗರೂಕರಾಗಿದ್ದರೆ, ಪೂರೈಕೆದಾರರು ಸಮಯೋಚಿತವಾಗಿ ಮರುಪೂರಣಗೊಳಿಸಿದ್ದರೆ ಅಮೂಲ್ಯ ಜೀವ ಹಾನಿ ತಡೆಯಬಹುದಿತ್ತು ಎಂದು ವರದಿ ನೀಡಿತ್ತು.

ಅಂದು ಚಾಮರಾಜನಗರ ಜಿಲ್ಲಾಧಿಕಾರಿಯಾಗಿದ್ದ ಎಂ ಡಿ ರವಿ ಹಾಗೂ ಮೈಸೂರು ಜಿಲ್ಲಾಧಿಕಾರಿಯಾಗಿದ್ದ ರೋಹಿಣಿ ಸಿಂಧೂರಿ ನಡುವಿನ ಸಮನ್ವಯದ ಕೊರತೆಯಿಂದ ಈ ಘಟನೆ ಸಂಭವಿಸಿದೆ ಎನ್ನಲಾಗಿತ್ತು. ಪ್ರಕರಣದ ತನಿಖೆ ನಡೆಸಿದ ಹೈಕೋರ್ಟ್ ಬಳಿಕ ರೋಹಿಣಿ ಸಿಂಧೂರಿಗೆ ಕ್ಲೀನ್ ಚಿಟ್ ನೀಡಿತ್ತು. ನ್ಯಾಯಾಂಗ ತನಿಖೆಯಲ್ಲಿ ಜಿಲ್ಲಾಧಿಕಾರಿ ಎಂ.ಡಿ ರವಿ ಅವರ ವೈಫಲ್ಯವೇ ಘಟನೆಗೆ ಕಾರಣ ಎಂದು ತಿಳಿಸಲಾಗಿತ್ತು. ಇಷ್ಟೆಲ್ಲ ಗದ್ದಲಗಳ ಮಧ್ಯೆ ಸಚಿವರಾಗಲಿ, ಅಧಿಕಾರಿಗಳಾಗಲಿ ಸುಮಾರು ಎರಡು ತಿಂಗಳ ಕಾಲ ಮೃತರ ಕುಟುಂಬದವರನ್ನು ಭೇಟಿಯಾಗಿ ಸಾಂತ್ವನ ಹೇಳುವ ಕೆಲಸ ಮಾಡಲಿಲ್ಲ. ಈ ವೇಳೆ ಅಂದು ಈ ಪ್ರಕರಣವನ್ನು ಸಮರ್ಥವಾಗಿ ಬಳಸಿಕೊಂಡಿದ್ದು ಪ್ರತಿಪಕ್ಷ ಕಾಂಗ್ರೆಸ್ ಪಕ್ಷ.

ಕಾಂಗ್ರೆಸ್ ಮುತುವರ್ಜಿ

ಕೆಪಿಸಿಸಿ ಅಧ್ಯಕ್ಷರಾಗಿದ್ದ ಡಿ.ಕೆ.ಶಿವಕುಮಾರ್ ಅವರ ನೇತೃತ್ವದಲ್ಲಿ ಸಿದ್ದರಾಮಯ್ಯ ಸೇರಿದಂತೆ ಕಾಂಗ್ರೆಸ್ ನಾಯಕರು ಅಂದು ಎಲ್ಲ 36 ಸಂತ್ರಸ್ತರ ಮನೆಗಳಿಗೆ ಭೇಟಿ ನೀಡಿ ಸಾಂತ್ವನ ಹೇಳಿದ್ದರು. ಮೃತರ ಸಂಬಂಧಿಕರಿಗೆ ಕಾಂಗ್ರೆಸ್ ಪಕ್ಷದ ವತಿಯಿಂದ ತಲಾ ಒಂದು ಲಕ್ಷ ರು. ಪರಿಹಾರ ನೀಡಲಾಗಿತ್ತು. 2022ರ ಸೆಪ್ಟೆಂಬರ್‌ನಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಭಾರತ್ ಜೋಡೋ ಪಾದಯಾತ್ರೆಗಾಗಿ ಗುಂಡ್ಲುಪೇಟೆಗೆ ಬಂದಾಗ, ಸಂತ್ರಸ್ತರೊಂದಿಗೆ ಸಂವಾದ ನಡೆಸಿದ್ದರು. ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದರೆ ಮೃತರ ಸಂಬಂಧಿಕರಿಗೆ ಸರಕಾರಿ ನೌಕರಿ ನೀಡುವುದಾಗಿ ಭರವಸೆ ನೀಡಿದ್ದರು. ರಾಹುಲ್, ಡಿಕೆಶಿ ಆಶಯದಂತೆ ರಾಜ್ಯದಲ್ಲಿ ಕಾಂಗ್ರೆಸ್ ಸರಕಾರಕ್ಕೆ ಅಧಿಕಾರಕ್ಕೆ ಬಂತು. ಆದರೆ ಉದ್ಯೋಗ, ಪರಿಹಾರದ ನಿರೀಕ್ಷೆಯಲ್ಲಿದ್ದ ಸಂತ್ರಸ್ತರ ಕಡೆ ಸರಕಾರ ತಲೆ ಹಾಕಲಿಲ್ಲ.

ಬಹಳಷ್ಟು ಹೋರಾಟದ ಬಳಿಕ ಜಿಲ್ಲಾಡಳಿತ ಕೇವಲ 10 ಮಂದಿಗೆ ಹೊರಗುತ್ತಿಗೆ ಆಧಾರದಲ್ಲಿ 'ಡಿ' ಗ್ರೂಪ್ ನೌಕರಿ ನೀಡಿತು. ಇವರಿಗೂ ಸಕಾಲದಲ್ಲಿ ವೇತನ ಸಿಗಲಿಲ್ಲ. ಜಿಲ್ಲಾಡಳಿತದ ಮೌಖಿಕ ಸೂಚನೆ ಮೇರೆಗೆ ವಿವಿಧ ಇಲಾಖೆ ಕಚೇರಿಗಳಲ್ಲಿ ಹೊರಗುತ್ತಿಗೆ ಆಧಾರದಲ್ಲಿ ಕೆಲಸ ಮಾಡಿದ ಸಂತ್ರಸ್ತರಿಗೆ ಉದ್ಯೋಗ ಭದ್ರತೆಯ ಖಾತರಿಯೂ ಇರಲಿಲ್ಲ. ಸಂತ್ರಸ್ತರ ಸಂಬಂಧಿಕರಲ್ಲಿ ಡಿಗ್ರಿ, ಪಾಸಾದ ಪದವೀಧರರು ಇದ್ದರು. ಇವರು ಗುತ್ತಿಗೆ ಆಧಾರದ 'ಡಿ' ಗ್ರೂಪ್ ಹುದ್ದೆ ಸ್ವೀಕರಿಸಲು ಮುಂದೆ ಬರಲಿಲ್ಲ. ಈಗ ಸಂತ್ರಸ್ತ ಕುಟುಂಬದ ಬಹುತೇಕ ಸದಸ್ಯರು ಗುತ್ತಿಗೆ ಆಧಾರದ ಕೆಲಸ ತೊರೆದಿದ್ದಾರೆ. ಒಂದೋ ಕಾಯಂ ನೌಕರಿ ನೀಡಬೇಕು. ಇಲ್ಲವೇ ಪರಿಹಾರದ ಮೊತ್ತವನ್ನು ಹೆಚ್ಚಿಸಬೇಕೆನ್ನುವುದು ಇವರ ಆಗ್ರಹ.

ರಾಜಕೀಯ ಗಲಭೆಗಳಲ್ಲಿ ಮೃತಪಟ್ಟವರ ಕುಟುಂಬಕ್ಕೆ ಸರಕಾರ 25 ಲಕ್ಷ ರು. ಪರಿಹಾರ ನೀಡುತ್ತದೆ. ಆದರೆ ಸರಕಾರ ಮತ್ತು ಅಧಿಕಾರಿಗಳ ನಿರ್ಲಕ್ಷ್ಯದಿಂದ ಸಂಭವಿಸಿದ ಈ ಸಾವಿಗೆ ಸಂತ್ರಸ್ತರು ಹೆಚ್ಚಿನ ಪರಿಹಾರ ಕೇಳುವುದರಲ್ಲಿ ತಪ್ಪೇನೂ ಇಲ್ಲ. ಈ ಬಗ್ಗೆ ಜಿಲ್ಲಾಡಳಿತದ ಮಟ್ಟದಲ್ಲಿ ನಿರ್ಧಾರ ಕೈಗೊಳ್ಳಲು ಸಾಧ್ಯವಿಲ್ಲ. ಸಚಿವ ಸಂಪುಟದಲ್ಲಿ ಚರ್ಚಿಸಿ ಸರಕಾರ ನಿರ್ಧಾರ ತೆಗೆದುಕೊಳ್ಳಬೇಕು. ಆದರೆ ಸಂತ್ರಸ್ತರ ಮನೆಗೆ ಖುದ್ದಾಗಿ ಭೇಟಿ ನೀಡಿರುವ ಮೈಸೂರು ಭಾಗದವರೇ ಆದ ಸಿಎಂ ಸಿದ್ದರಾಮಯ್ಯ ಸರಕಾರಕ್ಕೆ ಇಂತಹ ಮಾನವೀಯ ನಿರ್ಧಾರ ತೆಗೆದುಕೊಳ್ಳಲು ನಾಲ್ಕು ವರ್ಷಗಳು ಬೇಕೇ ಎನ್ನುವುದು ಎಲ್ಲರೂ ಕೇಳುವ ಪ್ರಶ್ನೆ.

ಇದೀಗ ಚಾಮರಾಜನಗರದ ನೆಲದಲ್ಲಿಯೇ ವಿಶೇಷ ಸಂಪುಟ ಸಭೆ ನಡೆಸಲು ಸರಕಾರ ಸಜ್ಜಾಗಿದೆ. ಶುಕ್ರವಾರ (ಏಪ್ರಿಲ್ 17) ಮಲೆಮಹದೇಶ್ವರ ಬೆಟ್ಟದಲ್ಲಿ ನಡೆಯುವ ಸಂಪುಟ ಸಭೆಯಲ್ಲಾದರೂ ಆಕ್ಸಿಜನ್ ಸಂತ್ರಸ್ತರ ಕಣ್ಣೀರು ಒರೆಸುವ ಕೆಲಸ ಆಗಬೇಕು. ಪ್ರಾಕೃತಿಕವಾಗಿ, ಸಾಂಸ್ಕೃತಿಕವಾಗಿ ಶ್ರೀಮಂತ ಜಿಲ್ಲೆಯಾಗಿರುವ ಗಡಿ ಜಿಲ್ಲೆಯ ಜನರ ದೀರ್ಘ ಕಾಲದ ನೈಜ ಬೇಡಿಕೆಗಳಿಗೆ ಸರಕಾರ ಸ್ಪಂದಿಸಬೇಕು. ಸಂತ್ರಸ್ತರಿಗೆ ಕೊಡಲು ಸರಕಾರದ ಬಳಿ ದುಡ್ಡಿಲ್ಲ ಎಂದಾದರೆ ಕೋವಿಡ್ ಕಾಲದ ಹಗರಣಗಳ ಬಗ್ಗೆ ಇನ್ನಷ್ಟು ತನಿಖೆ ನಡೆಸುವ ಪ್ರಹಸನವನ್ನಾದರೂ ಕೈ ಬಿಡಬೇಕು. ಇದರಿಂದ ಈ ತನಿಖೆಯಿಂದ ಹಿಂದಿನ ಸರಕಾರದ ಮೇಲೆ ಮುಗಿ ಬೀಳುವುದರ ಹೊರತಾಗಿ ಯಾವ ಘನಂದಾರಿ ಕೆಲಸವೂ ಆಗದೆನ್ನುವುದು ಎಲ್ಲರಿಗೂ ಗೊತ್ತು.

ಇನ್ನು ತನಿಖೆಯ ವಿಚಾರಕ್ಕೆ ಬಂದರೆ ಕೋವಿಡ್ ಸಮಯದಲ್ಲಿ ಆಳುವವರು ಮತ್ತು ಅಧಿಕಾರಿಗಳು ಸಾಕಷ್ಟು ವಿಷಯಗಳನ್ನು ಮುಚ್ಚಿ ಹಾಕುವುದರ ಜತೆಗೆ ನೂರಾರು ಕೋಟಿ ರು. ನುಂಗಿರುವುದು ಮೇಲ್ನೋಟಕ್ಕೆ ತಿಳಿಯುವ ಸಂಗತಿ. ಬೆಂಗಳೂರು ಪಾಲಿಕೆ ವ್ಯಾಪ್ತಿಯಲ್ಲಿ 84 ಲಕ್ಷ ಆರ್‌ಟಿಪಿಸಿಆರ್ ಪರೀಕ್ಷೆ ಮಾಡಲಾಗಿದೆ ಎಂದು ಹೇಳಿ 502 ಕೋಟಿ ಬಿಲ್ ಮಾಡಿರುವ, ಕಿದ್ವಾಯಿ ಸಂಸ್ಥೆಯೊಂದರಲ್ಲೇ 24 ಲಕ್ಷ ಪರೀಕ್ಷೆ ಮಾಡಲಾಗಿದೆ ಎಂದು 146 ಕೋಟಿ ಬಿಲ್ ಮಾಡಿರುವ ವರದಿಗಳಿವೆ.

ಕೋವಿಡ್ ಕಾಲ ಘಟ್ಟದಲ್ಲಿ ನಡೆದ ಸಾವಿನ ಬಗ್ಗೆಯೂ ತಕರಾರುಗಳಿವೆ. 2021ರ ಜನವರಿಯಿಂದ ಜುಲೈವರೆಗಿನ ಕಾಲಾವಧಿಯಲ್ಲಿ ರಾಜ್ಯದಲ್ಲಿ ಆರ್ಥಿಕ ಹಾಗೂ ಸಾಂಖ್ಯಿಕ ನಿರ್ದೇಶನಾಲಯವು ಸಾರ್ವಜನಿಕ ಲೆಕ್ಕಪತ್ರ ಸಮಿತಿಗೆ ನೀಡಿರುವ ಅಂಕಿ ಅಂಶಗಳ ಪ್ರಕಾರ 4,26,943 ಸಾವುಗಳು ದಾಖಲಾಗಿವೆ. ಇದರ ಹಿಂದಿನ ವರ್ಷ ಇದೇ ಕಾಲಾವಧಿಯಲ್ಲಿ 2,69,069 ಸಾವುಗಳು ಮಾತ್ರ ದಾಖಲಾಗಿದ್ದವು. 2021ರ ಆಗಸ್ಟ್ 25ರವರೆಗೆ 37,206 ಮಂದಿ ಮಾತ್ರ ಸಾವಿಗೀಡಾಗಿರುವುದು ಮರಣ ದಾಖಲೆಯಲ್ಲಿ ದೃಢಪಟ್ಟಿದೆ ಎಂದು ಆರೋಗ್ಯ ಇಲಾಖೆಯ ಅಧಿಕಾರಿಗಳು ಸಮಿತಿಗೆ ತಿಳಿಸಿದ್ದಾರೆ. ಸುಮಾರು 1.20 ಲಕ್ಷದಷ್ಟು ಸಾವುಗಳ ಸಂಖ್ಯೆಯನ್ನು ಕಡಿಮೆ ತೋರಿಸುವ ಪ್ರಯತ್ನಗಳು ನಡೆದಿವೆ ಎಂಬ ದೂರುಗಳಿವೆ.

ಒಂದು ವೇಳೆ ಇವೆಲ್ಲವೂ ತನಿಖೆಯಲ್ಲಿ ದೃಢಪಟ್ಟರೆ ಅಂದು ಸರಕಾರದ ನಿರ್ಲಕ್ಷ್ಯದಿಂದ ಸತ್ತ ಲಕ್ಷಾಂತರ ಜನರ ಕುಟುಂಬ ವರ್ಗಕ್ಕೆ ಸರಕಾರ ಪರಿಹಾರ ನೀಡಲಿದೆಯೇ ಎಂದು ನಾವು ಕೇಳ ಬೇಕಾಗಿದೆ.

ನಾರದ ಸಂಚಾರ...

ಹೀಗೊಬ್ಬರು ಸರಳಜೀವಿ

'ರಾಜಕಾರಣಿಗಳಿಗೂ ರೈಲುಗಳಿಗೂ ಏನಾದರೂ ಸಂಬಂಧವಿದೆಯೇ?'' ಅಂತ ಕಲಹಪ್ರಿಯ ನಾರದರು ಒಂದೊಮ್ಮೆ ನಿಮ್ಮನ್ನು ಪ್ರಶ್ನಿಸಿದರೆ, ''ಖಂಡಿತಾ ಸಂಬಂಧವಿದೆ. ನಮ್ಮ ಕೆಲವು ರಾಜಕಾರಣಿಗಳು 'ರೈಲು ಬಿಡೋದ್ರಲ್ಲಿ' ಪಂಟರುಗಳು'' ಎಂಬ 'ಸಾರ್ವಕಾಲಿಕ' ಉತ್ತರವನ್ನೇ ನೀವು ನೀಡಿಬಿಡುತ್ತೀರಿ ಅಂತ ಗೊತ್ತು. ಆದರೆ ಇದಕ್ಕೆ ಹೊರತಾದ ಸಾಧ್ಯತೆಗಳೂ ಇವೆ ಎಂಬುದಕ್ಕೆ ಎಐಸಿಸಿ ತೆಲಂಗಾಣ ಉಸ್ತುವಾರಿಯಾಗಿರುವ ಮೀನಾಕ್ಷಿ ನಟರಾಜನ್ ಅವರೇ ಜೀವಂತ ಉದಾಹರಣೆ. ''ಉನ್ನತ ಸ್ತರದ ರಾಜಕಾರಣಿಗಳ ಕಾಲು ನೆಲದ ಮೇಲೆ ನಿಲ್ಲೋದು ದುಸ್ತರ, ಅವರು ಬಸ್ಸು-ರೈಲುಗಳಂಥ ಸಾರ್ವಜನಿಕ ಸಾರಿಗೆ ವ್ಯವಸ್ಥೆಗಳಲ್ಲಿ ಸಂಚರಿಸೋದೂ ಅಪರೂಪವೇ; ಅವರೇನಿದ್ದರೂ ಒಂಥರದಲ್ಲಿ 'ಗಗನಯಾತ್ರಿಗಳು'. ಏಕೆಂದರೆ ತುರ್ತು ಕೆಲಸವೇ ಇರಲಿ, ಇನ್ನಾವ ಕಾರುಬಾರೇ ಇರಲಿ ಅವರು ಹತ್ತೋದೇ ವಿಮಾನವನ್ನು'' ಎಂಬ ಗ್ರಹಿಕೆ ಸಾರ್ವತ್ರಿಕವಾಗಿರುವಾಗಲೇ, ಕಾಂಗ್ರೆಸ್ ನಾಯಕಿ ಮೀನಾಕ್ಷಿ ನಟರಾಜನ್ ಅವರು ರೈಲು ಪ್ರಯಾಣವನ್ನು ಮತ್ತೆ 'ಫ್ಯಾಷನಬಲ್'

ಮಾಡುವ ನಿಟ್ಟಿನಲ್ಲಿ ತಮ್ಮದೇ ಆದ ಪಾತ್ರವನ್ನು ವಹಿಸುತ್ತಿದ್ದಾರೆ. ತೀರಾ ತುರ್ತು ಸಂದರ್ಭಗಳಲ್ಲಿ ವಿಮಾನ ಹತ್ತುವುದನ್ನು ಹೊರತು ಪಡಿಸಿದರೆ, ಮಿಕ್ಕ ವೇಳೆ ಅವರು ನೆಚ್ಚುವುದು ರೈಲನ್ನೇ. ಕಾರಣ, ಹೇಳಿ-ಕೇಳಿ ಅವರು ಸರಳ ಜೀವನಶೈಲಿಗೆ ಅಂಟಿಕೊಂಡಿರುವ ಒಬ್ಬ ಗಾಂಧಿವಾದಿ. ಹೀಗಾಗಿ ಅವರು ಪಕ್ಷದ ಕಾರ್ಯದ ನಿಮಿತ್ತ ತೆಲಂಗಾಣದಲ್ಲಿ ಸುತ್ತುಹೊಡೆಯುವಾಗ, ಆಯಾ ಪ್ರದೇಶಗಳ ಕಾಂಗ್ರೆಸ್ ಪದಾಧಿಕಾರಿಗಳು ಮತ್ತು ಕಾರ್ಯಕರ್ತರು ಅವರನ್ನು ಸ್ವಾಗತಿಸಲೆಂದು, ತಾವು ಬಹಳ ಕಾಲದಿಂದ ಮರೆತೇಬಿಟ್ಟಿರುವ ರೈಲು ನಿಲ್ದಾಣಗಳಿಗೆ ಬಲವಂತವಾಗಿಯಾದರೂ ನಗುತ್ತಾ ಬರುವುದನ್ನು ಬಿಟ್ಟರೆ ಗತ್ಯಂತರವಿಲ್ಲವಂತೆ. ಇಂಥ ಸಂದರ್ಭಗಳಲ್ಲೆಲ್ಲ ಮೀನಾಕ್ಷಿ ನಟರಾಜನ್ ಅವರು, ರೈಲು ಪ್ರಯಾಣವನ್ನು ನೆಚ್ಚಬೇಕಿರುವುದರ ಅನಿವಾರ್ಯತೆಯ ಕುರಿತು 'ಪಕ್ಷಸ್ಥರಿಗೆ' ಮನವರಿಕೆ ಮಾಡಿಕೊಡುತ್ತಾರಂತೆ!

''ಅದರಿಂದ ಯಾರಾದರೂ ಪಾಠ ಕಲಿತಿದ್ದಾರಾ?'' ಅಂತ ಮಾತ್ರ ನೀವು ನಾರದರನ್ನು ಪ್ರಶ್ನಿಸಬಾರದು, ಜೋಕೆ!!

ಅರ್ಥವಾಗೋದಿಲ್ಲ ಕಣ್ರೀ!

''ನನ್ನನ್ನು ಮುಗಿಸಲು ಯಾರಿಗೂ ಸಾಧ್ಯವಿಲ್ಲ; ಇಡೀ ಕರ್ನಾಟಕದ ಹಿಂದೂಗಳು ನನ್ನ ಜತೆಗಿದ್ದಾರೆ. ನನ್ನಲ್ಲಿ ಕಿತ್ತೂರು ರಾಣಿ ಚೆನ್ನಮ್ಮ, ಸಂಗೊಳ್ಳಿ ರಾಯಣ್ಣ, ಅಂಬೇಡ್ಕರ್ ರಕ್ತ ಹರಿಯುತ್ತಿದೆ. ನನ್ನನ್ನು ಮುಗಿಸಲು ಯತ್ನಿಸಿದರೆ ಕರ್ನಾಟಕದಲ್ಲಿ ಬೆಂಕಿ ಹೊತ್ತಿಕೊಳ್ಳುತ್ತದೆ'' ಎಂದು ಬಿಜೆಪಿಯಿಂದ ಇತ್ತೀಚೆಗಷ್ಟೇ ಉಚ್ಚಾಟಿಸಲ್ಪಟ್ಟ ಶಾಸಕ ಬಸನಗೌಡ ಪಾಟೀಲ್ ಯತ್ನಾಳರು ಅಬ್ಬರಿಸಿದ್ದಾರೆ. ಈ ಮಾತಿಗೆ ಅವರ ಎದುರಾಳಿಗಳು ಪ್ರತಿಕ್ರಿಯಿಸೋದು ಇರಲಿ, ಭಿನ್ನಮತದ ದನಿಯೆತ್ತಿ ಯತ್ನಾಳರು ಕಟ್ಟಿಕೊಂಡಿದ್ದ ಬಣದವರು ಕೂಡ 'ಕಮಕ್-ಕಿಮಕ್' ಎಂದಿಲ್ಲ. ಒಟ್ನಲ್ಲಿ, ರಾಜಕೀಯ ರಂಗದವರ ಲೆಕ್ಕಾಚಾರಗಳನ್ನು ಅರ್ಥಮಾಡಿಕೊಳ್ಳೋದೇ ಕಷ್ಟ ಕಣ್ರೀ!

ವಚನಗಳು ಸಾಹಿತ್ಯ ಪ್ರಕಾರವೇ ಹೊರತು ವೀರಶೈವ ಧರ್ಮಗ್ರಂಥಗಳಲ್ಲ!

ರವಿ ಹಂಜ್
ಬಸವ ಮಂಟಪ
vveditoped@gmail.com

(ಭಾಗ-2)

ವಚನ ಸಾಹಿತ್ಯವು ವೀರಶೈವ ಧರ್ಮದ ಒಂದು ಸಾಹಿತ್ಯ ಪ್ರಕಾರ. ಸಮಾಜದ ಕಟ್ಟಕಡೆಯ ವ್ಯಕ್ತಿಯೂ ವೀರಶೈವ ಸಮಸಮಾಜದ ಪ್ರತಿಪಾದಕನಾಗಿ ಸರಳ ತತ್ವೋಕ್ತಿಗಳನ್ನು ತನ್ನ ಕಾಯಕದ ಜತೆಜತೆಗೆ ಅನುಸಂಧಾನಗೊಳಿಸಿ ಅಭಿವ್ಯಕ್ತಿಸಬಲ್ಲ ಸಾಹಿತ್ಯಿಕ ಮುಖವಾಣಿ! ಈ ಪ್ರಕಾರವು ಹತ್ತನೇ ಶತಮಾನದ ಓಹಿಲ, ಉದ್ಭಟರಿಂದ ಹನ್ನೊಂದನೇ ಶತಮಾನದ ದಾಸಿಮಯ್ಯನಲ್ಲದೆ ಇತ್ತೀಚಿನ ಆಧುನಿಕ ವಚನಕಾರರವರೆಗೂ ಪ್ರಚಲಿತವಿರುವ ವಿಶೇಷ ಸಾಹಿತ್ಯ ಪ್ರಕಾರವೇ ಹೊರತು ವಚನಗಳ ಕಟ್ಟುಗಳೇ ವೀರಶೈವ ಧರ್ಮಗ್ರಂಥಗಳಲ್ಲ!

ಇನ್ನು, ಪುರಾಣಗಳಾದ ಪಾಶುಪತಾಗಮ, ಸುಪ್ರಭೇದಾಗಮ, ವೀರಶೈವಾಚಾರಕೌಸ್ತುಭ, ವೀರಶೈವಧರ್ಮ ಸಿಂಧುಗಳು, ವೀರಶೈವತ್ವವು ಅನಾದಿಯಾಗಿದ್ದು ಸೃಷ್ಟಿಯ ಕಾಲದಿಂದಲೂ ಅಸ್ತಿತ್ವದಲ್ಲಿದ್ದು, ಪ್ರತಿ ಯುಗದಲ್ಲಿಯೂ ಐವರು ಆಚಾರ್ಯರು ವೀರಶೈವತ್ವದ ಬೋಧನೆ ಮತ್ತು ಪ್ರಚಾರ ಮಾಡಿರುತ್ತಾರೆ ಎನ್ನುತ್ತವೆ. ಇವರನ್ನೇ ಪಂಚಾಚಾರ್ಯರು ಎನ್ನುವುದು! ಕಲಿಯುಗದ ಪಂಚಾಚಾರ್ಯರೆಂದರೆ; ರೇವಣ, ಏಕೋರಾಮ, ಮರುಳ, ಪಂಡಿತ ಮತ್ತು ವಿಶ್ವೇಶ್ವರ. ಪಂಚಾಚಾರ್ಯರು ಸ್ಥಾಪಿಸಿದ ಐದು ಮಠಗಳು ಎಂದು ಎಲ್ಲರೂ ಬಲ್ಲರು. ವೀರಶೈವ ಲಿಂಗಾಯತರೆಲ್ಲರೂ ತಮ್ಮ ಗೋತ್ರಗಳನ್ನು ಈ ಐವರು ಪಂಚಾಚಾರ್ಯರೊಂದಿಗೆ ಗುರುತಿಸಿಕೊಳ್ಳುತ್ತಾರೆ. ಈ ಗುರುತಿಸುವಿಕೆ ಇಲ್ಲದಂಥ ಲಿಂಗಾಯತರಿಲ್ಲ!

ಹನ್ನೊಂದನೇ ಶತಮಾನದ ಜೇಡರ ದಾಸಿಮಯ್ಯರಿಂದ ಹಿಡಿದು ಬಸವಣ್ಣ ಪ್ರಭುದೇವರಲ್ಲದೆ ಹದಿನೇಳನೇ ಶತಮಾನದವರೆಗಿನ ಎಲ್ಲಾ ವಚನಕಾರರೂ ಸಮಾಜದ ವಿವಿಧ ವರ್ಗಗಳಿಂದ ಬಂದವರಾಗಿದ್ದು, ಎಲ್ಲರೂ ಸಾಮಾನ್ಯವಾಗಿ ತಮ್ಮ ವಚನಗಳಲ್ಲಿ ಏಕಮೇವ ಪರಮಾತ್ಮನಾದ ಶಿವನ ಭಕ್ತಿ, ಇಷ್ಟಲಿಂಗದ ಪೂಜೆ, ಅಷ್ಟಾವರಣಗಳು ಮತ್ತು ಷಟ್‌ಸ್ಥಳ ಸಿದ್ಧಾಂತದ ಪ್ರತಿಪಾದನೆ ಮಾಡಿರುತ್ತಾರೆ. ವೀರಶೈವ ಸಿದ್ಧಾಂತವು ಏಕಮೇವ ಪರಮಾತ್ಮನಾದ ಪರಶಿವನ ಉಪಾಸನೆಯನ್ನು ಮಾತ್ರ ಪ್ರತಿಪಾದಿಸುತ್ತದೆ. ಅದಕ್ಕೆ ಪೂರಕವಾಗಿ ಬಸವಣ್ಣನವರು, ''ಇಬ್ಬರು ಮೂವರು ದೇವರೆಂದು ಉಬ್ಬಿ ಮಾತಾಡಬೇಡ, ದೇವನೊಬ್ಬನೇ ಕಾಣಿರೋ ಇಬ್ಬರೆಂಬುದು ಹುಸಿನೋಡಾ, ಕೂಡಲ ಸಂಗಮ ದೇವನೊಬ್ಬನೇ ಅಲ್ಲದೇ ಇಬ್ಬರಿಲ್ಲವೆಂದಿತ್ತುದಾ ವೇದವು'' ಎಂದು ವೇದವನ್ನು ಎತ್ತಿ ಹಿಡಿದಿದ್ದಾರೆ.

ಶರಣರು ಬಹುದೇವತಾ ವಾದವನ್ನು ಒಪ್ಪುವುದಿಲ್ಲವಾದರೂ ಪ್ರತಿ ಶರಣರು ತಮ್ಮ ಮನದಿಚ್ಛೆಯಂತೆ ಶಿವನನ್ನು ಕಲ್ಪಿಸಿಕೊಂಡಿದ್ದಾರೆ. ಶಿವನ ಅಸಂಖ್ಯಾತ ಪ್ರಕಾರದ ನೃತ್ಯಭಂಗಿಗಳಂತೆಯೇ ಅವನನ್ನು ವಿವಿಧ ರೂಪಗಳಲ್ಲಿ, ಹೆಸರುಗಳಲ್ಲಿ ಬಹುರೂಪಿಯಾಗಿಸಿ ಭಕ್ತರು ಆರಾಧಿಸುತ್ತಾರೆಯೇ ಹೊರತು ಬಹುದೇವತೆಗಳನ್ನಲ್ಲ! ಆದರೆ ಇವೆಲ್ಲದರ ಮೂಲ, ಬ್ರಹ್ಮಾಂಡದ ಮೂಲಭೂತ ಕಂಪನ ಶೀಲಶಕ್ತಿಯ ಮೂರ್ತಸ್ವರೂಪವಾಗಿದೆ. ಸಾಮಾನ್ಯ ಶರಣರು ಪುರಾಣದಲ್ಲಿ ವರ್ಣಿಸಿರುವ ಶಿವನನ್ನು ಕಲ್ಪಿಸಿಕೊಂಡಿದ್ದರೆ, ಅಸಾಮಾನ್ಯರು ಅಮೂರ್ತರೂಪಿಯಾಗಿ ಕಂಡುಕೊಂಡಿದ್ದಾರೆ. ಇದು ಜ್ಞಾತದ ಮೂಲಕ ಅಜ್ಞಾತದವರೆಗೆ ಪಯಣ ಮಾಡುವ ಸಾಕ್ಷಾತ್ಕಾರ ಸ್ವರೂಪವೇ ಆಗಿದೆ. ಪರಮಾತ್ಮನ ಕಲ್ಪನೆಯಲ್ಲಿ ವೀರಶೈವವು ಇತರೆ ಶೈವಪಂಥಗಳಂತೆಯೇ ಇದ್ದು ತಮಿಳು ಶೈವಸಂತರ ಸ್ಫೂರ್ತಿ ನಮ್ಮ ಶರಣರ ವಚನಗಳಲ್ಲಿ ಅಲ್ಲಲ್ಲಿ ಕಂಡುಬರುತ್ತದೆ. ಇದನ್ನು ಪುಷ್ಟೀಕರಿಸುವಂತೆ ಮುರುಘಾಮಠದ ಶಾಖಾಮಠಗಳು ಇಂದಿಗೂ ತಮಿಳುನಾಡಿನಲ್ಲಿವೆ! ಹಾಗಿದ್ದಾಗ ಭಂಜಕರ ಲಿಂಗಾಯತ ಯಾವುದು?

ಇಷ್ಟಲಿಂಗ ಕಲ್ಪನೆ ವೀರಶೈವಮತದ ವೈಶಿಷ್ಟ್ಯಗಳಲ್ಲೊಂದು; ನಮ್ಮೊಳಗೆ ಚೈತನ್ಯರೂಪದಲ್ಲಿ ವಾಸಿಸಿರುವ ಶಿವನನ್ನೇ ಹೊರತೆಗೆದು, ಗುರುವು ಲಿಂಗರೂಪದಲ್ಲಿ ನಮ್ಮ ಕೈಯಲ್ಲಿ ಕೊಡುವುದೇ ಇಷ್ಟಲಿಂಗ! ಪ್ರಾಚ್ಯಶಾಸ್ತ್ರಜ್ಞರಲ್ಲಿ ಕೆಲವರು ಲಿಂಗವನ್ನು ಪುರುಷಜನನಾಂಗದ ರೂಪವೆಂದೂ, ಇನ್ನು ಕೆಲವರು ಅದು ಬೌದ್ಧಸ್ತೂಪದ ಕಿರುಪ್ರತಿಮೆಯೆಂದೂ ಕಲ್ಪಿಸುತ್ತಾರೆ. ಇದು ಅವರವರ ಭಾವಕ್ಕೆ ಎನ್ನಬಹುದು. ಆದರೆ ಧರಿಸುವಂಥ ಇಷ್ಟಲಿಂಗಗಳನ್ನು ಹೋಲುವ ಸಣ್ಣ ಸಣ್ಣ ಲಿಂಗಾಕೃತಿಗಳು ಹರಪ್ಪಾ ಮೊಹೆಂಜೋದಾರೋ ಉತ್ಖನನದಲ್ಲಿ ಸಿಕ್ಕಿದ್ದು ಇವು ಐತಿಹಾಸಿಕ ಪರಂಪರೆಯನ್ನು ಎತ್ತಿ ಹಿಡಿಯುತ್ತವೆ.

ಇನ್ನು ವೀರಶೈವದ ಅಷ್ಟಾವರಣಗಳು ಎಂದರೆ ಎಂಟು ಲಾಂಛನಗಳು, ಚಿಹ್ನೆಗಳು, ಅಥವಾ ಆಚರಣೆಗಳು ಎಂದರ್ಥ. ವೇದಗಳ ಕೊನೆಗೆ ಬರುವ ಬ್ರಾಹ್ಮಣ್ಯಗಳಲ್ಲಿರುವ ಕರ್ಮಕಾಂಡ, ಧಾರ್ಮಿಕವಿಧಿ-ಆಚರಣೆಗಳನ್ನು ವೀರಶೈವತ್ವವು ತಿರಸ್ಕರಿಸಿ ಬದಲಿಗೆ ಅಷ್ಟಾವರಣಗಳನ್ನು ನೀಡುತ್ತದೆ. ಗುರು, ಲಿಂಗ, ಜಂಗಮ, ಪಾದೋದಕ, ಪ್ರಸಾದ, ವಿಭೂತಿ, ರುದ್ರಾಕ್ಷ, ಮಂತ್ರ (ಪಂಚಾಕ್ಷರಿ ಹಾಗೂ ಷಡಕ್ಷರಿ ಮಂತ್ರ) ಇವೇ ವೀರಶೈವದ ಅಷ್ಟಾವರಣಗಳು. ಬಸವಣ್ಣನವರು, ''ಎನ್ನ ಮನದಲ್ಲಿ ಮತ್ತೊಂದನರಿಯೆನಯ್ಯಾ, ಓಂ ನಮಃ ಶಿವಾಯ, ಓಂ ನಮಃ ಶಿವಾಯ ಎನಗಿದೆ ಮಂತ್ರ, ಇದೇ ಜಪ ಕೂಡಲಸಂಗಮದೇವಾ ನೀನೇ ಬಲ್ಲೆ, ಎಲೆ ಲಿಂಗವೆ'' ಎಂದರೆ, ಅಲ್ಲಮಪ್ರಭುದೇವರು, ''ಓಂ ನಮಃ ಶಿವಾಯಯೆಂಬುದನರಿಯದೆ ಜಗವೆಲ್ಲವು ನಾಯಾ(ಯಿತ್ತು) ತಮ್ಮ ತಾವರಿಯದವರಿಗೆ, ಇನ್ನು ಹೇಳಿ ಕೇಳಿದಂತೆ ಆಚರಿಸದಿರ್ದಡೆ ಆ ನಾಯ ಸಾವು ತಪ್ಪದು. ಇನ್ನೆತ್ತಣ ಮುಕ್ತಿ? ಅವರಿಗೆ ಬೋಧಿಸಿದ್ದಾನಗದುಫ ಕಾಣಾ ಗುಹೇಶ್ವರಾ'' ಎಂದು ಹೇಳಿ ಕೇಳಿದಂತೆ ಆಚರಿಸದವನು ನಾಯಿ ಎಂದು ಮೂದಲಿಸಿದ್ದಾರೆ! ಹಾಗೆಯೇ ಮುಂದುವರಿದು, ''ಓಂ ನಮಃ ಶಿವಾಯ ಎಂಬ ದೇವನಿರಲು ಒಡಲುವಿಡಿದು ಪಾಷಾಣಕ್ಕೆ ಹಂಗಿಗರಾದಿರೆ. ಶರೀರ, ಶರೀರ ರೂಹಿಸಿದ ರೂಹಿಂಗೆ ಮಾಯದ ಬಲೆಯಲ್ಲಿ ಸಿಲುಕಿ ಅಂಗಸಂಗಿಗಳೆಲ್ಲರು ಮಹಾಘನವನರಿಯದೆ ಹೋದಿರೆ. ಹುಸಿಯನೆ ಕೊಯ್ದು ಹುಸಿಯನೆ ಪೂಜಿಸೆ ನೇಮದೊಳಗಿದು ಸಲ್ಲದು, ಗುಹೇಶ್ವರಾ, ನಿಮ್ಮ ಶರಣರ ಸಂಬಂಧ ತೋರದು ತೋರದು ಬಹುಮುಖಿಗಳಿಗೆ!'' ಎಂದಿದ್ದಾರೆ. ಇವರಂತೆಯೇ ಚೆನ್ನಬಸವಣ್ಣ, ಅಕ್ಕ, ಮತ್ತಿತರೆ ಶರಣರು 'ಓಂ ನಮಃ ಶಿವಾಯ' ಎಂಬ ಮಂತ್ರವನ್ನು ಪಠಿಸಿದ್ದಾರೆಯೇ ಹೊರತು ಇನ್ನಾವ ಮಂತ್ರವನ್ನಲ್ಲ. ಆದರೆ ಲಿಂಗಾಹತಿಗಳು ಓಂ ಎನ್ನುವುದೇ ಲಿಂಗಾಯತಕ್ಕೆ ಹೊರಗು ಎನ್ನುತ್ತಾರೆ! ಅಂದರೆ ಇವರು ಹೇಳುವ ಲಿಂಗಾಯತ ಯಾವುದು?!

ಅಲ್ಲದೆ ವೀರಶೈವರಲ್ಲಿ ಕಳಸ ಸ್ಥಾಪನೆ, ಲಿಂಗದೀಕ್ಷೆ, ಮದುವೆ ಮತ್ತು ಅಂತ್ಯಸಂಸ್ಕಾರದ ವಿಶಿಷ್ಟ ವಿಧಿವಿಧಾನಗಳಿವೆ. ಆದರೆ ಇದೆಲ್ಲವೂ ಮೌಢ್ಯ ಎಂದು ಲಿಂಗಾಹತಿಗಳು ಹೇಳುತ್ತಾರೆ! ಶೈವ ಸಿದ್ಧಾಂತ, ಪಂಚರಾತ್ರ ಮುಂತಾದ ಭಾರತೀಯ ದರ್ಶನಗಳಂತೆ ವೀರಶೈವತ್ವವು ಸಹ ಸೃಷ್ಟಿಯಲ್ಲಿ ಶಕ್ತಿಯ ಪಾತ್ರವನ್ನು ಗುರುತಿಸುತ್ತದೆ. ಶಿವನು ತನ್ನ ಲೀಲೆಗಾಗಿ ಸೃಷ್ಟಿಯನ್ನು ರಚಿಸಿದನು, ಶಕ್ತಿಯು ಶಿವನಲ್ಲಿ ಉದ್ಭವಿಸಿ ನಂತರ ಸ್ವಪ್ರೇರಣೆಯಿಂದ ಕಲಾಶಕ್ತಿ ಮತ್ತು ಭಕ್ತಿಶಕ್ತಿ ಎಂಬ ಎರಡವತಾರಗಳನ್ನು ಧರಿಸುತ್ತಾಳೆ. ಕಲಾಶಕ್ತಿಯು ಮಾಯೆಯ ಸ್ವರೂಪಳು ಅವಳೇ ಅವಿದ್ಯೆ; ಅವಿದ್ಯೆಯೇ ಜೀವ ಮತ್ತು ಶಿವನ ನಡುವಿನ ಭೇದಕ್ಕೆ ಕಾರಣ. ಈಗ ವೀರಶೈವ ಲಿಂಗಾಯತ ಬೇರೆ ಎಂದು ಬೇಯುತ್ತಿರುವವರಿಗೆ ಈ ಅವಿದ್ಯೆಯೇ ಕಾರಣ!

ಇರಲಿ, ಭಕ್ತಿಶಕ್ತಿಯು ಸಚ್ಚಿದಾನಂದ ಸ್ವರೂಪಳೂ, ಮೋಕ್ಷಪ್ರದಾಯಿನಿಯೂ, ಈ ಭವದ ಬಂಧನಗಳನ್ನು ಬಿಡಿಸುವವಳೂ ಅವಳೇ ಆಗಿರುವಳು. ಹೀಗೆ ವೀರಶೈವರು ಎರಡು ವಿರುದ್ಧ ದಿಕ್ಕಿಗೆಳೆಯುವ ಶಕ್ತಿಗಳನ್ನು ನಂಬುತ್ತಾರೆ. ಭಕ್ತಿಯಿಂದ ವಾಸನಾ ಮುಕ್ತಿ, ಇದರಿಂದಾಗಿ ನಿವೃತ್ತಿ, ಅಲ್ಲಿಂದ ಮುಂದೆ ಮೋಕ್ಷ, ಹೀಗೆ ಅವಿದ್ಯೆಯ ನಿವಾರಣೆಯಾಗಿ ಜೀವವು ಶಿವನೊಡನೆ ಐಕ್ಯವಾಗುತ್ತದೆ.

ಶ್ರೀ ಪ್ರಭುದೇವರ ನಂತರ ವೀರಶೈವರ ನೇತೃತ್ವ ವಹಿಸಿದ ಚೆನ್ನಬಸವಣ್ಣನವರು ವೀರಶೈವದ ವಚನ ಸಾಹಿತ್ಯಕ್ಕೆ ಷಟ್‌ಸ್ಥಳದ ಚೌಕಟ್ಟಿನ ಕೃತಿಯಾದ ಕರಣಹಸುಗೆಯಲ್ಲಿ, ಸೃಷ್ಟಿ-ಸ್ಥಿತಿ-ಲಯದ ಬಗ್ಗೆ ವಿಸ್ತಾರವಾಗಿ ವಿವರಿಸಿದ್ದಾರೆ. ಇದು ಋಗ್ವೇದ, ಛಾಂದೋಗ್ಯೋಪನಿಷತ್, ತೈತ್ತಿರಿಯೋಪನಿಷತ್, ಕಠೋಪನಿಷತ್ತುಗಳ ಜತೆಗೆ ಸಾಮ್ಯತೆಯನ್ನು ಹೊಂದಿದೆ. ಜೀವಿಗಳ ಭೌತಿಕ ದೇಹವಾದ ಪಿಂಡಾಂಡವು, ಬ್ರಹ್ಮಾಂಡದ ಮಾದರಿಯಲ್ಲೇ, 75 ಗುಣ ಹಾಗೂ 25 ತತ್ವಗಳಿಂದ ಮಾಡಲ್ಪಟ್ಟಿದೆ. ಚೆನ್ನಬಸವಣ್ಣನವರು ಸೃಷ್ಟಿ, ಸ್ಥಿತಿ, ಲಯದ ಈ ವ್ಯವಸ್ಥೆಯನ್ನು ಮಾಲಿನಿವಿಜಯ ಭೈರವಿತಂತ್ರದಲ್ಲಿ ಆ ಪರಶಿವನೇ ಹೇಳಿದ್ದಾನೆಂದು ಅವರು ಉಲ್ಲೇಖಿಸುತ್ತಾರೆ. ಕರುಣಹಸುಗೆಯಲ್ಲಿ ಚೆನ್ನಬಸವಣ್ಣನವರು ದೇಹರಚನೆ, ಶರೀರದಲ್ಲಿರುವ ಎಲುಬು ಕೀಲು, ಯೋಗಕ್ರಿಯೆ, ಪ್ರಾಣಾಯಾಮಗಳ ಬಗ್ಗೆ ವಿವರಿಸಿದ್ದಾರೆ. ಪ್ರಭುದೇವರು ತಮ್ಮ ಸೃಷ್ಟಿಯ ವಚನಗಳಲ್ಲಿ 25 ಅಂಗದ ತತ್ವಗಳು ಮತ್ತು 11 ಲಿಂಗದ ತತ್ವಗಳ ಬಗ್ಗೆ ಉಲ್ಲೇಖಿಸಿದ್ದಾರೆ. ಇದು ಶೈವಸಿದ್ಧಾಂತದ 36 ತತ್ವಗಳ ಸಂಖ್ಯೆಯೊಂದಿಗೆ ಹೋಲುತ್ತದಾದರೂ, ಹೆಸರು ಮತ್ತು ಅರ್ಥ ಭಿನ್ನವಾಗಿವೆಯಷ್ಟೇ!

ಷಟ್‌ಸ್ಥಳ ಸಿದ್ಧಾಂತವು ವೀರಶೈವಾಧ್ಯಾತ್ಮಶಾಸ್ತ್ರದ ಮೂಲಭೂತ ಅಂಶ ಹಾಗೂ ಅದರ ವೈಶಿಷ್ಟ್ಯವೂ ಹೌದು. ಜೀವವು (ಅಂಗ) ಶಿವನೆಡೆಗೆ (ಲಿಂಗ) ಮಾಡುವ ಆರುಹಂತಗಳ ಕ್ರಮಬದ್ಧ ಪ್ರಯಾಣವೇ ಈ ಷಟ್‌ಸ್ಥಳ ಸಿದ್ಧಾಂತ. ಭಕ್ತ, ಮಾಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ಎಂಬುವವೇ ಷಟ್‌ಸ್ಥಳಗಳು. ಆರು ಸ್ಥಳಗಳಲ್ಲಿ ಮೊದಲೆರಡು ತ್ಯಾಗಾಂಗವೆನಿಸಿ ಭಕ್ತನು ತನ್ನೆಲ್ಲವನ್ನೂ ಲಿಂಗಕ್ಕೆ ತ್ಯಾಗ ಮಾಡುತ್ತಾನೆ. ಮುಂದಿನ ಎರಡು ಸ್ಥಳಗಳು ಭೋಗಾಂಗವೆನಿಸಿ ಶರಣನು ಲಿಂಗಭೋಗೋಪಯೋಗಿಯಾಗುತ್ತಾನೆ. ಮುಂದಿನ ಎರಡು ಸ್ಥಳಗಳು ಜ್ಞಾನಾಂಗಗಳಾಗಿವೆ. ಮೊದಲನೆಯ ಮೂರು ಸ್ಥಳಗಳು ಕ್ರಿಯಾಪ್ರಧಾನವಾಗಿದ್ದರೆ ನಂತರದ ಮೂರು ಸ್ಥಳಗಳು ನಿವೃತ್ತಿ ಹಾಗೂ ಜ್ಞಾನ ಪ್ರಧಾನವಾಗಿವೆ. ಪ್ರವೃತ್ತಿಯಲ್ಲಿ ಮರೆತು ಬದ್ಧನಾದ ಜೀವಾತ್ಮನಲ್ಲಿ ಪರಮಾತ್ಮನ ಬಗ್ಗೆ ಅರಿವು ಮೂಡಿ ಪರಶಿವನ ಕಾಣುವ ಬಯಕೆ ಮೂಡಿದಾಗ ಈ ಯಾತ್ರೆಯ ಪ್ರಾರಂಭ (ಭಕ್ತಸ್ಥಳ), ಯಾತ್ರೆಯ ಗಮ್ಯವೇ ಪರಶಿವನ ಸಾಕ್ಷಾತ್ಕಾರ (ಐಕ್ಯಸ್ಥಳ). ಶಿವನ ಸಾಕ್ಷಾತ್ಕಾರವನ್ನು, ಬಯಲು, ನಿರ್ಬಯಲು, ಐಕ್ಯ, ಮೋಕ್ಷ ಅಥವಾ ವರ್ಣನೆಗೆ ನಿಲುಕದ ಶೂನ್ಯ ಎಂದು ಶರಣರು ವರ್ಣಿಸಿದ್ದಾರೆ.

ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯವೆಂಬ ಅರಿಷಡ್ವರ್ಗಗಳನ್ನು ತ್ಯಜಿಸಿ ಸದಾಚಾರ, ಸಮಚಿತ್ತತೆ ಮತ್ತು ಪಂಚಾಚಾರಗಳ ಪಾಲನೆಯೇ ವೀರಶೈವರ ವ್ರತ ನಿಯಮಗಳಾಗಿರುತ್ತವೆ. ಶಿವನೇ ಪರಮಾತ್ಮ-ಪರಬ್ರಹ್ಮ, ಶಿವನನ್ನು ಇಷ್ಟಲಿಂಗದ ರೂಪದಲ್ಲಿ ತಮ್ಮ ದೇಹದ ಮೇಲೆ ಧರಿಸಿ ಉಪಾಸನೆ ಮಾಡುವುದೇ ವೀರಶೈವ ತತ್ವದ ಮೂಲ ಸಿದ್ಧಾಂತ. ಮಾನವನ ಆಧ್ಯಾತ್ಮಿಕ ಜೀವನದ ಲಕ್ಷ್ಯವೇ ಶಿವನ ಸಾಕ್ಷಾತ್ಕಾರ, ಲಕ್ಷ್ಯದ ಸಾಧನೆಗೆ ಸಹಾಯಮಾಡುವವು ಅಷ್ಟಾವರಣಗಳು ಹಾಗೂ ಪಂಚಾಚಾರ. ಆರು ಸ್ಥಳಗಳ ಕ್ರಮಬದ್ಧ ಯಾತ್ರೆಯಾದ ಷಟ್‌ಸ್ಥಳ ಸಿದ್ಧಾಂತವೇ ವೀರಶೈವತ್ವದ ಆಧ್ಯಾತ್ಮದರ್ಶನಶಾಸ್ತ್ರ!

ಮನುಷ್ಯನ ಆಧ್ಯಾತ್ಮಿಕ ಜೀವನವನ್ನು ಲೌಕಿಕ ಜೀವನದ ಜತೆಗೆ ಸಮನ್ವಯಗೊಳಿಸಲು, ವೀರಶೈವದಲ್ಲಿ ದಿನನಿತ್ಯದ ಮತ್ತು ವ್ಯಾವಹಾರಿಕ ಚಟುವಟಿಕೆಗಳು ಅಧ್ಯಾತ್ಮ ಸಾಧನೆಯೊಂದಿಗೆ ಹೆಣೆಯಲ್ಪಟ್ಟಿವೆ. ವೀರಶೈವ ಆಧ್ಯಾತ್ಮಿಕ ಜೀವನದ ಅಂತಿಮ ಉದ್ದೇಶವೇ ಶಿವನೊಡನೆ ಐಕ್ಯವಾಗುವುದು. ರೇಕಣ್ಣನ ವಚನದಲ್ಲಿ ಹೇಳಿದಂತೆ, ''ಕಲ್ಲೊಳಗಣ ಕಿಚ್ಚು ಬೂದಿಯಿಲ್ಲದಿರುವಂತಿರಿಸಯ್ಯಾ ಎನ್ನ ಲಿಂಗದೊಳಗೆ, ಗಾಳಿ ಗಂಧವನ್ನಪ್ಪಿದಂತಿರಿಸಯ್ಯಾ ಎನ್ನಲಿಂಗದೊಳಗೆ, ರೇಕಣ್ಣ ಪ್ರಿಯನಾಗಿನಾಥ ನಿಮ್ಮ ನಿಲುವಿನೊಳಗಣ ನಿಲುವು ಜ್ಯೋತಿಯ ಬೆಳಗಿನೊಳಗಡಗಿದ ತೈಲದಂತಿರಿಸಯ್ಯ ಎನ್ನ ಲಿಂಗದೊಳಗೆ!'' ಆತ್ಮವು ಒಂದು ಬೆಳಕಿನ ರೂಪ! ಆದ್ದರಿಂದ ಆತ್ಮ ಹಾಗೂ ಪರಮಾತ್ಮರಲ್ಲಿ ಭೇದವಿಲ್ಲ. ಬಸವಣ್ಣನವರ ವಚನದಲ್ಲಿ ಹೇಳುವುದಾದರೆ, ''ಅಯ್ಯಾ ಎನ್ನ ಹೃದಯದಲ್ಲಿ ನ್ಯಸ್ತವಾಗಿರುವ ಪರಮಚಿದ್ಬೆಳಗೇ ಹಸ್ತಮಲಕ ಸಂಯೋಗದಿಂದ ಒಂದುಗೂಡಿ ಮಹಾಬೆಳಗ ಮಾಡಿದಿರಲ್ಲಾ, ಅಯ್ಯಾ ಎನ್ನ ಆರಾಧ್ಯ ಕೂಡಲಸಂಗಮದೇವಾ ಎನ್ನೊಳಗೆ ನಿಮ್ಮಿರವ ಈ ಪರಿಯಲ್ಲಿ ಕಾಣುತ್ತಿರ್ದರಲ್ಲಾ''. ಶ್ರೀಪತಿ ಪಂಡಿತಾರಾಧ್ಯರು ತಮ್ಮ ಶ್ರೀಕರಭಾಷ್ಯದಲ್ಲಿ ವೀರಶೈವವನ್ನು ವಿಶಿಷ್ಟಾದ್ವೈತ ಎಂದು ವ್ಯಾಖ್ಯಾನಿಸಿದರೆ ಶಂಕರಾಚಾರ್ಯರು 'ಚಿದಾನಂದರೂಪಶಿವೋಹಂ' ಎನ್ನುತ್ತಾರೆ.

ಸಂಸಾರವು ಅಂತಿಮವಾಗಿ ಸತ್ಯವೂ ಅಲ್ಲ, ಅಂತಿಮವಾಗಿ ಅಸತ್ಯವೂ ಅಲ್ಲ, ಪ್ರಾರಂಭದಲ್ಲಿ ಸಂಸಾರವು ನಿಜವೆಂದು ಪ್ರತೀತವಾಗಿ ಈ ಯಾತ್ರೆಯ ಕೊನೆಯ ಹಂತದಲ್ಲಿ ಮಿಥ್ಯೆಯೆಂದು ಅರಿವಾಗುತ್ತದೆ. ಲಿಂಗವು ಈ ಬ್ರಹ್ಮಾಂಡವನ್ನು ವ್ಯಾಪಿಸಿರುವ ಒಂದು ಜ್ವಲಂತ ಬೆಳಕಿನ ಪುಂಜವಾಗಿದ್ದು ಸಕಲ ಚರಾಚರಗಳ ಮೂಲತತ್ವವಾಗಿದೆ.

ಅನಾದಿಕಾಲದಿಂದಲೂ ಧರ್ಮಕ್ಕೆ ಧಕ್ಕೆಯುಂಟಾದಾಗ ಅದನ್ನು ಪುನರ್‌ಸ್ಥಾಪಿಸಲು ಶರಣರು ಉದ್ಭವವಾಗುತ್ತಾರೆ. ಇಲ್ಲಿ ಉದ್ಭವವಾಗುತ್ತಾರೆ ಎಂದರೆ ಹುಟ್ಟಿಕೊಳ್ಳುತ್ತಾರೆ ಎಂದರ್ಥ! ಹೀಗೆಯೇ ರೇಣುಕರಾದಿಯಂತೆಯೇ ಬಸವಣ್ಣನನ್ನೂ ನಂದಿಯ ಅವತಾರವಾಗಿ ಧರೆಗಿಳಿದ ಮಹಾಪುರುಷ ಎಂದೇ ಬಸವಪುರಾಣ ಸಹ ಹೇಳುತ್ತದೆ. ಪುರಾಣಗಳಲ್ಲಿರುವ ತಾರ್ಕಿಕ ಅಂಶಗಳನ್ನು ನಾವು ಪರಿಗಣಿಸಬೇಕೇ ಹೊರತು ಅವರದು ಅತಾರ್ಕಿಕ ನಮ್ಮದು ತಾರ್ಕಿಕ ಎಂಬ ದೂಷಣೆಯಲ್ಲಿ ತೊಡಗಬಾರದು.

ಆದರೆ ಇದೆಲ್ಲವನ್ನೂ ಅಲ್ಲಗಳೆದು ಕೆಲವು ಮತಿಹೀನರು ಮಾರ್ಕ್ಸ್‌ವಾದದ ಸಮ್ಮೋಹನದಲ್ಲಿ ಸಿಲುಕಿ ಸನಾತನವನ್ನು ಭೋಳೆಯೆಂದು ಇಬ್ಬೇಗುದಿಯ ಬೇಗೆಗೆ ತಕ್ಕಂತೆ ವೀರಶೈವ ಧರ್ಮವನ್ನು ಇಬ್ಬಗೆಯುತ್ತಿದ್ದಾರೆ. ಇಂಥ ಇಬ್ಬಗೆಯ ಮೂರ್ಖರನ್ನು ವೀರಶೈವ ಲಿಂಗವಂತ ಸಮಾಜವು ಎಂದೂ ಒಪ್ಪಬಾರದು. ಮೇಲಾಗಿ ಸತ್ಯವು ತಾನೇ ತಾನಾಗಿ ಪ್ರಜ್ವಲಿಸಿ ಇದನ್ನೆಲ್ಲಾ ಮಂಜಿನಂತೆ ಕರಗಿಸುವುದು. ಅಂಥ ಸತ್ಯವೇ ವಿಶ್ವವಾಣಿಯಾಗಿ ಪ್ರಜ್ವಲಿಸುತ್ತಿರುವುದು.

ಕಲಾಮುಖವು ಹೇಗೆ ಕಾಳಾಮುಖಿ-ವೀರಶೈವದ ಶಿಲ್ಪ ವಿನ್ಯಾಸ ಪ್ರಕಾರವೋ ಅದೇ ರೀತಿ ವಚನ ಸಾಹಿತ್ಯವು ವೀರಶೈವ ಧರ್ಮದ ಒಂದು ಸಾಹಿತ್ಯ ಪ್ರಕಾರ. ಸಮಾಜದ ಕಟ್ಟಕಡೆಯ ವ್ಯಕ್ತಿಯೂ ವೀರಶೈವ ಸಮಸಮಾಜದ ಪ್ರತಿಪಾದಕನಾಗಿ ಸರಳ ತತ್ವೋಕ್ತಿಗಳನ್ನು ತನ್ನ ಕಾಯಕದ ಜತೆಜತೆಗೆ ಅನುಸಂಧಾನಗೊಳಿಸಿ ಅಭಿವ್ಯಕ್ತಿಸಬಲ್ಲ ಸಾಹಿತ್ಯಿಕ ಮುಖವಾಣಿ! ಈ ಪ್ರಕಾರವು ಹತ್ತನೇ ಶತಮಾನದ ಓಹಿಲ, ಉದ್ಭಟರಿಂದ ಹನ್ನೊಂದನೇ ಶತಮಾನದ ದಾಸಿಮಯ್ಯನಲ್ಲದೆ ಇತ್ತೀಚಿನ ಆಧುನಿಕ ವಚನಕಾರರವರೆಗೂ ಪ್ರಚಲಿತವಿರುವ ವಿಶೇಷ ಸಾಹಿತ್ಯ ಪ್ರಕಾರವೇ ಹೊರತು ವಚನಗಳ ಕಟ್ಟುಗಳೇ ವೀರಶೈವ ಧರ್ಮಗ್ರಂಥಗಳಲ್ಲ! ಹಾಗಾಗಿಯೇ ಚೆನ್ನಬಸವಣ್ಣ, ಅಲ್ಲಮಪ್ರಭು, ಮತ್ತು ಅಕ್ಕ ಮಹಾದೇವಿಯವರು ಶಕ್ತಿ ವಿಶಿಷ್ಟಾದ್ವೈತ, ಸಿದ್ಧಾಂತ ಶಿಖಾಮಣಿಗಳಿಗೆ ಅನುಗುಣವಾಗಿ ಕರಣಹಸುಗೆ, ಮಂತ್ರಗೋಪ್ಯ, ಯೋಗಾಂಗ ತ್ರಿವಿಧಿ, ಮಿಶ್ರಾರ್ಪಣಗಳನ್ನು ರಚಿಸಿ ಅವುಗಳನ್ನು ನಮ್ಮ ಧರ್ಮಗ್ರಂಥಗಳು ಎಂದಿದ್ದಾರೆ. ಇವುಗಳನ್ನು ಅರ್ಥೈಸಿಕೊಂಡು ಸಮಾಜಕ್ಕೆ ಮಾರ್ಗದರ್ಶನ ನೀಡಲಾಗದ ಕೆಲವು ಸೋಮಾರಿಗಳು ಥಳುಕಿನ ಮಾತು ಕಲಿತು ಒಂದಷ್ಟು ಪಂಚಶೀಲದ ವಚನಗಳನ್ನು ಉದ್ಗರಿಸುತ್ತ ಇಷ್ಟೇ ನಮ್ಮ ಧರ್ಮ ಎಂದು ತಮ್ಮ ಸಂಕುಚಿತತೆಯನ್ನು ಕೇಳುವ ಮುಗ್ಧರಿಗೆ ವಿಸ್ತರಿಸಿ ಮೀಸಲಾತಿಯ ತುಪ್ಪ ಸವರಿ ಮರುಳು ಮಾಡುತ್ತಿದ್ದಾರೆ. ಇಂಥ ಮರುಳಿನ ಉರುಳಿಗೆ ಸಮಾಜ ಬಲಿಯಾಗಬಾರದು.

ಇದು ಪ್ರತಿಯೊಬ್ಬ ವೀರಶೈವಿಗ ಲಿಂಗವಂತರು ಕಂಡುಕೊಳ್ಳಬೇಕಾದ ಸತ್ಯ! ಬಸವ ಮಾರ್ಗ, ಬಸವ ಪೀಠ, ಬಸವ ಮಂಟಪ, ಬಸವ ದಟ್ ಬಸವ ದಿಸ್ ಎನ್ನುವ ಕೋಟಿಲೂಟಿಯ ಬುಲ್ಶಿಟ್ಟಿಗ ಭಂಜಕರ ತಾನಿತಂದಾನವನ್ನಲ್ಲ...

(ಲೇಖಕರು ಶಿಕಾಗೊ ನಿವಾಸಿ ಮತ್ತು ಸಾಹಿತಿ)

ಅಚ್ಚುಕಟ್ಟು ಪ್ರದೇಶ
RNI no: 3918/59
VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed at M/s Elegant Offset Printers Pvt. Ltd. Plot No.33/1 & 15/1(part)M.T.Sagar Industrial Estate, Gokul Road, Hubballi-580030.
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:67, Issue: 342

ಸಮಾಚಾರ ಸಣ್ಣದಲ್ಲ

ಲಖನೌ ಆಸ್ಪತ್ರೆಯಲ್ಲಿ ಬೆಂಕಿ: ರೋಗಿ ಸಾವು

ಲಖನೌ: ಉತ್ತರ ಪ್ರದೇಶದ ಲಖನೌನಲ್ಲಿರುವ ಸರಕಾರಿ ಲೋಕಬಂಧು ರಾಜ್ ನಾರಾಯಣ್ ಸಂಯೋಜಿತ ಆಸ್ಪತ್ರೆಯಲ್ಲಿ ಸೋಮವಾರ ತಡರಾತ್ರಿ ಬೆಂಕಿ ಅವಘಡವಾಗಿದ್ದು, ಒಬ್ಬ ರೋಗಿ ದುರ್ಮರಣಕ್ಕೀಡಾಗಿದ್ದಾರೆ. 200 ಜನರನ್ನು ತುರ್ತಾಗಿ ಸ್ಥಳಾಂತರಿ ಜೀವರಕ್ಷಣೆ ಮಾಡಲಾಗಿದೆ. ಅಧಿಕ ರಕ್ತದೊತ್ತಡದಿಂದ ಐಸಿಯುಗೆ ದಾಖಲಾಗಿದ್ದ ರಾಜಕುಮಾರ್ ಪ್ರಜಾಪತಿ (61) ಬೆಂಕಿಯಿಂದ ಹೊಗೆ ಆವರಿಸಿದ್ದರಿಂದ ಆಮ್ಲಜನಕ ಪೂರೈಕೆಯಲ್ಲಿ ಅಡಚಣೆಯಾಗಿ ಮೃತಪಟ್ಟರು. ಕಾಂತಿ (26) ಎಂಬ ರೋಗಿ ಸ್ಥಿತಿ ಗಂಭೀರವಾಗಿದ್ದು, ಬೇರೊಂದು ಆಸ್ಪತ್ರೆಯ ತೀವ್ರ ನಿಗಾ ಘಟಕಕ್ಕೆ ಸ್ಥಳಾಂತರಿಸಲಾಗಿದೆ. ತೀವ್ರ ನಿಗಾ ಘಟಕ(ಐಸಿಯು) ಮತ್ತು ಹೈ ಡಿಪೆಂಡೆನ್ಸಿ ಯೂನಿಟ್ (ಎಚ್‌ಡಿಯು)ಗಳಿದ್ದ 2ನೇ ಮಹಡಿಯಲ್ಲಿ ಬೆಂಕಿ ಕಾಣಿಸಿಕೊಂಡಿತ್ತು. ಬೆಂಕಿ ಅವಘಡಕ್ಕೆ ವಿದ್ಯುತ್ ಶಾರ್ಟ್ ಸರ್ಕಿಟ್ ಕಾರಣವಾಗಿರಬಹುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬಿಹಾರ ಚುನಾವಣೆ: ಕೈ-ಆರ್‌ಜೆಡಿ ಸಭೆ

ದೆಹಲಿ: ವರ್ಷಾಂತ್ಯದಲ್ಲಿ ನಡೆಯಲಿರುವ ಬಿಹಾರ ವಿಧಾನಸಭಾ ಚುನಾವಣೆಗೆ ಕಾಂಗ್ರೆಸ್ ಸಿದ್ಧತೆ ಆರಂಭಿಸಿದೆ. ಈ ಸಂಬಂಧ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮಂಗಳವಾರ ದೆಹಲಿಯಲ್ಲಿ ರಾಷ್ಟ್ರೀಯ ಜನತಾದಳ ನಾಯಕ ತೇಜಸ್ವಿ ಯಾದವ್ ಮತ್ತಿತರರನ್ನು ಭೇಟಿ ಮಾಡಿ ಚರ್ಚಿಸಿದ್ದಾರೆ. ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ಬಿಹಾರ ರಾಜ್ಯ ಬಿಜೆಪಿ ಮತ್ತು ಅದರ ಅವಕಾಶವಾದಿ ಮೈತ್ರಿಕೂಟದ ಆಡಳಿತದಿಂದ ಮುಕ್ತವಾಗಲಿದೆ. ಈ ಬಾರಿ ಬಿಹಾರದಲ್ಲಿ ಬದಲಾವಣೆ ಖಚಿತ ಎಂದು ಖರ್ಗೆ ವಿಶ್ವಾಸ ವ್ಯಕ್ತಪಡಿದರು. ತೇಜಸ್ವಿ ಯಾದವ್ ಭೇಟಿ ವೇಳೆ ಬಿಹಾರ ಚುನಾವಣೆಗೆ 'ಮಹಾ ಘಟಬಂಧನ್' ಬಲಪಡಿಸುವ ಬಗ್ಗೆ ಚರ್ಚಿಸಿದೆವು. ಬಿಹಾರ ಜನರಿಗೆ ಬಲಿಷ್ಠ, ಸಕಾರಾತ್ಮಕ, ನ್ಯಾಯಯುತ ಸರಕಾರ ನೀಡುತ್ತೇವೆ ಎಂದರು.

ಹಣದುಬ್ಬರ: ಆರು ವರ್ಷದಲ್ಲೇ ಕನಿಷ್ಠ

ದೆಹಲಿ: ಮಾರ್ಚ್ ತಿಂಗಳಿನಲ್ಲಿ ದೇಶದಲ್ಲಿನ ಚಿಲ್ಲರೆ ಹಣದುಬ್ಬರ ಶೇ.3.34ರಷ್ಟು ಕನಿಷ್ಠ ಮಟ್ಟಕ್ಕೆ ಇಳಿಕೆಯಾಗಿದೆ. ಇದು 2019ರ ನಂತರದ

ದಿನಗಳಲ್ಲಿಯೇ ದಾಖಲಾಗಿರುವ ಕನಿಷ್ಠ ಮಟ್ಟದ ಹಣದುಬ್ಬರವಾಗಿದೆ. ಫೆಬ್ರವರಿಯಲ್ಲಿ ಚಿಲ್ಲರೆ ಹಣದುಬ್ಬರ ಶೇ.3.61ಕ್ಕೆ ತಗ್ಗಿತ್ತು. ಮಾರ್ಚ್ ತಿಂಗಳಲ್ಲಿ 27ರಷ್ಟು ಮೂಲಾಂಕ ಕಡಿಮೆಯಾಗುವ ಮೂಲಕ ಚಿಲ್ಲರೆ ಹಣದುಬ್ಬರ ಶೇ.3.34ಕ್ಕೆ ಇಳಿದಿದೆ ಎಂದು ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ ತಿಳಿಸಿದೆ. 2019ರ ಮಾರ್ಚ್‌ನಲ್ಲಿ ಶೇ.3.28ರಷ್ಟು ಚಿಲ್ಲರೆ ಹಣದುಬ್ಬರ ದಾಖಲಾಗಿತ್ತು. ಗ್ರಾಮೀಣ ಭಾಗದಲ್ಲಿನ ಚಿಲ್ಲರೆ ಹಣದುಬ್ಬರ ಫೆಬ್ರವರಿಯಲ್ಲಿ ಶೇ.3.79ರಷ್ಟಿದ್ದರೆ, ಮಾರ್ಚ್‌ನಲ್ಲಿ ಶೇ.3.25ಕ್ಕೆ ತಗ್ಗಿದೆ. ನಗರ ಪ್ರದೇಶದಲ್ಲಿ ಫೆಬ್ರವರಿಯಲ್ಲಿ ಶೇ. 3.32ರಷ್ಟು ದಾಖಲಾಗಿದ್ದರೆ ಮಾರ್ಚ್‌ನಲ್ಲಿ ಶೇ.3.43ಕ್ಕೆ ಏರಿಕೆಯಾಗಿದೆ.

ಭೂ ಅವ್ಯವಹಾರ: ವಾದ್ರಾಗೆ ಇ.ಡಿ ವಿಚಾರಣೆ

ದೆಹಲಿ: ಕಾಂಗ್ರೆಸ್ ಸಂಸದೆ ಪ್ರಿಯಾಂಕಾ ವಾದ್ರಾ ಅವರ ಪತಿ ಉದ್ಯಮಿ ರಾಬರ್ಟ್ ವಾದ್ರಾ ಅವರಿಗೆ ಮತ್ತೆ ಕಾನೂನು ಸಂಕಷ್ಟ ಎದುರಾಗಿದೆ. ಭೂ ಅವ್ಯವಹಾರದ ಆರೋಪಕ್ಕೆ ಸಂಧಿಸಿದಂತೆ ಜಾರಿ ನಿರ್ದೇಶನಾಲಯ(ಇ.ಡಿ) ಇದೇ ತಿಂಗಳಲ್ಲಿ 2ನೇ

ಬಾರಿ ಸಮನ್ಸ್ ಜಾರಿ ಮಾಡಿದ್ದು, ವಾದ್ರಾ ಮಂಗಳವಾರ ಇ.ಡಿ ಕಚೇರಿಗೆ ಹಾಜರಾಗಿ ವಿಚಾರಣೆ ಎದುರಿಸಿದರು. ಹರಿಯಾಣ ರಾಜ್ಯದಲ್ಲಿ ನಡೆದಿರುವ ಭೂ ವ್ಯವಹಾರದಲ್ಲಿ ಅಕ್ರಮ ನಡೆದಿದೆ. ಅಲ್ಲದೇ, ಅಕ್ರಮ ಹಣ ವರ್ಗಾವಣೆಯೂ ಜರುಗಿದೆ ಎಂಬ ಆರೋಪದಡಿ ಪ್ರಕರಣ ದಾಖಲಿಸಿಕೊಂಡಿರುವ ಇ.ಡಿ ಅಧಿಕಾರಿಗಳು, ವಾದ್ರಾ ಅವರನ್ನು ವಿಚಾರಣೆಗೆ ಒಳಪಡಿಸಿದರು. ಈ ಮೊದಲು ಏಪ್ರಿಲ್ 8ರಂದು ಸಮನ್ಸ್ ಜಾರಿಯಾಗಿತ್ತು. ಆದರೆ, ವಾದ್ರಾ ವಿಚಾರಣೆಗೆ ಹಾಜರಾಗಿರಲಿಲ್ಲ. ಇ.ಡಿ 2ನೇ ಬಾರಿ ಸಮನ್ಸ್ ನೀಡಿರುವುದಕ್ಕೆ ಕಿಡಿಕಾರಿರುವ ರಾಬರ್ಟ್ ವಾದ್ರಾ, ಇದೆಲ್ಲವೂ ಬಿಜೆಪಿಯ ರಾಜಕೀಯ ಪಿತೂರಿ ಎಂದು ಟೀಕಿಸಿದ್ದಾರೆ. ನಾನು ಜನರ ಪರ ಧ್ವನಿ ಎತ್ತಿದಾಗಲೆಲ್ಲಾ ಬಿಜೆಪಿ ನೇತೃತ್ವದ ಸರಕಾರ ನನ್ನನ್ನು ಹತ್ತಿಕ್ಕಲು ಪ್ರಯತ್ನಿಸುತ್ತದೆ. ಈ ಭೂ ವ್ಯವಹಾರದಲ್ಲಿ ಮುಚ್ಚಿಡುವಂತಹದು ಏನೂ ಇಲ್ಲ. ಇ.ಡಿ ಅಧಿಕಾರಿಗಳು ಏನೇ ಪ್ರಶ್ನೆ ಕೇಳಬಹುದು. ಅವರಿಗೆ ಉತ್ತರಿಸುತ್ತೇನೆ ಎಂದು ವಾದ್ರಾ ವರದಿಗಾರರಿಗೆ ಪ್ರತಿಕ್ರಿಯಿಸಿದ್ದಾರೆ.

{ **ಕಿರಣ್ ರಿಜಿಜು** } ಕೇಂದ್ರ ಸಚಿವ

ವಕ್ಫ್ ತಿದ್ದುಪಡಿ ಕಾಯಿದೆ-2025 ಮುಸಲ್ಮಾನರ ವಿರುದ್ಧವಿಲ್ಲ, ಬದಲಾಗಿ ಮುಸ್ಲಿಂ ಮಹಿಳೆಯರು, ಬಡವರ ಬದುಕಿನ ಸುಧಾರಣೆಗೆ ಪೂರಕವಾಗಿದೆ. ಹೊಸ ಕಾಯಿದೆಯಲ್ಲಿನ ಕೆಲ ನಿಬಂಧನೆಗಳು ವಕ್ಫ್ ಮಂಡಳಿಗಳಿಗೆ ಹೆಚ್ಚಿನ ಅಧಿಕಾರ ನೀಡಿದೆ. ಹಳೆ ಕಾಯಿದೆಯಲ್ಲಿದ್ದ ಕೆಲ ತಪ್ಪುಗಳನ್ನು ಸರಿಪಡಿಸುವುದೇ ತಿದ್ದುಪಡಿಯ ಉದ್ದೇಶವಾಗಿತ್ತು.

ಸ್ವಾಯತ್ತ ತಮಿಳುನಾಡು: ಸಿಎಂ ಸ್ಟಾಲಿನ್ ಹೊಸನಡೆ

ಸ್ವಾಯತ್ತ ರಾಜ್ಯ ರಚನೆಗಾಗಿ ಯತ್ನ | ಅಧ್ಯಯನಕ್ಕೆ ಉನ್ನತ ಮಟ್ಟದ ಸಮಿತಿ ನಿವೃತ್ತ ಸುಪ್ರೀಂ ನ್ಯಾ.ಜೋಸೆಫ್ ನೇತೃತ್ವ | ವಿಧಾನಸಭೆಯಲ್ಲಿ ಘೋಷಣೆ

ಚೆನ್ನೈ: ತೆರಿಗೆಯಲ್ಲಿ ಸಮರ್ಪಕ ಪಾಲು, ವೈದ್ಯಕೀಯ ಪ್ರವೇಶ ಪರೀಕ್ಷೆ(ನೀಟ್) ಯಿಂದ ಹೊರಕ್ಕೆ, 3ನೇ ಭಾಷೆಯಾಗಿ ಹಿಂದಿ ಅಳವಡಿಕೆಗೆ ವಿರೋಧ, ರಾಷ್ಟ್ರೀಯ ಶಿಕ್ಷಣ ನೀತಿ ಅಳವಡಿಕೆಗೂ ವಿರೋಧ ಸೇರಿದಂತೆ ಹಲವು ವಿಷಯಗಳಲ್ಲಿ ಕೇಂದ್ರ ಸರಕಾರದ ವಿರುದ್ಧ ತೊಡೆ ತಟ್ಟುತ್ತಲೇ ಇರುವ ತಮಿಳುನಾಡು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್, ಈಗ 'ಸ್ವಾಯತ್ತ ತಮಿಳುನಾಡು' ಪರಿಕಲ್ಪನೆಯ ಬೆನ್ನು ಬಿದ್ದಿದ್ದಾರೆ.

'ರಾಜ್ಯದ ಹಕ್ಕುಗಳನ್ನು ಕೇಂದ್ರ ಸರಕಾರವು ಹಂತ ಹಂತವಾಗಿ ಕಸಿದುಕೊಳ್ಳುತ್ತಿದೆ' ಎಂದು ವಿಧಾನಸಭೆಯಲ್ಲಿ ಮಂಗಳವಾರ ಕಿಡಿಕಾರಿರುವ ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್, ರಾಜ್ಯವನ್ನು ಸ್ವಾಯತ್ತಗೊಳಿಸುವುದು ಅನಿವಾರ್ಯವಾಗಲಿದೆ ಎಂದು ಘೋಷಿಸಿದ್ದಾರೆ.

ರಾಜ್ಯದ ಸ್ವಾಯತ್ತತೆ ಕುರಿತು ವಿಧಿವಿಧಾನಗಳನ್ನು ಕಂಡುಕೊಳ್ಳಲು ನಿವೃತ್ತ ಸುಪ್ರೀಂ ಕೋರ್ಟ್ ನ್ಯಾಯಾಧೀಶರ ನೇತೃತ್ವದಲ್ಲಿ ಉನ್ನತ ಮಟ್ಟದ ಸಮಿತಿ ರಚಿಸುವುದಾಗಿಯೂ ಘೋಷಿಸಿದ್ದಾರೆ.

ರಾಜ್ಯದ ಪಟ್ಟಿಯಿಂದ ಸಮಕಾಲೀನ ಪಟ್ಟಿಗೆ ಹೋಗಿರುವ ವಿಷಯಗಳನ್ನು ವರ್ಗಾಯಿಸಲು ಸಮಿತಿಯು ಕಾನೂನಿನ ಪ್ರಕಾರ ಅಧ್ಯಯನ ಮಾಡುತ್ತದೆ. ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆಯು ರಾಜ್ಯ ವ್ಯಾಪ್ತಿಯಿಂದ ಹೊರಗಿದೆ ಎಂದು ಮುಖ್ಯಮಂತ್ರಿ ಹೇಳಿದರು.

ಏತಕ್ಕಾಗಿ ಸ್ವಾಯತ್ತ ರಾಜ್ಯ?

ಕೇಂದ್ರ ಸರಕಾರ ಹೊಸದಾಗಿ ಪರಿಚಯಿಸಿದ 'ರಾಷ್ಟ್ರೀಯ ಶಿಕ್ಷಣ ನೀತಿ'(ಎನ್‌ಇಪಿ) ಅಳವಡಿಕೆ ಮಾಡಿಕೊಳ್ಳುವುದಿಲ್ಲ ಎಂಬ ಕಾರಣಕ್ಕೇ ರಾಜ್ಯಕ್ಕೆ ಬರಬೇಕಿದ್ದ 2,500 ಕೋಟಿ ರು. ಕೇಂದ್ರದ ನಿಧಿಯನ್ನು ತಪ್ಪಿಸಲಾಗಿದೆ. ಇನ್ನೊಂದೆಡೆ, ಅವೈಜ್ಞಾನಿಕ 'ನೀಟ್' ಪರೀಕ್ಷೆಯ ಕಾರಣದಿಂದಾಗಿಯೇ ತಮಿಳುನಾಡು ಹಲವು ವಿದ್ಯಾರ್ಥಿಗಳ ಆತ್ಮಹತ್ಯೆಯನ್ನು ಕಾಣುವಂತಾಯಿತು. ಇದೆಲ್ಲವೂ ಸಾಲದು ಎಂಬಂತೆ ರಾಜ್ಯ ಶಾಸನ ಸಭೆ ವಿಧೇಯಕಗಳನ್ನು ಅಂಗೀಕರಿಸಿದರೆ ಅದಕ್ಕೆ ರಾಜ್ಯಪಾಲರ ಅಂಕಿತ ಬೀಳುವುದೇ ಕಷ್ಟವಾಗಿದೆ. ಇದೆಲ್ಲಾ ಅಂಶಗಳ ಹಿನ್ನೆಲೆಯಲ್ಲಿಯೇ ಸ್ವಾಯತ್ತ ತಮಿಳುನಾಡಿನ ಪರಿಕಲ್ಪನೆ ಮಾಡಲಾಗಿದೆ ಎಂದು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ರಾಜ್ಯ ವಿಧಾನಸಭೆಗೆ ಸ್ಪಷ್ಟಪಡಿಸಿದರು.

ರಾಜ್ಯಕ್ಕೆ ಹೆಚ್ಚಿನ ಶಕ್ತಿ ದೊರಕಿಸಿಕೊಡುವುದೇ ರಾಜ್ಯದ ಸ್ವಾಯತ್ತತೆ ಪರಿಕಲ್ಪನೆಯ ಹಿಂದಿನ ಉದ್ದೇಶವಾಗಿದೆ. ಜತೆಗೆ ಕೇಂದ್ರ ಸರಕಾರದ ಜತೆಗಿನ ರಾಜ್ಯದ ಸಂಬಂಧವನ್ನೂ ಇನ್ನಷ್ಟು ಬಲಪಡಿಸುವ ಉದ್ದೇಶವಿದೆ.

-**ಎಂ.ಕೆ.ಸ್ಟಾಲಿನ್** ಮುಖ್ಯಮಂತ್ರಿ

ನ್ಯಾ. ಕುರಿಯನ್ ಜೋಸೆಫ್ ಸಮಿತಿ

ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಕುರಿಯನ್ ಜೋಸೆಫ್ ಅವರ ನೇತೃತ್ವದಲ್ಲಿ 'ರಾಜ್ಯದ ಸ್ವಾಯತ್ತತೆ' ಅಧ್ಯಯನ ಮತ್ತು ಪ್ರಕ್ರಿಯೆ ರೂಪಿಸುವುದಕ್ಕೆ ಉನ್ನತ ಮಟ್ಟದ ಸಮಿತಿಯನ್ನು ರಚಿಸಲಾಗಿದೆ. ರಾಜ್ಯ ಸರಕಾರದ ನಿವೃತ್ತ ಐಎಎಸ್ ಅಧಿಕಾರಿ ಅಶೋಕ್ ವರ್ಧನ್ ಶೆಟ್ಟಿ ಮತ್ತು ರಾಜ್ಯ ಯೋಜನಾ ಆಯೋಗದ ಮಾಜಿ ಉಪಾಧ್ಯಕ್ಷ ಎಂ. ನಾಗನಾಥನ್ ಅವರುಗಳು ಸಮಿತಿಯ ಸದಸ್ಯರಾಗಿರುತ್ತಾರೆ ಎಂದು ಸ್ಟಾಲಿನ್ ಸದನಕ್ಕೆ ತಿಳಿಸಿದರು.

ಜನವರಿಗೆ ಮಧ್ಯಂತರ ವರದಿ

ರಾಜ್ಯ ಸ್ವಾಯತ್ತತೆಯನ್ನು ಖಚಿತಪಡಿಸಿಕೊಳ್ಳಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವಿನ ಸಂಬಂಧವನ್ನು ಸಮಿತಿಯು ವಿವರವಾಗಿ ಪರಿಶೀಲಿಸುತ್ತದೆ. 2026ರ ಜನವರಿಯಲ್ಲಿ ಸಮಿತಿ ಮಧ್ಯಂತರ ವರದಿ ಸಲ್ಲಿಸಲಿದೆ. ಆ ಬಳಿಕ ಸೂಕ್ತ ಶಿಫಾರಸುಗಳನ್ನು ಒಳಗೊಂಡ ಅಂತಿಮ ವರದಿಯನ್ನು ಎರಡು ವರ್ಷಗಳಲ್ಲಿ (2028ರಲ್ಲಿ) ಸಲ್ಲಿಸಲಿದೆ ಎಂದು ಮುಖ್ಯಮಂತ್ರಿ ಸ್ಟಾಲಿನ್ ವಿಧಾನಸಭೆಯಲ್ಲಿ ಪ್ರಕಟಿಸಿದರು.

2024ರ ಸಾಮೂಹಿಕ ಅತ್ಯಾಚಾರ ಪ್ರಕರಣ

ಮಧ್ಯಪ್ರದೇಶ ರೇವಾದ 8 ಅತ್ಯಾಚಾರಿಗಳಿಗೆ ಜೀವಾವಧಿ

ರೇವಾ: ಮಧ್ಯಪ್ರದೇಶದ ರೇವಾ ಜಿಲ್ಲೆಯ ಜನಪ್ರಿಯ ಪ್ರವಾಸಿ ತಾಣವೊಂದರಲ್ಲಿ 2024ರ ಅ.21ರಂದು ಪತಿಯೊಂದಿಗೆ ಪಿಕ್ನಿಕ್‌ಗೆ ಬಂದಿದ್ದ 19 ವರ್ಷದ ನವವಿವಾಹಿತೆ ಮೇಲೆ ಸಾಮೂಹಿಕ ಅತ್ಯಾಚಾರ ನಡೆಸಿದ್ದ ಎಂಟು ದುರುಳರಿಗೆ ಮಧ್ಯಪ್ರದೇಶದ ರೇವಾ ಜಿಲ್ಲೆಯ ನ್ಯಾಯಾಲಯ ಜೀವಾವಧಿ ಶಿಕ್ಷೆ ವಿಧಿಸಿದೆ.

ಕೋರ್ಟ್ ಸುದ್ದಿಗಳು

ಸಾಮೂಹಿಕ ಅತ್ಯಾಚಾರ ಪ್ರಕರಣದಲ್ಲಿ ಎಂಟು ಮಂದಿಯೂ ದೋಷಿಗಳು ಎಂದು ಘೋಷಿಸಿದ ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶೆ ಪದ್ಮಾ ಜಾದವ್ ಅವರು, ಅಪರಾಧಿಗಳಿಗೆ ಜೀವಾವಧಿ ಸೆರೆಮನೆ ವಾಸದ ಶಿಕ್ಷೆ ಘೋಷಿಸಿದರು. ಅಲ್ಲದೇ 8 ಅಪರಾಧಿಗಳಿಗೂ ತಲಾ 2.30 ಲಕ್ಷ ರು. ದಂಡ ವಿಧಿಸಿದರು.

ನವ ದಂಪತಿ ರೇವಾದಲ್ಲಿನ ಭೈರವ್ ಬಾಬಾ ದೇವಸ್ಥಾನ ಸಮೀಪದ ಪ್ರವಾಸಿ ತಾಣದಲ್ಲಿ ವಿಹಾರದಲ್ಲಿದ್ದಾಗ 8 ಜನ ಕಾಮುಕರ ತಂಡ ಗಾಂಜಾ ನಶೆಯಲ್ಲಿ ಬಂದು ಇಬ್ಬರನ್ನೂ ಮಾತನಾಡಿಸುತ್ತಲೇ ಪತಿಯನ್ನು ಹಿಡಿದು ಮರಕ್ಕೆ ಕಟ್ಟಿಹಾಕಿ ಥಳಿಸಿತು. ಪತಿಯ ಎದುರೇ ನವವಿವಾಹಿತೆಯ ಮೇಲೆ ಸಾಮೂಹಿಕ ಅತ್ಯಾಚಾರ ನಡೆಸಿತು. ಅಲ್ಲದೆ ಅವರಲ್ಲೊಬ್ಬ ತನ್ನ ಮೊಬೈಲ್‌ನಲ್ಲಿ ಅತ್ಯಾಚಾರದ ವಿಡಿಯೋ ಚಿತ್ರೀಕರಿಸಿ, ಈ ವಿಚಾರವನ್ನು ಯಾರಿಗಾದರೂ ಹೇಳಿದರೆ ವಿಡಿಯೊ ಬಹಿರಂಗ ಮಾಡುವುದಾಗಿ ಬೆದರಿಕೆ ಹಾಕಿದ್ದ.

ಘಟನೆ ಬಳಿಕ ದಂಪತಿ ಪೊಲೀಸರಿಗೆ ದೂರು ನೀಡಿದ್ದರು. ಆರೋಪಿಗಳನ್ನು ಬಂಧಿಸಿದ ಪೊಲೀಸರು ಮೊಬೈಲ್ ಫೋನ್ ವಶಪಡಿಸಿಕೊಂಡರು. ಅದರಲ್ಲಿದ್ದ ದೃಶ್ಯಗಳೇ ದುಷ್ಕರ್ಮಿಗಳಿಗೆ ಶಿಕ್ಷೆ ಕೊಡಿಸಲು ನೆರವಾಯಿತು.

ವಾಹನ ಆಮದು ಸುಂಕ ನೀತಿಗೆ ಡೊನಾಲ್ಡ್ ಟ್ರಂಪ್ ಅಲ್ಪ ವಿರಾಮ!

ವಾಷಿಂಗ್ಟನ್: ಜ.20ರಂದು ಅಮೆರಿಕ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದಾಗಿನಿಂದಲೂ 'ಸುಂಕ ಸಮರ'ದ ಬೆನ್ನು ಬಿದ್ದಿರುವ ಡೊನಾಲ್ಡ್ ಟ್ರಂಪ್‌ಗೆ ಕಡೆಗೂ ತಮ್ಮದೇ ದೇಶದಲ್ಲಿನ ವಾಹನ ಉದ್ಯಮದ ಸಂಕಷ್ಟ ಅರ್ಥವಾಗಿದೆ. ಹಾಗಾಗಿ, 'ಆಟೋ ಉದ್ಯಮದ ಮೇಲೆ ವಿಧಿಸಿದ್ದ ಸುಂಕಗಳಿಗೆ ತಾತ್ಕಾಲಿಕವಾಗಿ ವಿನಾಯಿತಿ ನೀಡಲಾಗುವುದು' ಎಂದು ಪ್ರಕಟಿಸಿದ್ದಾರೆ.

ಶ್ವೇತಭವನದ ಓವಲ್ ಕಚೇರಿಯಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಟ್ರಂಪ್, ಕೆಲವು ಕಾರು ತಯಾರಿಕಾ ಕಂಪನಿಗಳಿಗೆ ಸಹಾಯ ಮಾಡಲು ದಾರಿಗಳನ್ನು ಹುಡುಕುತ್ತಿದ್ದೇವೆ. ಕಾರು ತಯಾರಕರು ತಮ್ಮ ಪೂರೈಕೆ ಸರಪಳಿಗಳನ್ನು ಸರಿಪಡಿಸುವವರೆಗೂ ಈ ತೆರಿಗೆ ವಿನಾಯಿತಿ ಮುಂದುವರಿಯಲಿದೆ ಎಂದು ತಿಳಿಸಿದರು.

ಆಟೋ ಉದ್ಯಮದಲ್ಲಿ ವಿವಿಧ ದೇಶಗಳಲ್ಲಿ ಬಂಡವಾಳ ಹೂಡಿಕೆ ಮಾಡಿರುವವರಿಗೆ, ಕೆನಡಾ, ಮೆಕ್ಸಿಕೊ ಮತ್ತು ಇತರೆ ಸ್ಥಳಗಳಲ್ಲಿರುವ ಕಾರು ತಯಾರಿಕಾ ಘಟಕಗಳನ್ನು ಅಮೆರಿಕಕ್ಕೆ ಸ್ಥಳಾಂತರಿಸಲು, ಕಾರುಗಳ ಪೂರೈಕೆ ಸರಪಳಿಯನ್ನು ಸಹಜ ಸ್ಥಿತಿಗೆ ತರಲು ಒಂದಷ್ಟು ಸಮಯ ಬೇಕಾಗುತ್ತದೆ ಎಂದರು. ಮಾ.27ರಂದು ಟ್ರಂಪ್ ವಾಹನೋದ್ಯಮದ ಮೇಲೆ ಶೇ.25ರಷ್ಟು ಆಮದು ಸುಂಕ ಘೋಷಿಸಿದಾಗ, ಅದು ಶಾಶ್ವತವಾಗಿರಲಿದೆ ಎಂದಿದ್ದರು.

ಫೋರ್ಡ್, ಜನರಲ್ ಮೋಟಾರ್ಸ್ ಮತ್ತು ಸ್ಟೆಲ್ಲಾಂಟಿಸ್ ಕಾರು ತಯಾರಕರನ್ನು ಪ್ರತಿನಿಧಿಸುವ 'ಅಮೆರಿಕನ್ ಆಟೋಮೋಟಿವ್ ಪಾಲಿಸಿ ಕೌನ್ಸಿಲ್' ಅಧ್ಯಕ್ಷ ಮ್ಯಾಟ್ ಬ್ಲಂಟ್, ಟ್ರಂಪ್ ಅವರ ಈ ಹೇಳಿಕೆ ವಾಹನ ಉದ್ಯಮಕ್ಕೆ ಸುಂಕ ಹೊರೆಯಿಂದ ಅಲ್ಪ ವಿರಾಮ ನೀಡಲಿದೆ ಎಂದಿದ್ದಾರೆ.

ಗಿಗ್ ಕಾರ್ಮಿಕರ ಕಲ್ಯಾಣನಿಧಿ ಶುಲ್ಕ ಪಾವತಿಸದಿದ್ದರೆ ಜೈಲು

ಹೈದರಾಬಾದ್: ಓಲಾ, ಉಬರ್, ಸ್ವಿಗ್ಗಿ, ಜೊಮ್ಯಾಟೊ ಮೊದಲಾದ ಮೊಬೈಲ್ ಆಪ್(ಅಪ್ಲಿಕೇಷನ್) ಆಧಾರಿತ ಸೇವಾ ಸಂಸ್ಥೆಗಳು ಕಡ್ಡಾಯವಾಗಿ ತಮಗಾಗಿ ಶ್ರಮಿಸುವ ಗಿಗ್ ಕಾರ್ಮಿಕರ ಹಿತಕ್ಕಾಗಿ ಕಾರ್ಮಿಕರ ಕಲ್ಯಾಣ ನಿಧಿಗೆ ಶುಲ್ಕ ಪಾವತಿಸಬೇಕಿದೆ. ಇಲ್ಲವಾದರೆ ಸೆರೆವಾಸ, ದಂಡ ಪಾವತಿಸಬೇಕಾದ ಶಿಕ್ಷೆ ಎದುರಿಸಬೇಕಾಗುತ್ತದೆ ತೆಲಂಗಾಣ ಸರಕಾರ ಎಚ್ಚರಿಕೆ ನೀಡಿದೆ.

- **ಮೊಬೈಲ್ ಆಪ್ ಆಧರಿಸಿದ ಸೇವಾ ಸಂಸ್ಥೆಗಳಿಗೆ ತೆಲಂಗಾಣ ಎಚ್ಚರಿಕೆ**
- **1 ವರ್ಷ ಜೈಲು, 2 ಲಕ್ಷ ರು. ದಂಡ ವಿಧಿಸುವ ವಿಧೇಯಕ ಪ್ರಸ್ತಾಪ**

ಈ ಸಂಬಂಧ 1 ವರ್ಷದ ಜೈಲು ವಾಸ, 2 ಲಕ್ಷ ರು. ವರೆಗೂ ದಂಡ ವಿಧಿಸಲು ಅವಕಾಶ ಮಾಡಿಕೊಡುವ ವಿಧೇಯಕವನ್ನು ವಿಧಾನಸಭೆಯಲ್ಲಿ ಮಂಡಿಸಲು ಮುಖ್ಯಮಂತ್ರಿ ಎ.ರೇವಂತ್ ರೆಡ್ಡಿ ನೇತೃತ್ವದ ಸರಕಾರ ಮುಂದಾಗಿದೆ.

ಕಾಯಿದೆ ಜಾರಿಗೆ ಬಂದ ಬಳಿಕ 60 ದಿನದೊಳಗೆ ಗಿಗ್ ಮತ್ತು ಪ್ಲಾಟ್‌ಫಾರ್ಮ್‌ಗಳು ಕಾರ್ಮಿಕರ ಕುರಿತ ದತ್ತಾಂಶವನ್ನು ಕಡ್ಡಾಯವಾಗಿ ಒದಗಿಸಬೇಕಿದೆ. ಮೊಬೈಲ್ ಆಪ್ ಆಧಾರಿತ ಸೇವಾಸಂಸ್ಥೆಗಳು ವಹಿವಾಟಿನ ಅನುಸಾರ ಶೇ.1 ಅಥವಾ 2ರಷ್ಟು ಮೊತ್ತವನ್ನು ಕಾರ್ಮಿಕರ ಕಲ್ಯಾಣ ನಿಧಿಗೆ ಶುಲ್ಕವಾಗಿ ಪಾವತಿಸಬೇಕಾಗುತ್ತದೆ. ಗಿಗ್ ಮತ್ತು ಪ್ಲಾಟ್‌ಫಾರ್ಮ್ ಕಾರ್ಮಿಕರ ಕಲ್ಯಾಣ ಮಂಡಳಿಗೆ ಕಲ್ಯಾಣ ನಿಧಿ ಶುಲ್ಕ ಪಾವತಿಸಲು ವಿಫಲರಾದರೆ ಅಗ್ರಿಗೇಟರ್‌ಗಳು ಮತ್ತು ಪ್ಲಾಟ್‌ಫಾರ್ಮ್ ಪಾಲುದಾರರಿಗೆ 1 ವರ್ಷ ಜೈಲು ಶಿಕ್ಷೆ ಅಥವಾ 2 ಲಕ್ಷ ರು.ಗಳವರೆಗೆ ದಂಡ ಅಥವಾ ಎರಡೂ ಶಿಕ್ಷೆ ವಿಧಿಸಲು ಅವಕಾಶವಿರುವ ವಿಧೇಯಕವನ್ನು ಸರಕಾರ ಸಿದ್ಧಪಡಿಸಿದೆ.

ಟ್ರಂಪ್ ಆದೇಶದಿಂದ ನೀಲಾಗೆ ನಾಸಾ ಉದ್ಯೋಗ ನಷ್ಟ

ವಾಷಿಂಗ್ಟನ್: ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸರಕಾರದ ಕಟ್ಟುನಿಟ್ಟು ಆದೇಶದ ಪರಿಣಾಮ ಭಾರತ ಮೂಲದ ಪ್ರತಿಭಾನ್ವಿತೆಯೊಬ್ಬರು 'ನಾಸಾ'ದಲ್ಲಿನ ಉನ್ನತ ಉದ್ಯೋಗವನ್ನು ಕಳೆದುಕೊಂಡಿದ್ದಾರೆ.

ಪ್ರತಿಷ್ಠಿತ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ 'ನಾಸಾ' ತನ್ನಲ್ಲಿ 'ಜೆಟ್ ಪ್ರೊಪಲ್ಷನ್ ಲ್ಯಾಬೊರೇಟರಿ' (ಜೆಪಿಎಲ್)ಯ 'ಡೈವರ್ಸಿಟಿ, ಈಕ್ವಿಟಿ ಮತ್ತು ಇನ್‌ಕ್ಲೂಷನ್'(ಡಿಇಐ) ವಿಭಾಗದ ಮುಖ್ಯಸ್ಥೆಯಾಗಿದ್ದ ಭಾರತ ಮೂಲದ ಮಹಿಳಾ ಉದ್ಯೋಗಿ ನೀಲಾ ರಾಜೇಂದ್ರ ಅವರನ್ನು ಕೆಲಸದಿಂದ ತೆಗೆದುಹಾಕಿದೆ.

ಅಮೆರಿಕ ಸರಕಾರದ ಅಧೀನದ ವಿವಿಧ ಸಂಸ್ಥೆಗಳಲ್ಲಿನ 'ಡೈವರ್ಸಿಟಿ, ಈಕ್ವಿಟಿ ಮತ್ತು ಇನ್‌ಕ್ಲೂಷನ್'(ಡಿಇಐ) ವಿಭಾಗದ ಕಾರ್ಯಕ್ರಮಗಳನ್ನೆಲ್ಲಾ ರದ್ದುಗೊಳಿಸಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಆದೇಶ ಹೊರಡಿಸಿದ್ದರಿಂದ 'ನಾಸಾ'ಗೆ ನೀಲಾ ಅವರನ್ನು ಹೊರಹಾಕುವುದು ಅನಿವಾರ್ಯವಾಯಿತು ಎನ್ನಲಾಗಿದೆ.

ನೀಲಾ ಅವರನ್ನು ತನ್ನಲ್ಲೇ ಉಳಿಸಿಕೊಳ್ಳಬೇಕೆಂದು 'ನಾಸಾ' ಆಡಳಿತ ಬಹಳ ಪ್ರಯತ್ನ ಮಾಡಿತು. ನೀಲಾರನ್ನು 'ಜೆಪಿಎಲ್'ನಿಂದ ಬೇರೆಡೆಗೆ ವರ್ಗಾಯಿಸಿ, 'ಟೀಮ್ ಎಕ್ಸಲೆನ್ಸ್ ಅಂಡ್ ಎಂಪ್ಲಾಯೀಸ್ ಸಕ್ಸಸ್' ವಿಭಾಗದ ಮುಖ್ಯಸ್ಥೆಯಾಗಿಸುವುದಾಗಿ ಹೇಳಿತು. ಆದರೆ, ಟ್ರಂಪ್ ಸರಕಾರದ ಆದೇಶ ಕಟ್ಟುನಿಟ್ಟಾಗಿ ಪಾಲಿಸಬೇಕಾದ್ದರಿಂದ ನೀಲಾರನ್ನು ಹೊರಹಾಕು ವುದು ಅನಿವಾರ್ಯವಾಯಿತು ಎಂದು 'ನಾಸಾ' ಮೂಲಗಳು ತಿಳಿಸಿವೆ.

ನೀಲಾ ರಾಜೇಂದ್ರ, ಅಮೆರಿಕದ ಚಾಪೆಲ್ ಹಿಲ್‌ನಲ್ಲಿರುವ ನಾರ್ಥ್ ಕೆರೊಲಿನಾ ವಿಶ್ವವಿದ್ಯಾಲಯದಲ್ಲಿ ರಾಜಕೀಯ ಶಾಸ್ತ್ರ ಮತ್ತು ಸಂಗೀತ ವಿಷಯಗಳ ಪದವೀಧರೆ. ಅಲ್ಲದೇ ವೇಕ್ ಫಾರೆಸ್ಟ್ ಯುನಿವರ್ಸಿಟಿ ಸ್ಕೂಲ್ ಆಫ್ ಬಿಜಿನೆಸ್‌ನಲ್ಲಿ 2008ರಲ್ಲಿ 'ಎಂಬಿಎ' ವ್ಯಾಸಂಗ ಮಾಡಿದ್ದಾರೆ. ವಿವಿಧ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿ ಅನುಭವ ಪಡೆದ ಬಳಿಕ 2021ರಲ್ಲಿ 'ನಾಸಾ'ಗೆ ಸೇರಿ 'ಡಿಇಐ' ವಿಭಾಗದ ಮುಖ್ಯಸ್ಥೆಯಾದರು. ಬಳಿಕ ಜೆಟ್ ಪ್ರೊಪಲ್ಷನ್ ಪ್ರೊಗ್ರಾಮ್‌ಗೆ ವರ್ಗವಾದರು.

ದುಬೈ: ಪಾಕ್ ಪ್ರಜೆಯಿಂದ ತೆಲಂಗಾಣದ ಇಬ್ಬರ ಕೊಲೆ

ದುಬೈ: ದುಬೈನಲ್ಲಿ ನೆಲೆಸಿರುವ ಪಾಕಿಸ್ತಾನದ ವ್ಯಕ್ತಿಯೊಬ್ಬ ಧರ್ಮ ದ್ವೇಷ ಕಾರಣಕ್ಕೆ ತೆಲಂಗಾಣದ ಇಬ್ಬರಿಗೆ ಚೂರಿಯಿಂದ ಇರಿದು ಬರ್ಬರವಾಗಿ ಕೊಂದಿದ್ದಾನೆ. ಇದೇ ಘಟನೆಯಲ್ಲಿ ಮತ್ತಿಬ್ಬರು ಗಾಯಗೊಂಡಿದ್ದಾರೆ ಎಂದು ವರದಿಯಾಗಿದೆ. ದುಬೈನಲ್ಲಿ ಕಳೆದ ಶುಕ್ರವಾರ ಘಟನೆ ನಡೆದಿದ್ದು, ತಡವಾಗಿ ಬೆಳಕಿಗೆ ಬಂದಿದೆ. ದುಬೈ ಪೊಲೀಸರು ಪ್ರಕರಣ ದಾಖಲಿಸಿದ್ದು, ತನಿಖೆ ನಡೆಸುತ್ತಿದ್ದಾರೆ ಎಂದು ವರದಿಯಾಗಿದೆ.

ತೆಲಂಗಾಣದ ನಿರ್ಮಲ್ ಜಿಲ್ಲೆಯ ಸೋನ್ ಮಂಡಲದ ಪ್ರೇಮ್ ಸಾಗರ್(40) ಮತ್ತು ನಿಜಾಮಾಬಾದ್ ಜಿಲ್ಲೆಯ ಶ್ರೀನಿವಾಸ್ ಮೃತರು. ಪ್ರೇಮ್ ಸಾಗರ್ 6 ವರ್ಷಗಳಿಂದ ದುಬೈನಲ್ಲಿ ಬೇಕರಿ ಕೆಲಸ ಮಾಡುತ್ತಿದ್ದರು. ಶ್ರೀನಿವಾಸ್ ಒಂದೂವರೆ ವರ್ಷದ ಹಿಂದಷ್ಟೆ ದುಬೈಗೆ ಹೋಗಿ ಬೇಕರಿ ಕೆಲಸಕ್ಕೆ ಸೇರಿಕೊಂಡಿದ್ದರು.

ಧರ್ಮದ ವಿಚಾರವಾಗಿ ಮಾತಿಗೆ ಮಾತು ಬೆಳೆದು ಜಗಳ ಆರಂಭಿಸಿದ ಪಾಕಿಸ್ತಾನಿ ವ್ಯಕ್ತಿ, ಪ್ರೇಮ್ ಸಾಗರ್ ಮತ್ತು ಶ್ರೀನಿವಾಸ್ ಮೇಲೆ ಚಾಕುವಿನಿಂದ ದಾಳಿ ಮಾಡಿದ್ದಾನೆ.

ಡಿಜಿಟಲ್ ಅರೆಸ್ಟ್: 12 ಕಡೆ ಸಿಬಿಐ ದಾಳಿ, ನಾಲ್ವರ ಸೆರೆ

ದೆಹಲಿ: ಕಳೆದ 3 ತಿಂಗಳಲ್ಲಿ 42 'ಡಿಜಿಟಲ್ ಅರೆಸ್ಟ್' ಅಪರಾಧ ಪ್ರಕರಣ ನಡೆಸಿ ಅಮಾಯಕರನ್ನು ಸಂಕಷ್ಟಕ್ಕೊಡ್ಡಿ ಅವರಿಂದ ಒಟ್ಟು 7.67 ಕೋಟಿ ರು. ಸುಲಿಗೆ ಮಾಡಿದ್ದ ನಾಲ್ವರು ಪ್ರಮುಖ ಸೈಬರ್ ಅಪರಾಧಿಗಳನ್ನು 'ಕೇಂದ್ರ ತನಿಖಾ ಸಂಸ್ಥೆ'(ಸಿಬಿಐ) ಬಂಧಿಸಿದೆ. ಬಂಧಿತ ನಾಲ್ವರೂ ಸಿಬಿಐ, ಜಾರಿ ನಿರ್ದೇಶನಾಲು ಸೇರಿದಂತೆ ವಿವಿಧ ಕಾನೂನು ಜಾರಿ ಸಂಸ್ಥೆಗಳ ಅಧಿಕಾರಿಗಳು ಎಂಬಂತೆ ವೇಷ ಧರಿಸಿ ನಟಿಸಿ ಸುಲಿಗೆ ಮಾಡಿದ್ದಾರೆ.

ರಾಜಸ್ಥಾನದ ಝುಂಝುನ್ ನಗರದಲ್ಲಿನ ಸೈಬರ್ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣಗಳಲ್ಲಿ ರಾಜಸ್ಥಾನ ಸರಕಾರದ ಕೋರಿಕೆ ಮೇರೆಗೆ ತನಿಖೆ ಆರಂಭಿಸಿದ ಸಿಬಿಐ, 'ಆಪರೇಷನ್ ಚಕ್ರ-ವಿ' ಹೆಸರಲ್ಲಿ ಕಾರ್ಯಾಚರಣೆ ಆರಂಭಿಸಿತು. ಉತ್ತರ ಪ್ರದೇಶದ ಮೊರಾದಾಬಾದ್ ಮತ್ತು ಸಂಭಾಲ್, ಮಹಾರಾಷ್ಟ್ರದ ಮುಂಬೈ, ರಾಜಸ್ಥಾನದ ಜೈಪುರ ಮತ್ತು ಪಶ್ಚಿಮ ಬಂಗಾಳದ ಕೃಷ್ಣನಗರ ಸೇರಿದಂತೆ ದೇಶದ ವಿವಿಧೆಡೆ 12 ಸ್ಥಳಗಳಲ್ಲಿ ಸಿಬಿಐ ದಾಳಿ ನಡೆಸಿ ಮಾಹಿತಿ ಸಂಗ್ರಹಿಸಿತು.

ನಂತರದಲ್ಲಿ ಮುಂಬೈ ಮತ್ತು ಮೊರಾದಾಬಾದ್‌ನಲ್ಲಿ ದಾಳಿ ನಡೆಸಿ 'ಡಿಜಿಟಲ್ ಅರೆಸ್ಟ್' ಜಾಲದ ನಾಲ್ವರು ಕಿಂಗ್‌ಪಿನ್‌ಗಳನ್ನು ಬಂಧಿಸಲಾಗಿದೆ ಎಂದು ಸಿಬಿಐ ಅಧಿಕಾರಿಗಳು ಮಂಗಳವಾರ ಸುದ್ದಿಗಾರರಿಗೆ ಮಾಹಿತಿ ನೀಡಿದ್ದಾರೆ.

ಸಿಬಿಐ ತನಿಖಾಧಿಕಾರಿಗಳ ತಂಡ ಭಾರೀ ಪ್ರಮಾಣದ ದತ್ತಾಂಶಗಳನ್ನು ಕಲೆ ಹಾಕಿ ವಿಶ್ಲೇಷಣೆ ಮಾಡಿದೆ. ಪ್ರೊಫೈಲಿಂಗ್ ಒಳಗೊಂಡ ತನಿಖೆ ನಡೆಸಿದೆ. ಆರೋಪಿಗಳನ್ನು ಗುರುತಿಸಲು ಸುಧಾರಿತ ತನಿಖಾ ತಂತ್ರ ಬಳಸಿದೆ. ಬ್ಯಾಂಕ್ ಖಾತೆ ವಿವರ, ಡೆಬಿಟ್ ಕಾರ್ಡ್‌ಗಳು, ಚೆಕ್‌ಬುಕ್, ಠೇವಣಿ ಸ್ಲಿಪ್‌ಗಳು ಮತ್ತು ಡಿಜಿಟಲ್ ಸಾಧನಗಳು ಸೇರಿದಂತೆ ಭಾರೀ ಪ್ರಮಾಣದ ಪುರಾವೆಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

- ಸೋಮವಾರದ ಗಗನಯಾನ ಸಂಪೂರ್ಣ ವನಿತಾ ತಂಡದ ಮೊದಲ ಯಾನ. 1963 ರಲ್ಲಿ ವೆಲೆಂಟಿನಾ ಟೆರೆಷ್ಕೋವಾ ಏಕಾಂಗಿ ಗಗನಯಾನ ನಡೆಸಿ ಇತಿಹಾಸ ನಿರ್ಮಿಸಿದ್ದರು.
- ಇದು 'ಬ್ಲ್ಯು ಆರಿಜಿನ್' ಕಂಪನಿಯ 11ನೇ ಮಾನವ ಸಹಿತ ಗಗನಯಾನ. ಇದಕ್ಕೂ ಮುನ್ನ ಜನವರಿಯಲ್ಲಿ ಅತ್ಯಂತ ಭಾರವಾದ ರಾಕೆಟ್ 'ನ್ಯೂ ಗ್ಲೆನ್'ನ ಉಡ್ಡಯನ ಮೂಲಕ ಬಾಹ್ಯಾಕಾಶ ಯಾತ್ರೆಯನ್ನು ಯಶಸ್ವಿಯಾಗಿ ಕೈಗೊಂಡು ಭೂಕಕ್ಷೆಯಲ್ಲಿ ಸುತ್ತು ಹಾಕಲಾಗಿತ್ತು. ಆ ನಂತರದ ಕೆಲ ವಾರಗಳಲ್ಲೇ ಕಂಪನಿ ಶೇ.10ರಷ್ಟು ಸಿಬ್ಬಂದಿ ಕಡಿತ ಮಾಡಿತ್ತು.
- ನೂತನ ಶೆಪರ್ಡ್ ರಾಕೆಟ್‌ನಲ್ಲಿ ಕೈಗೊಳ್ಳಲಾದ 6 ವನಿತೆಯರ ಗಗನಯಾನದ ವೆಚ್ಚ ಕಂಪನಿ ಬಹಿರಂಗಪಡಿಸಿಲ್ಲ. ಆದರೆ, ಪ್ರತಿಸ್ಪರ್ಧಿ ಕಂಪನಿಯಾದ 'ವರ್ಜಿನ್ ಗ್ಯಾಲಕ್ಟಿಕ್' ಇಂತಹುದೇ 'ಬಾಹ್ಯಾಕಾಶ ಪ್ರವಾಸ'ಕ್ಕೆ 6 ಲಕ್ಷ ಡಾಲರ್ ಶುಲ್ಕ ವಿಧಿಸುತ್ತಿದೆ.
- 'ಬ್ಲ್ಯು ಆರಿಜಿನ್' ಕಂಪನಿಯ 'ನ್ಯೂ ಶೆಪರ್ಡ್ ರಾಕೆಟ್‌ನಲ್ಲಿ ಎಲ್ಲಾ ಮಹಿಳೆಯರೇ ಇರುವ ತಂಡದೊಂದಿಗೆ ಬಾಹ್ಯಾಕಾಶ ಪ್ರವಾಸ ಹೋಗುತ್ತಿರುವುದಾಗಿ ಲಾರೆನ್ ಸ್ಯಾಂಚೆಝ್ 2023ರಲ್ಲಿ ಮೊದಲು ಬಾರಿ ಪ್ರಕಟಿಸಿದರು. ಅಲ್ಲದೇ, ತಮ್ಮ ಜತೆ ಬಾಹ್ಯಾಕಾಶ ಪ್ರವಾಸಕ್ಕೆ ಬರುತ್ತಿರುವವರೆಲ್ಲರೂ ಅದ್ವಿತೀಯ ವ್ಯಕ್ತಿಗಳು. 'ಮಹಿಳಾ ಗಗನಯಾತ್ರಿಗಳಿಗೆ ಮಾರ್ಗ ತೆರೆದಿಡಿ' ಎಂದೂ ಹೇಳಿದ್ದರು.

6 ಮಹಿಳಾ ಬಾಹ್ಯಾಕಾಶ ಪ್ರವಾಸಿಗರನ್ನು ಭೂಮಿಗೆ ವಾಪಸ್ ಕರೆತಂದ 'ನ್ಯೂ ಶೆಪರ್ಡ್'ನ ಕ್ಯಾಪ್ಸೂಲ್, ಅಮೆರಿಕದ ವೆಸ್ಟ್ ಟೆಕ್ಸಾಸ್‌ನ ವ್ಯಾನ್ ಹಾರ್ನ್‌ನಲ್ಲಿ ಸೋಮವಾರ ಧರೆಗಿಳಿದಿದೆ.

ಈ ಮೊದಲೇ ಬಾಹ್ಯಾಕಾಶ ಪ್ರವಾಸ ಕೈಗೊಂಡವರು



ಜೆಫ್ ಬೆಝೋಸ್ 2021 ಜುಲೈ



ವಿಲಿಯಮ್ ಶಟ್ನರ್ 2021 ಅಕ್ಟೋಬರ್



ಮೈಕೆಲ್ ಸ್ಟ್ರಹಾನ್ 2021 ಡಿಸೆಂಬರ್

ಕಂಪನಿ ಭವಿಷ್ಯದತ್ತ ಗಮನ ಕೇಂದ್ರೀಕರಿಸಿದೆ. 2025ರ ಈ ವರ್ಷದಲ್ಲೇ ಚಂದ್ರನ ಮೇಲೆ ಮಾನವ ರಹಿತ ಗಗನನೌಕೆಯನ್ನು ಚಂದ್ರನಲ್ಲಿಗೆ ಕಳುಹಿಸಲಿದ್ದೇವೆ. 'ನ್ಯೂ ಗ್ಲೆನ್' ಮತ್ತು 'ನ್ಯೂ ಶೆಪರ್ಡ್' ರಾಕೆಟ್‌ಗಳ ಉಡಾವಣೆಗಳನ್ನು ಇನ್ನಷ್ಟು ಹೆಚ್ಚಿಸಲಿದ್ದೇವೆ ಎಂದು 'ಬ್ಲ್ಯು ಆರಿಜಿನ್' ಕಂಪನಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ (ಸಿಇಒ) ಡೇವ್ ಲಿಂಪ್ ಹೇಳಿದ್ದಾರೆ.

ಹಾರ್ವರ್ಡ್ ವಿವಿ 220 ಕೋಟಿ ಡಾಲರ್ ಅನುದಾನ ಸ್ಥಗಿತ

ಬೋಸ್ಟನ್: ಕ್ಯಾಂಪಸ್ ಚಟುವಟಿಕೆಗಳನ್ನು ಮಿತಿಗೊಳಿಸಬೇಕೆಂಬ ಅಮೆರಿಕ ಸರಕಾರದ ಆದೇಶವನ್ನು ಪಾಲಿಸಲು ಹಾರ್ವರ್ಡ್ ವಿಶ್ವವಿದ್ಯಾಲಯ ತಿರಸ್ಕರಿಸಿದ ಬಳಿಕ, ಡೊನಾಲ್ಡ್ ಟ್ರಂಪ್ ಆಡಳಿತ ವಿವಿಗೆ ವಾರ್ಷಿಕವಾಗಿ ನೀಡಲಾಗುತ್ತಿದ್ದ 220 ಕೋಟಿ ಡಾಲರ್‌ಗೂ ಅಧಿಕ ಮೊತ್ತದ ಅನುದಾನವನ್ನು ಸ್ಥಗಿತಗೊಳಿಸಿದೆ. ಅಲ್ಲದೇ, 6 ಕೋಟಿ ಡಾಲರ್ ಮೌಲ್ಯದ ಒಪ್ಪಂದಗಳನ್ನು ರದ್ದುಗೊಳಿಸಲಾಗುತ್ತಿದೆ ಎಂದು ಶ್ವೇತಭವನ ಸೋಮವಾರ ಪ್ರಕಟಿಸಿದೆ.

6 ಕೋಟಿ ಡಾಲರ್ ಮೌಲ್ಯದ ಒಪ್ಪಂದಗಳನ್ನು ರದ್ದು

ಹಾರ್ವರ್ಡ್ ವಿವಿ ಆಡಳಿತ ಮಂಡಳಿ ಅಧ್ಯಕ್ಷ ಅಲನ್ ಗಾರ್ಬರ್, ಈ ಸಂಬಂಧ ಹಾರ್ವರ್ಡ್ ವಿವಿ ಸಮುದಾಯಕ್ಕೆ ಸೋಮವಾರ ಪತ್ರ ಬರೆದು ವಿಷಯ ವಿವರಿಸಿದ್ದಾರೆ. ಸರಕಾರದ ಸೂಚನೆಗಳು ವಿಶ್ವವಿದ್ಯಾನಿಲಯದ ಮೊದಲ ತಿದ್ದುಪಡಿ ಹಕ್ಕುಗಳನ್ನು ಉಲ್ಲಂಘಿಸುತ್ತವೆ ಮತ್ತು ಸರಕಾರದ ಆದೇಶ ಅದರ ಶಾಸನಬದ್ಧ ಮಿತಿಗಳನ್ನು ಮೀರಿದೆ ಎಂದು ಪತ್ರದಲ್ಲಿ ಬರೆದಿದ್ದಾರೆ.

ಯಾವುದೇ ಸರ್ಕಾರ - ಯಾವುದೇ ಪಕ್ಷ ಅಧಿಕಾರದಲ್ಲಿದ್ದರೂ - ಖಾಸಗಿ ವಿಶ್ವವಿದ್ಯಾಲಯಗಳು ಏನು ಕಲಿಸಬಹುದು, ಯಾರನ್ನು ಸೇರಿಸಿಕೊಳ್ಳಬಹುದು ಮತ್ತು ನೇಮಿಸಿಕೊಳ್ಳಬಹುದು, ಯಾವ ಅಧ್ಯಯನ ಮತ್ತು ವಿಚಾರಣೆಯ ಕ್ಷೇತ್ರಗಳನ್ನು ಅನುಸರಿಸಬಹುದು ಎಂಬುದನ್ನು ನಿರ್ದೇಶಿಸಬಾರದು ಎಂದೂ ಗಾರ್ಬರ್ ಪ್ರತಿಪಾದಿಸಿದ್ದು, ಸರಕಾರದ ನೀತಿಗಳನ್ನು ವಿರೋಧಿಸುವುದಾಗಿ ಹೇಳಿದ್ದಾರೆ.

ಸಮಾಚಾರ ಸಣ್ಣದಲ್ಲ

ನಗರದ ಅಭಿವೃದ್ಧಿಗೆ ಶ್ರಮ: ಶಾಸಕ ವಿಜಯಾನಂದ

ಹುನಗುಂದ: ಹುನಗುಂದ ಮತ್ತು ಇಳಕಲ್ ನಗರಗಳಲ್ಲಿ ಅಭಿವೃದ್ಧಿ ಕಾರ್ಯ ಕೈಗೊಳ್ಳುವ ಮೂಲಕ ಸುಂದರ ನಗರಗಳನ್ನಾಗಿ ಮಾಡುವುದು ನಮ್ಮ ಗುರಿ ಎಂದು ಶಾಸಕ ವಿಜಯಾನಂದ ಕಾಶಪ್ಪನವರ ಹೇಳಿದರು. ಪಟ್ಟಣದ ಹಳೆಯ ತಹಸೀಲ್ದಾರ್ ಕಚೇರಿ ಮುಂಭಾಗ ಹುನಗುಂದ -ಸುರಪುರ ರಾಜ್ಯ ಹೆದ್ದಾರಿಯ ಮುಖ್ಯ ರಸ್ತೆ ಸುಧಾರಣೆ ಕಾಮಗಾರಿ ಭೂಮಿ ಪೂಜೆ ನೆರವೇರಿಸಿ ಅವರು ಮಾತನಾಡುತ್ತ. ಪಟ್ಟಣದ ಸಂಗಮೇಶ್ವರ ಜಾತ್ರೆಯ ಸಮಯದಲ್ಲಿ ರಸ್ತೆಯ ಅವ್ಯವಸ್ಥೆಯಿಂದ ತೇರು ಎಳೆಯಲು ಜನರಿಗೆ ಸಾಕಷ್ಟು ತೊಂದರೆಯಾಗಿತ್ತು. ಈ ಹಿನ್ನೆಯಲ್ಲಿ ರಸ್ತೆ ಸುಧಾರಣೆ ಕೈಗೊಳ್ಳಲಾಗಿದೆ. ಸಚಿವ ಜಮೀರ್ ಅಹ್ಮದ್ ಅವರು ತಮ್ಮ ಇಲಾಖೆಯಿಂದ ಪಟ್ಟಣದ ಅಲ್ಪಸಂಖ್ಯಾತರ ಕಾಲೋನಿಯಲ್ಲಿನ ಸಿಸಿ ರಸ್ತೆ, ದರ್ಗಾ, ಮಸೀದಿ ನಿರ್ಮಾಣಕ್ಕೆ 5 ಕೋಟಿ ಅನುದಾನ ಬಿಡುಗಡೆ ಆಗಿದೆ. ಮುಂಬರುವ ದಿನಗಳಲ್ಲಿ ಪಟ್ಟಣದ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು ಎಂದರು. ಲೋಕೋಪಯೋಗಿ ಇಲಾಖೆಯ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ವಿ. ಜಿ. ಹಿರೇಮಠ ಮಾತನಾಡಿದರು. ಪುರಸಭೆ ಅಧ್ಯಕ್ಷೆ ಭಾಗ್ಯಶ್ರೀ ರೇವಡಿ, ಉಪಾಧ್ಯಕ್ಷೆ ರಾಜವ್ವ ಬದಾಮಿ, ಮುಖಂಡರಾದ ಶೇಖರಪ್ಪ ಬಾದವಾಡಗಿ ಶಿವಾನಂದ ಕಂಠಿ, ಸಂಗಣ್ಣ ಗಂಜೀಹಾಳ, ಜಬ್ಬಾರ್ ಕಲ್ಬುರ್ಗಿ, ಮಹಬೂಬ್ ಸರಕಾವಸ, ಸಂಜೀವ ಜೋಶಿ, ಮಾಲಿಂಗಯ್ಯ ಹಿರೇಮಠ,ಮಲ್ಲು ಅಂಟರತಾನಿ, ಬಸವರಾಜ ರಕ್ಕಸಗಿ, ಅಮರೇಶ ನಾಗೂರ ಇನ್ನು ಅನೇಕರು ಇದ್ದರು.

ಶ್ರೀಸಂಗಮೇಶ್ವರ ಜಾತ್ರೆ: ಕಳಸ, ಪಲ್ಲಕ್ಕಿ ಮೆರವಣಿಗೆ

ಗುಳೇದಗುಡ್ಡ: ಏ.18ರಂದು ನಡೆಯಲಿರುವ ಕೂಡಲಸಂಗಮದ ಶ್ರೀಸಂಗಮೇಶ್ವರ ದೇವರ ಜಾತ್ರಾಮಹೋತ್ಸವದ ಅಂಗವಾಗಿ ನಡೆಯಲಿರುವ ಹುಚ್ಚಯ್ಯ ರಥದ ಕಳಸ ಹಾಗೂ ಪಲ್ಲಕ್ಕಿ ಮೆರವಣಿಗೆ ಭಜನೆಯೊಂದಿಗೆ ನಗರದ ರೇವಣಸಿದ್ದಪ್ಪ ದೇವರಮನಿ ಅವರ ಮನೆಯಿಂದ ನಗರದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಕೂಡಲಸಂಗಮಕ್ಕೆ ಮಂಗಳವಾರ ಪಾದಯಾತ್ರೆಯ ಮೂಲಕ ತೆರಳಿತು. ಇದಕ್ಕೂ ಮೊದಲು ಕಳಸಕ್ಕೆ ಅಭಿಷೇಕ, ಪೂಜೆ ನಡೆಯಿತು. ಮೆರವಣಿಗೆಯಲ್ಲಿ ರೇವಣಸಿದ್ದಪ್ಪ ದೇವರಮನಿ, ವೀರುಪಾಕ್ಷ ದೇವರಮನಿ, ಮುತ್ತಣ್ಣ ದೇವರಮನಿ, ಈರಪ್ಪ ಗಡ್ಡಿ, ಸಂಗಪ್ಪ ರಂಜನಗಿ, ಈರಣ್ಣ ಸುರಪುರ, ಬಿ.ಎನ್. ಪಾಗಿ, ಈರಣ್ಣ ಗಂಜಾಳ, ಶೇಖರಪ್ಪ ರಂಜನಗಿ, ಸುರೇಶ ರಂಜನಗಿ, ಶ್ರೀಕಾಂತ ಇಂಗಳಗಿ, ಮಲ್ಲಪ್ಪ ಗೊರಚಕನವರ, ಗುಂಡಪ್ಪ ಗೊರಚಕನವರ, ನಾಗರಾಜ ಗೊರಚಕನವರ, ಆದಪ್ಪ ಗೊರಚಕನವರ, ಪಾಲಾಕ್ಷಪ್ಪ ವಾಳದಉಂಕಿ, ಸುಮಂಗಲಾ ದೇವರಮನಿ, ಪಾರ್ವತೆವ್ವ ಗಂಜಾಳ, ಅನ್ನಪೂರ್ಣ ರಂಜನಗಿ, ಈರಮ್ಮ ದೇವರಮನಿ, ಗೌರಮ್ಮ ದೇವರಮನಿ, ಕೂಡ್ಲೆವ್ವ ರಂಜನಗಿ, ಭಾರತಿ ದೇವರಮನಿ ಮತ್ತಿತರರು ಇದ್ದರು.

ಆಟಿಸಮ್ ಆರಂಭಿಕ ಪತ್ತೆ: ಯಶಸ್ವಿ ಚಿಕಿತ್ಸೆ

ಬಾಗಲಕೋಟೆ: ಆಟಿಸಮ್ ಆರಂಭಿಕ ಪತ್ತೆ ಮಾಡಿದರೆ ಯಶಸ್ವಿಯಾಗಿ ಚಿಕಿತ್ಸೆ ನೀಡಬಹುದು ಎಂದು ಹೈದ್ರಾಬಾದಿನ ಆಟಿಸಮ್ ತಜ್ಞೆ ಡಾ.ಆರ್.ಟಿ. ರಾಜೇಶ್ವರಿ ಹೇಳಿದರು. ನಗರದ ಬಿವಿವಿ ಸಂಘದ ಹೋಮಿಯೋಪಥಿಕ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಆಯೋಜಿಸಿದ ವಿಶ್ವ ಆಟಿಸಮ್ ದಿನಾಚರಣೆ ಆರೋಗ್ಯ - ಅರಿವು ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿದ ಅವರು, ಇಲ್ಲಿ ರೋಗ ಲಕ್ಷಣದಲ್ಲಿ ಒಬ್ಬ ವ್ಯಕ್ತಿಯು ಹೇಗೆ ವರ್ತಿಸುತ್ತಾನೆ ಮತ್ತು ಇತರರೊಂದಿಗೆ ಹೇಗೆ ಸಂವಹನ ನಡೆಸುತ್ತಾನೆ ಎಂಬುದರ ಮೇಲೆ ಪರಿಣಾಮ ಬೀರುವ ಸ್ಥಿತಿಯಾಗಿದೆ ಎಂದರು. ಇದು ವ್ಯಕ್ತಿಯಿಂದ ವ್ಯಕ್ತಿಗೆ ಬಹಳ ವ್ಯತ್ಯಾಸಗೊಳ್ಳುವ ಸಂಕೀರ್ಣ ಅಸ್ವಸ್ಥತೆಯಾಗಿದೆ. ಇದರಲ್ಲಿ ಕೆಲವರು ಸೌಮ್ಯವಾದ ರೋಗ ಲಕ್ಷಣಗಳನ್ನು ಹೊಂದಿರಬಹುದು ಮತ್ತು ಇನ್ನು ಕೆಲವರು ಹೆಚ್ಚು ತೀವ್ರವಾದ ಸವಾಲುಗಳನ್ನು ಎದುರಿಸಬೇಕಾಗಬಹುದು ಇದು ನರಮಂಡಲದ ಸಮೂಹ ರೋಗ ಲಕ್ಷಣಗಳಾಗಿದ್ದು ಆಟಿಸಮ್ ಆರಂಭಿಕ ಪತ್ತೆ ಮಾಡಿದರೆ ಯಶಸ್ವಿಯಾಗಿ ಚಿಕಿತ್ಸೆ ನೀಡಬಹುದು ಎಂದು ಅಭಿಪ್ರಾಯಪಟ್ಟರು. ಮಕ್ಕಳ ತಜ್ಞ ಡಾ. ವಿ.ಎಸ್.ಸೋಬಾನಿ, ಪ್ರಾಚಾರ್ಯ ಡಾ.ಅರುಣ ಹೂಲಿ ಮಾತನಾಡಿದರು. ಡಾ.ನುಸರತ ಜಮಾದಾರ, ಡಾ ಅಖಿಲಾ ಹುಲ್ಲೂರ, ಪ್ರಾಧ್ಯಾಪಕರು ಡಾ.ರವಿ ಕೋಟೆಣ್ಣವರ, ಡಾ.ಅಮರೇಶ ಬಳಗಾನೂರ, ಡಾ. ಸುಧೀರ ಬೆಟಗೇರಿ, ಡಾ.ರುದ್ರೇಶ ಕೊಪ್ಪಳ, ಡಾ. ವಿಜಯಲಕ್ಷ್ಮೀ, ಡಾ.ಪವನ ಟಾವನಿ, ಡಾ.ಸುನೀಲ ಭೋಸಲೆ ಇತರರಿದ್ದರು.

ವಿರಾಮ
ಪ್ರತಿ ಭಾನುವಾರ

{ಸುನೀಲ್ ಬೋಸ್} ಸಂಸದರು

ಶೋಷಿತ ಸಮುದಾಯಗಳಿಗೆ ಸ್ವಾಭಿಮಾನದ ಬದುಕು ಕಟ್ಟಿಕೊಡಲು ಅಪಾರವಾಗಿ ಶ್ರಮಿಸಿದವರು ಅಂಬೇಡ್ಕರ್. ಅವರನ್ನು ಕೇವಲ ಒಂದು ಜಾತಿಗೆ ಸೀಮಿತ ಮಾಡುವುದು ಸರಿಯಲ್ಲ. ಕಾರ್ಮಿಕರಿಗಾಗಿ ಮಸೂದೆ ತಂದು 8 ಗಂಟೆಗಳ ಕಾಲ ಕೆಲಸದ ಅವಧಿ ನಿಗದಿ ಮಾಡಿದರು. ಎಲ್ಲ ಮಹಿಳೆಯರಿಗೂ ಮತದಾನದ ಹಕ್ಕು ನೀಡಿ ಅನುಕೂಲ ಮಾಡಿಕೊಟ್ಟರು.

ಬಸವೇಶ್ವರ ವೃತ್ತದಲ್ಲಿ ವೇದಿಕೆ ಕಾರ್ಯಕ್ರಮ | ಮಾಜಿ ಶಾಸಕ ವೀರಣ್ಣ ಚರಂತಿಮಠ

ಬಿಜೆಪಿ ಜನಾಕ್ರೋಶ ಯಾತ್ರೆ ನಾಳೆ

ಬಾಗಲಕೋಟೆ: ರಾಜ್ಯದಲ್ಲಿರುವ ಕಾಂಗ್ರೆಸ್ ಸರಕಾರದ ಬೆಲೆ ಏರಿಕೆ, ಮುಸ್ಲಿಂ ಓಲೈಕೆ ಹಾಗೂ ದಲಿತರ ಹಣ ಲೂಟಿ ಮಾಡಿರುವುದನ್ನು ವಿರೋಧಿಸಿ ಬಿಜೆಪಿಯಿಂದ ಹಮ್ಮಿಕೊಂಡಿರುವ ಜನಾಕ್ರೋಶ ಯಾತ್ರೆ ಏ.17 ರಂದು ನಗರಕ್ಕೆ ಆಗಮಿಸಲಿದೆ ಎಂದು ಮಾಜಿ ಶಾಸಕ ವೀರಣ್ಣ ಚರಂತಿಮಠ ತಿಳಿಸಿದರು.

ನಗರದ ಬಿವಿವಿ ಸಂಘದ ಮಿನಿ ಸಭಾಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 10.30ಕ್ಕೆ ನಗರದ ಡಾ.ಅಂಬೇಡ್ಕರ್ ವೃತ್ತದಿಂದ ಪ್ರಾರಂಭವಾಗುವ ಯಾತ್ರೆ ಎಂ.ಜಿ ರಸ್ತೆ ಮೂಲಕ ಬಸವೇಶ್ವರ ವೃತ್ತ ತಲುಪಲಿದೆ. ಅಲ್ಲಿನ ಹೊಳೆ ಆಂಜನೇಯ ದೇವಸ್ಥಾನದ ಹತ್ತಿರ ವೇದಿಕೆ ಕಾರ್ಯಕ್ರಮ ಜರುಗಲಿದೆ ಎಂದರು.

ಯಾತ್ರೆಯಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಹಾಗೂ ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಚಲುವಾದಿ ನಾರಾಯಣಸ್ವಾಮಿ ಸೇರಿದಂತೆ ಜಿಲ್ಲೆಯ ಹಾಲಿ ಹಾಗೂ ಮಾಜಿ ಶಾಸಕರುಗಳು, ಮಾಜಿ ಸಚಿವರುಗಳು ಹಾಗೂ ಸಂಸದರು ಸೇರಿದಂತೆ ಎಲ್ಲ ಮುಖಂಡರು ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು.

ಕಾಂಗ್ರೆಸ್ ಸರಕಾರ ಆಡಳಿತಕ್ಕೆ ಬಂದು 2 ವರ್ಷಗಳಲ್ಲಿ ಎಸ್ಸಿ ಹಾಗೂ ಎಸ್ಟಿಗಳ ಅಭಿವೃದ್ಧಿಗೆ ಮೀಸಲಿಟ್ಟ 38,860 ಕೋಟಿ ರು. ಹಣವನ್ನು ಗ್ಯಾರಂಟಿಗಳಿಗೆ ಬಳಕೆ ಮಾಡಿದ್ದಾರೆ. ಎಸ್ಸಿ, ಎಸ್ಟಿ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡಿಲ್ಲ ಹಾಗೂ ಓಬವ್ವ ಆತ್ಮರಕ್ಷಣೆ ಯೋಜನೆಯನ್ನು ಮುಸ್ಲಿಂ ಮಕ್ಕಳಿಗೆ ಮಾತ್ರ ಮಾಡಿದ್ದು, ಗಂಗಾ ಕಲ್ಯಾಣ ಯೋಜನೆ ಸೋರಗುತ್ತಿದೆ ಎಂದು ಬೇಸರ ವ್ಯಕ್ತ ಪಡಿಸಿದರು.

ಓಲೈಕೆಗಾಗಿ ಮುಸ್ಲಿಂ ಗುತ್ತಿಗೆದಾರರಿಗೆ ಕಾನೂನು ಬಾಹಿರವಾಗಿ ಸರಕಾರಿ ಗುತ್ತಿಗೆಯಲ್ಲಿ ಶೇ.4 ರಷ್ಟು ಮೀಸಲಾತಿ, ಮುಸ್ಲಿಂ ವಿವಾಹಿತ ಮಹಿಳೆಗೆ ಶಾದಿಭಾಗ್ಯ ಯೋಜನೆಯಿಂದ 50 ಸಾವಿರ ರು., ಉರ್ದು ಶಾಲೆಗಳ ಅಭಿವೃದ್ಧಿಗೆ 500 ಕೋಟಿ ರು., ಮುಸ್ಲಿಂರ ಅಭಿವೃದ್ಧಿಗೆ 4.5 ಸಾವಿರ ಕೋಟಿ ರು. ಮೀಸಲಿಡಲಾಗಿದೆ. ಕಾಂಗ್ರೆಸ್ ಸರಕಾರ ತೃಷ್ಟೀಕರಣ ನೀತಿ ಅನುಸರಿಸುತ್ತಿದೆ ಎಂದು ದೂರಿದರು.

ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದ ಮೇಲೆ ರಾಜ್ಯ ಸರಕಾರಕ್ಕೆ ಬರುವ ಎಲ್ಲ ಆದಾಯವನ್ನು ಗ್ಯಾರಂಟಿಗೆ ಸುರಿಯಲಾಗುತ್ತಿದೆ. ಇದು ಸಾಲದಿದ್ದಾಗ ದಿನನಿತ್ಯದ ವಸ್ತುಗಳ ದರದಲ್ಲಿ ದಿನದಿಂದ ದಿನಕ್ಕೆ ಏರಿಕೆ ಮಾಡುವ ಮೂಲಕ ಮಧ್ಯಮ ಹಾಗೂ ಬಡ ಜನರ ಜೀವನ ನಡೆಸುವುದನ್ನು ದುಸ್ತರವಾಗಿಸಿದೆ. ಹಾಲಿನ ದರದಲ್ಲಿ 2 ವರ್ಷದಲ್ಲಿ ಮೂರು ಬಾರಿ ಒಟ್ಟು 9 ರು. ಏರಿಕೆ ಮಾಡಿದರೇ, ಪೆಟ್ರೋಲ್ ಬೆಲೆಯಲ್ಲಿ 3 ರು. ಹಾಗೂ ಡಿಸೇಲ್ ಬೆಲೆಯಲ್ಲಿ 5 ರು. ಹೆಚ್ಚಳವಾಗಿದೆ. ವಿದ್ಯುತ್ ದರ ಪ್ರತಿ ಯುನಿಟ್‌ಗೆ 35 ಪೈಸೆ ಹೆಚ್ಚಳವಾಗಿದೆ. ಹೀಗೆ ನಿತ್ಯದ ವಸ್ತುಗಳ ದರದಲ್ಲಿ ನಿರಂತರವಾಗಿ ಏರಿಕೆಯಾಗುತ್ತಿದೆ ಎಂದರು.

ಬಾಗಲಕೋಟೆಯಲ್ಲಿ ಹಮ್ಮಿಕೊಂಡಿರುವ ಜನಾಕ್ರೋಶ ಯಾತ್ರೆಯ ಪ್ರಚಾರ ಸಾಮಗ್ರಿಗಳನ್ನು ಮಾಜಿ ಶಾಸಕ ವೀರಣ್ಣ ಚರಂತಿಮಠ ಬಿಡುಗಡೆಗೊಳಿಸಿದರು.

ಜಾತಿಗಳ ನಡುವೆ ವೈಷಮ್ಯದ ಕೆಲಸ

ರಾಜ್ಯ ಸರಕಾರ ಯಾವುದೋ ಕಾಲದಲ್ಲಿ ಮಾಡಿರುವ ಜಾತಿಗಣತಿ ಅವೈಜ್ಞಾನಿವಾಗಿದೆ. ರಾಜ್ಯ ಹಾಗೂ ದೇಶದ ಹಿತದೃಷ್ಠಿಯಿಂದ ಜಾತಿಗಣತಿ ವರದಿಯನ್ನು ಬಿಡುಗಡೆ ಮಾಡಬಾರದು. ವರದಿಯಲ್ಲಿ ಹೆಚ್ಚು ತೋರಿಸಿದವರು ಹೆಚ್ಚು, ಉಳಿದವರು ಕಡಿಮೆ ಎಂದಿಲ್ಲ. ರಾಜ್ಯ ಸರಕಾರ ಮಾಡುತ್ತಿರುವುದು ವಿಷ ಬೀಜ ಹಾಗೂ ವೈಷಮ್ಯ ಬಿತ್ತುವ ಕೆಲಸ. ಮುಸ್ಲಿಂರ ಓಲೈಕೆಗೆ ಈ ರೀತಿ ಮಾಡಲಾಗುತ್ತಿದೆ ಎಂದು ಮಾಜಿ ಶಾಸಕ ವೀರಣ್ಣ ಚರಂತಿಮಠ ಆಕ್ರೋಶ ವ್ಯಕ್ತ ಪಡಿಸಿದರು.

ಮುಖಂಡರಾದ ಬಸವರಾಜ ಹುನಗುಂದ, ಕಲ್ಲಪ್ಪ ಭಗವತಿ, ಮಲ್ಲೇಶ ಬಿಜಾಪುರ, ಉಮೇಶ ಹಂಚಿನಾಳ, ಶ್ರೀಧರ.ಬಿ ಇತರರಿದ್ದರು.

ಅಬಕಾರಿ ಇಲಾಖೆಯ ಹಗರಣಗಳ ತನಿಖೆಯಾಗಲಿ

ಬಾಗಲಕೋಟೆಯಲ್ಲಿ ಹಮ್ಮಿಕೊಂಡಿದ್ದ ಸುದ್ದಿಗೋಷ್ಠಿಯಲ್ಲಿ ಕೆಪಿಸಿಸಿ ವಕ್ತಾರ ಮಹಾಂತೇಶ ಹಟ್ಟಿ ಮಾತನಾಡಿದರು.

ಬಾಗಲಕೋಟೆ: ಮಾಜಿ ಶಾಸಕ ಪಿ. ರಾಜೀವ ಅವರು ಅಬಕಾರಿ ಸಚಿವ ಆರ್ .ಬಿ.ತಿಮ್ಮಾಪುರ ಅವರ ವಿರುದ್ಧ ದಾಖಲೆ ಇಲ್ಲದ ಆರೋಪಗಳನ್ನು ಮಾಡಿದ್ದಾರೆ. ಅಬಕಾರಿ ಇಲಾಖೆಯಲ್ಲಿ ಹಗರಣ ನಡೆದಿವೆ ಎಂಬ ಆರೋಪದ ಸತ್ಯಾಸತ್ಯತೆಯನ್ನು ತಿಳಿಯಲು ಸರಕಾರ ತನಿಖೆಗೆ ಮುಂದಾಗಬೇಕು ಎಂದು ಕೆಪಿಸಿಸಿ ವಕ್ತಾರ ಮಹಾಂತೇಶ ಹಟ್ಟಿ ಮುಖ್ಯಮಂತ್ರಿಗಳಿಗೆ ಆಗ್ರಹಿಸಿದ್ದಾರೆ.

ನಗರದ ಪತ್ರಿಕಾ ಭವನದಲ್ಲಿ ಹಮ್ಮಿಕೊಂಡಿರುವ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಚಿವ ತಿಮ್ಮಾಪುರ ಅವರ ಮೇಲೆ ಮಾಡಿರುವ ಆರೋಪಗಳು ನಿರಾಧಾರವಾಗಿದ್ದು, ಪಿ.ರಾಜೀವ ಅವರು ಬಾಗಲಕೋಟೆಗೆ ಬಂದು ಗಾಳಿಯಲ್ಲಿ ಗುಂಡು ಹಾರಿಸಿ ಹೋಗಿದ್ದಾರೆ. ಅವರ ಆರೋಪದಲ್ಲಿ ಯಾವುದೇ ಸ್ಪಷ್ಟತೆ ಇಲ್ಲ. ತಾವು ಶಾಸಕರಾಗಿ ಏನು ಕೆಲಸ ಮಾಡಿದ್ದಾರೆ ಎಂದು ಜನರಿಗೆ ಗೊತ್ತಿದೆ ಅದಕ್ಕಾಗಿಯೇ ಅವರನ್ನು ತಿರಸ್ಕರಿಸಿದ್ದಾರೆ ಎಂದು ಹೇಳಿದರು.

ಮುಖಂಡರಾದ ಪೀರಪ್ಪ ಮ್ಯಾಗೇರಿ, ದ್ಯಾಮಣ್ಣ ಗಾಳಿ, ರಾಜು ಲಮಾಣಿ, ಶಿವಾನಂದ ಮಾದಾರ ಹಾಗೂ ರಮೇಶ ನಾಯಕ ಇದ್ದರು.

ಅಂಬೇಡ್ಕರ್ ಜಯಂತಿ: ಬೈಕ್ ರ‍್ಯಾಲಿ

ಇಳಕಲ್ಲ: ನಗರದ ಡಾ. ಬಾಬಾಸಾಹೇಬ ಅಂಬೇಡ್ಕರ್ ದಲಿತ ಹಿತ ರಕ್ಷಣಾ ವೇದಿಕೆಯಿಂದ ಡಾ. ಬಿ.ಆರ್. ಅಂಬೇಡ್ಕರ್ ಅವರ 134ನೇ ಜಯಂತ್ಯೋತ್ಸವದ ಅಂಗವಾಗಿ ಇಲ್ಲಿಯ ಬಸವೇಶ್ವರ ವೃತ್ತದಿಂದ ಬೈಕ್ ರ‍್ಯಾಲಿಯನ್ನು ಹಮ್ಮಿಕೊಳ್ಳಲಾಗಿತ್ತು. ಕರ್ನಾಟಕ ವೀರಶೈವ ಲಿಂಗಾಯತ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಹಾಗೂ ಹುನಗುಂದ ಮತಕ್ಷೇತ್ರದ ಶಾಸಕ ವಿಜಯಾನಂದ ಕಾಶಪ್ಪನವರ ಬಸವೇಶ್ವರ ಪುಥ್ಥಳಿಗೆ ಹೂಮಾಲೆ ಹಾಕಿ ಬೈಕ್ ರ‍್ಯಾಲಿಗೆ ಚಾಲನೆ ನೀಡಿ ರ‍್ಯಾಲಿಯಲ್ಲಿ ತಾವು ಪಾಲ್ಗೊಂಡರು. ಬಸವೇಶ್ವರ ವೃತ್ತದಿಂದ ಪ್ರಾರಂಭಗೊಂಡ ರ‍್ಯಾಲಿ ನಗರದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ನಗರದ ಬಿ.ಆರ್. ಅಂಬೇಡ್ಕರ್ ಭವನಕ್ಕೆ ತೆರಳಿತು. ಮೆರವಣಿಗೆಯಲ್ಲಿ ಸಮಾಜದ ನೂರಾರು ಯುವಕರು ಹಾಗೂ ಅಂಬೇಡ್ಕರ್ ಅಭಿಮಾನಿಗಳು ಜೈ ಭೀಮ್ ಜೈ ಭೀಮ್ ಎಂದು ಘೋಷಣೆಗಳನ್ನು ಕೂಗುತ್ತಾ ಪಾಲ್ಗೊಂಡಿದ್ದರು.

ದೇಶಕ್ಕೆ ಡಾ.ಅಂಬೇಡ್ಕರ್ ಕೊಡುಗೆ ಅಪಾರ

ಬಾಗಲಕೋಟೆ: ಡಾ.ಬಾಬಾಸಾಹೇಬ್ ಅಂಬೇಡ್ಕರ್ ಅವರು ರಚಿಸಿದ ಸಂವಿಧಾನದ ಅಡಿಯಲ್ಲಿ ದೇಶ ಮುನ್ನಡೆಯುತ್ತಿದ್ದು, ಅವರ ಕೊಡುಗೆ ಭಾರತ ದೇಶಕ್ಕೆ ಅಪಾರ ಎಂದು ಮಾಜಿ ಸಚಿವ ಎಸ್.ಆರ್.ಪಾಟೀಲ ಹೇಳಿದರು.

ನಗರದ ಜಿಲ್ಲಾ ಹಾಗೂ ತಾಲೂಕು ಕಾಂಗ್ರೆಸ್ ಕಚೇರಿಯಲ್ಲಿ ಡಾ. ಬಿ.ಆರ್.ಅಂಬೇಡ್ಕರ್ ಅವರ ಜಯಂತಿ ಅಂಗವಾಗಿ ಅವರ ಭಾವಚಿತ್ರಕ್ಕೆ ಪುಷ್ಪ ಸಮರ್ಪಿಸಿ ಮಾತನಾಡಿದ ಅವರು, ಇಂದು ದೇಶದಲ್ಲಿ ಆಡಳಿತ ನಡೆಸುತ್ತಿರುವ ರಾಜಕೀಯ ಪಕ್ಷಗಳು ಅವರ ರಚಿಸಿದ ಸಂವಿಧಾನದ ಅಡಿಯಲ್ಲಿ ನಡೆಯುತ್ತಿರುವುದು ಶ್ಲಾಘನೀಯ ಎಂದರು.

ಅವರ ವಿಚಾರ ಧಾರೆಗಳಿಂದ ಭಾರತ ದೇಶಾದ್ಯಂತ ಅಷ್ಟೇ ಅಲ್ಲದೇ ವಿದೇಶದಲ್ಲಿ ಅವರ ಜನ್ಮದಿನವನ್ನು ಆಚರಿಸುತ್ತಿರುವುದು ತುಂಬಾ ಸಂತೋಷದಾಯಕ ವಿಚಾರ. ಅಂಬೇಡ್ಕರ್ ಅವರು ದೇಶದಲ್ಲಿರುವ ದಮನಿತರ ಹಾಗೂ ದೀನ ದಲಿತರಿಗೆ ನೀಡಿದ ಕೊಡುಗೆ ಅಪಾರ ಎಂದರು.

ಕಾಂಗ್ರೆಸ್‌ನ ಎಸ್ಸಿ ಘಟಕದ ಜಿಲ್ಲಾಧ್ಯಕ್ಷ ರಾಜು ಮನ್ನಿಕೇರಿ ಮಾತನಾಡಿ, ಬಾಬಾಸಾಹೇಬ್ ಅಂಬೇಡ್ಕರ್ ಅವರು ಈ ದೇಶದ ಸಂವಿಧಾನ ರಚಿಸದೇ ಹೋದರೆ ದೇಶದಲ್ಲಿರುವ ಅಲ್ಪಸಂಖ್ಯಾತ, ಹಿಂದುಳಿದ ವರ್ಗ ಹಾಗೂ ದಲಿತರು ಈ ಹಿಂದಿನ ಕಾಲದಲ್ಲಿ ಅನುಭವಿಸಿದ ನೋವುಗಳನ್ನು ಅನುಭವಿಸಬೇಕಾಗಿತ್ತು. ಆದರೆ, ಅಂಬೇಡ್ಕರ್ ಅವರು ರಚಿಸಿದ ಸಂವಿಧಾನದಿಂದ ದೇಶದಲ್ಲಿರುವ ಸರ್ವ ಜನಾಂಗದವರು ಸಹೋದರತ್ವ ಮನೋಭಾವದಿಂದ ಬದುಕುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದರು.

ಜಿಲ್ಲಾ ಪಂಚಾಯತಿ ಮಾಜಿ ಅಧ್ಯಕ್ಷೆ ಬಾಯಕ್ಕ ಮೇಟಿ, ಮುಖಂಡರಾದ ಮಲ್ಲಿಕಾರ್ಜುನ ಮೇಟಿ, ಉಮೇಶ ಮೇಟಿ, ನಾಗರಾಜ ಹದ್ಲಿ, ಜಿಲ್ಲಾ ಕಾಂಗ್ರೆಸ್ ಮಹಿಳಾ ಘಟಕದ ಅಧ್ಯಕ್ಷೆ ರಕ್ಷಿತಾ ಭರತ ಈಟಿ, ಶ್ರವಣ ಖಾತೇದಾರ, ಗುಣವಂತಿ ನಿಡೋಣಿ, ರೇಣುಕಾ ನ್ಯಾಮಗೌಡರ, ರೇಣುಕಾ ನಾರಾಯಣಕರ, ಹಣಮಂತ ಗೊರವರ, ವೈ.ವೈ.ತಿಮ್ಮಾಪೂರ ಸೇರಿ ಇತರರಿದ್ದರು.

ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಕಾರ್ಯಕ್ರಮದಲ್ಲಿ ಅವರ ಭಾವಚಿತ್ರಕ್ಕೆ ಮಾಜಿ ಸಚಿವ ಎಸ್. ಆರ್.ಪಾಟೀಲ ಅವರು ಪುಷ್ಪ ನಮನ ಸಲ್ಲಿಸಿದರು.

ಪಾಟೀಲ ಸ್ವಯಂ ಘೋಷಿತ ನಾಯಕ

ಪತ್ರಿಕಾಗೊಷ್ಠಿಯಲ್ಲಿ ಶಾಸಕ ವಿಜಯಾನಂದ ಕಾಶಪ್ಪನವರ ಮಾತನಾಡಿದರು.

ಇಳಕಲ್ಲ: 2004ಕ್ಕಿಂತ ಮೊದಲು ಪಂಚಮಸಾಲಿ ಸಮಾಜಕ್ಕೆ ಸಿ.ಸಿ.ಪಾಟೀಲ ಕೊಡುಗೆ ಏನು? ನಮ್ಮ ತಂದೆಯ ಅಕಾಲಿ ಮರಣದ ನಂತರ ನಮ್ಮ ತಂದೆಯವರು ಕಟ್ಟಿದ ಸಮುದಾಯದ ಹೆಸರಿನಲ್ಲಿ ಸಿ.ಸಿ. ಪಾಟೀಲರು ತಮ್ಮನ್ನು ತಾವು ಗುರುತಿಸಿಕೊಂಡ ಸ್ವಯಂ ಘೋಷಿತ ನಾಯಕರು ಎಂದು ಕರ್ನಾಟಕ ವೀರಶೈವ ಲಿಂಗಾಯಿತ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಹಾಗೂ ಹುನಗುಂದ ಮತಕ್ಷೇತ್ರದ ಶಾಸಕ ವಿಜಯಾನಂದ ಕಾಶಪ್ಪನವರ ವ್ಯಂಗ್ಯವಾಗಿ ಹೇಳಿದರು.

ನಗರದ ಎಸ್.ಆರ್.ಕೆ ನಿಲಯದ ಪಕ್ಷದ ಕಾರ್ಯಾಲಯದಲ್ಲಿ ಕರೆಯಲಾದ ಪತ್ರಿಕಾಗೊಷ್ಠಿಯಲ್ಲಿ ಅವರು ಮಾತನಾಡಿದರು. ಸಿ.ಸಿ. ಪಾಟೀಲ ಅವರೇ ಬಾರಕೋಲು ಎಲ್ಲಿ ಇಟ್ಟಿದ್ದೇನೆ ಎಂದು ಪ್ರಶ್ನಿಸಿದ್ದಿರಿ, ಪಾಟೀಲರೇ ಸಮುದಾಯದ ವಿರುದ್ಧ ಮಾತನಾಡುವವರಿಗಾಗಿ ಒಂದಲ್ಲ ಅಂತಹ ನಾಲ್ಕು ಬಾರಕೋಲು ತೆಗೆದಿಟ್ಟಿದ್ದೇನೆ. ತುಮಕೂರಲ್ಲಿ ಹೋರಾಟ ತಡೆಯಲು ಬಂದ ಸಮಾಜದ ಇಬ್ಬರು ಪ್ರಭಾವಿ ಸಚಿವರಿಗೆ ಎತ್ತಿದ್ದನ್ನು ಸಿ.ಸಿ. ಪಾಟೀಲರು ಮರೆತಂತೆ ಕಾಣುತ್ತಿದೆ. ಅಗತ್ಯ ಬಿದ್ದರೇ ನಾಲ್ಕು ಬಾರಕೋಲು ಉಪಯೋಗಿಸುತ್ತೇನೆ ಎಂದರು.

ಈ ಮೊದಲು ಧರ್ಮಾತೀತವಾಗಿ ಜ್ಯಾತ್ಯತೀತವಾಗಿ ಪಕ್ಷಾತೀತವಾಗಿ ಇದ್ದ ಶ್ರೀಗಳು ವಕ್ತಬೋರ್ಡ ವಿರುದ್ದ ಒಂದು ಪಕ್ಷದ ಬ್ಯಾನರ ಅಡಿಯಲ್ಲಿ ಬಸವರಾಜ ಯತ್ನಾಳ ಅವರೊಂದಿಗೆ ಕೈಜೊಡಿ ಹೋರಾಟ ಪ್ರಾರಂಭವಾದಾಗಿನಿಂದ ಶ್ರೀಗಳು ದಾರಿ ತಪ್ಪಿದ್ದು, ಅಂದಿನಿಂದಲೇ ಶ್ರೀಗಳನ್ನು ನಮ್ಮ ಸಮುದಾಯದ ಗುರುಗಳೆಂದು ಒಪ್ಪಲು ಸಾಧ್ಯವಿಲ್ಲ ಎಂದು ಖಡಕ್ಕಾಗಿ ಹೇಳಿದರು.

ಈ ಕುರಿತಾಗಿ ಇದೇ 22ರಂದು ಹುಬ್ಬಳ್ಳಿಯಲ್ಲಿ ಸಮಾಜದ ಮುಖಾಂಡರ ಸಭೆ ನಡೆಯಲಿರದ್ದು ಸಭೆ ನಿರ್ಧಾರದಂತೆ ಮುಂದಿನ ರೂಪರೇಷದಂತೆ ಮುಂದುವರೆಯುವದಾಗಿ ತಿಳಿಸಿದರು.

ಪತ್ರಿಕಾ ಗೋಷ್ಟಿಯಲ್ಲಿ ಹಿರಿಯರಾದ ಸಂಗಮದ ಜಿ.ಜಿ.ಪಾಟೀಲ, ಗಂಗಣ್ಣ ಪಾಟೀಲ, ಮಹಾಂತಗೌಡ ಪಾಟೀಲ, ರುದ್ರಪ್ಪ ಸಮತಾರ, ಅಮರೇಶ ನಾಗೂರ, ಶೇಖರಪ್ಪ ಬಾದವಾಡಗಿ, ಶಿವಾನಂದ ಕಂಠಿ, ಮಹಾಂತೇಶ ಅವಾರಿ, ಹುಚ್ಚಪ್ಪ ಐಹೊಳ್ಳಿ ಮುತ್ತಣ್ಣ ಕಲ್ಗುಡಿ, ಬಸನಗೌಡ ಪಾಟೀಲ, ಶಂಕರ ತೋಟದ ಹಾಗು ಇತರರು ಉಪಸ್ತಿತರಿದ್ದರು.

ಪಂಚಮಸಾಲಿಗರ ರಾಜ್ಯ ಮಟ್ಟದ ಸಭೆ ನಾಳೆ

ಬಾಗಲಕೋಟೆ: ಕೂಲಡಸಂಗಮದ ಪಂಚಮಸಾಲಿ ಪೀಠದಲ್ಲಿ ಏ.19 ರಂದು ಬೆಳಗ್ಗೆ 11.30ಕ್ಕೆ ಅಖಿಲ ಭಾರತ ಲಿಂಗಾಯತ ಪಂಚಮಸಾಲಿ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷ ವಿಜಯಾನಂದ ಕಾಶಪ್ಪನವರ ಸಮುದಾಯದ ರಾಜ್ಯ ಮಟ್ಟದ ಸಭೆ ಕರೆದಿದ್ದಾರೆ ಎಂದು ಮಹಾಸಭಾದ ರೈತ ಘಟಕದ ಅಮರೇಶ ನಾಗೂರ ತಿಳಿಸಿದರು.

ಇಲ್ಲಿನ ಪತ್ರಿಕಾ ಭವನದಲ್ಲಿ ಹಮ್ಮಿಕೊಂಡಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಸಭೆಯಲ್ಲಿ ಸಮುದಾಯದ ಹಾಲಿ ಹಾಗೂ ಮಾಜಿ ಸಚಿವರುಗಳು, ಶಾಸಕರುಗಳು ಸೇರಿದಂತೆ ರಾಜ್ಯದ ಮುಖಂಡರು ಪಾಲ್ಗೊಳ್ಳಲಿದ್ದಾರೆ. ಇಲ್ಲಿ ಮಹತ್ವದ ವಿಷಯಗಳ ಬಗ್ಗೆ ಚರ್ಚೆ ನಡೆದು, ತೀರ್ಮಾನಗಳು ಹೊರಬರಲಿವೆ ಎಂದು ತಿಳಿಸಿದರು.

ಅಖಿಲ ಭಾರತ ಲಿಂಗಾಯತ ಪಂಚಮಸಾಲಿ ಸಮಾಜದ ಟ್ರಸ್ಟ್‌ನ 48 ಸದಸ್ಯರು ಸಭೆಯಲ್ಲಿ ಪಾಲ್ಗೊಂಡು ಪೀಠದ ಬಗ್ಗೆ ಚರ್ಚೆ ನಡೆಸಿದರೇ, ಸಮಾಜದ ಮುಖಂಡರು ಮೀಸಲಾತಿ ಮುಂದಿನ ಹೋರಾಟದ ರೂಪರೇಷೆಗಳ ಬಗ್ಗೆ ಚರ್ಚೆ ನಡೆಸಲಿದ್ದಾರೆ ಎಂದು ತಿಳಿಸಿದರು.

ಪಂಚಮಸಾಲಿ ಪೀಠವನ್ನು ಕೂಡಲಸಂಗಮದಲ್ಲಿ ಸ್ಥಾಪನೆ ಮಾಡಿ ಬಸವಜಯ ಮೃತ್ಯುಂಜಯ ಸ್ವಾಮೀಜಿಯನ್ನು ಪೀಠಾಧ್ಯಕ್ಷರನ್ನಾಗಿ ಮಾಡಿದ್ದೇವೆ. ಆದರೆ, ಕಳೆದ ಕೆಲವು ವರ್ಷಗಳಿಂದ ಪೀಠವನ್ನು ಅವರು ರಾಜಕೀಯವಾಗಿ ಬಳಸಿಕೊಳ್ಳುತ್ತಿದ್ದಾರೆ. ಇತ್ತೀಚೆಗೆ ನಡೆದ 2ಎ ಮೀಸಲಾತಿ ಹೋರಾಟಕ್ಕೆ ಸಂಬಂಧಿಸಿದಂತೆ ಒಂದು ಪಕ್ಷದ ಬ್ಯಾನರ್ ಅಡಿಯಲ್ಲಿ ಹೋರಾಟವನ್ನು ಮಾಡಿದ್ದಾರೆ. ಇದನ್ನು ಖಂಡಿಸುತ್ತೇವೆ. ಮೀಸಲಾತಿ ಹೋರಾಟದಲ್ಲಿ ಮೊದಲು ಪಕ್ಷಾತೀತ, ಜಾತ್ಯಾತೀತವಾಗಿ ಮಾಡುತ್ತಿದ್ದೇವು. ಆದರೆ, ಈಗ ಸಮಾಜವನ್ನು ದಿಕ್ಕು ತಪ್ಪಿಸುತ್ತಾ ಒಂದು ಪಕ್ಷದ ಕಡೆಗೆ ವಾಲಿ ದ್ದಾರೆಂದು ಆರೋಪಿಸಿದರು.

ಟ್ರಸ್ಟ್ ಸಮಾಜದ ಎಲ್ಲ ಬಾಂಧವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಸ್ಥಾಪನೆ ಮಾಡಿದ್ದೇವೆ. ಯಾವುದೇ ಒಂದು ಕುಟುಂಬಕ್ಕೆ ಸೀಮಿತವಾಗಿಲ್ಲ. ಇದರೊಂದಿಗೆ 48 ಜನರು ಟ್ರಸ್ಟಿಗಳನ್ನಾಗಿ ಮಾಡಲಾಗಿದೆ. ಅಲ್ಲಿ ಎಲ್ಲ ಪಕ್ಷದವರು ಇದ್ದಾರೆ. ಮೀಸಲಾತಿ ಹೋರಾಟ ಸಮಯದಲ್ಲಿ ಶ್ರೀಗಳು ಏಕಪಕ್ಷೀಯವಾಗಿ ಕೆಲವೊಂದು ಬಾರಿ ನಿರ್ಧಾರ ಮಾಡುತ್ತಾ ಹೊರಟಾಗ ಸಮಾಜದವರು ಏಕಪಕ್ಷೀಯ ನಿರ್ಧಾರ ತೆಗೆದು ಕೊಳ್ಳಬಾರದು ಎಂದು ಹೇಳಿದರು. ಆದರೆ, ಶ್ರೀಗಳು ಅದನ್ನು ಮುಂದುವರೆಸಿದ್ದಾರೆ. ಈ ಎಲ್ಲ ಗೊಂದಲಗಳು ಶ್ರೀಗಳಿಂದ ನಡೆಯುತ್ತಿದೆ ಎಂದು ಆರೋಪಿಸಿದರು.

ಅಖಿಲ ಭಾರತ ಲಿಂಗಾಯತ ಪಂಚಮಸಾಲಿ ಮಹಾಸಭಾದ ರಾಷ್ಟ್ರೀಯ ಉಪಾಧ್ಯಕ್ಷ ಸಂಗಣ್ಣ ಗಂಜಿಹಾಳ, ಟ್ರಸ್ಟ್‌ನ ಸದಸ್ಯರಾದ ಗಂಗಣ್ಣ ಬಾಗೇವಾಡಿ, ಶಿವಾನಂದ ಘಂಟಿ, ಸಿದ್ದಪ್ಪ ಹೊಸೂರ, ಮಂಜುನಾಥ ಇದ್ದರು.

ಸುದ್ದಿಗೋಷ್ಠಿಯಲ್ಲಿ ಪಂಚಮಸಾಲಿ ಸಮುದಾಯದ ಮುಖಂಡ ಅಮರೇಶ ನಾಗೂರ ಮಾತನಾಡಿದರು.

ರಾಚೋಟೇಶ್ವರ ಜಾತ್ರೆಯಲ್ಲಿ ಕುಸ್ತಿ ಪಂದ್ಯಾವಳಿ

ಕೆರೂರ.ಅಪ್ಪಟ ಗ್ರಾಮೀಣ ಪುರಾತನ ಬಲು ಆಕರ್ಷಕ ಕ್ರೀಡೆಯಾದ ಕುಸ್ತಿಯಾಟದ ಫೈನಲ್ ಪಂದ್ಯದಲ್ಲಿ ಸಮಬಲದ ಹೋರಾಟ ನಡೆದು ಕ್ರೀಡಾ ಪ್ರೇಮಿಗಳಲ್ಲಿ ಮಾತ್ರವಲ್ಲದೆ ನಿರ್ಣಾಯಕರಲ್ಲೂ ಭಾರಿ ರೋಚಕ ಕೌತುಕ ಕುತೂಹಲದ ರೊಮಾಂಚನ ಮೂಡಿಸಿತು.

ಇಲ್ಲಿಯ ರಾಚೋಟೇಶ್ವರ ದೇವರ ಜಾತ್ರೆಯ ಅಂಗವಾಗಿ ಮೂರು ದಿನಗಳ ಕಾಲ ಕುಸ್ತಿ ಪಟುಗಳ ಹಣಾಹಣಿ ನಡೆದು ಅಂತಿಮ ದಿನದಂದು ಭಾರಿ ರೋಚಕ ಪಂದ್ಯಾವಳಿಗೆ ಸಾಕ್ಷಿಯಾಯಿತು. ಜಾತ್ರಾ ಸಮಿತಿ ಆಯೋಜಿಸಿದ ಈ ಕುಸ್ತಿ ಪಂದ್ಯಾವಳಿಯಲ್ಲಿ ತುಳಸಿಗೇರಿ,ಬೆನಕಟ್ಟಿ, ಮಾಲಗಿ, ಜಮ್ಮನಕಟ್ಟಿ, ಬೇವಿನಮಟ್ಟಿ, ಕೆರೂರಿನ ಕುಸ್ತಿ ಕಲಿಗಳ ಆಟೋಟಕ್ಕೆ ಸಹಸ್ರಾರು ಜನ ಕ್ರೀಡಾ ಪ್ರೇಮಿಗಳ ಮನೋರಂಜನೆಗೆ ಇಂಬು ನೀಡಿತು.

ಬೇವಿನಮಟ್ಟಿ ಸಿದ್ದಪ್ಪ ಚವ್ಹಾಣ, ಜಡ್ರಾಮಕುಂಟಿಯ ಮಹಾಲಿಂಗರಾಯ ತೇಜಿ ಫೈನಲ್ ಪಂದ್ಯದಲ್ಲಿ ಸಮಬಲದ ಭಾರಿ ತುರುಸಿನ ಹೋರಾಟದ ಫಲವಾಗಿ ತಲಾ 2 ಸಾವಿರ ಬಹುಮಾನವನ್ನು ಸಮವಾಗಿ ಹಂಚಲಾಯಿತು.

ಜಗಜಟ್ಟಿ ಕುಸ್ತಿ ಪಟುಗಳ ಆಟೋಟ ನೋಡಿ ಮನಸೋತ ಯುವ ಪ್ರತಿಭೆಗಳು ಅಖಾಡಕ್ಕಿಳಿದು ಪ್ರೇಕ್ಷಕರ ಮನಗೆದ್ದಿದ್ದು ಗ್ರಾಮೀಣ ಕ್ರೀಡೆಗೆ ಆಸಕ್ತಿ ತೋರಿದ್ದು ವಿಶೇಷವಾಗಿತ್ತು.

ಗಿರಿಯಪ್ಪ ಹೆದ್ದೆರಿ, ಸತ್ಯಪ್ಪ ಹನುಮರ, ಬಸಯ್ಯ ಬೂದಿಹಾಳ, ಮುರಗೇಪ್ಪ ಗುತ್ತನ್ನವರ, ಮಂಜುನಾಥ ಗುತ್ತನ್ನವರ, ಗೈಬು ಜಾಲಗಾರ ಕುಸ್ತಿ ಪಂದ್ಯಾವಳಿಯ ನಿರ್ಣಾಯಕರಾಗಿದ್ದರು.

ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಆರ್.ಆರ್ ಶೆಟ್ಟರ್, ಎಸ್.ಎಸ್.ಯಂಡಿಗೇರಿ, ರಾಚಪ್ಪ ಶೆಟ್ಟರ್, ಪುಂಡಲಿಕ ಪತ್ತಾರ, ಬಸವರಾಜ ಶೆಟ್ಟರ, ಬಸಯ್ಯ ಮಠಪತಿ, ಗಂಗಾಧರ ಘಟ್ಟದ, ಚನ್ನಮಲ್ಲಪ್ಪ ಘಟ್ಟದ, ಶಿವಪ್ಪ ಗುತ್ತನ್ನವರ, ಕುಮಾರ ಐಹೊಳಿ, ಹಣಮಂತ ಗುಲಗಂಜಿ ಮತ್ತಿತರರು ಇದ್ದರು

ಕೆರೂರಲ್ಲಿ ರಾಚೋಟೇಶ್ವರ ದೇವರ ಜಾತ್ರೆಯಲ್ಲಿ ಕುಸ್ತಿ ಪಂದ್ಯಾವಳಿ ನಡೆಯಿತು.

ಗ್ರಂಥಾಲಯದ ಉಪಯೋಗ ಪಡೆದುಕೊಳ್ಳಿ: ನ್ಯಾ.ವಿಜಯ

ಹುನಗುಂದ: ರಾಜ್ಯ ಹೈಕೋರ್ಟ್ ಎಲ್ಲಾ ಜಿಲ್ಲಾ ಮತ್ತು ತಾಲೂಕ ನ್ಯಾಯಾಲಯದಲ್ಲಿ ಡಿಜಿಟಲ್ ಗ್ರಂಥಾಲಯ ಕಳೆದ ಹತ್ತು ಹದಿನೈದು ವರ್ಷದ ಹಿಂದೆ ಪ್ರಾರಂಬಿಸಬೇಕಿತ್ತು ಕಾರಣಾಂತರ ಹಾಗೂ ತಾಂತ್ರಿಕ ದೋಷದಿಂದ ಇಂದು ವಕೀಲರಿಗಾಗಿ ತಡವಾಗಿ ಪ್ರಾರಂಭಗೊಂಡಿದೆ ಇದರ ಉಪಯೋಗವನ್ನು ಇಂದಿನಿಂದಲೇ ಪ್ರಾರಂಭಿಸಭೇಕು ಇಲ್ಲವೇ ಹಿಂದೆ ಉಳಿದರೆ ತಮ್ಮ ವೃತ್ತಿ ಬೆಳವಣಿಗೆಗೆ ತೊಂದರೆ ಆಗಬಹುದು ಎಂದು ಬಾಗಲಕೋಟ ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶರಾದ ಎನ್. ವಿ .ವಿಜಯ ಹೇಳಿದರು. ನಗರದ ಹುನಗುಂದ -ಇಲಕಲ್ಲ ವಕೀಲರ ಸಂಘ ಇವರ ಸಂಯುಕ್ತಾಶ್ರಯದಲ್ಲಿ ನಡೆದ ಡಿಜಿಟಲ್ ಗ್ರಂಥಾಲಯ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದರು. ನಂತರ ವಿಧಾನ ಪರಿಷತ್ ಸದಸ್ಯ ಹನಮಂತ ನಿರಾಣಿ ಮಾತನಾಡಿದರು. ಈ ಸಂದರ್ಭದಲ್ಲಿ ಹಿರಿಯ ದಿವಾನಿ ನ್ಯಾಯಾಧೀಶರಾದ ಚಂದ್ರಶೇಖರ್ ದಿಡ್ಡಿ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಹೆಚ್ಚುವರಿ ಜಿಲ್ಲಾ ನ್ಯಾಯಾಧೀಶರಾದ ಜಿ.ಎ ಮೂಲಿಮನಿ, ನಗರದ ಹಿರಿಯ ನ್ಯಾಯಾಧೀಶರಾದ ಹನುಮಂತರಾವ್ ಆರ್ ಕುಲಕರ್ಣಿ, ಪ್ರಧಾನ ದಿವಾಣಿ ನ್ಯಾಯಾಧೀಶ ಬಸವರಾಜ ನೇಸರಗಿ, ಅಪರ ದಿವಾಣಿ ನ್ಯಾಯಾಧೀಶ ಮಹಾಂತೇಶ ಎಸ ಮಠದ, ಇಲಕಲ್ ವಕೀಲರ ಸಂಘದ ಅಧ್ಯಕ್ಷ ಬಿ ಎ ಅವಟಿ, ಹುನಗುಂದ್ ವಕೀಲರ ಸಂಘದ ಉಪಾಧ್ಯಕ್ಷ ಟಿ ಬಿ ಹುಲ್ಯಾಳ, ಇಲಕಲ್ ವಕೀಲರ ಸಂಘದ ಉಪಾಧ್ಯಕ್ಷ ಎಂ ಆರ್ ಮಾರೆನಕೊಳ್ಳದ, ಉಮಾ ಬಳ್ಳೊಳ್ಳಿ ಉಪಸ್ಥಿತರಿದ್ದರು.

ಮರಡಿ ಮಠ: 10ನೇ ಪುಣ್ಯಸ್ಮರಣೋತ್ಸವ

ಗುಳೇದಗುಡ್ಡ: ಮರಡಿ ಮಠದ 10ನೇ ಶ್ರೀ ಕಾಡಸಿದ್ದೇಶ್ವರರ ಪುಣ್ಯಸ್ಮರಣೋತ್ಸವ, ಶ್ರೀ ಅಭಿನವ ಕಾಡಸಿದ್ದೇಶ್ವರ ಶ್ರೀಗಳ ದ್ವಾದಶ ಪಟ್ಟಾಧಿಕಾರ ಮಹೋತ್ಸವ ಹಾಗೂ ನೂತನ ರಥೋತ್ಸವದ ಲೋಕಾರ್ಪಣೆ ಕಾರ್ಯಕ್ರಮ ಏ.20 ರಿಂದ 27ರ ವರೆಗೆ ನಡೆಯಲಿದೆ ಎಂದು ಅಮರೇಶ್ವರ ಮಠದ ಶ್ರೀ ನೀಲಕಂಠ ಸ್ವಾಮಿಗಳು ಹೇಳಿದರು.

ಅವರು ರವಿವಾರ ಸಂಜೆ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಒಂದು ವಾರದ ವರೆಗೆ ಶ್ರೀಮಠದಲ್ಲಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳು, ಸಾಧಕರಿಗೆ ಸನ್ಮಾನ, ತುಲಾಭಾರ, ಪ್ರಭಾತ ಯಾತ್ರೆ, ರಥೋತ್ಸವ ಹಾಗೂ ಸಂಗೀತ ಕಾರ್ಯಕ್ರಮಗಳು ನಡೆಯಲಿವೆ. ಕಾರ್ಯಕ್ರಮದ ಅಂಗವಾಗಿ ಏ.20ರಿಂದ 24ರ ವರೆಗೆ ದಿನನಿತ್ಯ ಸಂಜೆ 7 ಗಂಟೆಗೆ ಕಮತಗಿಯ ಗಣೇಶ ಶಾಸ್ತ್ರಿಗಳಿಂದ ವಿವೇಕ ದರ್ಶನ ಪ್ರವಚನ ನೀಡುವರು.

ಪ್ರವಚನ ಉದ್ಘಾಟನಾ ಕಾರ್ಯಕ್ರಮ ಏ. 20ರಂದು ಸಂಜೆ 7ಗಂಟೆಗೆ ನಡೆಯಲಿದ್ದು, ಬಿಲ್ ಕೆರೂರಿನ ಬಿಲ್ವಾಶ್ರಮದ ಶ್ರೀ ಸಿದ್ದಲಿಂಗ ಸ್ವಾಮಿಗಳು ಪ್ರವಚನ ಉದ್ಘಾಟಿಸುವರು. ಹೊಳೆಹುಚ್ಚೇಶ್ವರ ಮಠದ ಶ್ರೀ ಹುಚ್ಚೇಶ್ವರ ಸ್ವಾಮಿಗಳು, ಒಪ್ಪತ್ತೇಶ್ವರ ಮಠದ ಶ್ರೀ ಅಭಿನವ ಒಪ್ಪತ್ತೇಶ್ವರ ಸ್ವಾಮಿಗಳು, ಸಿದ್ದನಗೊಳ್ಳದ ಶ್ರೀ ಶಿವಕುಮಾರ ಸ್ವಾಮಿಗಳು ಸಾನಿಧ್ಯ ವಹಿಸುವರು. ವಿಪ ಸದಸ್ಯ ಪಿ.ಎಚ್. ಪೂಜಾರ, ಮಾಜಿ ಶಾಸಕ ರಾಜಶೇಖರ ಶೀಲವಂತ, ಮಹೇಶ ಬಿಜಾಪೂರ, ಬಿಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಮುರಗೇಶ ಕಡ್ಲಿಮಟ್ಟಿ, ಸಂಜು ಕಾರಕೂನ, ಪಿ.ಎನ್. ಪವಾರ ಉಪಸ್ಥಿತರಿರಲಿದ್ದಾರೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಶ್ರೀಮಠದ ಶ್ರೀ ಅಭಿನವ ಕಾಡಸಿದ್ದೇಶ್ವರ ಸ್ವಾಮಿಗಳು, ಸಂಗಪ್ಪ ಜವಳಿ, ಡಾ.ವಿ.ಎ. ಬೆನಕನಾಳ, ಎಸ್.ಐ.ರಾಜನಾಳ, ಚಂದ್ರಶೇಖರ ತಾಂಡೂರ, ರವಿ ಗೌಡರ, ವಿಶ್ವನಾಥ ಹಿರೇಮಠ, ಮಲ್ಲಿಕಾರ್ಜುನ ಶೀಲವಂತ, ವೀರಣ್ಣ ಕುರಹಟ್ಟಿ, ಪ್ರಕಾಶ ಅಂಕದ, ಸಚಿನ ತೊಗರಿ, ಪ್ರಶಾಂತ ಜವಳಿ, ಭುವನೇಶ ಪೂಜಾರ, ಮುತ್ತಣ್ಣ ದೇವರಮನಿ, ಮಹೇಶ ಸೂಳಿಭಾವಿ, ಎಂ.ಎಸ್. ಹಿರೇಮಠ ಸೇರಿದಂತೆ ಮಠದ ಭಕ್ತರು ಉಪಸ್ಥಿತರಿದ್ದರು.



ಗುಳೇದಗುಡ್ಡದ ಮರಡಿಮಠದಲ್ಲಿ ನಡೆದ ಪತ್ರಿಕಾಗೋಷ್ಠಿ ನಡೆಸಿ ಆಮಂತ್ರಣ ಪತ್ರಿಕೆ ಬಿಡುಗಡೆಗೊಳಿಸಲಾಯಿತು.

ಸಮಾಜ ನಿರ್ಮಾಣಕ್ಕಾಗಿ ಡಾ.ಅಂಬೇಡ್ಕರ್ ಶ್ರಮ

ಹುನಗುಂದ: ಸದೃಢ ಭಾರತವನ್ನು ನಿರ್ಮಾಣ ಮಾಡಲು ಬಡ ಕುಟುಂಬದಲ್ಲಿ ಹುಟ್ಟಿ, ಸಾಕಷ್ಟು ನೋವನ್ನುಂಡು, 144 ಬ್ಯಾರಿಸ್ಟರ್ ಪದವಿಗಳನ್ನು ಪಡೆದು, ಭಾರತ ದೇಶಕ್ಕೆ ಬೃಹತ್ ಸಂವಿಧಾನ ರಚಿಸಿ ಕೊಟ್ಟ ಹೆಮ್ಮೆಯ ಮಹಾನಾಯಕ ಡಾ.ಬಿ.ಆರ್.ಅಂಬೇಡ್ಕರ ಎಂದು ಶಾಸಕ ವಿಜಯಾನಂದ ಕಾಶಪ್ಪನವರ್ ಹೇಳಿದರು. ಸೋಮವಾರ ಪಟ್ಟಣದ ವಿಜಯಮಹಾಂತೇಶ ವೃತ್ತದಲ್ಲಿ ತಾಲ್ಲೂಕು ಆಡಳಿತ, ತಾಲೂಕ ಪಂಚಾಯಿತಿ, ಪುರಸಭೆ, ಸಮಾಜ ಕಲ್ಯಾಣ ಇಲಾಖೆ ಹಾಗೂ ದಲಿತ ಸಂಘಟನೆಗಳ ಒಕ್ಕೂಟದ ಸಹಯೋಗದಲ್ಲಿ ಹಮ್ಮಿಕೊಳ್ಳಲಾಗಿದ್ದ ಡಾ. ಬಾಬಾಸಾಹೇಬ ಅಂಬೇಡ್ಕರ ಅವರ 134ನೇ ಜಯಂತೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಪ್ರತಿಯೊಂದು ಸಮಾಜದ ಕಟ್ಟ ಕಡೆಯ ವ್ಯಕ್ತಿಗೂ ಸಂವಿಧಾನ ಬದ್ಧ ಕಾನೂನು ಒದಗಿಸಿದಂತ ಅಂಬೇಡ್ಕರ ಅವರ ಜಯಂತಿಯನ್ನು ಕೇವಲ ಒಂದು ಸಮಾಜಕ್ಕೆ ಸೀಮಿತಗೊಳಿ ನಿವೃತ್ತ ಉಪನ್ಯಾಸಕ ಸಿದ್ದಲಿಂಗಪ್ಪ ಬೀಳಗಿ ಮಾತನಾಡಿದರು. ಈ ಸಂದರ್ಭದಲ್ಲಿ ಎಸ್‌ಎಸ್‌ಎಲ್‌ಸಿ ಪಿಯುಸಿಯಲ್ಲಿ ಉತ್ತಮ ಸಾಧನೆಗೈದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ತಹಸೀಲ್ದಾರ ನಿಂಗಪ್ಪ ಬಿರಾದಾರ, ಡಿವೈಎಸ್ಪಿ ವಿಶ್ವನಾಥ ಕುಲಕರ್ಣಿ, ಸಿಪಿಐ ಸಿಪಿಐ ಸುನೀಲಕುಮಾರ ಸವದಿ,ತಾ.ಪಂ ಇಒ ಮುರುಳಿಧರ್ ದೇಶಪಾಂಡೆ,ಪುರಸಭೆ ಮುಖ್ಯಾಧಿಕಾರಿ ಗುರುರಾಜ ಚೌಕಿಮಠ, ಅಧ್ಯಕ್ಷೆ ಭಾಗ್ಯಶ್ರೀ ರೇವಡಿ, ಉಪಾಧ್ಯಕ್ಷೆ ರಾಜಮ್ಮ ಬದಾಮಿ ಸೇರಿದಂತೆ ಅನೇಕರು ಇದ್ದರು.

ಪಿಎನ್‌ಬಿಗೆ ಚೋಕ್ ನೀಡಿದ ಚೋಕ್ಸಿ

ವಿಶೇಷ ವಿಶ್ವವಾಣಿ
vishwavani.news 16.04.2025 ಬುಧವಾರ

ಪಂಜಾಬ್ ನ್ಯಾಷನಲ್ ಬ್ಯಾಂಕ್(ಪಿಎನ್‌ಬಿ)ಗೆ 6100 ಕೋಟಿ ರು. ವಂಚನೆ ಮಾಡಿ ಭಾರತದಿಂದ ಪರಾರಿಯಾಗಿದ್ದ ವಜ್ರೋದ್ಯಮಿ ಮೆಹುಲ್ ಚೋಕ್ಸಿಯ (64) ಬೆನ್ನುಬಿದ್ದಿದ್ದ 'ಕೇಂದ್ರೀಯ ತನಿಖಾ ಸಂಸ್ಥೆ'(ಸಿಬಿಐ), ಡೊಮಿನಿಕಾ ದೇಶದಿಂದ ಆತನನ್ನು ಕರೆತರಲು 2021ರಲ್ಲೇ ಪ್ರಯತ್ನ ನಡೆಸಿ ವಿಫಲವಾಯಿತು. ಏಕೆಂದರೆ, ಚೋಕ್ಸಿ 2017ರಲ್ಲೇ ಆಂಟಿಗುವಾ ಮತ್ತು ಬಾರ್ಬುಡಾದ ಪೌರತ್ವ ಪಡೆದಿದ್ದ. ಅದರ ಆಧಾರದ ಮೇಲೆ ಆಂಟಿಗುವಾದಲ್ಲಿ ಸುರಕ್ಷಿತವಾಗಿ ನೆಲೆಗೊಂಡ. ಹಾಗಿದ್ದೂ ಸಿಬಿಐ ಕೈಚೆಲ್ಲಲಿಲ್ಲ. ಚೋಕ್ಸಿಯ ಚಲನವಲನವನ್ನು ದಾಖಲಿಸಿಕೊಳ್ಳುತ್ತಲೇ ಇತ್ತು. 'ಸಿಬಿಐ'ನ ಏಜೆನ್ಸಿಯಾದ 'ಜಾಗತಿಕ ಮಟ್ಟದ ಕಾರ್ಯಾಚರಣೆಗಳ ಕೇಂದ್ರ'(ಜಿಒಸಿ)ವು ಭಾರತದ ಮೋಸ್ಟ್ ವಾಂಟೆಡ್ ವಂಚಕ ಎಲ್ಲೆಲ್ಲಿ ಹೋದರೂ ಆತನ ಹೆಜ್ಜೆ ಗುರುತನ್ನು ಕಂಡುಕೊಳ್ಳುತ್ತಿತ್ತು. 2024ರ ಜುಲೈನಲ್ಲಿ ಚೋಕ್ಸಿ ಚಿಕಿತ್ಸೆಗಾಗಿ ಆಂಟ್‌ವೆರ್ಪ್‌ಗೆ ತೆರಳಿರುವುದನ್ನು 'ಜಿಒಸಿ' ಕಂಡುಕೊಂಡಿತು. ಆಂಟಿಗುವಾ ದೇಶದ ಜತೆಗೆ ಭಾರತ, ಅಪರಾಧಿಗಳ ಹಸ್ತಾಂತರ ಒಪ್ಪಂದ ಮಾಡಿಕೊಂಡಿಲ್ಲವಾದ ಕಾರಣ ಚೋಕ್ಸಿಯನ್ನು ಡೊಮೆನಿಕಾದಿಂದ ಎಳೆದು ತರುವುದು ಸಿಬಿಐಗೆ ಅಸಾಧ್ಯವಾಗಿತ್ತು. ಹಾಗಾಗಿ ಚೋಕ್ಸಿಯನ್ನು ಡೊಮೆನಿಕಾದಿಂದ ಹೊರಬರುವವರೆಗೂ ಕಾಯುವುದು ಅನಿವಾರ್ಯವಾಯಿತು. ಕ್ಯಾನ್ಸರ್ ಪೀಡಿತನಾದ ಚೋಕ್ಸಿ, ಉತ್ತಮ ಚಿಕಿತ್ಸೆ ಅರಸಿ ಬ್ರೆಜಿಲ್‌ನ ಬ್ರುಸೆಲ್ಸ್‌ಗೆ ತೆರಳಿದ್ದಾನೆ ಎಂಬುದು ತಿಳಿಯುತ್ತಿದ್ದಂತೆಯೇ 'ಸಿಬಿಐ' ಅಧಿಕಾರಿಗಳು ಚುರುಕಾದರು. ಈ ಬಾರಿ ಅವಕಾಶ ಕೈತಪ್ಪದಂತೆ ನೋಡಿಕೊಳ್ಳಲು ಯೋಜಿಸಿದ ಸಿಬಿಐ, ಬ್ರೆಜಿಲ್ ಪೊಲೀಸರಿಗೆ ಮನವಿ ಮಾಡಿ, ಚೋಕ್ಸಿ ಆಸ್ಪತ್ರೆಯಲ್ಲಿರುವಾಗಲೇ ಬಂಧನ'ವಾಗುವಂತೆ ನೋಡಿಕೊಂಡರು.

ನೆರವಿಗೆ ಬಂದ ಶತಮಾನದ ಒಪ್ಪಂದ

ಬ್ರೆಜಿಲ್ ಜತೆ 1901ರಲ್ಲೇ ಭಾರತ ಸರಕಾರ (ಆಗ ಬ್ರಿಟಿಷರ ಆಡಳಿತ) ಹಸ್ತಾಂತರ ಒಪ್ಪಂದ ಮಾಡಿಕೊಂಡಿದೆ. ಈಗ 124 ವರ್ಷಗಳ ಬಳಿಕವೂ ಅದು ಭಾರತದ ಕಾನೂನು ಅಧಿಕಾರಿಗಳ ನೆರವಿಗೆ ಬಂದಿದೆ.

ಗಡಿಪಾರು ಕೋರಿಕೆ

ವಂಚಕ ಮೆಹುಲ್ ಚೋಕ್ಸಿಯನ್ನು ಗಡಿಪಾರು ಮಾಡುವುದಕ್ಕೆ ಅವಕಾಶವಾಗುವಂತೆ ಸಿಬಿಐ ಅಧಿಕಾರಿಗಳು,

ಭಾರತೀಯ ದಂಡ ಸಂಹಿತೆ(ಐಪಿಸಿ) ಮತ್ತು ಭ್ರಷ್ಟಾಚಾರ ತಡೆ ಕಾಯಿದೆ ಹಾಗೂ ಯುನೈಟೆಡ್ ನೇಷನ್ಸ್ ಕನ್ವೆನ್ಷನ್ ಎಗೆನೆಸ್ಟ್ ಟ್ರಾನ್ಸ್‌ನ್ಯಾಷನಲ್ ಆರ್ಗನೈಸ್ಡ್ ಕ್ರೈಂ(ಯು ಎನ್ ಟಿಒಸಿ) ಮತ್ತು ಯುನೈಟೆಡ್ ನೇಷನ್ಸ್ ಕನ್ವೆನ್ಷನ್ ಎಗೆನೆಸ್ಟ್ ಕರಪ್ಷನ್(ಯು ಎನ್‌ಸಿಎಸಿ)ನ ನಿಯಮಗಳನ್ನು ಉಲ್ಲೇಖಿಸಿ ಬ್ರೆಜಿಲ್‌ನ ನ್ಯಾಯಾಲಯಕ್ಕೆ ಮನವಿ ಮಾಡಲು ಸಿದ್ಧತೆ ನಡೆಸಿದ್ದಾರೆ. 'ಐಪಿಸಿ'ಯ ಸೆಕ್ಷನ್ 120ಬಿ(ಅಪರಾಧಿಕ ಸಂಚು), 201(ಸಾಕ್ಷ್ಯಗಳ ನಾಶ), 409(ನಂಬಿಕೆ ನಾಶ), 420(ವಂಚನೆ), 477ಎ(ಖಾತೆಗಳಲ್ಲಿ ತಪ್ಪು ಮಾಹಿತಿ) ಹಾಗೂ ಭ್ರಷ್ಟಾಚಾರ ತಡೆ ಕಾಯಿದೆಯ ಸೆಕ್ಷನ್ 7 ಮತ್ತು 13ರ ಅನ್ವಯ ಆರೋಪಿ ಮೆಹುಲ್ ಚೋಕ್ಸಿ ವಿರುದ್ಧ ದೋಷಾರೋಪ ಮಾಡಿರುವುದನ್ನೂ ಉಲ್ಲೇಖಿಸಲಾಗಿದೆ.

ಜತೆಗೆ, ಮುಂಬೈನ ನ್ಯಾಯಾಲಯ 2018ರ ಮೇ 23ರಂದು ಹಾಗೂ 2021ರ ಜೂ.15ರಂದು ಘೋಷಿತ ಅಪರಾಧಿ ಮೆಹುಲ್ ಚೋಕ್ಸಿ ವಿರುದ್ಧ ಹೊರಡಿಸಿರುವ ನಾನ್ ಬೇಯ್ಲಬಲ್ ವಾರಂಟ್(ಜಾಮೀನು ರಹಿತ ಬಂಧನ ವಾರಂಟ್) ಪ್ರತಿಯನ್ನೂ ಲಗತ್ತಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಬಂಧನ ತಡ ಆಗಿದ್ದೇಕೆ?

ಚೋಕ್ಸಿ ಬಂಧನಕ್ಕೆ ಬೆಲ್ಜಿಯಂ ನ್ಯಾಯಾಲಯ 2024ರ ನವೆಂಬರ್‌ನಲ್ಲೇ ಆದೇಶ ಹೊರಡಿಸಿದ್ದರೂ 5-6 ತಿಂಗಳು ತಡ ಏಕಾಯಿತು? ಎಂಬ ಪ್ರಶ್ನೆಗೆ ಸಿಬಿಐ ಅಧಿಕಾರಿಗಳು, 'ಬಂಧನ ತಡವಾಗಿರಬಹುದು. ಆದರೆ, ನಾವು ಚೋಕ್ಸಿಯ ಮೇಲೆ ಸದಾ ನಿಗಾ ಇರಿಸಿದ್ದೆವು. ಆತ ಆಸ್ಪತ್ರೆಯಿಂದ ತಪ್ಪಿಸಿಕೊಳ್ಳಲು ಸಾಧ್ಯವೇ ಇರಲಿಲ್ಲ' ಎಂದು ಪ್ರತಿಕ್ರಿಯಿಸಿದ್ದಾರೆ. ಹಸ್ತಾಂತರ ಸರಾಗ ಆಗಲಿದೆಯೇ? ಎಂಬ ಇನ್ನೊಂದು ಪ್ರಶ್ನೆಗೆ, 'ಚೋಕ್ಸಿ ಏನು ಬೆಲ್ಜಿಯಂ ಪ್ರಜೆ ಅಲ್ಲ. ಹಾಗಾಗಿ ಆತನನ್ನು ಭಾರತಕ್ಕೆ ಹಸ್ತಾಂತರಿಸುವ ಅವಕಾಶಗಳು ಹೆಚ್ಚೇ ಇವೆ' ಎಂದು ಅಧಿಕಾರಿ ಉತ್ತರಿಸಿದ್ದಾರೆ.

ಬೆಲ್ಜಿಯಂ ನ್ಯಾಯಾಲಯ ಆದೇಶ

ಪ್ರಸ್ತುತ ಬೆಲ್ಜಿಯಂ ದೇಶದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ, ಭಾರತದ ಮೋಸ್ಟ್ ವಾಂಟೆಡ್ ಹಾಗೂ ಘೋಷಿತ ಅಪರಾಧಿ ಮೆಹುಲ್ ಚೋಕ್ಸಿಯನ್ನು ಬಂಧಿಸಿ ಭಾರತಕ್ಕೆ ಹಸ್ತಾಂತರ ಮಾಡಲು ಪ್ರಕ್ರಿಯೆ ಆರಂಭಿಸುವಂತೆ ಸಿಬಿಐ ಹಲವು ಹಂತಗಳಲ್ಲಿ ಬೆಲ್ಜಿಯಂ ಸರಕಾರ ಮತ್ತು ನ್ಯಾಯಾಲಯಕ್ಕೆ ಮನವಿ ಮಾಡಿದೆ. ಅದಕ್ಕೆ ತಕ್ಕದಾದ ದಾಖಲೆಗಳು, ಸಾಕ್ಷ್ಯಗಳನ್ನೂ ಸಲ್ಲಿಸಿದೆ. ಪರಿಣಾಮವಾಗಿ ಬೆಲ್ಜಿಯಂ ಸರಕಾರ ಮೆಹುಲ್ ಚೋಕ್ಸಿಯನ್ನು ಬಂಧಿಸಲು ಕ್ರಮ ಕೈಗೊಂಡಿದೆ. ಬೆಲ್ಜಿಯಂ ನ್ಯಾಯಾಲಯ ಕೂಡಾ ಪೊಲೀಸರ ಕೋರಿಕೆ ಮೇರೆಗೆ ಆಸ್ಪತ್ರೆಯಲ್ಲಿದ್ದ ಚೋಕ್ಸಿ ಬಂಧನಕ್ಕೆ 2024ರ ನವೆಂಬರ್‌ನಲ್ಲಿ 'ಆರ್ಡರ್ ಆಫ್ ಅರೆಸ್ಟ್' (ಬಂಧನಕ್ಕೆ ಆದೇಶ) ಹೊರಡಿಸಿದೆ. ಇಷ್ಟೆಲ್ಲಾ ಪ್ರಕ್ರಿಯೆಗಳನ್ನೂ ಸಿಬಿಐ ಅಧಿಕಾರಿ ಚೋಕ್ಸಿಗೆ ಸಣ್ಣ ಸುಳಿವೂ ಸಿಗದಂತೆ ಎಚ್ಚರ ವಹಿಸಿ ನಡೆಸಿದ್ದಾರೆ. ಇದೆಲ್ಲದರ ಪರಿಣಾಮವಾಗಿ ಏ.12ರಂದು ವಂಚಕ ಮೆಹುಲ್ ಚೋಕ್ಸಿಯನ್ನು ಆಸ್ಪತ್ರೆಯಲ್ಲಿಯೇ ಬಂಧಿಸಿದ ಬೆಲ್ಜಿಯಂ ಪೊಲೀಸರು, ಬಳಿಕ ಭಾರತದ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದಾರೆ.

ಈಗಲೂ ಪಾರಾಗಲು ಚೋಕ್ಸಿ ಯತ್ನ

ಭಾರತದಿಂದ ಸಿಬಿಐನ ಹಿರಿಯ ಅಧಿಕಾರಿಗಳ ತಂಡ ಬೆಲ್ಜಿಯಂಗೆ ತೆರಳಿದೆ. ಬಹುಕೋಟಿ ವಂಚಕ ಚೋಕ್ಸಿಯನ್ನು ಎಳೆದು ತರಲು ಅಗತ್ಯವಾದ ಕಾನೂನು ಪ್ರಕ್ರಿಯೆಗಳನ್ನು ಕೈಗೊಂಡಿದೆ. ಆದರೆ. ಮೆಹುಲ್ ಚೋಕ್ಸಿ ಮತ್ತು ಅವನ ನುರಿತ ವಕೀಲರ ತಂಡ, ಬೆಲ್ಜಿಯಂನಿಂದ ಭಾರತಕ್ಕೆ ಹಸ್ತಾಂತರಗೊಳ್ಳುವುದನ್ನು ತಡೆಯಲು ಕಾನೂನು ಮಾರ್ಗಗಳನ್ನು ಹುಡುಕುತ್ತಿದೆ. ಚೋಕ್ಸಿಗೆ ಗಂಭೀರ ಸ್ವರೂಪದ ಆರೋಗ್ಯ ಸಮಸ್ಯೆ ಇರುವುದರಿಂದ ತುರ್ತು ಚಿಕಿತ್ಸೆ ಅಗತ್ಯವಿದೆ. ಹಾಗಾಗಿ ಈಗ ಭಾರತಕ್ಕೆ ಹಸ್ತಾಂತರ ಮಾಡಬಾರದು. ಬೆಲ್ಜಿಯಂನಲ್ಲೇ ಚಿಕಿತ್ಸೆಗೆ ಅವಕಾಶ ಮಾಡಿಕೊಡಬೇಕು ಎಂಬ ಮನವಿಯನ್ನು ವಕೀಲರ ತಂಡ, ಬ್ರುಸೆಲ್ಸ್ ನ್ಯಾಯಲಯದಲ್ಲಿ ಸಲ್ಲಿಸಲಿದೆ ಎಂಬ ಮಾಹಿತಿ ಲಭ್ಯವಾಗಿದೆ.

ಯಾರು ಈ ಚೋಕ್ಸಿ?

1959ರಲ್ಲಿ ಭಾರತದಲ್ಲಿ ಜನಿಸಿದ ಮೆಹುಲ್ ಚೋಕ್ಸಿ, ಕಾಲೇಜು ವ್ಯಾಸಂಗದ ಬಳಿಕ ವಜ್ರದ ವ್ಯಾಪಾರಕ್ಕಿಳಿದ. ನಂತರದಲ್ಲಿ 'ಗೀತಾಂಜಲಿ ಗ್ರೂಪ್' ಹೆಸರಿನಲ್ಲಿ ದೊಡ್ಡ ಮಟ್ಟದಲ್ಲಿ ವಜ್ರ- ಆಭರಣಗಳ ವ್ಯಾಪಾರ ಆರಂಭಿಸಿ ಹಲವು ವರ್ಷ ಗಳವರೆಗೂ ಮುಂದುವರಿಸಿದ. ಚೋಕ್ಸಿ, ಬಳಿಕ ಹಂತ ಹಂತವಾಗಿ ಪಂಜಾಬ್ ನ್ಯಾಷನಲ್ ಬ್ಯಾಂಕ್ (ಪಿಎನ್‌ಬಿ)ನಿಂದ ಸಾಲ ಪಡೆಯಲಾರಂಭಿಸಿದ. ವಿದೇಶದಲ್ಲೂ ವಹಿವಾಟು ವಿಸ್ತರಿಸುವ ನೆಪವೊಡ್ಡಿ 6097 ಕೋಟಿ ರು.ವರೆಗೂ ಸಾಲ ಪಡೆದ. ಜತೆಗೆ ಸೋದರಳಿಯ ನೀರವ್ ಮೋದಿಯನ್ನೂ ಜತೆಗಿಟ್ಟುಕೊಂಡು ಬ್ಯಾಂಕ್ ವಂಚನೆ ಮೊತ್ತವನ್ನು ಮತ್ತಷ್ಟು ಹಿಗ್ಗಿಸಿದ.

2011ರಿಂದ 2018ರ ನಡುವೆ ಇಬ್ಬರೂ 'ಪಿಎನ್‌ಬಿ'ಯಿಂದ ಚೋಕ್ಸಿ 6097 ಕೋಟಿ ರು. ಮತ್ತು ನೀರವ್ ಮೋದಿ 6,498 ಕೋಟಿ ರು. ಸಾಲ ಪಡೆದಿದ್ದು, ಬಡ್ಡಿ ಸೇರಿ ಅದೀಗ 13,850 ಕೋಟಿ ರು.ಗೆ ತಲುಪಿದೆ. 2018ರಲ್ಲಿ ದೇಶದಿಂದ ಓಡಿ ಹೋಗಿದ್ದ. ಮೊದಲಿಗೆ ಅಮೆರಿಕ, ಬಳಿಕ ಆಂಟಿ ಗುವಾ ಮತ್ತು ಬಾರ್ಬುಡಾದಲ್ಲಿ ವಾಸಿಸುತ್ತಿದ್ದ. ಇತ್ತೀಚೆಗೆ ತೀವ್ರ ಅನಾರೋಗ್ಯಕ್ಕೆ (ಕ್ಯಾನ್ಸರ್) ತುತ್ತಾಗಿದ್ದರಿಂದ ಚಿಕಿತ್ಸೆಗಾಗಿ ಬೆಲ್ಜಿಯಂನ ಆಂಟ್ವೆರ್ಪ್‌ನಲ್ಲಿ ಆಸ್ಪತ್ರೆಗೆ ದಾಖಲಾಗಿದ್ದ.

ಇಂಟರ್‌ಪೋಲ್ ನೋಟಿಸ್ ರದ್ದು!

ಭಾರತ ಸರಕಾರದ ಕೋರಿಕೆ ಮೇರೆಗೆ ವಂಚಕ ಮೆಹುಲ್ ಚೋಕ್ಸಿ ವಿರುದ್ಧ ರೆಡ್ ಕಾರ್ನರ್ ನೋಟಿಸ್ ಹೊರಡಿಸಿದ್ದ ಇಂಟರ್‌ಪೋಲ್ ಪೊಲೀಸರು, ಆ ಬಳಿಕ 2022ರಲ್ಲಿ ನೋಟಿಸ್ ವಾಪಸ್ ತೆಗೆದುಕೊಂಡಿದ್ದರು. ಹಾಗಾಗಿಯೇ ವಂಚಕ ಚೋಕ್ಸಿಯ ಬಂಧನ ವಿದೇಶಿ ನೆಲದಲ್ಲಿ ಕಷ್ಟವಾಗಿತ್ತು.

ಚೋಕ್ಸಿ ಬಂಧನಕ್ಕೆ ಕಾರಣವಾದ ಘಟನೆಗಳು

- 2014-17: ಮೆಹುಲ್ ಚೋಕ್ಸಿ ತನ್ನ ಸಹಚರರು ಮತ್ತು ಪಂಜಾಬ್ ನ್ಯಾಷನಲ್ ಬ್ಯಾಂಕ್‌ನ ಕೆಲ ಅಧಿಕಾರಿಗಳ ಜತೆಗೂಡಿ ಬ್ಯಾಂಕ್‌ಗೆ 6,098 ಕೋಟಿ ರು. ವಂಚಿಸಿದ.
- ಚೋಕ್ಸಿ ಸೋದರಳಿಯ ನೀರವ್ ಮೋದಿ ಕೂಡಾ ಪಂಜಾಬ್ ನ್ಯಾಷನಲ್ ಬ್ಯಾಂಕ್‌ಗೆ 6498 ಕೋಟಿ ರು. ಸಾಲ ಪಡೆದು ಮರುಪಾವತಿ ಮಾಡದೇ ವಂಚಿಸಿದ್ದಾನೆ.
- ಮೆಹುಲ್ ಚೋಕ್ಸಿ ಮತ್ತು ನೀರವ್ ಮೋದಿ ಇಬ್ಬರಿಂದಲೇ ಪಂಜಾಬ್ ನ್ಯಾಷನಲ್ ಬ್ಯಾಂಕ್‌ಗೆ 13,850 ಕೋಟಿ ರು.ಗಳಷ್ಟು ಬೃಹತ್ ಮೊತ್ತದ ಹಗರಣವಾಗಿದೆ.

2017
ಭಾರತ ಯಾವ ದೇಶದೊಂದಿಗೆ ಅಪರಾಧಿಗಳ ಹಸ್ತಾಂತರ ಒಪ್ಪಂದ ಮಾಡಿಕೊಂಡಿಲ್ಲ ಎಂಬುದನ್ನು ಶೋಧಿಸಿದ ಚೋಕ್ಸಿ, ಮುಂಜಾಗ್ರತೆಯಿಂದಲೇ ಆಂಟಿಗುವಾ ಮತ್ತು ಬಾರ್ಬುಡಾ ದೇಶದ ಪೌರತ್ವ ಪಡೆದುಕೊಂಡ.

2018
ಪಿಎನ್‌ಬಿಗೆ 13,850 ಕೋಟಿ ವಂಚಿಸಿದ ಹಗರಣ ಬಯಲಾಗುವ ಮುನ್ನವೇ ಚೋಕ್ಸಿ 2018ರ ಜ.2ರಂದು ಭಾರತದಿಂದ ಕಾಲ್ಕಿತ್ತ. ಮೊದಲು ಅಮೆರಿಕಕ್ಕೆ ಹೋಗಿ ಕೆಲ ಕಾಲ ಅಲ್ಲಿದ್ದು, ಬಳಿಕ ಮೊದಲೇ ಪೌರತ್ವ ಪಡೆದಿದ್ದ ಆಂಟಿಗುವಾಕ್ಕೆ ತೆರಳಿ ನೆಲೆಸಿದ.

2018
ಈ ಮಧ್ಯೆ, ಭಾರತದಲ್ಲಿ ಪಿಎನ್‌ಬಿಗೆ ಚೋಕ್ಸಿ, ನೀರವ್ 13850 ಕೋಟಿ ರು. ವಂಚಿಸಿದ ಹಗರಣ ಬಯಲಿಗೆ ಬಂದಿತು. ನಂತರ ಸಿಬಿಐ ಮತ್ತು ಜಾರಿ ನಿರ್ದೇಶನಾಲಯ ಪ್ರಕರಣ ದಾಖಲಿಸಿದವು.

2019
ನೀರವ್ ಮೋದಿ ಲಂಡನ್‌ನಲ್ಲಿ ಮೇ ತಿಂಗಳಲ್ಲಿ ಬಂಧನಕ್ಕೊಳಗಾದ. ಆದರೆ, ಭಾರತಕ್ಕೆ ಹಸ್ತಾಂತರ ಮಾಡದಂತೆ ಒಂದಾದ ಮೇಲೊಂದರಂತೆ ಲಂಡನ್ ನ್ಯಾಯಲಯಗಳಿಗೆ ಅರ್ಜಿ ಸಲ್ಲಿಸುತ್ತಾ, ಸದ್ಯ ಲಂಡನ್ ಜೈಲಿನಲ್ಲಿದ್ದಾನೆ.

2021
ದೋಣಿ ಮೂಲಕ ಕ್ಯೂಬಾ ದೇಶಕ್ಕೆ ಪರಾರಿಯಾಗಲು ಪ್ರಯತ್ನಿಸುತ್ತಿದ್ದ ಚೋಕ್ಸಿಯನ್ನು ಡೊಮಿನಿಕಾ ದೇಶದಲ್ಲಿ ಬಂಧಿಸಲಾಯಿತು. ಆಗ ಭಾರತ ಆತನ ಹಸ್ತಾಂತರಕ್ಕೆ ಕೋರಿಕೆ ಸಲ್ಲಿಸಿತು. ಆದರೆ, ಡೊಮಿನಿಕಾ ದೇಶದ ಸರಕಾರ ಭಾರತದ ಮನವಿ ತಿರಸ್ಕರಿಸಿತು. ಕಡೆಗೆ ಚೋಕ್ಸಿ ಆಂಟಿಗುವಾಕ್ಕೆ ಗಡೀಪಾರು ಮಾಡಿಸಿಕೊಳ್ಳುವ ಮೂಲಕ ಸುರಕ್ಷಿತ ನೆಲೆ ಕಂಡುಕೊಂಡ.

2022
ಈ ಮೊದಲು ಭಾರತದ ಕೋರಿಕೆ ಮೇರೆಗೆ ಚೋಕ್ಸಿ ವಿರುದ್ಧ ರೆಡ್ ಕಾರ್ನರ್ ನೋಟಿಸ್ ಹೊರಡಿಸಿದ್ದ ಇಂಟರ್‌ಪೋಲ್ ಪೊಲೀಸರು, ಮಾರ್ಚ್‌ನಲ್ಲಿ ಆ ರೆಡ್ ಕಾರ್ನರ್ ನೋಟಿಸನ್ನು ಹಿಂತೆಗೆದುಕೊಂಡರು. ಇದು ಭಾರತದ ಹಸ್ತಾಂತರ ಪ್ರಯತ್ನಗಳಿಗೆ ಹಿನ್ನಡೆ ಉಂಟು ಮಾಡಿತು

2024
ಮೆಹುಲ್ ಚೋಕ್ಸಿಗೆ ರಕ್ತದ ಕ್ಯಾನ್ಸರ್ ಇರುವುದು ಪತ್ತೆಯಾಗಿದೆ. ಚಿಕಿತ್ಸೆಗಾಗಿ ಬೆಲ್ಜಿಯಂಗೆ ತೆರಳಿದ್ದಾರೆ ಎಂದು ಚೋಕ್ಸಿ ಪರ ವಕೀಲರು ಹೇಳಿದ್ದರು.

2025
ಭಾರತದ ನ್ಯಾಯಾಲಯದ ಬಂಧನ ವಾರಂಟ್ ಆದೇಶದ ಮೇರೆಗೆ ಸಿಬಿಐ ಮತ್ತು ಇ.ಡಿ ಚೋಕ್ಸಿಯನ್ನು ಬಂಧಿಸಿ ಹಸ್ತಾಂತರಿಸುವಂತೆ ಬೆಲ್ಜಿಯಂ ಸರಕಾರಕ್ಕೆ ಮನವಿ ಮಾಡಿದ್ದರಿಂದ ಅಲ್ಲಿನ ಪೊಲೀಸರು ಆಸ್ಪತ್ರೆಗೆ ದಾಖಲಾಗಿದ್ದ ಮೆಹುಲ್ ಚೋಕ್ಸಿಯನ್ನು ಏ.12ರಂದು ಬಂಧಿಸಿ ಸೆರೆಮನೆಯಲ್ಲಿಟ್ಟಿದ್ದಾರೆ.

ಸರಕಾರದ ಜತೆ ರೈತರ ಭೂ ಸಮರ ಕೈಗಾರಿಕೆಗೆ ಭೂಮಿ ನೀಡಲು ನಕಾರ

ಜಿಲ್ಲಾ ನೋಟ

ಮುನಿರಾಜು ಎಂ.ಅರಿಕೆರೆ, ಚಿಕ್ಕಬಳ್ಳಾಪುರ

ರೈತಾಪಿ ವರ್ಗದ ಭಾರಿ ಪ್ರತಿರೋಧದ ನಡುವೆಯೂ ಜಿಲ್ಲೆಯ ಜಂಗಮಕೋಟೆ ಹೋಬಳಿಯಲ್ಲಿ ತಲೆಯೆತ್ತುತ್ತಿರುವ ಡೀಪ್‌ಟೆಕ್ ಕೈಗಾರಿಕಾ ಪ್ರಾಂಗಣ ನಿರ್ಮಾಣಕ್ಕೆ ಬೇಕಾದ ಸಿದ್ಧತೆಗಳನ್ನು ಸರಕಾರ ಸದ್ದಿಲ್ಲದೆ ಮಾಡಿಕೊಳ್ಳುತ್ತಿದೆ. ಇತ್ತೀಚೆಗೆ ಭಾರೀ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ತಮ್ಮ ನ್ಯೂ.ಎಕ್ಸ್ ಖಾತೆಯಲ್ಲಿ ಹರಿಯಬಿಟ್ಟಿರುವ ವಿಡಿಯೋ ರೈತಾಪಿ ವರ್ಗವನ್ನು ಕಂಗೆಡಿಸಿದೆ.

ಏನಿದು ಸಮಸ್ಯೆ?

ಜಿಲ್ಲೆಯ ಶಿಡ್ಲಘಟ್ಟ ತಾಲೂಕು ಜಂಗಮಕೋಟೆ ಹೋಬಳಿಯ ಮೂರು ಸಾವಿರಕ್ಕೂ ಹೆಚ್ಚಿನ ಸರಕಾರಿ ಮತ್ತು ಖಾಸಗಿ ಭೂ ಪ್ರದೇಶದಲ್ಲಿ ರಾಜ್ಯ ಸರಕಾರ ಕೈಗಾರಿಕಾಭಿವೃದ್ಧಿ ಹೆಸರಿನಲ್ಲಿ ಭೂಮಿ ಪಡೆಯಲು ಮುಂದಾಗಿತ್ತು.ಈ ವೇಳೆ ಬಿಜೆಪಿ ಮತ್ತು ರೈತ ಸಂಘಟನೆಗಳು ಪ್ರತಿರೋಧವನ್ನು ವ್ಯಕ್ತಪಡಿಸಿದ್ದವು. ಆದರೂ ಜಗ್ಗದ ಸರಕಾರ ಅಧಿಸೂಚನೆ ಹೊರಡಿಸಿ ಭೂಮಿ ಕಳೆದುಕೊಳ್ಳುವ ರೈತರಿಂದ ಅಭಿಪ್ರಾಯ ಸಂಗ್ರಹಕ್ಕೆ ಮುಂದಾಗಿತ್ತು. ಒಂದಷ್ಟು ಮಂದಿ ನಮಗೆ ಒಪ್ಪಿತವಾದ ಬೆಲೆ ನೀಡಿದರೆ ಭೂಮಿ ಕೊಡುತ್ತೇವೆ ಎಂತಲೂ, ಮತ್ತೊಂದಿಷ್ಟು ಮಂದಿ ಕೊಡುವುದಿಲ್ಲ ಎಂತಲೂ ಎಂದಿದ್ದರು.

ಕೈಗಾರಿಕೆ ಬೇಡವೇ?

ಇಷ್ಟಕ್ಕೆ ಸುಮ್ಮನಾಗದ ಸರಕಾರ ಕೈಗಾರಿಕಾಭಿವೃದ್ಧಿಗೆ ಭೂಮಿ ಬಿಟ್ಟುಕೊಡಲು ರೈತರೇ ಸ್ವಯಂ ಪ್ರೇರಣೆಯಿಂದ ಬಂದು ಒಪ್ಪಿಗೆಯನ್ನು ಸೂಚಿಸಿದ್ದಾರೆ. ಸರಕಾರ ಕೊಡುವ ಪರಿಹಾರಕ್ಕೆ ಅವರ ಸಂಪೂರ್ಣ ಸಹಕಾರವಿದೆ. ಆದರೆ ಒಂದಿಷ್ಟು ರೈತ ಸಂಘಟನೆ ಮುಖಂಡರು ಮತ್ತು ವಿರೋಧ ಪಕ್ಷಗಳು ಭೂಮಿ ಕೊಡಲು ಬಂದಿರುವ ರೈತರನ್ನು ದಿಕ್ಕುತಪ್ಪಿಸುವ ಕೆಲಸ ಮಾಡುತ್ತಿದ್ದಾರೆ.ಸರಕಾರ ಇದಕ್ಕೆ ಸೊಪ್ಪು ಹಾಕುವುದಿಲ್ಲ, ರೈತರ ಮಕ್ಕಳು ಉದ್ಯೋಗಸ್ಥರಾಗುವುದು ಬೇಡವೇ?ರೈತರು ಸುಭದ್ರವಾದ ಬದುಕನ್ನು ಬದುಕಬಾರದೇ? ಎಂದು ಜಿಲ್ಲಾ ಉಸ್ತುವಾರಿ ಸಚಿವರು ನೇರವಾಗಿಯೇ ಗುಡುಗಿದ್ದರು.

ರೈತ ಪರ ದನಿ

ಈ ನಡುವೆ ಜಿಲ್ಲೆಯಲ್ಲಿ ಈ ಕೂಗು ಎದ್ದಾಗಿನಿಂದ ರೈತ ಸಂಘಟನೆಗಳಲ್ಲಿ ಲಕ್ಷ್ಮೀನಾರಾಯಣ್ ಮತ್ತು ಪ್ರತೀಶ್ ಬಣ ಭೂಮಿ ಕಳೆದುಕೊಳ್ಳುವ ರೈತರಿಗೆ ಸರಕಾರ ನೀಡುವ ಪರಿಹಾರದ ಹಣವನ್ನು ಒಂದೇ ಕಂತಿನಲ್ಲಿ ರೈತರ ಖಾತೆಗೆ ಪಾವತಿ ಮಾಡುವುದಾದರೆ

> ಸರಕಾರ ಬಲವಂತವಾಗಿ ಹಣದ ಆಮಿಷ ವೊಡ್ಡಿ ರೈತಾಪಿ ವರ್ಗವನ್ನು ಒಕ್ಕಲೆಬ್ಬಿಸಲು ಮುಂದಾಗುತ್ತಿರುವುದು ಸರಿಯಲ್ಲ. ಕೃಷಿಗೆ ಯೋಗ್ಯವಲ್ಲದ ಭೂಪ್ರದೇಶದಲ್ಲಿ ಕೈಗಾರಿಕೆ ಮಾಡಲು ಸಾಕಷ್ಟು ಅವಕಾಶಗಳಿವೆ. ಚಿನ್ನದ ಬೆಳೆಯಿಟ್ಟಿರುವ, ಗುಣಮಟ್ಟದ ಭೂಮಿಯಲ್ಲೇ ಉದ್ಯಮ ಮಾಡುವುದು ಬೇಡ.ಕೂಡಲೇ ಇದನ್ನು ಕೈಬಿಡಬೇಕು.
>
> -ಭಕ್ತರಹಳ್ಳಿ ಬೈರೇಗೌಡ, ರೈತಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ

> ರೈತರ ಮನವೊಲಿಸಿಯೇ ಜಂಗಮಕೋಟೆ ಹೋಬಳಿಯಲ್ಲಿ ಕೈಗಾರಿಕಾಭಿವೃದ್ಧಿಗೆ ಸರಕಾರ ಮುಂದಾಗಿದೆ.ರೈತರ ಹೊಟ್ಟೆಮೇಲೆ ಹೊಡೆದು ಕೈಗಾರಿಕೆ ಸ್ಥಾಪಿಸಬೇಕು ಎಂಬ ಮನಸ್ಸು ಸರಕಾರಕ್ಕಾಗಲಿ ನನಗಾಗಲಿ ಇಲ್ಲ. ರೈತಪರ ಸಂಘಟನೆಗಳ ಜತೆ ಕೂತು ಚರ್ಚಿಸಿಯೇ ಈ ಕಾರ್ಯಕ್ಕೆ ಮುಂದಾಗಿದ್ದೇವೆ.
>
> -ಡಾ.ಎಂ.ಸಿ.ಸುಧಾಕರ್, ಜಿಲ್ಲಾ ಉಸ್ತುವಾರಿ ಸಚಿವ

ಭೂಮಿ ಕೊಡಲು ನಾವು ಸಿದ್ಧ ಎಂದಿದೆ.ಇಷ್ಟಕ್ಕೆ ಸುಮ್ಮನಾಗದೆ ರೈತರ ನಿಯೋಗ ಕರೆದೊಯ್ದು ಕೈಗಾರಿಕಾ ಸಚಿವರಿಗೆ, ಜಿಲ್ಲಾ ಉಸ್ತುವಾರಿ ಸಚಿವರಿಗೆ ಮನವಿ ಪತ್ರ ನೀಡಿದ್ದಾರೆ.

ಬಣ ರಾಜಕಾರಣ

ರೈತ ಸಂಘಟನೆಯ ಒಂದು ಬಣ ಮತ್ತು ವಿರೋಧ ಪಕ್ಷಗಳ ಕೆಲ ಮುಖಂಡರು ಬೆಂಗಳೂರಿನ ಫ್ರೀಡಂ ಪಾರ್ಕಿನಲ್ಲಿ ಭೂಮಿಗಾಗಿ ಪ್ರತಿಭಟನೆ ಮುಂದುವರೆಸಿ ಹೋರಾಟವನ್ನು ತೀವ್ರಗೊಳಿಸಿದ್ದರು. ಇವೆಲ್ಲಾ ಬೆಳವಣಿಗೆಗಳ ನಡುವೆ ಒಪ್ಪಿಗೆ ಇರುವ ರೈತರ ಪಹಣಿಗಳಲ್ಲಿ ಈ ಭೂಮಿ ಕೆಐಎಡಿಬಿಗೆ ಸೇರಿದೆ ಎಂದು ನಮೂದು ಆಗಲು ಪ್ರಾರಂಭವಾಯಿತು. ಹಣ ಕೈ ಸೇರುವ ಮೊದಲೇ ಹೀಗಾಯಿತಲ್ಲ ಎಂದು ಗಾಬರಿಯಿಂದ ಎಚ್ಚೆತ್ತ ರೈತರು ರೈತ ಹೋರಾಟಕ್ಕಿಳಿದಿದ್ದಾರೆ. ಭಕ್ತರಹಳ್ಳಿ ಬೈರೇಗೌಡರ ಬಣ ರೈತರನ್ನು ಕರೆದುಕೊಂಡು ಬೆಂಗಳೂರಿನ ವಿಶೇಷ ಜಿಲ್ಲಾಧಿಕಾರಿಗಳ ಬಳಿ ತೆರಳಿ ಭೂಮಿ ವಶಪಡಿಸಿಕೊಳ್ಳುವುದು ನಿಲ್ಲಿಸಿ ಎಂದು ಮನವಿ ಮಾಡಿದ್ದಾರೆ.

ನೀಲ ನಕ್ಷೆಯ ವಿಡಿಯೋ

ರೈತರ ಪ್ರತಿಭಟನೆ, ಹರತಾಳ,ಆಕ್ರೋಶ ಪರ ವಿರೋಧದ ಚರ್ಚೆಗಳ ನಡುವೆಯೇ ಇತ್ತೀಚೆಗೆ ಡೀಫ್‌ಟೆಕ್ ಪಾರ್ಕ್ ನಿರ್ಮಾಣದ ನೀಲ ನಕ್ಷೆಯುಳ್ಳ ವಿಡಿಯೋ ಒಂದನ್ನು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿವೆ. ಇದು ರೈತ ಸಂಘಟನೆಗಳು ಮತ್ತು ವಿರೋಧ ಪಕ್ಷಗಳ ಕೆಂಗಣ್ಣಿಗೆ ಗುರಿಯಾಗಿದ್ದು ಮುಂದೆ ಯಾವ ಸ್ವರೂಪ ಪಡೆದುಕೊಳ್ಳುವುದೋ ಕಾದು ನೋಡಬೇಕಿದೆ.

ಏನಿದು ಡೀಫ್ ಟೆಕ್ ಪಾರ್ಕ್

ಜಂಗಮಕೋಟೆ ಹೋಬಳಿ ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಕೂಗಳತೆ ದೂರದ ಡೀಪ್‌ಟೆಕ್ ಪಾರ್ಕ್ ಸ್ಥಾಪನೆ ಮಾಡಿದರೆ ರಾಜ್ಯದ ಅಭಿವೃದ್ಧಿಗೆ ವೇಗ ದೊರೆಯಲಿದೆ.ಈ ಕೈಗಾರಿಕಾ ಪ್ರಾಂಗಣದಲ್ಲಿ ಬಾಹ್ಯಾಕಾಶ ತಂತ್ರಜ್ಞಾನ, ರೋಬೊಟಿಕ್,ಕೃತಕ ಬುದ್ದಿಮತ್ತೆ ತಂತ್ರಜ್ಞಾನ, ಸುಧಾರಿತ ಇಂಜನಿಯರಿಂಗ್ ತಂತ್ರಜ್ಞಾನ,ಇವಿ ತಂತ್ರಜ್ಞಾನ,ಡ್ರೋಣ್ ತಂತ್ರಜ್ಞಾನ ವಲಯಗಳಿರಲಿವೆ. ಸುಮಾರು ಒಂದು ಲಕ್ಷ ಉದ್ಯೋಗ ಸೃಷ್ಟಿಸುವ ಟೆಕ್‌ಪಾರ್ಕ್ ನಿರ್ಮಾಣವೇ ಡೀಪ್ ಟೆಕ್ ಆಗಿದೆ.

ನಾ ಕೊಡೆ ನೀ ಬಿಡೆ

ಒಟ್ಟಾರೆ ನಾ ಕೊಡೆ ನೀ ಬಿಡೆ ಎಂಬಂತಾಗಿರುವ ಜಂಗಮಕೋಟೆ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಯೋಜನೆಯ ಭೂಮಿ ಪ್ರಕರಣ ಮುಂದಿನ ದಿನಗಳಲ್ಲಿ ಯಾವಸ್ವರೂಪ ಪಡೆದುಕೊಳ್ಳುವುದೋ, ಮತ್ತೊಂದು ಚೆನ್ನರಾಯಪಟ್ಟಣದ ರೀತಿ ರೈತರ ಕೂಗು ಅರಣ್ಯ ರೋದನವಾಗಲಿದೆಯೋ ಎಂಬುದಕ್ಕೆ ಕಾಲವೇ ಉತ್ತರಿಸಲಿದೆ.

ಮೀಸಲಾತಿಗಾಗಿ ಹೋರಾಟ ದಿಟ್ಟ, ಎಡವಿದ್ದೆಲ್ಲಿ ಪಂಚಮಸಾಲಿ ಪೀಠ?

ಜಿಲ್ಲಾ ನೋಟ

ಅಭಿಷೇಕ ಪಾಟೀಲ ಬಾಗಲಕೋಟೆ

ಪಂಚಮಸಾಲಿ ಸಮುದಾಯಕ್ಕೆ 2ಎ ಮೀಸಲಾತಿ ನೀಡಬೇಕು ಎಂದು ಆಗ್ರಹಿಸಿ ಕೂಡಲಸಂಗಮದ ಪಂಚಮಸಾಲಿ ಪೀಠದ ಶ್ರೀ ಬಸವ ಜಯ ಮೃತ್ಯುಂಜಯ ಸ್ವಾಮೀಜಿ ಹಾಗೂ ಅಖಿಲ ಭಾರತ ಲಿಂಗಾಯತ ಪಂಚಮಸಾಲಿ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷ ಹಾಗೂ ಶಾಸಕ ವಿಜಯಾನಂದ ಕಾಶಪ್ಪನವರ ಜತೆಗೂಡಿ ಬೆಂಗಳೂರಿನವರೆಗೆ ಪಾದಯಾತ್ರೆಯಂಥ ದೊಡ್ಡ ಹೋರಾಟ ಮಾಡಿದ್ದರು. ಆದರೆ, ಕೆಲವೊಂದಿಷ್ಟು ಗೊಂದಲಗಳಿಂದ ಇಬ್ಬರೂ ಅಂತರ ಕಾಪಾಡಿಕೊಂಡಿದ್ದು, ಈಗ ರಾಜ್ಯ ಮಟ್ಟದ ಪ್ರತ್ಯೇಕ ಸಭೆ ನಡೆಸಲು ಇಬ್ಬರೂ ಮುಂದಾಗಿದ್ದಾರೆ.

ದರಲ್ಲಿ ಮಾತ್ರ ಅನುಮಾನವಿಲ್ಲ. ಇವರಿಬ್ಬರೂ ಸೇರಿ ಸಮಾಜ ಸಂಘಟಿಸಿ ಅಂದಿನ ಬಿಜೆಪಿ ಸರಕಾರದ ಬೆನ್ನು ಬಿದ್ದಿದ್ದರಿಂದ ಅಂದಿನ ಸಿಎಂ ಬಸವರಾಜ ಬೊಮ್ಮಾಯಿ ಸಮುದಾಯಕ್ಕೆ 2ಡಿ ಮೀಸಲಾತಿ ನೀಡಿದರು.

ಸಮಾಜದ ಒಗ್ಗಟ್ಟು

ಈ ಇಬ್ಬರ ಜೋಡಿ ಮಾಡಿರುವ ಹೋರಾಟದಿಂದ ಸಮಾಜ ಒಗ್ಗೂಡಿದೆ ಎಂದು ಅನೇಕರು ಸಂತೋಷಪಟ್ಟಿದ್ದರು. ಆದರೆ, ರಾಜ್ಯದಲ್ಲಿ ಕಾಂಗ್ರೆಸ್ ಸರಕಾರದ ಬಂದ ಬಳಿಕ ಶಾಸಕ ವಿಜಯಾನಂದ ಕಾಶಪ್ಪನವರ ಹೋರಾಟದಲ್ಲಿ ಮೊದಲಿನ ತೀವ್ರತೆ ಕಾಣಲಿಲ್ಲ. ಇದರ ನಡುವೆ ಸ್ವಾಮೀಜಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಜೊತೆ ಸೇರಿ ಹೋರಾಟ ತೀವ್ರಗೊಳಿಸಿ ಸರಕಾರದ ಮೇಲೆ ಒತ್ತಡ ಹೇರಲು ಆರಂಭಿಸಿದರು. ಮೀಸಲಾತಿ ಹೋರಾಟದ ಬಗ್ಗೆ ಒಬ್ಬರೇ ತೀರ್ಮಾನಗಳನ್ನು ತೆಗೆದುಕೊಳ್ಳತೊಡಗಿದರು.

ದಲ್ಲಾಗಿದೆ. ನಾನು ಸಮುದಾಯವನ್ನು ಸಂಘಟಿಸುತ್ತಿದ್ದು, ಯಾವುದೇ ವ್ಯಕ್ತಿ ಪರ ಹೋರಾಟ ಮಾಡಿಲ್ಲ. ಉಸಿರು ಇರುವವರೆಗೆ ಸಮಾಜಕ್ಕಾಗಿ ದುಡಿಯುತ್ತೇನೆ ಎಂದಿದ್ದಾರೆ. ಈ ಬೆಳವಣಿಗೆ ನಡುವೆ ಶಾಸಕ ವಿಜಯಾನಂದ ಕಾಶಪ್ಪನವರ ಅವರು ಏ.22 ರಂದು ಕೂಡಲಸಂಗಮದಲ್ಲಿ ಸಮುದಾಯದ ರಾಜ್ಯ ಮಟ್ಟದ ಸಭೆ ಹಮ್ಮಿಕೊಂಡಿದ್ದರು. ಸ್ವಾಮೀಜಿ ಏ.20 ರಂದು ಸಭೆ ಏರ್ಪಡಿಸಿದ್ದರು. ಇದನ್ನು ನೋಡಿ ಶಾಸಕ ಕಾಶಪ್ಪನವರ ಅವರು ಏ.19 ರಂದೇ ಸಭೆ ನಡೆಸಲು ಮುಂದಾಗಿದ್ದಾರೆ.

ಶ್ರೀಗಳ ಪೀಠಕ್ಕೆ ಸಂಚಕಾರ?

ಶ್ರೀ ಬಸವಜಯ ಮೃತ್ಯುಂಜಯ ಸ್ವಾಮೀಜಿ ಅವರು ರಾಜ್ಯಮಟ್ಟದ ಸಭೆಯನ್ನು ಏ.19 ರಂದು ಕರೆದಿದ್ದಾರೆ. ಇದರ ನಡುವೆ ರಾಷ್ಟ್ರೀಯ ಪಂಚಮಸಾಲಿ ಮಹಾಸಭಾದ ಅಧ್ಯಕ್ಷ ವಿಜಯಾನಂದ ಕಾಶಪ್ಪನವರ ಕೂಡ ಕೂಡಲಸಂಗಮದ ಪೀಠದಲ್ಲೇ ಸಮುದಾಯದ ಮುಖಂಡರು ಹಾಗೂ ಸಚಿವರ

- ಪಂಚಮಸಾಲಿ ಸಮಾಜದ ರಾಜ್ಯಮಟ್ಟದ ಪ್ರತ್ಯೇಕ ಸಭೆ
- ಕೂಡಲಸಂಗಮದಲ್ಲಿ ಏ.19 ಹಾಗೂ 20 ರಂದು ಸಭೆ
- ಈ ಸಭೆಯಲ್ಲಿ ದೊಡ್ಡದೊಂದು ತೀರ್ಮಾನದ ನಿರೀಕ್ಷೆ
- ಸ್ವಾಮೀಜಿ ಯತ್ನಾಳರ ಪರ ನಿಂತ ಬಳಿಕ ಎದ್ದ ವಿವಾದ

ಪ್ರತ್ಯೇಕ ಸಭೆ ಆಯೋಜನೆ

ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರನ್ನು ಬಿಜೆಪಿಯಿಂದ ಉಚ್ಚಾಟಿಸಿದ ಬಳಿಕ ಸ್ವಾಮೀಜಿ ಯತ್ನಾಳ ಪರ ಹೋರಾಟಕ್ಕೆ ಕರೆ ನೀಡಿದರು. ಆದರೆ, ಶಾಸಕ ವಿಜಯಾನಂದ ಕಾಶಪ್ಪನವರ ಇದನ್ನು ಸಾರ್ವಜನಿಕವಾಗಿ ವಿರೋಧಿಸಿ ಸ್ವಾಮೀಜಿ ಹಾಗೂ ಶಾಸಕ ಯತ್ನಾಳ ಅವರ ವಿರುದ್ಧ ಬಹಿರಂಗ ಹೇಳಿಕೆ ಪ್ರಾರಂಭಿಸಿದರು. ಈಗ ಸ್ವಾಮೀಜಿ ಹಾಗೂ ಶಾಸಕ ವಿಜಯಾನಂದ ಕಾಶಪ್ಪನವರ ಕೂಡಲ ಸಂಗಮದಲ್ಲೇ ಏ.19 ಹಾಗೂ 20 ರಂದು ಪ್ರತ್ಯೇಕ ಸಭೆ ನಡೆಸಲು ಹೊರಟಿದ್ದಾರೆ.

ಒಟ್ಟಿಗೆ ಹೋರಾಟ

ಪಂಚಮಸಾಲಿ ಸಮುದಾಯಕ್ಕೆ 2ಎ ಮೀಸಲಾತಿಗೆ ಆಗ್ರಹಿಸಿ ನಡೆದ ಪಾದಯಾತ್ರೆಯಲ್ಲಿ ಸಮಾಜದ ಪ್ರತಿಯೊಬ್ಬ ಮುಖಂಡರು ಪಾಲ್ಗೊಂಡಿದ್ದರು. ಆದರೆ, ಈ ಪಾದಯಾತ್ರೆ ದೊಡ್ಡ ಪ್ರಮಾಣದಲ್ಲಿ ಯಶಸ್ಸಿಗೆ ಕಾರಣರಾದವರು ಮಾತ್ರ ಶ್ರೀಜಯ ಮೃತ್ಯುಂಜಯ ಸ್ವಾಮೀಜಿ ಹಾಗೂ ಶಾಸಕ ವಿಜಯಾನಂದ ಕಾಶಪ್ಪನವರ ಜೋಡಿ ಎನ್ನುವು

ಯತ್ನಾಳ ಪರ ಕರೆ

ಶಾಸಕ ಬಸನಗೌಡ ಪಾಟೀಲ ಯತ್ನಾಳ ಪರವಾಗಿ ನಿಂತ ಸ್ವಾಮೀಜಿ ವಿರುದ್ಧ ಶಾಸಕ ವಿಜಯಾನಂದ ಕಾಶಪ್ಪನವರ ಅವರು ಶ್ರೀಗಳು ಒಬ್ಬರ ಪರವಾಗಿ ಹೋರಾಟ ಮಾಡುವುದು ಸರಿಯಲ್ಲ ಎಂಬ ಆಕ್ಷೇಪದ ದನಿ ಎತ್ತಿದರು. ಆದರೆ ಇದಕ್ಕೆ ಸ್ವಾಮೀಜಿ, ನಮ್ಮ ಸಮುದಾಯದ ಶಾಸಕರೊಬ್ಬರಿಗೆ ಅನ್ಯಾಯವಾಗಿದ್ದು, ಅವರ ಬೆಂಬಲಕ್ಕೆ ಸಮಾಜ ನಿಲ್ಲಬೇಕು ಎಂದು ಪ್ರತ್ಯುತ್ತರ ನೀಡಿದ್ದರು.

ಗುರುಗಳ ಜತೆ ಸಂಘರ್ಷ

ಇದರ ನಡುವೆ ಶಾಸಕ ವಿಜಯಾನಂದ ಕಾಶಪ್ಪನವರ ಅವರು, ಗುರುಗಳು ಸ್ವಯಂ ಘೋಷಿತವಾಗಿ ಇವರೇ ಬಂದಿಲ್ಲ. ಸಮಾಜ ಇವರನ್ನು ಗುರುಗಳನ್ನಾಗಿ ಮಾಡಿದೆ. ಕಾಲ ಕಾಲಕ್ಕೆ ಏನೇನು ಆಗಬೇಕೋ ಅದು ಆಗುತ್ತದೆ. ಕಾದು ನೋಡಿ ಎನ್ನುವ ಮೂಲಕ ಸ್ವಾಮೀಜಿ ಅವರನ್ನು ಪೀಠದಿಂದ ಕೆಳಗಿಳಿಸುವ ಮಾತುಗಳನ್ನೂ ಆಡಿದ್ದರು. ಇದಕ್ಕೆ ಸುದ್ದಿಗೋಷ್ಠಿಯಲ್ಲಿ ಉತ್ತರಿಸಿದ ಸ್ವಾಮೀಜಿ, ಅಣ್ಣ ಬಸವಣ್ಣನವರ ಐಕ್ಯ ಇದೇ ಕೂಡಲಸಂಗಮ

ಮತ್ತು ಶಾಸಕರ ಸಭೆ ಕರೆದಿದ್ದಾರೆ. ಈ ಸಭೆಯಲ್ಲಿ ದೊಡ್ಡ ತೀರ್ಮಾನ ಹೊರಬರಲಿದೆ ಎಂದು ಶಾಸಕ ಕಾಶಪ್ಪನವರ ಬೆಂಬಲಿಗರು ಸುದ್ದಿಗೋಷ್ಠಿಯಲ್ಲಿ ಪ್ರಕಟಿಸಿದ್ದಾರೆ. ಈ ಎರಡೂ ಸಭೆಯ ಎಫೆಕ್ಟ್ ಏನಾಗಬಹುದು ಎಂಬ ಕುತೂಹಲ ಭಕ್ತ ವಲಯದಲ್ಲಿ ಮೂಡಿದೆ. ಒಂದು ವೇಳೆ ಕಠಿಣ ತೀರ್ಮಾನ ಹೊರಹೊಮ್ಮಿದರೆ ಸ್ವಾಮೀಜಿಯ ಪೀಠಾಧಿಪತಿ ಸ್ಥಾನಕ್ಕೆ ಕುತ್ತು ಬರ ಬಹುದಾ? ಎಂಬ ಚರ್ಚೆ ಸಮುದಾಯದ ಮುಖಂಡರಲ್ಲೇ ಶುರುವಾಗಿರುವುದು ಮಾತ್ರ ಸುಳ್ಳಲ್ಲ.

ಮೀಸಲಾತಿ ಪಡೆಯಲಿ

ಸ್ವಾಮೀಜಿ ಹಾಗೂ ಶಾಸಕ ವಿಜಯಾನಂದ ಕಾಶಪ್ಪನವರ ಅವರ ಸಂಘಟನೆಯಿಂದ ಸಮುದಾಯ ಒಂದಾಗಿ ಎಲ್ಲರೂ ಒಂದೇ ವೇದಿಕೆ ಮೇಲೆ ಸೇರಿ ಹೋರಾವನ್ನು ತೀವ್ರಗೊಳಿಸಿದ್ದರು. ಆದರೆ, ಕೆಲ ಗೊಂದಲಗಳಿಂದ ಅವಾಂತರ ನಡೆದಿವೆ. ಇದೆಲ್ಲವನ್ನೂ ಚರ್ಚೆ ಮೂಲಕ ಬಗೆಹರಿಸಿಕೊಂಡು ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿ ತಂದುಕೊಡಲಿ ಎಂಬುದು ಮಾತ್ರ ಸಮುದಾಯದ ಒತ್ತಾಸೆ.

ಸಮಾಚಾರ ಸಣ್ಣದಲ್ಲ

ಅಂಬೇಡ್ಕರ್ ಪ್ರತಿ ಮನೆಯ ಬೆಳಕು

ಹೂವಿನಹಿಪ್ಪರಗಿ: ಸಮಾಜದ ಒಳಿತಿಗಾಗಿ ತಮ್ಮನ್ನು ತಾವು ಅರ್ಪಿಸಿಕೊಂಡು ಸಮುದಾಯದ ಅಂಕು-ಡೊಂಕುಗಳನ್ನು ತಿದ್ದಿ-ತಿಡಿ ಸರ್ವರಿಗೂ ಸಮಬಾಳು ಸರ್ವರಿಗೂ ಸಮಬಾಳು ಎಂದು ಸಾಗಿ ಸಮಾಜ ಸುಧಾರಣೆ ಮಾಡುವಲ್ಲಿ ಯಾರು ದುಡಿದಿದ್ದಾರೋ ಅವರು ಈ ಭೂಮಿಯಲ್ಲಿ ಅಜರಾಮವಾಗಿ ಬದುಕುತ್ತಿದ್ದಾರೆ ಎಂದು ದೇವರಹಿಪ್ಪರಗಿ ಶಾಸಕ ರಾಜುಗೌಡ ಪಾಟೀಲ ಕುದರಿ ಸಾಲವಾಡಗಿ ಅಭಿಪ್ರಾಯ ಪಟ್ಟರು. ಬಸವನ ಬಾಗೇವಾಡಿ ತಾಲೂಕಿನ ಬೂದಿಹಾಳ ಗ್ರಾಮದ ಅಂಬೇಡ್ಕರ್ ಕಾಲೋನಿಯಲ್ಲಿ ಹಮ್ಮಿಕೊಂಡ ಭಾರತ ರತ್ನ ಸಂವಿಧಾನ ಶಿಲ್ಪಿ ಬಾಬಾಸಾಹೇಬ ಅಂಬೇಡ್ಕರ್‌ಅವರ 134ನೇ ಜಯಂತಿ ಕಾರ್ಯಕ್ರಮದಲ್ಲಿ ಅಂಬೇಡ್ಕರ್ ಭಾವ ಚಿತ್ರಕ್ಕೆ ಮಾಲಾರ್ಪಣೆ ಮಾಡಿ ಜನರನ್ನು ಉದ್ದೇಶಿಸಿ ಅವರು ಮಾತನಾಡಿದರು. ಅಂಬೇಡ್ಕರ್ ಅವರು ದಲಿತ ಸಮುದಾಯ ಒಂದಕ್ಕೆ ಸಿಮಿತವಾಗದೇ ಸರ್ವ ಜನರ ಹಕ್ಕು ಕಾಪಾಡುವ ಸಂವಿಧಾನವನ್ನು ಬರೆದು ಇಡೀ ಭಾರತಕ್ಕೆ ಶಾಂತಿಯ ಜೀವನ ನಡೆಸಲು ದಾರಿ ದೀಪವಾದ ಇವರು ಪ್ರತಿ ಮನೆ-ಮನೆಯಲ್ಲಿ ಹುಟ್ಟಿ ವರ ಆದರ್ಶಗಳನ್ನು ಅವಳಡಿಸಿಕೊಂಡಾಗ ಮಾತ್ರ ಅಂಬೇಡ್ಕರ ಜೀವನಕ್ಕೆ ಶಾಂತಿ ದೊರೆಯಲಿದೆ. ದೇವರಹಿಪ್ಪರಗಿ ಕ್ಷೇತ್ರದಲ್ಲಿ ಅಂಬೇಡ್ಕರ್ ಸಮುದಾಯ ಭವನ ನಿರ್ಮಾಣಕ್ಕೆ ಅನುದಾನವನ್ನು ತಂದು ಹಲವು ಕಡೆ ಭೂಮಿ ಪೂಜೆಯನ್ನು ನೆರವೇರಿಸಿದ್ದೇನೆ. ಬೂದಿಹಾಳ ಗ್ರಾಮದಲ್ಲಿ ಖಾಲಿ ಜಾಗವಿದ್ದರೆ ನನ್ನ ಗಮನಕ್ಕೆ ತನ್ನಿರಿ ನಿಮಗೂ ಒಂದು ಅಂಬೇಡ್ಕರ್ ಹೆಸರಿನಲ್ಲಿ ಸುಸಜಿತ್ತ ಸಮುದಾಯ ಭವನವನ್ನು ನಿರ್ಮಿಸುವ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದು ಅವರು ಹೇಳಿದರು.

ಗಾಣಿಗ ಸಮಾಜದಿಂದ ಬೃಹತ್ ಪ್ರತಿಭಟನೆ

ವಿಜಯಪುರ: ರಾಜ್ಯದಲ್ಲಿ ಗಾಣಿಗ ಸಮುದಾಯ 40 ಲಕ್ಷಕ್ಕೂ ಅಧಿಕ ಜನಸಂಖ್ಯೆ ಹೊಂದಿದ್ದರೂ ಜಯಪ್ರಕಾಶ ಹೆಗ್ಡೆ ಹಿಂದುಳಿದ ವರ್ಗಗಳ ಆಯೋಗ ಸಲ್ಲಿಸಿರುವ ಜಾತಿ ಗಣತಿ ವರದಿಯಲ್ಲಿ ಗಾಣಿಗ ಸಮುದಾಯದ ಜನಸಂಖ್ಯೆ ಕೇವಲ 6.85 ಲಕ್ಷ ತೋರಿಸಿರುವುದು ವಿರೋಧಿಸಿ ವಿಜಯಪುರ ಜಿಲ್ಲಾ ಗಾಣಿಗ ಸಮಾಜದಿಂದ ಏ.16 ಬುಧವಾರವಾದ ಇಂದು ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಸಮಾಜದ ಜಿಲ್ಲಾಧ್ಯಕ್ಷ ಬಿ.ಬಿ.ಪಾಸೋಡಿ ತಿಳಿಸಿದರು. ಈ ಕುರಿತು ಪ್ರಕಟಣೆ ನೀಡಿರುವ ಅವರು, ರಾಜ್ಯದ ಬಹುಸಂಖ್ಯಾತ ಗಾಣಿಗ ಸಮಾಜದ ಜನಸಂಖ್ಯೆಯನ್ನು ಜಾತಿಗಣತಿ ವರದಿಯಲ್ಲಿ ಅತಿಕಡಿಮೆ ತೋರಿಸಿರುವುದು ವ್ಯವಸ್ಥಿತವಾಗಿ ತುಳಿಯುವ ಷಡ್ಯಂತರವಲ್ಲದೇ ಮತ್ತೇನಲ್ಲ. ಅವೈಜ್ಞಾನಿಕ ಜಾತಿಗಣತಿ ಮೂಲಕ ಗಾಣಿಗರ ಅಸ್ತಿತ್ವಕ್ಕೆ ದಕ್ಕೆ ತರುವ ಯತ್ನ ನಡೆಸಿರುವ ಹಿಂದುಳಿದ ವರ್ಗಗಳ ಆಯೋಗಕ್ಕೆ ಗಾಣಿಗರ ನೈಜ್ಯ ಜನಸಂಖ್ಯೆ, ಅಸ್ತಿತ್ವ ತೋರಿಸುವ ನಿಟ್ಟಿನಲ್ಲಿ ಬುಧವಾರ ಇಂದು ಬೆಳಗ್ಗೆ 10 ಕ್ಕೆ ವಿಜಯಪುರ ನಗರದ ಜಿಲ್ಲಾ ಪಂಚಾಯಿತಿ ಬಳಿಯ ವನಶ್ರೀ ಸಂಸ್ಥಾನಮಠದಲ್ಲಿ ಗಾಣಿಗ ಸಮಾಜದ ಬೃಹತ್ ಸಭೆ ಸೇರಿಸಿ ಜಿಲ್ಲಾಧಿಕಾರಿಗಳ ಮೂಲಕ ಸರಕಾರಕ್ಕೆ ಮನವಿ ಸಲ್ಲಿಸಲು ನಿರ್ಣಯಿಸಲಾಗಿದೆ. ಈ ಹೋರಾಟಕ್ಕೆ ಜಿಲ್ಲೆಯ ಸರ್ವ ಗಾಣಿಗ ಸಮಾಜ ಬಂಧುಗಳು ಅತಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಗಾಣಿಗ ಸಮಾಜದ ಜಿಲ್ಲಾಧ್ಯಕ್ಷ ಬಿ.ಬಿ.ಪಾಸೋಡಿ ತಿಳಿಸಿದರು.

ಕರ ವಸೂಲಿ ತಡೆಗೆ ಆಗ್ರಹ

ಮುದ್ದೇಬಿಹಾಳ: ಪಟ್ಟಣದಲ್ಲಿ ತರಕಾರಿ ವ್ಯಾಪಾರಿಗಳು, ಗೂಡಂಗಡಿಗಳಿಂದ ಟೆಂಡರ್ ಪಡೆದ ವ್ಯಕ್ತಿಯು ನಿಯಮ ಮೀರಿ ದುಪ್ಪಟ್ಟು ಕರ ವಸೂಲಿ ಮಾಡುತ್ತಿದ್ದಾರೆ. ಎನ್ನುವ ಬಲವಾದ ದೂರುಗಳು ಬಂದಿದ್ದು ಪುರಸಭೆ ಅಧಿಕಾರಿಗಳು ಹಾಗೂ ಆಡಳಿತ ಮಂಡಳಿ ಕುಲಂಕುಶವಾಗಿ ಚರ್ಚಿಸಿ ಕಡಿವಾಣ ಹಾಕಬೇಕು ಎಂದು ಒತ್ತಾಯಿಸಿ, ಕೆಪಿಸಿಸಿ ಘಟಕದ ಬೀದಿ ಬದಿ ವ್ಯಾಪಾರಿಗಳ ಸಂಘದ ಪದಾಧಿಕಾರಿಗಳು ಪುರಸಭೆಗೆ ಮಂಗಳವಾರ ಮನವಿ ಸಲ್ಲಿಸಿದರು. ಸಂಕಷ್ಟದಲ್ಲಿರುವ ರೈತ ಮಹಿಳೆಯರು ತರಕಾರಿ ಮಾರಾಟ ಮಾಡಿ ಜೀವಿಸಬೇಕಿದೆ, ಅತ್ತ ಬೆಲೆ ಇಳಿಕೆ ತೊಂದರೆ ಯಾಗುತ್ತದೆ, ಕರ ವಸೂಲಿ ಕುರಿತು ಕರೆಯಲಾದ ಟೆಂಡರ್ ವೇಳೆ ತಾವು ಇಂತಿಷ್ಟೇ ಎಂದು ಕರ ವಸೂಲಿ ಮಾಡಿ ಎಂದು ಗುತ್ತಿಗೆ ಪಡೆದವರಿಗೆ ಸೂಚಿಸಿದರೂ ದುಪ್ಪಟ್ಟು ಕರ ವಸೂಲಿ ದಂಧೆ ನಡೆದಿದೆ. ಈಗಾಗಿ ನಮ್ಮ ಸಂಘಟನೆಗೆ ದೂರುಗಳು ಬಂದ ಪರಿಣಾಮ ಅಧಿಕಾರಿಗಳು ಶೀಘ್ರವೇ ನಿಯಮಾನುಸಾರ ಕರ ವಸೂಲಿ ವ್ಯವಸ್ಥೆಗೆ ಮುಂದಾಗಬೇಕು ಒಂದು ವೇಳೆ ಇದೇ ಧೋರಣೆ ಮುಂದುವರೆದಲ್ಲಿ ಹೋರಾಟ ಮಾಡುವುದು ಅನಿವಾರ್ಯ ಎಂದು ಮನವಿಯಲ್ಲಿ ಎಚ್ಚರಿಸಿದ್ದಾರೆ.

ಅಕ್ಕಮಹಾದೇವಿ ಮಹಿಳೆಯರಿಗೆ ಸ್ಫೂರ್ತಿ

ಬಸವನಬಾಗೇವಾಡಿ: ಅಕ್ಕಮಹಾದೇವಿಯ ದಿಟ್ಟ ನಿಲುವು, ಧೈರ್ಯ ಮಹಿಳೆಯರಿಗೆ ಇಂದಿಗೂ ಸ್ಫೂರ್ತಿಯಾಗಿ ನಿಲ್ಲುತ್ತದೆ ಎಂದು ಸ್ಥಳೀಯ ಸರಕಾರಿ ಪದವಿ ಕಾಲೇಜಿನ ಉಪನ್ಯಾಸಕಿ ವಿಜಯಲಕ್ಷ್ಮಿ ರೊಟ್ಟಿ ಹೇಳಿದರು. ಸ್ಥಳೀಯ ವಿರಕ್ತಮಠದಲ್ಲಿ ಜಾಗತಿಕ ಲಿಂಗಾಯತ ಮಹಾಸಭಾ ಹಾಗೂ ವಿವಿಧ ಮಹಿಳಾ ಸಂಘಟನೆಗಳ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಅಕ್ಕಮಹಾದೇವಿ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಅಕ್ಕಮಹಾದೇವಿ ಯ ವಚನಗಳು ಅನುಭವದ ಆಧಾರದಲ್ಲಿ ಮೂಡಿ ಬಂದಿದೆ ಎಂದರು. ಅಧ್ಯಕ್ಷತೆ ವಹಿಸಿದ್ದ ಪುರಸಭೆ ಅಧ್ಯಕ್ಷೆ ಜಗದೇವಿ ಗುಂಡಳ್ಳಿ ಮಾತನಾಡಿದ ಅವರು, 12ನೇ ಶತಮಾನದ ಶರಣರ ವಚನಗಳು ಇಂದಿಗೂ ಪ್ರಸ್ತುತವಾಗಿ ನಿಲ್ಲುತ್ತವೆ. ಯುವಕರು ಮೊಬೈಲ್ ದಾಸರಾಗಿ ವ್ಯಕ್ತಿತ್ವವನ್ನು ಹಾಳು ಮಾಡಿಕೊಳ್ಳುತ್ತಿದ್ದಾರೆ. ಅವರಿಗೆ ಶರಣರ ವಿಚಾರಗಳನ್ನು ನೈತಿಕ ಮೌಲ್ಯಗಳನ್ನು ತಿಳಿಸಿಕೊಡುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎಂದು ಹೇಳಿದರು.

{ ಪ್ರಿಯಾಂಕ್ ಖರ್ಗೆ } ಸಚಿವ

ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಸಮೀಕ್ಷೆಯಾಗಿದ್ದು, ಜಾತಿ ಗಣತಿ ಅಲ್ಲ. ಇದನ್ನು ಜಾತಿ ಗಣತಿ ಎಂದು ಯಾಕೆ ಹೇಳುತ್ತಿದ್ದೀರಿ. ಇದೇ 17ರಂದು ಆಯೋಗದವರು ಸಚಿವ ಸಂಪುಟಕ್ಕೆ ಸಂಪೂರ್ಣ ವರದಿ ಅಲ್ಲಿಸಲಿದ್ದಾರೆ. ಈ ಬಗ್ಗೆ ಸಂಪುಟದಲ್ಲಿ ನಂತರ ಅಧಿವೇಶನದಲ್ಲಿ ಚರ್ಚೆ ನಡೆಸಲಾಗುವುದು.

ವಿಧಾನಸಭೆ ವಿಸರ್ಜಿಸಿ ಚುನಾವಣೆಗೆ ತೆರಳಿ | ಸಿಎಂ ಸಿದ್ದರಾಮಯ್ಯಗೆ ಸಂಸದ ಜಿಗಜಿಣಗಿ ಒತ್ತಾಯ

ಜಾತಿ ಗಣತಿ ವೈಜ್ಞಾನಿಕವಾಗಿದರೇ ಮಾತ್ರ ಒಪ್ಪಿಕೊಳ್ಳವೇ: ಜಿಗಜಿಣಗಿ

ವಿಜಯಪುರ: ಸಿಎಂ ಸಿದ್ದರಾಮಯ್ಯ ತಮ್ಮ ಗೌರವ ಉಳಿಸಿಕೊಳ್ಳಲು ಕೂಡಲೇ ವಿಧಾನಸಭೆ ವಿಸರ್ಜಿಸಿ ಚುನಾವಣೆಗೆ ತೆರಳಿ, ನಿಮ್ಮ ರಾಡಿ ಮುಚ್ಚಿಕೊಳ್ಳಲು ಜಾತಿ ಜನಗಣತಿ ಮುನ್ನಲೆಗೆ ತರಬೇಡಿ ಎಂದು ಸಂಸದ ರಮೇಶ ಜಿಗಜಿಣಗಿ ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇಂತಹ ಕೆಟ್ಟ ಸರಕಾರವನ್ನು ನನ್ನ ಜೀವಮಾನದಲ್ಲಿಯೇ ನೋಡಿಲ್ಲ, ಈ ಸರಕಾರ ಜನರನ್ನು ಕೊಲ್ಲುವ ಕೆಲಸ ಮಾಡುತ್ತಿದೆ. ಸ್ವಚ್ಛತಾ ವಾಹನಗಳಿಗೆ ಪೆಟ್ರೋಲ್ ಸಹ ಇಲ್ಲದಂತಹ ಅಧೋಗತಿಗೆ ತಳ್ಳಿದೆ ಎಂದರು. ಈ ರಾಡಿ ಮುಚ್ಚಿಕೊಳ್ಳಲು ಸರಕಾರ ಜಾತಿ ಜನಗಣತಿ ವಿಷಯ ಮುನ್ನಲೆಗೆ ತಂದಿದೆ ಎಂದರು. ಜಾತಿ ಜನಗಣತಿ ವೈಜ್ಞಾನಿಕವಾಗಿ ಇದ್ದರೆ ಮಾತ್ರ ಒಪ್ಪುವೆ ಎಂದರು. ವಿಧಾನ ಪರಿಷತ್ ಮಾಜಿ ಸದಸ್ಯ ಅರುಣ ಶಹಾಪೂರ ಮಾತನಾಡಿದ ಅವರು, ಜಾತಿ ಜನಗಣತಿ ಎನ್ನುವುದೇ ತಪ್ಪು, ಮೊದಲು ಆಯೋಗದ ಉದ್ದೇಶ ಸ್ಪಷ್ಟೀಕರಣವಿಲ್ಲ ಎಂದರು.

ಬಿಜೆಪಿ ಜಿಲ್ಲಾಧ್ಯಕ್ಷ ಗುರುಲಿಂಗಪ್ಪ ಅಂಗಡಿ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಮಾರು ವೇಷದಲ್ಲಿ ರಾಜ್ಯ ಸಂಚರಿಸಲಿ, ಜನರ ಗುಂಪಿನಲ್ಲಿ ಅವರ ಬಗ್ಗೆ ಹಾಗೂ ಸರಕಾರದ ಬಗ್ಗೆ ಏನು ಮಾತನಾಡುತ್ತಾರೋ ತಿಳಿದುಕೊಳ್ಳಲಿ, ಜನಾಕ್ರೋಶ ಅವರಿಗೆ ಅರ್ಥವಾಗುತ್ತದೆ ಎಂದರು. ರಾಜ್ಯದಲ್ಲಿ ಮಂತ್ರಿಗಳು ಮಾತ್ರ ನೆಮ್ಮದಿಯಿಂದ ಇದ್ದಾರೆ, ಕಾಂಗ್ರೆಸ್ ಶಾಸಕರು ಸಹ ನೆಮ್ಮದಿಯಿಂದ ಇಲ್ಲ, ಬಡವರ ನೆಮ್ಮದಿ ಅಧೋಗತಿಯಾಗಿದೆ ಎಂದರು. ಗುತ್ತಿಗೆ ಕಾಮಗಾರಿಗಳೇ ಇಲ್ಲ, ಆದರೂ ಅಲ್ಪಸಂಖ್ಯಾತರಿಗೆ ಗುತ್ತಿಗೆ ಕಾಮಗಾರಿಯಲ್ಲಿ ಮೀಸಲಾತಿ ಜಾರಿ ಮಾಡುವ ಮೂಲಕ ಅಲ್ಪಸಂಖ್ಯಾತರಿಗೂ ಕಾಂಗ್ರೆಸ್ ಸರಕಾರ ಮೂಗಿಗೆ ತುಪ್ಪ ಸವರುವ ಕೆಲಸ ಮಾಡಿದೆ ಎಂದರು. ಕೇಂದ್ರ ಸರಕಾರ ಸಾಲ ಮಾಡುತ್ತಿದೆ ಎಂಬ ಪ್ರಶ್ನೆ ಕೇಳುವ ನೈತಿಕತೆ ಇಲ್ಲ, ಕೇಂದ್ರ ಸರಕಾರ ಹೂಡಿಕೆ, ಮೂಲ ಸೌಲಭ್ಯಕ್ಕಾಗಿ ಸಾಲ ಮಾಡುತ್ತಿದೆ ಎಂದರು. ಇದೇ 17 ರಂದು ಜನಾಕ್ರೋಶ ಯಾತ್ರೆ ವಿಜಯಪುರಕ್ಕೆ ಆಗಮಿಸಲಿದೆ. ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಸೇರಿದಂತೆ ಅನೇಕ ನಾಯಕರು ಭಾಗಿಯಾ ಗಲಿದ್ದಾರೆ. ಶ್ರೀ ಶಿವಾಜಿ ಮಹಾರಾಜರ ವೃತ್ತದಿಂದ ಯಾತ್ರೆ ನಡೆಯಲಿದ್ದು, ದರಬಾರ ಹೈಸ್ಕೂಲ್ ಮೈದಾನದಲ್ಲಿ ಬೃಹತ್ ಸಮಾವೇಶ ನಡೆಯಲಿದೆ ಎಂದರು.

ಈ ವೇಳೆ ಮಾಜಿ ಸಚಿವ ಅಪ್ಪಾಸಾಹೇಬ ಪಟ್ಟಣಶೆಟ್ಟಿ, ವಿಧಾನ ಪರಿಷತ್ ಮಾಜಿ ಸದಸ್ಯ ಅರುಣ ಶಹಾಪೂರ, ಸಾವಯವ ಬೀಜ ಪ್ರಮಾಣನ ಸಂಸ್ಥೆ ಮಾಜಿ ಅಧ್ಯಕ್ಷ ವಿಜುಗೌಡ ಪಾಟೀಲ ಸೇರಿದಂತೆ ಹಲವು ಮುಖಂಡರು ಉಪಸ್ಥಿತರಿದ್ದರು.

ನಗರದ ಸುದ್ದಿಗೋಷ್ಠಿಯಲ್ಲಿ ಜಾತಿ ಜನಗಣತಿ ಮುನ್ನಲೆಗೆ ತರಬೇಡಿ ಎಂದು ಸಂಸದ ರಮೇಶ ಜಿಗಜಿಣಗಿ ಹೇಳಿದರು.

ಸಾಮಾನ್ಯ ಮುಸ್ಲಿಮರಿಗೆ ಯಾವುದೇ ತೊಂದರೆ ಇಲ್ಲ

ವಕ್ಫ್ ಕಾಯ್ದೆ ತಿದ್ದುಪಡಿಯಿಂದ ಸಾಮಾನ್ಯ ಮುಸ್ಲಿಂರಿಗೆ ಯಾವ ತೊಂದರೆಯೂ ಇಲ್ಲ. ಆದರೆ ವಕ್ಫ್ ಆಸ್ತಿಯನ್ನು ಕೊಳ್ಳೆ ಹೊಡೆದ ಶ್ರೀಮಂತ ಮುಸ್ಲಿಂರಿಗೆ ತೊಂದರೆಯಾಗಲಿದೆ, ಅದು ಜಮೀರ್ ಒಬ್ಬನೇ ಅಲ್ಲ ಅನೇಕರು ಈ ಆಸ್ತಿ ಕೊಳ್ಳೆ ಹೊಡೆದಿದ್ದಾರೆ. ಕೆಲವರು ಕೊಳ್ಳೆ ಹೊಡೆದು ಗೋರಿ ಸೇರಿದ್ದಾರೆ. ಮುಸ್ಲಿಂರ ಪರವಾದ ಈ ಕಾನೂನನ್ನು 75 ವರ್ಷಗಳಿಂದಲೂ ಕಾಂಗ್ರೆಸ್ ಜಾರಿ ಮಾಡಿರಲಿಲ್ಲ, ಈ ಮಹತ್ವದ ಕಾರ್ಯವನ್ನು ಬಿಜೆಪಿ ಸರಕಾರ ಮಾಡಿದೆ. ಇನ್ನೂ ರಾಜ್ಯ ಸರಕಾರ ಈ ಕಾಯ್ದೆ ಜಾರಿ ಮಾಡುವುದಿಲ್ಲ ಎಂದು ಹೇಳಿದೆ, ಆದರೆ ಮೋದಿಜಿ ಗಂಡಸರು, ಯಾವ ರೀತಿ ಜಾರಿ ಮಾಡಿಸಬೇಕು ಎಂಬುದು ಅವರಿಗೆ ಗೊತ್ತಿದೆ ಎಂದು ಹಿರಿಯ ಸಂಸದ ರಮೇಶ ಜಿಗಜಿಣಗಿ ತಿಳಿಸಿದರು.

ಪಂಚಮಸಾಲಿ ಶ್ರೀಗಳ ಬಗ್ಗೆ ಹಗುರ ಮಾತು ಸರಿಯಲ್ಲ

ವಿಜಯಪುರದಲ್ಲಿ ಪಂಚಮಸಾಲಿ ಸಮಾಜದ ಮುಖಂಡರು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ವಿಜಯಪುರ: ಲಕ್ಷಾಂತರ ಪಂಚಮಸಾಲಿಗಳು ಭಾಗ ವಹಿಸಿದ ಹೋರಾಟದಲ್ಲಿ ಗೈರಾಗಿದ್ದ ಶಾಸಕ ವಿಜಯಾನಂದ ಕಾಶಪ್ಪನವರ ಅವರನ್ನೇ ಸಮಾಜ ಎಂದೋ ಮನಸ್ಸಿನ ಉಚ್ಚಾಟನೆ ಮಾಡಿದಂತಿದೆ, ಆದರೆ ಅವರು ಪಂಚಮಸಾಲಿ ಶ್ರೀಗಳ ಉಚ್ಚಾಟನೆ ಮಾಡುವ ಮಾತನಾಡಿರುವುದು ದುರ್ದೈವ ಎಂದು ಪಂಚಮಸಾಲಿ ಸಮಾಜದ ಜಿಲ್ಲಾಧ್ಯಕ್ಷ ಬಿ.ಎಂ. ಪಾಟೀಲ ದೇವರಹಿಪ್ಪರಗಿ ಅಸಮಾಧಾನ ಹೊರಹಾಕಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶ್ರೀ ಬಸವಜಯ ಮೃತ್ಯುಂಜಯ ಮಹಾಸ್ವಾಮಿಗಳಂತಹ ಸ್ವಾಮೀಜಿ ಸಿಕ್ಕಿರುವುದು ನಮ್ಮ ಪೂರ್ವ ಜನ್ಮದ ಪುಣ್ಯ. ಶ್ರೀ ಬಸವಜಯ ಮೃತ್ಯುಂಜಯ ಸ್ವಾಮೀಜಿಗಳನ್ನು ಜಗದ್ಗುರು ಆಗಿ ಸ್ವೀಕರಿಸಿದ್ದು ಸಮಸ್ತ ಸಮಾಜ. ಅವರನ್ನು ಉಚ್ಚಾಟನೆ ಮಾಡುವ ಅಧಿಕಾರ ಟ್ರಸ್ಟ್ ನವರಿಗೆ ಇಲ್ಲ, ಭೂಮಿ, ಆಸ್ತಿ ನಿಮ್ಮ ಹೆಸರಲ್ಲಿ ಇರಬೇಕು, ಶ್ರೀಗಳು ಸಮಾಜದ ಆಸ್ತಿ ಅರ್ಥ ಮಾಡಿಕೊಳ್ಳಲಿ ಎಂದರು.

ಪಂಚಮಸಾಲಿ ಸಮಾಜಕ್ಕೆ 2ಎ ಹೋರಾಟಕ್ಕೆ ದೊಡ್ಡ ಆಂದೋಲನ ಸ್ಪರ್ಶ ನೀಡಿದ ಕೂಡಲಸಂಗಮ ಪಂಚಮಸಾಲಿ ಜಗದ್ಗುರುಗಳ ವಿರುದ್ಧ ನಮ್ಮ ಸಮಾಜದ ಕೆಲವು ಪಟ್ಟಭದ್ರ ಹಿತಾಸಕ್ತಿಗಳು ಮನಸ್ಸಿಗೆ ನೋವುಂಟು ಮಾಡುವ ಹೇಳಿಕೆಯನ್ನು ಇಲ್ಲಿಗೆ ನಿಲ್ಲಿಸಲಿ ಎಂದರು. ಸಮಾಜದ ಋಣ ತೀರಿಸಿ ಹೊರತು ಗೊಂದಲ ಸೃಷ್ಟಿಸಬೇಡಿ, ನಿಮ್ಮ ಹೇಳಿಕೆ ಗಳಿಂದ ಸಮಾಜಕ್ಕೆ ಹಿನ್ನಡೆಯಾಗುತ್ತಿದೆ, ಹೀಗಾಗಿ ಬಿಜೆಪಿ ಮುಖಂಡರಾದ ವಿಜುಗೌಡ ಪಾಟೀಲ, ಕಾಸುಗೌಡ ಬಿರಾದಾರ ಅರ್ಥ ಮಾಡಿಕೊಳ್ಳಬೇಕು ಎಂದರು.

ಕೂಡಲಸಂಗಮದಲ್ಲಿ ಏ. 20 ರಂದು ಸಭೆ: ಈ ಎಲ್ಲ ವಿದ್ಯಮಾನಗಳ ಹಿನ್ನೆಲೆಯಲ್ಲಿ ಪಂಚಮಸಾಲಿ ಸಮಾಜದ ಬೃಹತ್ ಸಭೆಯನ್ನು ಇದೇ 20 ರಂದು ಕೂಡಲಸಂಗಮದಲ್ಲಿ ಕರೆಯಲಾಗಿದೆ. ಅನೇಕ ಮಹತ್ವದ ವಿಷಯಗಳನ್ನು ಚರ್ಚೆ ನಡೆಸಲಾಗುವುದು ಎಂದು ಬಿ.ಎಂ.ಪಾಟೀಲ ತಿಳಿಸಿದರು. ಪಾಲಿಕೆ ಸದಸ್ಯ ಪ್ರೇಮಾನಂದ ಬಿರಾದಾರ ಮಾತನಾಡಿದರು. ನ್ಯಾಯವಾದಿ ದಾನೇಶ ಅವಟಿ, ನಿಂಗನಗೌಡ ಸೊಲ್ಲಾಪೂರ, ಶ್ರೀಶೈಲ ಮುಳಜಿ, ಸಿದ್ದು ಹಳ್ಳೂರ, ಈರಣ್ಣ ಶಿರಮಗೊಂಡ, ಬಸಲಿಂಗಪ್ಪ ಜಂಗಮಶೆಟ್ಟಿ, ಮಂಜುನಾಥ ನಿರ್ವಾಣಿ, ಸಂಗು ಬಿರಾದಾರ, ಸಂತೋಷ ಬಿರಾದಾರ ಇತರು ಪತ್ರಿಕಾಗೋಷ್ಠಿಯಲ್ಲಿ ಇದ್ದರು.

ವಿವಿಧ ಬೇಡಿಕೆ ಈಡೇರಿಸುವಂತೆ ಒತ್ತಾಯ

ಇಂಡಿ: ಪುರಸಭೆ ಪೌರ ಕಾರ್ಮಿಕರಿಂದ ಕೈಗೆ ಕಪ್ಪು ಪಟ್ಟಿ ಕಟ್ಟಿಕೊಂಡು ತಮ್ಮ ಬೇಡಿಕೆ ಈಡೇರಿಸಬೇಕು ಎಂದು ಒತ್ತಾಯಿಸಿ ಪುರಸಭೆ ಮುಂಭಾಗ ಪೌರ ಕಾರ್ಮಿಕರು ಅನಿರ್ಧಿಷ್ಟಾವಧಿ ಮುಷ್ಕರ ಮಾಡಿದರು.

ಪೌರ ಕಾರ್ಮಿಕರ ಸಂಘ ಕೇಂದ್ರ ಕಚೇರಿ ಚಿತ್ರದುರ್ಗ ಶಾಖೆ, ಇಂಡಿ ಪೌರ ಕಾರ್ಮಿಕರ ಅಧ್ಯಕ್ಷ ಲಕ್ಷ್ಮೀ ಕಾಲೇಭಾಗ ಇವರ ನೈತೃತ್ವದಲ್ಲಿ ಅನಿರ್ಧಿಷ್ಟಾವಧಿ ಮುಷ್ಕರ ಹಂತ ಹಂತವಾಗಿ ನಡೆಸಲಾಯಿತು. ಕೈಗೆ ಕಪ್ಪುಪಟ್ಟಿಕಟ್ಟಿಕೊಂಡು ಪ್ರತಿಭಟಿಸಿದರು. ಪೌರ ಕಾರ್ಮಿಕರ ಪ್ರಮು ಖ ಬೇಡಿಕೆಗಳಾದ ಎಸ್‌ಎಫ್‌ಸಿ ವೇತನದ ಅನುಧಾನದಲ್ಲಿ ವೇತನ ನೀಡುವುದು. ನೀರು ಸರಬರಾಜು ಚಾಲಕನ್ನು ಖಾಯಂ ಮಾಡಬೇಕು, ಪೌರ ಕಾರ್ಮಿಕರು ಸರಕಾರ ನೌಕರರಂತೆ ಪರಿಗಣಿಸಿ ಜಿಪಿಎಫ್, ಕೆಜಿಐಡಿ ಜ್ಯೋತಿ ಸಂಜೀವಿನಿ ಸೇರಿದಂತೆ ಸರಕಾರಿ ನೌಕರರು ಪಡೆಯುವ ಸೌಲಭ್ಯ ಒದಗಿಸಬೇಕು. ದಿನಗೂಲಿ ನೌಕರರಿಗೆ ಸಮಾನ ಕೆಲಸಕ್ಕೆ ಸಮಾನ ಸಂಬಳ ನೀಡಬೇಕು, 2023-24ರಲ್ಲಿ ನೇಮಕವಾದವರಿಗೂ 7 ನೇ ವೇತನ ಆಯೋಗ ಜಾರಿ ಮಾಡಬೇಕು' ಎಂದು ಮನವಿಯಲ್ಲಿ ತಿಳಿಸಿದರು.

ಜಿಲ್ಲಾಪ್ರಧಾನ ಕಾರ್ಯದರ್ಶಿ ಹುಚ್ಚಪ್ಪ ಶಿವಶರಣ, ಖಜಾಂಚಿ ಮುತ್ತು ಮುರಾಳ, ಜಿಲ್ಲಾ ಕಾರ್ಯದರ್ಶಿ ಚಂದು ಕಾಲೇಭಾಗ, ತಾಲೂಕಾ ಅಧ್ಯಕ್ಷೆ ಲಕ್ಷ್ಮೀ ಕಾಲೇಭಾಗ. ಮಲ್ಲಪ್ಪ ನಡಗಡ್ಡಿ, ಮರೇಪ್ಪ ಗುಡಮಿ, ಶ್ರೀಶೈಲ ಹಾದಿಮನಿ, ಹುಸನವ್ವ ಬಳಗಾನೂರ, ಕಿರಣ ಸಿಂಧೆ, ಮಲ್ಲಿಕಾರ್ಜುನ ಶಿವಶರಣ, ಯಲ್ಲಪ್ಪ ಕಂಠಿಕಾರ, ಅಶೋಕ ಸಲಗರ, ಸಂಜು ಬಿರಾದಾರ, ಬಸವರಾಜ ವಾಲಿ ಸೇರಿದಂತೆ ಎಲ್ಲಾ ಸಿಬ್ಬಂದಿ ಅನಿರ್ಧಿಷ್ಟಾವಧಿ ಧರಣಿಯಲ್ಲಿದ್ದರು.

ಪೌರ ಕಾರ್ಮಿಕ ಪುರಸಭೆ ಮುಂಬಾಗ ಕೈಗೆ ಕಪ್ಪು ಪಟ್ಟಿ ಕಟ್ಟಿಕೊಂಡು ತಮ್ಮಬೇಡಿಕೆ ಅನಿರ್ಧಿಷ್ಟಾವಧಿ ಮುಷ್ಕರ.

ಜನಾಕ್ರೋಶ ಯಾತ್ರೆಗೆ ಕಾರ್ಯಕರ್ತರು ಸಜ್ಜು

ವಿಜಯಪುರ: ವಿಜಯಪುರ ಜಿಲ್ಲೆಗೆ ಏ. 17 ರಂದು ಜನಾಕ್ರೋಶ ಯಾತ್ರೆ ಆಗಮಿಸಲಿದೆ. ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಸ್ವಾಗತಕ್ಕೆ ಇಡೀ ಬಿಜೆಪಿ ಕಾರ್ಯಕರ್ತ ಸಮೂಹ ಸಜ್ಜಾಗಿದೆ, ಯಾವ ಪ್ರತಿರೋಧವೂ ವ್ಯಕ್ತವಾಗುವುದಿಲ್ಲ ಎಂದು ಕರ್ನಾಟಕ ಸಾವಯವ ಬೀಜ ಪ್ರಮಾಣನ ಸಂಸ್ಥೆ ಮಾಜಿ ಅಧ್ಯಕ್ಷ ವಿಜುಗೌಡ ಪಾಟೀಲ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿಜೆಪಿ ಪಕ್ಷ ನಿಷ್ಠೆಯೇ ಕಾರ್ಯಕರ್ತರ ಉಸಿರು, ಇಂತಹ ಪ್ರಾಮಾಣಿಕ ಕಾರ್ಯಕರ್ತರ ಸಂಪತ್ತನ್ನು ಬಿಜೆಪಿ ಹೊಂದಿದೆ. ನಗರ ಶಾಸಕರ ಉಚ್ಚಾಟನೆ ವಿಷಯವಾಗಿ ಬಿ.ವೈ. ವಿಜಯೇಂದ್ರ ಆಗಮನ ಸಂದರ್ಭದಲ್ಲಿ ದೊಡ್ಡ ಪ್ರತಿರೋಧ ವ್ಯಕ್ತವಾಗಲಿದೆ ಎಂಬುದು ಊಹಾಪೋಹ, ಯಾವ ರೀತಿಯಲ್ಲೂ ಪ್ರತಿರೋಧ ವ್ಯಕ್ತವಾಗುವುದಿಲ್ಲ, ಬದಲಿಗೆ ಕಾರ್ಯಕರ್ತ ಸಮೂಹ ಅತ್ಯಂತ ಉತ್ಸಾಹದಿಂದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರ ಸ್ವಾಗತಕ್ಕೆ ಸಜ್ಜಾಗಿದೆ ಎಂದರು.

ರೈತರ ಟಿ.ಸಿ. ಅಳವಡಿಕೆಗೂ ಲಂಚ ಪಡೆದುಕೊಳ್ಳುವ ಈ ಸರಕಾರ ಲಂಚದ ಸರಕಾರ, ಈ ಹಿಂದೆ ನಮ್ಮ ಬಿಜೆಪಿ ಸರಕಾರದಲ್ಲಿ ರೈತರಿಗೆ ಟಿ.ಸಿ. ಅಳವಡಿಕೆ ಉಚಿತವಾಗಿತ್ತು, ಈಗ ರೈತ ಲಕ್ಷಾಂತರ ರು. ವ್ಯಯಿಸಬೇಕಾಗಿದೆ, ಇದು ಅವ್ಯವಸ್ಥೆಯಲ್ಲವೇ ಎಂದು ಪ್ರಶ್ನಿಸಿದರು. ರಾಜ್ಯ ಕಾಂಗ್ರೆಸ್ ಸರಕಾರ ಲೂಟಿ ಸರಕಾರವಾಗಿದೆ. ಬಾಣಂತಿಯರ ಸಾವು-ನೋವು, ಹಾಲು ಮೊದಲಾದ ಜೀವನಾವಶ್ಯಕ ವಸ್ತುಗಳ ಬೆಲೆ ಏರಿಕೆ, ವರ್ಗಾವಣೆಯಲ್ಲಿ ದೊಡ್ಡ ಪ್ರಮಾಣದ ಲಂಚ, ಅಭಿವೃದ್ಧಿಗೆ ಅನುದಾನ ಕೊರತೆ ಹೀಗೆ ಕಾಂಗ್ರೆಸ್ ಸರಕಾರದ ವೈಫಲ್ಯ ಮುಗಿಲು ಮುಟ್ಟಿದೆ.

ಬೆಳಗ್ಗೆ ಮುಸ್ಲಿಂರನ್ನು ಬೈದು, ನಂತರ ಸಂಜೆ ಅವರ ಮನೆಯಿಂದ ಊಟದ ಡಬ್ಬಿಯನ್ನು ತಿನ್ನುವ ರಾಜಕಾರಣಿ ನಾನಲ್ಲ, ಇಫ್ತಿಯಾರ್ ಕೂಟದಲ್ಲಿ ಭಾಗವಹಿಸಿರುವೆ ಅದರಲ್ಲಿ ತಪ್ಪೇನು? ಎಂದು ವಿಜುಗೌಡ ಪಾಟೀಲ ಹೇಳಿದರು. ನಾನು ಜಾತಿ ರಾಜಕಾರಣ ಎಂದಿಗೂ ಮಾಡಿಲ್ಲ, ಮಾಡುವುದು ಇಲ್ಲ, ಪ್ರಧಾನಿ ಮೋದಿಜಿ ಎಂದೂ ಸಹ ಮುಸ್ಲಿಂರನ್ನು ವಿರೋಧಿಸಿಲ್ಲ, ಕೆಲವು ರಾಜಕಾರಣಿಗಳು ಬೆಳಗ್ಗೆ ಮುಸ್ಲಿಂರನ್ನು ಬೈಯುತ್ತಾರೆ, ಸಂಜೆಯಾದರೆ ಅವರ ಮನೆಯಿಂದ ಬರುವ ಬಿರಿಯಾನಿ ತಿನ್ನುತ್ತಾರೆ ಅಂತಹ ರಾಜಕಾರಣಿ ನಾನಲ್ಲ ಎಂದರು.

ನನ್ನ ಹಿರಿಯಣ್ಣ ಪವಿತ್ರ ಕುರ್‌ಆನ್ ಓದುತ್ತಾರೆ, ನನ್ನ ಮಗಳು ರೋಜಾ ಆಚರಣೆ ಮಾಡುತ್ತಾಳೆ, ಪಾಣಿಸಾಹೇಬ ದರ್ಗಾ ಸೇರಿದಂತೆ ಅನೇಕ ದರ್ಗಾಗಳಿಗೆ ನಾವು ಸೇರಿದಂತೆ ಅನೇಕ ಹಿಂದೂ ಬಾಂಧವರು ನಡೆದುಕೊಳ್ಳುತ್ತಾರೆ, ಇದು ಸೌಹಾರ್ದತೆ, ಇಫ್ತಿಯಾರ್ ಕೂಟದಲ್ಲಿ ಭಾಗಿಯಾಗುವುದು ತಪ್ಪೇ? ಎಂದರು.

ಬಬಲೇಶ್ವರ ಬಿಜೆಪಿ ಮಂಡಳ ಅಧ್ಯಕ್ಷ ಸಂತೋಷ ಮಾತನಾಡಿದ ಅವರು, ರಾಜ್ಯ ಕಾಂಗ್ರೆಸ್ ಸರಕಾರದ ಬೆಲೆ ಏರಿಕೆ, ಭ್ರಷ್ಟಾಚಾರ ಖಂಡಿಸಿ ರಾಜ್ಯದ್ಯಾಂತ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ನೇತೃತ್ವದಲ್ಲಿ ಜನಾಕ್ರೋಶ ಯಾತ್ರೆ ನಡೆಯುತ್ತಿದ್ದು, ಈ ಯಾತ್ರೆ ಏ. 17 ರಂದು ವಿಜಯಪುರಕ್ಕೆ ಆಗಮಿಸಲಿದೆ. ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಸೇರಿದಂತೆ ಅನೇಕ ನಾಯಕರು ಭಾಗವಹಿಸಲಿದ್ದಾರೆ ಎಂದರು. ರಾಜ್ಯ ಸರಕಾರ ಸಂಪೂರ್ಣ ವೈಫಲ್ಯವಾಗಿದೆ, ಎಲ್ಲೆಡೆ ಭ್ರಷ್ಟಾಚಾರ ತಾಂಡವವಾಡುತ್ತಿದೆ. ಈ ಸರಕಾರ ನಿರ್ಮೂಲನೆಗಾಗಿ ಈ ಯಾತ್ರೆ ಕೈಗೊಳ್ಳಲಾಗಿದೆ ಎಂದರು.

ಜಿ.ಪಂ ಮಾಜಿ ಅಧ್ಯಕ್ಷ ಉಮೇಶ ಕೋಳಕೂರ, ಜಿ.ಪಂ. ಮಾಜಿ ಸದಸ್ಯ ಮಲ್ಲಿಕಾರ್ಜುನ ಕನ್ನೂರ, ಬಬಲೇಶ್ವರ ಬಿಜೆಪಿ ಮಂಡಳ ಅಧ್ಯಕ್ಷ ಸಂತೋಷ, ಈರಣ್ಣ ರಾವೂರ, ರಾಜೇಶ ತಾವಸೆ, ಪರಶು ಗುಣದಾಳ ಮೊದಲಾದವರು ಪತ್ರಿಕಾಗೋಷ್ಠಿಯಲ್ಲಿ ಇದ್ದರು.

ಬಂಜರು ಭೂಮಿ ಬಂಗಾರವಾಗಿ ಪರಿವರ್ತನೆ

ವಿಜಯಪುರ: ರೈತರ ಬಾಳನ್ನು ಹಸನಾಗಿಸಲು ರೂಪಿಸಿರುವ ನೀರಾವರಿ ಯೋಜನೆಗಳಿಂದಾಗಿ ಅನ್ನದಾತರ ಬಂಜರು ಜಮೀನು ಬಂಗಾರದ ಭೂಮಿಯಾಗಿ ಪರಿವರ್ತನೆಯಾಗಿವೆ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕೆ, ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಂ. ಬಿ. ಪಾಟೀಲ ಹೇಳಿದರು.

ಭಾನಿವಾರ ತಿಕೋಟಾ ತಾಲೂಕಿನ ಮಲಕನದೇವರಹಟ್ಟಿಯ ಸಾಳುಂಕೆ ವಸ್ತಿಯ ಬಳಿ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವತಿಯಿಂದ ರು. 250 ಲಕ್ಷ ವೆಚ್ಚದಲ್ಲಿ ನಿರ್ಮಿಸಲಾಗುತ್ತಿರುವ ಜಿನುಗು ಕೆರೆ ನಿರ್ಮಾಣ(ಸೈಟ್-2)ಕ್ಕೆ ಭೂಮಿಪೂಜೆ ನೆರವೇರಿಸಿ ಅವರು ಮಾತಮಾಡಿದರು, ಈ ಜಿನುಗು ಕೆರೆ 4.73 ಚ. ಕಿ. ಮೀ. ವ್ಯಾಪ್ತಿಯನ್ನು ಒಳಗೊಂಡಿದ್ದು, 9 ಎಕರೆ ಪ್ರದೇಶದಲ್ಲಿ 240 ಮೀಟರ್ ಅಂದರೆ 787 ಅಡಿ ಬಂಡ್ ಹೊಂದಿದೆ. 29 ಅಡಿ ಆಳದವರೆಗೆ ಒಟ್ಟು 2.33 ಎಂಸಿಎಫ್ ಟಿ ನೀರು ಸಂಗ್ರಹ ಸಾಮರ್ಥ್ಯ ಹೊಂದಿದೆ. ಇದರಿಂದ 136 ಎಕರೆ ಜಮೀನಿಗೆ ನೀರಾವರಿ ಸೌಲಭ್ಯ ದೊರೆಯಲಿದ್ದು, ತೆರೆದ ಭಾವಿ ಮತ್ತು ಬೋರವೆಲ್ ಗಳಲ್ಲಿ ಅಂತರ್ಜಲ ಕೂಡ ವೃದ್ಧಿಯಾಗಲಿದೆ ಎಂದು ಸಚಿವರು ತಿಳಿಸಿದರು.

ನೀರಾವರಿಯಿಂದಾಗಿ ರೈತರ ಭೂಮಿಗೆ ಭಾರಿ ಬೆಲೆ ಬಂದಿದ್ದು, ಯಾರೂ ಭೂಮಿ ಮಾರಿಕೊಳ್ಳಬೇಡಿ. ಎಲ್ಲರು ಕಾಮಗಾರಿಗೆ ಸಹಕರಿಸಿ ಬೇಕು. ಮೂರು ತಿಂಗಳಲ್ಲಿ ಈ ಕಾಮಗಾರಿ ಪೂರ್ಣವಾಗಲಿದ್ದು, ಈ ಕೆರೆ ಮತ್ತು ಈ ಮುಂಚೆ ನಿರ್ಮಿಸಲಾಗಿರುವ ಕೆರೆ ಎರಡನ್ನು ಒಟ್ಟಿಗೆ ಉದ್ಘಾಟನೆ ಮಾಡಲಾಗುವುದು ಎಂದರು. ಗುಣಮಟ್ಟದ ಕಾಮಗಾರಿ ಮಾಡುವಂತೆ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ತಬಚಿ-ಬಬಲೇಶ್ವರ ಏತನೀರಾವರಿ ಯೋಜನೆಯಡಿ ನಮಗೆ ಹಂಚಿಕೆಯಾಗಿರುವ ನೀರನ್ನು ಸದ್ಬಳಕೆ ಮಾಡಿಕೊಳ್ಳಲು ಯೋಜನೆ ರೂಪಿಸಲಾಗಿದೆ. ಎರಡು ಕಡೆ ಸರಕಾರಿ ಜಮೀನಿನಲ್ಲಿ ಹೊಂಡಗಳನ್ನು ನಿರ್ಮಿಸಿ ಅಲ್ಲಿ ಒಂದು ಟಿಎಂಸಿ ನೀರು ಸಂಗ್ರಹಿಸಲು ಯೋಜನೆ ರೂಪಿಸಲಾಗುತ್ತಿದೆ. ಇದಕ್ಕೆ ಎಷ್ಟೇ ಹಣ ಖರ್ಚಾದರೂ ಅದನ್ನು ಜಾರಿ ಮಾಡಲಾಗುವುದು ಎಂದು ಅವರು ತಿಳಿಸಿದರು.
-ಎಂ. ಬಿ. ಪಾಟೀಲ, ಸಚಿವ

ಸಣ್ಣ ನೀರಾವರಿ ಇಲಾಖೆ ಸೆಕ್ಷನ್ ಆಫೀಸರ್ ವಿಶ್ವನಾಥ ಪೀರಶೆಟ್ಟಿ ಮಾತನಾಡಿದ ಅವರು, ಕೆರೆ ನಿರ್ಮಾಣದ ಮಾಹಿತಿ ನೀಡಿದರು. ಜಿ.ಪಂ. ಮಾಜಿ ಅಧ್ಯಕ್ಷ ಸೋಮನಾಥ ಬಾಗಲಕೋಟ ಮಾತನಾಡಿದ ಅವರು, ಈ ಯೋಜನೆಯಿಂದ ಸುತ್ತಮುತ್ತಲಿನ ಪ್ರದೇಶಕ್ಕೆ ಅನುಕೂಲ ವಾಗಲಿದೆ. ಮಳೆಗಾಲದಲ್ಲಿ ಮಾತ್ರವಲ್ಲ ಬೇಸಿಗೆಯಲ್ಲೂ ನೀರು ಪೂರೈಸಲು ಕ್ರಮ ಕೈಗೊಂಡಿದ್ದಾರೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ತಿಕೋಟಾ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿದ್ದುಗೌಡನವರ, ಮುಖಂಡ ದಯಾನಂದ ಮಠಪತಿ, ಜಲಸಂಪನ್ಮೂಲ ಇಲಾಖೆ ಎಇಇ ಅಂಬಣ್ಣ ಹರಳಯ್ಯ, ತಹಸೀಲ್ದಾರ ಸುರೇಶ ಚವಲರ, ತಾ. ಪಂ. ಇಓ ಬಸವಂತರಾಯ, ಬಿರಾದಾರ, ಬಿಇಓ ಪ್ರಮೋದಿನಿ ಬಳೂಲಮಟ್ಟಿ, ಸಣ್ಣ ನೀರಾವರಿ ಇಲಾಖೆ ಎಇಇ ವಿನೋದ ವಸ್ತ್ರದ, ಹೆಸ್ಕಾಂ ಎಇಇ ಗೋವಿಂದ ಎಸ್. ದೇಶಮುಖ, ಇತರರು ಇದ್ದರು.

ಜನಾಕ್ರೋಶ ಯಾತ್ರೆಗೆ ಎಲ್ಲರ ಸಹಕಾರ ಅಗತ್ಯ

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಕರೆದ ಪತ್ರಿಕಾಗೋಷ್ಠಿಯಲ್ಲಿ ಎ.ಎಸ್. ಪಾಟೀಲ ನಡಹಳ್ಳಿ ಮಾತನಾಡಿದ.

ತಾಳಿಕೋಟಿ: ಸರಕಾರದ ಜನವಿರೊಧಿ ಆಡಳಿತವನ್ನು ಖಂಡಿಸಿ ಏ. 17ರಂದು ವಿಜಯಪುರದಲ್ಲಿ ನಡೆಯಲಿರುವ ಜನಾಕ್ರೋಶ ಯಾತ್ರೆಗೆ ಮುದ್ದೇಬಿಹಾಳ ಮತಕ್ಷೇತ್ರ ದಿಂದ 10 ಸಾವಿರ ಕಾರ್ಯಕರ್ತರು ಸ್ವಯಂ ಪ್ರೇರಿತರಾಗಿ ಭಾಗವಹಿಸಲಿದ್ದಾರೆ, ಇದರಲ್ಲಿ ಕಾಂಗ್ರೆಸ್ ಸರಕಾರದ ಸುಳ್ಳು ಭರವಸೆ ಹಾಗೂ ಬೆಲೆ ಏರಿಕೆಯಿಂದಾಗಿ ಜನಸಾಮಾನ್ಯರ ಜೀವನದ ಮೇಲೆ ಉಂಟಾಗಿರುವ ದುಷ್ಪರಿಣಾಮಗಳ ಕುರಿತು ರಾಜ್ಯ ಸರಕಾರಕ್ಕೆ ಎಚ್ಚರಿಸಲಾಗುವುದು ಎಂದು ಬಿಜೆಪಿ ರೈತ ಮೋರ್ಚಾ ರಾಜ್ಯಾಧ್ಯಕ್ಷ, ಮಾಜಿ ಶಾಸಕ ಎ.ಎಸ್.ಪಾಟೀಲ ನಡಹಳ್ಳಿ ತಿಳಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಕರೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ 60 ವರ್ಷಗಳಲ್ಲಿ ರಾಷ್ಟ್ರದಲ್ಲಿ ಹಾಗೂ 30 ವರ್ಷಗಳಿಂದ ರಾಜ್ಯದಲ್ಲಿ ಆಡಳಿತ ನಡೆಸಿದ ಕಾಂಗ್ರೆಸ್ ಪಕ್ಷವು ಹೇಳಿಕೊಳ್ಳುವಂತಹ ಆಡಳಿತ ನೀಡಿಲ್ಲ, ಕೇವಲ 13 ವರ್ಷಗಳಿಂದ ಕೇಂದ್ರದಲ್ಲಿರುವ ನರೇಂದ್ರ ಮೋದಿಜಿಯವರ ನೇತೃತ್ವದ ನಮ್ಮ ಪಕ್ಷದ ಸರಕಾರವು ಇಡೀ ವಿಶ್ವವೇ ತಿರುಗಿ ನೋಡುವ ಹಾಗೆ ಅಭಿವೃದ್ಧಿಯ ಕಾರ್ಯಗಳನ್ನು ಮಾಡಿದೆ. ಶಾಸಕ ಬಿ.ಆರ್.ಪಾಟೀಲರು ಅಭಿವೃದ್ಧಿ ಕುರಿತು, ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರ ಬಸವರಾಜ ರಾಯರೆಡ್ಡಿ ಅವರು ಕರ್ನಾಟಕ ಭ್ರಷ್ಟಾಚಾರದಲ್ಲಿ ನಂಬರ್ ಒನ್ ಸ್ಥಾನದಲ್ಲಿದೆ ಎಂದು ಹೇಳಿಕೆ ನೀಡಿರುವುದು ಈ ಸರಕಾರದ ಅಧೋಗತಿಯನ್ನು ತಿಳಿಸುತ್ತದೆ ಎಂದರು.

ಜಾತಿಗಣತಿ ಮಾಡುವ ಅಧಿಕಾರ ಕೇಂದ್ರ ಸರಕಾರಕ್ಕೆ ಇದೆ ರಾಜ್ಯ ಸರಕಾರ ಮಾಡುತ್ತಿರುವುದು ಕೇವಲ ಆರ್ಥಿಕ ಮತ್ತು ಸಾಮಾಜಿಕ ಸಮೀಕ್ಷೆ ಎಂದ ಅವರು ಸಿಎಂ ಸಿದ್ದರಾಮಯ್ಯನವರು ತಮ್ಮ ಕುರ್ಚಿ ಉಳಿಸಲು ಈ ವಿಷಯವನ್ನು ದಾಳವಾಗಿ ಬಳಸಿಕೊಳ್ಳುತ್ತಿದ್ದಾರೆ ಎಂದು ಆರೋಪಿಸಿದ ಅವರು ಯತ್ನಾಳರ ಕುರಿತು ಮಾಧ್ಯಮದವರ ಪ್ರಶ್ನೆಗೆ ಉತ್ತರಿಸಲು ನಿರಾಕರಿಸಿದರು.

ಮುಖಂಡರಾದ ಕಾಶಿನಾಥ ಮುರಾಳ, ಎಂ.ಎಸ್. ಸರಶೆಟ್ಟಿ ವಾಸುದೇವ ಹೆಬಸೂರ, ಶಿವಶಂಕರ ಹಿರೇಮಠ, ಎಂ.ಆರ್.ಪಾಟೀಲ ವಕೀಲರು, ಎಸ್ಸಿ ಮೋರ್ಚಾ ಅಧ್ಯಕ್ಷ ಮಲ್ಲಣ್ಣ, ರಾಜುಗೌಡ ಗುಂಡಕನಾಳ, ಪ್ರಕಾಶ್ ಹಜೇರಿ, ಮಾನಸಿಂಗ್ ಕೊಕಟನೂರ, ಜೈ ಸಿಂಗ್ ಮೂಲಿಮನಿ, ರಾಘು ವಿಜಯಪುರ, ಈಶ್ವರ್ ಹೂಗಾರ, ವಿಠಲ ಮೋಹಿತೆ ಪಕ್ಷದ ಕಾರ್ಯಕರ್ತರು ಇದ್ದರು.

ಮೌಲ್ಯಮಾಪನಕ್ಕೆ ಹಾಜರು ಕಡ್ಡಾಯ

ವಿಜಯಪುರ: ಕಳೆದ ಮಾರ್ಚ್-ಏಪ್ರಿಲ್ 2025ರಲ್ಲಿ ನಡೆದ ಎಸ್ ಎಸ್‌ಎಲ್‌ಸಿ ಪರೀಕ್ಷೆಯ ಮೌಲ್ಯಮಾಪನ ಕಾರ್ಯ ಮಂಗಳವಾರದಿಂದ ನಡೆಯಲಿದ್ದು, ಮೌಲ್ಯಮಾಪನ ಕಾರ್ಯಕ್ಕೆ ನಿಯೋಜಿತ ಶಿಕ್ಷಕರು ಕಡ್ಡಾಯವಾಗಿ ಹಾಜರಾಗುವಂತೆ ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕರು ಸೂಚನೆ ನೀಡಿದರು. ಮೌಲ್ಯಮಾಪನ ಕಾರ್ಯಕ್ಕಾಗಿ ವಿಜಯಪುರ ನಗರ ವಲಯದಲ್ಲಿ 11 ಮೌಲ್ಯಮಾಪನ ಕೇಂದ್ರಗಳನ್ನು ತೆರಯಲಾಗಿದೆ. ಈಗಾಗಲೇ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ಬೆಂಗಳೂರು ಇವರಿಂದ ಮೌಲ್ಯಮಾಪನ ಆದೇಶ ಪ್ರತಿಗಳನ್ನು ಆಯಾ ಶಾಲಾ ಫ್ರೀಜ್ ಮಾಡಲಾಗಿದೆ. ಸಂಬಂಧಿಸಿದ ಸರಕಾರಿ/ಅನುದಾನಿತ/ಅನುದಾನ ರಹಿತ ಪ್ರೌಢ ಶಾಲೆಗಳ ಮುಖ್ಯಶಿಕ್ಷಕರು ಮಂಡಳಿಯಿಂದ ನೀಡಲಾಗಿದ ಮೌಲ್ಯಮಾಪ ನ ಆದೇಶ ಪ್ರತಿಗಳನ್ನು ಸಂಬಂಧಿಸಿದ ಶಿಕ್ಷಕರಿಗೆ ಜಾರಿಗೊಳಿಸಿ ಬಿಡುಗಡೆಗೊಳಿಸಲಾಗುವುದು. ಮೌಲ್ಯಮಾಪನ ಕಾರ್ಯದಲ್ಲಿ ಯಾವುದೇ ತರಹದ ನಿರ್ಲಕ್ಷ್ಯ ಕಂಡುಬಂದಲ್ಲಿ ಮುಖ್ಯ ಶಿಕ್ಷಕರ ನ್ನೇ ಹೊಣೆಗಾರರನ್ನಾ. ಮಾಡಲಾಗುವುದು. ಉಪಮುಖ್ಯ ಮೌಲ್ಯ ಮಾಪಕರು ಮತ್ತು ಸಹಾಯಕ ಮೌಲ್ಯಮಾ ಪಕರು ತಮಗೆ ಸೂಚಿಸಿರುವ ದಿನಾಂಕಗಳಂದು ಕಡ್ಡಾಯವಾಗಿ ಮೌಲ್ಯಮಾಪನ ಕಾರ್ಯಕ್ಕೆ ಹಾಜರಾಗಬೇಕು. ಮೌಲ್ಯಮಾಪನ ಕಾರ್ಯವು ಕರ್ನಾಟಕ ಶಿಕ್ಷಣ ಕಾಯ್ದೆ 1983 ನಿಯಮ 28 ಮತ್ತು 122 ರನ್ವಯ ಹಾಗೂ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ನಿಯಮಗಳು-2012 ರಂತೆ ಕಡ್ಡಾಯವಾಗಿದ್ದು, ಗೈರುಹಾಜರಾದಲ್ಲಿ ಸೂಕ್ತ ಶಿಸ್ತುಕ್ರಮ ತೆಗೆದುಕೊಳ್ಳಲಾಗುವುದು ಎಂದರು.

ಕಾಂಗ್ರೆಸ್ ಸರಕಾರದ ಕಳೆದ ಎರಡು ವರ್ಷ 50 ವಸ್ತುಗಳ ಮೇಲೆ ಬಾರಿ ಬೆಲೆ ಏರಿಕೆ: ಮಾಜಿ ಶಾಸಕ ಸಾಸನೂರ

ರ‍್ಯಾಜ ಸರಕಾರದದಿಂದ ಬೆಲೆಯೇರಿಕೆಯ ಗದಾಪ್ರಹಾರ

ದೇವರಹಿಪ್ಪರಗಿ: ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರಕಾರ ಬಡವರ ಮತ್ತು ಮಧ್ಯಮ ವರ್ಗದವರ ಮೇಲೆ ಬೆಲೆಯೇರಿಕೆಯ ಗದಾಪ್ರಹಾರ ನಿರಂತರವಾಗಿ ಮಾಡುತ್ತಿದೆ. ಬಡವರಿಗೆ ಗ್ಯಾರಂಟಿ ಯೋಜನೆ ನೀಡಿ ಆರ್ಥಿಕವಾಗಿ ಸಧೃಡ ಮಾಡಿದ್ದೇವೆ ಎಂದು ಪದೇ ಪದೇ ಬಡಾಯಿ ಕೊಚ್ಚಿಕೊಳ್ಳುವ ಸರಕಾರ ಕಳೆದ ಎರಡು ವರ್ಷದಲ್ಲಿ 50 ವಸ್ತುಗಳ ಬೆಲೆಯನ್ನು ಹೆಚ್ಚಿಸಿ ಒಂದು ಕೈಯಲ್ಲಿ ಹಣ ಕೊಟ್ಟು ಇನ್ನೊಂದು ಕೈಯಲ್ಲಿ ಬಡ್ಡಿ ಸಮೇತ ಕಿತ್ತುಕೊಳ್ಳುತ್ತಿದೆ ಎಂದು ಮಾಜಿ ಶಾಸಕ ಸೋಮನಗೌಡ ಪಾಟೀಲ ಸಾಸನೂರ ಆರೋಪಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಸೋಮವಾರ ನಡೆದ ಜನಾಕ್ರೋಶ ಯಾತ್ರೆಯ ಪೂರ್ವಭಾವಿ ಸಭೆಯ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಐದು ಗ್ಯಾರಂಟಿಗಳಿಂದ ಆರ್ಥಿಕವಾಗಿ ಸಂಕಷ್ಟಕ್ಕೆ ಸಿಲುಕಿರುವ ರಾಜ್ಯ ಸರಕಾರ ಸಂಪನ್ಮೂಲ ಕ್ರೋಢಿಕರಣಕ್ಕೆ ಕಂಡ ಕಂಡ ವಸ್ತುಗಳ ಬೆಲೆಗಳ ಏರಿಕೆ ಮಾಡಿ ಜನಸಾಮಾನ್ಯರ ಬವಣೆಗೆ ಕಿಂಚಿತ್ತೂ ಕಾಳಜಿ ತೋರದ ನಿರ್ದಯಿ ಸರಕಾರವಾಗಿದೆ. ರಾಜ್ಯದಲ್ಲಿ ಕಾಂಗ್ರೆಸ್ ಸರಕಾರ ಅಸ್ತಿತ್ವಕ್ಕೆ ಬಂದಾಗಿನಿಂದ ಬಡವರ ಜನಸಾಮಾನ್ಯರು ಬೆಲೆ ಏರಿಕೆಯಿಂದ ತತ್ತರಿಸಿ ಜನ ಆಕ್ರೋಶ ಆಗಿದ್ದಾರೆ ಆದಕಾರಣ ಬಿಜೆಪಿ ಕೂಡ ಸರಕಾರಕ್ಕೆ ಬಿಸಿ ಮುಟ್ಟಿಸಲು ಇದೇ 17 ರಂದು ರಾಜ್ಯಾಧ್ಯಕ್ಷರಾದ ಬಿ.ವೈ. ವಿಜಯೇಂದ್ರ ಹಾಗೂ ವಿಧಾನಸಭೆ ವಿರೋಧ ಪಕ್ಷದ ನಾಯಕರಾದ ಆರ್. ಅಶೋಕ ಅವರ ನೇತೃತ್ವದಲ್ಲಿ ಸಂಸದರು, ಶಾಸಕರು, ಮಾಜಿ ಶಾಸಕರು ಪದಾಧಿಕಾರಿಗಳು ಮುಖಂಡರ ನೇತೃತ್ವದಲ್ಲಿ ಜನಾಕೋಶ ಸಭೆ ನಡೆಯಲಿದೆ ನಮ್ಮ ಕ್ಷೇತ್ರದಿಂದ ಸುಮಾರು 3ಸಾವಿರ ಕ್ಕೂ ಹೆಚ್ಚು ಜನ' ಭಾಗವಹಿಸಲಿದ್ದಾರೆ ಎಂದು ಹೇಳಿದರು.

ಜನಾಕ್ರೋಶ ಯಾತ್ರೆಯ ಮಂಡಲದ ಉಸ್ತುವಾರಿ ವಿಜಯಕುಮಾರ ಕುಡಿಗನೂರ ಅವರು ಮಾತನಾಡಿ, ರಾಜ್ಯದಲ್ಲಿ ಕಾಂಗ್ರೆಸ್ ನೇತೃತ್ವದ ಸರಕಾರ ಹಾಲು, ಮೊಸರು, ವಿದ್ಯುತ್, ಪೆಟ್ರೋಲ್, ಡೀಸೆಲ್, ಬಾಂಡ್ ಪೇಪರ್, ಬಾಣಂತಿಯರ ಸಾವು, ಗುತ್ತಿಗೆದಾರರ ಬಿಲ್, ಬಸ್ ದರ ಸೇರಿದಂತೆ ದಿನನಿತ್ಯ ಬಡವರು ಹಾಗೂ ಜನಸಾಮಾನ್ಯರಿಗೆ ಅವಶ್ಯಕ ವಸ್ತುಗಳ ಬೆಲೆ ಏರಿಕೆ ಬಿಸಿಯಿಂದ ಜೀವನ ದುಸ್ತುರವಾಗಿದೆ. ರಾಜ್ಯದಲ್ಲಿ ಅಭಿವೃದ್ಧಿ ಮರಿಚಿಕೆಯಾಗಿದೆ, ಎರಡು ವರ್ಷದಲ್ಲಿ ಯಾವುದೇ ಅಭಿವೃದ್ಧಿ ಕಾರ್ಯ ಮಾಡದೆ ಶೇ.60ರ ಸರಕಾರ ಎಂದು ಸಾಬೀತು ಪಡಿಸಿದೆ, ಅಧಿಕಾರಿಗಳ ವರ್ಗಾವಣೆಯಲ್ಲಿ ಭ್ರಷ್ಟಾಚಾರ ತಾಂಡವಾಡುತ್ತಿದೆ. ಕಾಂಗ್ರೆಸ್ ಸರಕಾರದ ದುರಾಡಳಿತ ಖಂಡಿಸಿ ಭಾರತೀಯ ಜನತಾ ಪಕ್ಷವು ರಾಜ್ಯಾದ್ಯಾಂತ ಜನಾಕ್ರೋಶ ಯಾತ್ರೆ ಪ್ರಾರಂಭಿಸಿದ್ದು, ದೇವರಹಿಪ್ಪರಗಿ ಮತಕ್ಷೇತ್ರದಿಂದ ಅತಿ ಹೆಚ್ಚು ಕಾರ್ಯಕರ್ತರು ಈ ಜನಾಕ್ರೋಶ ಯಾತ್ರೆಯಲ್ಲಿ ಪಾಲ್ಗೊಂಡು ಸರಕಾರದ ವಿರುದ್ಧ ಧ್ವನಿ ಮುಳುಗಿಸಬೇಕು ಎಂದು ಮನವಿ ಮಾಡಿದರು.

ಮುಂಚೆ ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರ 134ನೇ ಜಯಂತ್ಯುತ್ಸವದಲ್ಲಿ ಪುಷ್ಪ ನಮನ ಸಲ್ಲಿಸಿ ಮಂಡಲದ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರ ಸಭೆ ನಡೆಸಿದ್ದರು.

ಇದೇ ಸಂದರ್ಭದಲ್ಲಿ ಬಿಜೆಪಿ ಮಂಡಲ ಅಧ್ಯಕ್ಷ ಅವ್ವನಗೌಡ ಗ್ವಾತಗಿ, ಮಂಡಲದ ಉಸ್ತುವಾರಿಗಳು ಹಾಗೂ ಮಾಜಿ ಜಿ.ಪಂ ಅಧ್ಯಕ್ಷ ಉಮೇಶ ಕೊಳಕೂರ, ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಪ್ರಭುಗೌಡ ಬಿರಾದಾರ ಅಸ್ಕಿ, ಜಿಲ್ಲಾ ರೈತ ಘಟಕದ ಅಧ್ಯಕ್ಷ ಸಿದ್ದು ಬುಳ್ಳಾ, ಜಿಲ್ಲಾ ಕಾರ್ಯದರ್ಶಿ ಹಾಗೂ ಪ.ಪಂ ಉಪಾಧ್ಯಕ್ಷ ರಮೇಶ ಮಸಿಬಿನಾಳ, ಮಹಾಂತೇಶ ಬಿರಾದಾರ, ಪ್ರಕಾಶ ದೊಡಮನಿ, ಭೀಮನಗೌಡ ಲಚ್ಯಾಣ, ಸೋಮಶೇಖರ ಹಿರೇಮಠ, ಸೋಮು ದೇವೂರ, ಶರಣು ದಳವಾಯಿ, ಮುತ್ತುರಾಜ ಆಲ್ಯಾಳ, ಆಕಾಶ ಕಬ್ಬಿನ ಸೇರಿದಂತೆ ಮಂಡಲದ ಪದಾಧಿಕಾರಿಗಳು ಮುಖಂಡರು ಹಾಗೂ ಕಾರ್ಯಕರ್ತರು ಇದ್ದರು.

ಅಂಕ ಪಟ್ಟಿ

	ಪಂದ್ಯ	ಗೆಲುವು	ಸೋಲು	ಅಂಕ
ಗುಜರಾತ್	06	04	02	08
ಡೆಲ್ಲಿ	05	04	01	08
ಬೆಂಗಳೂರು	06	04	02	08
ಪಂಜಾಬ್	06	04	02	08
ಲಖನೌ	07	04	03	08
ಕೋಲ್ಕತ್ತಾ	07	03	04	06
ಮುಂಬೈ	06	02	04	04
ರಾಜಸ್ಥಾನ್	06	02	04	04
ಹೈದರಾಬಾದ್	06	02	04	04
ಚೆನ್ನೈ	07	02	05	04

ಇಂದಿನ ಪಂದ್ಯ

7.30 PM

ಡೆಲ್ಲಿ ಕ್ಯಾಪಿಟಲ್ಸ್ VS ರಾಜಸ್ಥಾನ ರಾಯಲ್ಸ್

ಅರುಣ್ ಜೇಟ್ಲಿ ಕ್ರೀಡಾಂಗಣ ದೆಹಲಿ

ಎಂಎಸ್ ಧೋನಿಯ ನಾಯಕತ್ವ ನಿಜಕ್ಕೂ ಅದ್ಭುತವಾಗಿತ್ತು. ಈಗಲೂ ಅವರು ವಿಶ್ವದ ಅತ್ಯುತ್ತಮ ವಿಕೆಟ್ ಕೀಪರ್ ಆಗಿದ್ದಾರೆ. ಧೋನಿ ದೀರ್ಘಾವಧಿಯಿಂದ ಸ್ಥಿರ ಪ್ರದರ್ಶನವನ್ನು ತೋರುತ್ತಿರುವುದು ನಿಜಕ್ಕೂ ಆಶ್ಚರ್ಯ. ಅವರು ಸನ್ನಿವೇಶವನ್ನು ತಿಳಿದುಕೊಂಡು, ಕಂಡೀಷನ್ಸ್‌ಗೆ ಹೊಂದಿಕೊಂಡು ಪಂದ್ಯ ಗೆಲ್ಲಲು ಲಖನೌ ವಿರುದ್ಧ ಸ್ಪಿನ್ನರ್‌ಗಳನ್ನು ಅತ್ಯುತ್ತಮವಾಗಿ ಬಳಸಿಕೊಂಡಿದ್ದಾರೆ. ಒಟ್ಟಾರೆ ತಮ್ಮ ವೃತ್ತಿ ಜೀವನದುದ್ದಕ್ಕೂ ಅವರು ಚಾಣಾಕ್ಷತನವನ್ನು ತೋರಿಸಿಕೊಂಡು ಬಂದಿದ್ದಾರೆ. ಅವರಿಂದಾಗಿ ಸಿಎಸ್‌ಕೆ ಬೌಲರ್‌ಗಳು ಚೆನ್ನಾಗಿ ಬೌಲ್ ಮಾಡಿ, ಪಂದ್ಯದ ವೇಗವನ್ನು ಅವರು ಬದಲಿಸಿದರು, ಸನ್ನಿವೇಶಕ್ಕೆ ತಕ್ಕಂತೆ ವಿಕೆಟ್‌ಗಳನ್ನು ಕಿತ್ತಿದ್ದಾರೆ. ಎಂಎಸ್ ಧೋನಿಯ ಅನುಭವವನ್ನು ನಾನು ಐಪಿಎಲ್‌ನಲ್ಲಿ ನೋಡಿ ನಿಜಕ್ಕೂ ಮೂಕವಿಸ್ಮಿತನಾಗಿದ್ದೇನೆ.

-ಮೈಕಲ್ ಕ್ಲಾರ್ಕ್, ಆಸ್ಟ್ರೇಲಿಯಾ ಮಾಜಿ ನಾಯಕ

ಫಿಕ್ಸಿಂಗ್ ಅನುಮಾನ

ಲಖನೌ: ಸೋಮವಾರ ನಡೆದಿದ್ದ ಐಪಿಎಲ್‌ನ ಚೆನ್ನೈ ಸೂಪರ್ ಕಿಂಗ್ಸ್ ಮತ್ತು ಲಕ್ನೋ ಸೂಪರ್ ಜೈಂಟ್ಸ್ ನಡುವಿನ ಪಂದ್ಯದಲ್ಲಿ ಫಿಕ್ಸಿಂಗ್ ನಡೆದಿರುವ ಅನುಮಾನ ವ್ಯಕ್ತವಾಗಿದೆ ಎಂದು ಸಾಮಾಜಿಕ ಜಾಲತಾಣದಲ್ಲಿ ಟೀಕೆ-ಟಿಪ್ಪಣಿ ವ್ಯಕ್ತವಾಗಿದೆ. ಅದಕ್ಕೆ ಪುಷ್ಠಿ ನೀಡುವಂತೆ ಟಾಸ್ ಪ್ರಕ್ರಿಯೆಯ ವಿಡಿಯೊ ಕೂಡ ವೈರಲ್ ಆಗಿದೆ. ಸಾಮಾನ್ಯವಾಗಿ ಟಾಸ್ ವೇಳೆ ನಾಯಕರಾದವರು ಬಹಿರಂಗವಾಗಿಯೇ ತಮ್ಮ ನಿರ್ಧಾರವನ್ನು ಪ್ರಕಟಿಸುತ್ತಾರೆ. ಆದರೆ ಧೋನಿ, ರೆಫ್ರಿ ಬಳಿ ಗುಟ್ಟಾಗಿ ತಮ್ಮ ನಿರ್ಧಾರ ಹೇಳಿದ್ದೇಕೆ, ಅಲ್ಲೇನೋ ಮ್ಯಾಚ್ ಫಿಕ್ಸಿಂಗ್ ಆಗಿದೆ ಎಂದು ನೆಟ್ಟಿಗರು ಇದೀಗ ಸಾಮಾಜಿಕ ಜಾಲತಾಣದಲ್ಲಿ ಆರೋಪ ಮಾಡಿ ದ್ದಾರೆ. ಲಖನೌನ ಏಕಾನ ಕ್ರಿಕೆಟ್ ಸ್ಟೇಡಿಯಂನಲ್ಲಿ ನಡೆದ ಪಂದ್ಯದಲ್ಲಿ ಆತಿಥೇಯ ಲಖನೌ ತಂಡದ ನಾಯಕ ರಿಷಭ್ ಪಂತ್ ನಾಣ್ಯ ಚಿಮ್ಮುಗೆ ಮಾಡುವ ವೇಳೆ ಧೋನಿ ತಮ್ಮ ನಿರ್ಧಾರವನ್ನು ರೆಫ್ರಿ ಬಳಿ ಗುಟ್ಟಾಗಿ ಹೇಳಿ ನಾಣ್ಯ ಕೆಳಗೆ ಬೀಳುವ ಮುನ್ನವೇ ಟಾಸ್ ನಾವೇ ಗೆಲ್ಲುತ್ತೇವೆ ಎಂದು ಪಂತ್ ಅವರನ್ನು ತಳ್ಳಿಕೊಂಡು ಟಾಸ್ ನಿರ್ವಾಹಕ ಮುರುಳಿ ಕಾರ್ತಿಕ್ ಬಳಿಕ ಧೋನಿ ಹೆಜ್ಜೆ ಹಾಕಿದರು. ಆ ವೇಳೆ ಗೊಂದಲಕ್ಕೀಡಾದ ಮುರಳಿ ಕಾರ್ತಿಕ್, ಧೋನಿಯ ವರನ್ನು ಉದ್ದೇಶಿಸಿ, ನೀವು ಟೇಲ್ಸ್ ಎಂದು ಹೇಳಿದಲ್ಲವೇ? ಎಂದು ಪ್ರಶ್ನೆ ಮಾಡಿದರು. ಆಗ ಮ್ಯಾಚ್ ರೆಫ್ರಿ ಆಗಿದ್ದ ನಾರಾಯಣ ಕುಟ್ಟಿ ಹೆಡ್ಸ್ ಎಂದು ಹೇಳುತ್ತಾರೆ. ಒಟ್ಟಾರೆ ಈ ಘಟನೆಯ ವಿಡಿಯೊ ವೈರಲ್ ಆಗಿದ್ದು, ಪಂದ್ಯ ಫಿಕ್ಸಿಂಗ್ ಆಗಿದೆ ಎಂದು ನೆಟ್ಟಿಗರು ಕಾಲೆಳೆಯುತ್ತಿದ್ದಾರೆ.

ಸ್ಮರಣ್ ಹೈದರಾಬಾದ್‌ಗೆ

ಬೆಂಗಳೂರು: ಗಾಯಗೊಂಡು ಐಪಿಎಲ್‌ನಿಂದ ಹೊರಬಿದ್ದ ಸ್ಪಿನ್ನರ್ ಆ್ಯಡಂ ಜಂಪಾ ಬದಲಿಗೆ ಕರ್ನಾಟಕದ ಬ್ಯಾಟರ್ ಆರ್. ಸ್ಮರಣ್‌ರವರು ಸನ್ ರೈಸರ್ಸ್ ತಂಡಕ್ಕೆ ಸೇರ್ಪಡೆಯಾಗಿದ್ದಾರೆ. ಇದರೊಂದಿಗೆ ಐಪಿಎಲ್ 18ನೇ ಆವೃತ್ತಿಯಲ್ಲಿ ಆಡುವ ಕನ್ನಡಿಗರ ಸಂಖ್ಯೆ 14ಕ್ಕೆ ಏರಿಕೆಯಾಗಿದೆ. 21 ವರ್ಷದ ಎಡಗೈ ಬ್ಯಾಟರ್ ರವಿಚಂದ್ರನ್? ಸ್ಮರಣ್ ಕಳೆದ ದೇಶೀಯ ಕ್ರಿಕೆಟ್ ಋತುವಿನಲ್ಲಿ ಕರ್ನಾಟಕ ತಂಡದ ಪರ ಅಮೋಘ ಬ್ಯಾಟಿಂಗ್ ಪ್ರದರ್ಶನ ತೋರಿದ್ದರು. ಆಡಿದ 7 ಪ್ರಥಮ ದರ್ಜೆ, 10 ಲಿಸ್ಟ್-ಎ ಮತ್ತು 6 ಟಿ20 ಪಂದ್ಯಗಳಲ್ಲಿ ಅವರು 1,100ಕ್ಕೂ ಅಧಿಕ ರನ್ ಬಾರಿಸಿದ್ದರು. ಇದೀಗ ಐಪಿಎಲ್‌ನಲ್ಲಿಯೂ ತಮ್ಮ ಬ್ಯಾಟಿಂಗ್ ಪ್ರದರ್ಶನವನ್ನು ತೋರಿಸಲು ಸಜ್ಜಾಗಿದ್ದಾರೆ. 30 ಲಕ್ಷ ರು. ಸಂಭಾವನೆ ಪಡೆಯಲಿದ್ದಾರೆ. ಹಾಲಿ ಆವೃತ್ತಿಯಲ್ಲಿ ಸನ್‌ರೈಸರ್ಸ್ ತಂಡವು 6 ಪಂದ್ಯಗಳಿಂದ 2 ಗೆಲುವು, 4 ಸೋಲು ಕಂಡು ಅಂಕಪಟ್ಟಿಯಲ್ಲಿ 9ನೇ ಸ್ಥಾನದಲ್ಲಿದೆ. ಪ್ಲೇ ಆಫ್ ಪ್ರವೇಶ ಪಡೆಯಬೇಕಿದ್ದರೆ ಹೈದರಾಬಾದ್‌ಗೆ ಉಳಿದ ಪಂದ್ಯಗಳಲ್ಲಿ ಗೆಲುವು ಅತ್ಯಗತ್ಯ.

ಐಪಿಎಲ್‌ನಲ್ಲಿರುವ ಕನ್ನಡಿಗರು: ಶ್ರೇಯಸ್ ಗೋಪಾಲ್ (ಸಿಎಸ್‌ಕೆ), ಕೆಎಲ್. ರಾಹುಲ್, ಕರುಣ್ ನಾಯರ್, ಮನ್ವಂತ್ ಕುಮಾರ್ (ಡೆಲ್ಲಿ ಕ್ಯಾಪಿಟಲ್ಸ್), ಪ್ರಸಿದ್ಧ ಕೃಷ್ಣ(ಗುಜರಾತ್), ಮನೀಷ್ ಪಾಂಡೆ, ಲವನೀತ್ ಸಿಸೋಡಿಯಾ(ಕೆಕೆಆರ್), ಕೆಎಲ್ ಶ್ರೀಜಿತ್,(ಮುಂಬೈ), ವೈಶಾಕ್ ವಿಜಯ್ ಕುಮಾರ್, ಪ್ರವಿಣ್ ದುಬೆ (ಪಂಜಾಬ್), ದೇವದತ್ ಪಡಿಕ್ಕಲ್? ಮನೋಜ್ ಭಾಂಡಗೆ (ಆರ್‌ಸಿಬಿ), ಅಭಿನವ್ ಮನೋಹರ್ ಮತ್ತು ಆರ್. ಸ್ಮರಣ್(ಹೈದರಾಬಾದ್).

ಸ್ಟ್ಯಾಂಡ್‌ಗೆ ಮಹನೀಯರ ಹೆಸರು



ಮುಂಬೈ: ಭಾರತ ಟೆಸ್ಟ್ ಕ್ರಿಕೆಟ್ ತಂಡದ ನಾಯಕ ರೋಹಿತ್ ಶರ್ಮಾ, ಮಾಜಿ ನಾಯಕ ಅಜಿತ್ ವಾಡೇಕರ್ ಹಾಗೂ ಬಿಸಿಸಿಐ ಮಾಜಿ ಅಧ್ಯಕ್ಷ ಶರದ್ ಪವಾರ್ ಅವರ ಹೆಸರನ್ನು ವಾಂಖೆಡೆ ಕ್ರೀಡಾಂಗಣದ ಸ್ಟ್ಯಾಂಡ್‌ಗಳಿಗೆ ಇಡಲು ನಿರ್ಧರಿಸಲಾಗಿದೆ. ಮುಂಬೈ ಕ್ರಿಕೆಟ್ ಸಂಸ್ಥೆ (ಎಂಸಿಎ) ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಯಿತು. ರೋಹಿತ್ ಶರ್ಮಾ ಅವರ ಹೆಸರನ್ನು ಕ್ರೀಡಾಂಗಣದ ದಿವೇಚಾ ಪೆವಿಲಿಯನ್ (ಲೆವೆಲ್ 3) ಸ್ಟ್ಯಾಂಡ್‌ಗೆ ಇಡಲಾಗುವುದು. ಗ್ರಾಂಡ್ ಸ್ಟ್ಯಾಂಡ್‌ಗೆ (ಲೆವೆಲ್ 3) ಪವಾರ್ ಹಾಗೂ ಗ್ರಾಂಡ್ ಸ್ಟ್ಯಾಂಡ್ ಗೆ (ಲೆವೆಲ್ 4) ವಾಡೇಕರ್ ಅವರ ಹೆಸರುಗಳನ್ನು ಇಡಲಾಗುವುದು. ವಾಡೇಕರ್ ಅವರು 1966-1974ರ ಅವಧಿಯಲ್ಲಿ ಭಾರತ ತಂಡದಲ್ಲಿ 37 ಟೆಸ್ಟ್ ಮತ್ತು 2 ಏಕದಿನ ಪಂದ್ಯಗಳನ್ನು ಆಡಿದ್ದರು. 2018ರ ಆಗಸ್ಟ್‌ನಲ್ಲಿ ಅವರು ನಿಧನರಾದರು. 'ಮುಂಬೈ ಕ್ರಿಕೆಟ್‌ನ ಆಧಾರಸ್ತಂಭದಂತಿರುವ ಈ ಮಹನೀಯರನ್ನು ಗೌರವಿಸುವುದು ನಮ್ಮ ಕರ್ತವ್ಯ, ಭವಿಷ್ಯದ ಪೀಳಿಗೆಗೆ ಇವರು ಪ್ರೇರಣೆಯಾಗುತ್ತಾರೆ' ಎಂದು ಎಂಸಿಎ ಅಧ್ಯಕ್ಷ ಅಜಿಂಕ್ಯ ನಾಯ್ಕ ಹೇಳಿದರು.

95 ರನ್‌ಗಳಿಗೆ ಕೋಲ್ಕತ್ತಾ ಆಲೌಟ್ | ಪಂಜಾಬ್ ಬೌಲರ್‌ಗಳ ಮಿಂಚಿನ ದಾಳಿ

ಪಂಜಾಬ್‌ಗೆ 16 ರನ್‌ಗಳ ಜಯ

ಚಂಡೀಗಢ: ಪಂಜಾಬ್ ತಂಡದ ಮಾರಕ ಬೌಲಿಂಗ್ ದಾಳಿಗೆ ಕೋಲ್ಕತ್ತಾ ನೈಟ್ ರೈಡರ್ಸ್ ಹೀನಾಯವಾಗಿ ಸೋಲು ಕಂಡಿದ್ದು, ಪಂಜಾಬ್ 16 ರನ್ ಗಳಿಂದ ಪಂದ್ಯವನ್ನು ಗೆದ್ದುಕೊಂಡಿದೆ.

ಪಂಜಾಬ್ ಕಿಂಗ್ಸ್ ನೀಡಿದ್ದ 112 ರನ್‌ಗಳ ಸುಲಭದ ಗುರಿ ಬೆನ್ನಟ್ಟಲಾಗದೇ ಕೋಲ್ಕತ್ತಾ ನೈಟ್ ರೈಡರ್ಸ್ 15.1 ಓವರ್‌ಗಳಲ್ಲಿ 95ಕ್ಕೆ ಆಲೌಟ್ ಆಗಿದೆ.

ಹರ್ಷಿತ್ ರಾಣಾ ಹಾಗೂ ಇತರ ಸ್ಪಿನ್ನರ್‌ಗಳ ಮಾರಕ ಬೌಲಿಂಗ್ ದಾಖಲಿಗೆ ತತ್ತರಿಸಿದ ಪಂಜಾಬ್ ಕಿಂಗ್ಸ್ ತಂಡ ಕೆಕೆಆರ್‌ಗೆ ಗೆಲ್ಲಲು ಕೇವಲ 112 ರನ್‌ಗಳ ಸಾಧಾರಣ ಗುರಿ ನೀಡಿತ್ತು. ಇಲ್ಲಿನ ಪಿಸಿಎ ಸ್ಟೇಡಿಯಂನಲ್ಲಿ ಮಂಗಳವಾರ ನಡೆದ ಐಪಿಎಲ್ ಟೂರ್ನಿಯಲ್ಲಿ ಟಾಸ್ ಗೆದ್ದು ಬ್ಯಾಟಿಂಗ್‌ಗೆ ಇಳಿದಿದ್ದ ಪಂಜಾಬ್ ಕಿಂಗ್ಸ್ ತಂಡವು ಕೆಟ್ಟ ಹೊಡೆತಗಳಿಗೆ ಕೈ ಹಾಕಿ ಸತತ ವಿಕೆಟ್‌ಗಳನ್ನು ಕಳೆದುಕೊಂಡಿತು. ಪ್ರಬ್ಸಿಮ್ರನ್ ಸಿಂಗ್ 30 ರನ್ ಗಳಿಸಿ ತಂಡದ ಗರಿಷ್ಠ ಸ್ಕೋರರ್ ಎನಿಸಿಕೊಂಡರು. ಇಡೀ ತಂಡದಲ್ಲಿ ಅವರನ್ನು ಹೊರತುಪಡಿಸಿ ಮತ್ತೊಬ್ಬ ಆರಂಭಿಕ ಬ್ಯಾಟರ್ ಪ್ರಿಯಾಂಶ್ ಆರ್ಯ (22) ಮಾತ್ರ 20 ಗಡಿ ದಾಟಿದರು.

ಟಾಸ್ ಗೆದ್ದ ಬ್ಯಾಟಿಂಗ್ ಇಳಿದ ಪಂಜಾಬ್ ಕಿಂಗ್ಸ್ ಮೊದಲೆರಡು ಓವರ್ ನಿಧಾನವಾಗಿ ಆಡಿದರೂ, ನಂತರ ಸ್ಫೋಟಕ ಆಟಕ್ಕೆ ಮುಂದಾಯಿತು.ಆದರೆ 4ನೇ ಓವರ್‌ನಲ್ಲೇ ಉತ್ತಮ ಫಾರ್ಮ್‌ನಲ್ಲಿದ್ದ ಪ್ರಿಯಾಂಶ್ ಆರ್ಯ ಅವರ ವಿಕೆಟ್ ಕಳೆದುಕೊಂಡಿತು. ಆರ್ಯ 12 ಎಸೆತಗಳಲ್ಲಿ 3 ಬೌಂಡರಿ, 1 ಸಿಕ್ಸರ್ ಸಹಿತ 22 ರನ್ ಗಳಿಸಿ ಹರ್ಷಿತ್ ರಾಣಾಗೆ ವಿಕೆಟ್ ಒಪ್ಪಿಸಿದರು. ಅದೇ ಓವರ್‌ನಲ್ಲಿ ನಾಯಕ ಶ್ರೇಯಸ್ ಅಯ್ಯರ್ ಕೇವಲ 2 ಎಸೆತಗಳನ್ನೆದುರಿಸಿ ಔಟ್ ಆದರು.

ಟೂರ್ನಿಯಲ್ಲಿ ಮೊದಲ ಅವಕಾಶ ಪಡೆದಿದ್ದ ಜೋಸ್ ಇಂಗ್ಲಿಸ್ ಕೇವಲ 2 ರನ್ ಗಳಿಸಿ ವರುಣ್ ಚಕ್ರವರ್ತಿ ಬೌಲಿಂಗ್‌ನಲ್ಲಿ ಕ್ಲೀನ್ ಬೌಲ್ಡ್ ಆದರು. ಪವರ್ ಪ್ಲೇನ ಕೊನೆಯ ಓವರ್‌ನಲ್ಲಿ ಸತತ 2 ಸಿಕ್ಸರ್ ಬಾರಿಸಿದ್ದ ಪ್ರಬ್ಸಿಮ್ರನ್ ಸಿಂಗ್ ದೊಡ್ಡ ಹೊಡೆತಕ್ಕೆ ಮುಂದಾಗಿ ಕೊನೆಯ ಓವರ್‌ನ ಕೊನೆಯ ಎಸೆತದಲ್ಲಿ ವಿಕೆಟ್ ಕೈಚೆಲ್ಲಿದರು. ಅವರು 15 ಎಸೆತಗಳಲ್ಲಿ 2 ಬೌಂಡರಿ, 3 ಸಿಕ್ಸರ್‌ಗಳ ಸಹಿತ 30 ರನ್ ಗಳಿಸಿ ಔಟ್ ಆದರು. ಪವರ್ ಪ್ಲೇ ಮುಗಿಯುವುದರೊಳಗೆ ಪಂಜಾಬ್ 54 ರನ್‌ಗಳಿಗೆ 4 ವಿಕೆಟ್ ಕಳೆದುಕೊಂಡಿತು.

ನೆಹಾಲ್ ವಧೇರಾ ಹಾಗೂ ಮ್ಯಾಕ್ಸ್‌ವೆಲ್ 5ನೇ ವಿಕೆಟ್‌ಗೆ 20 ರನ್‌ಗಳ ಜತೆಯಾಟ ನೀಡಿ ಚೇತರಿಕೆ ನೀಡುವ ಸೂಚನೆ ನೀಡಿದರಾದರೂ, 9ನೇ ಓವರ್‌ನಲ್ಲಿ ವಧೇರಾ (10) ಹಾಗೂ 10ನೇ ಓವರ್‌ನಲ್ಲಿ ಗ್ಲೆನ್ ಮ್ಯಾಕ್ಸ್‌ವೆಲ್ ಕೇವಲ 7 ರನ್ ಗಳಿಸಿ ಔಟ್ ಆಗುವುದರೊಂದಿಗೆ ಪಂಜಾಬ್‌ನ ಬ್ಯಾಟಿಂಗ್ ಸವಾಲು ಅಂತ್ಯವಾಯಿತು. ಇಂಪ್ಯಾಕ್ಟ್ ಪ್ಲೇಯರ್ ಆಗಿ ಬಂದ ಸೂರ್ಯಾಂಶ್ ಶೆಡ್ಗೆ 4 ರನ್‌ಗಳಿಗೆ ಔಟ್ ಆದರೆ, ಮಾರ್ಕೊ ಜಾನ್ಸನ್ (1) ನರೇನ್ ಬೌಲಿಂಗ್‌ನಲ್ಲಿ ಕ್ಲೀನ್ ಬೌಲ್ಡ್ ಆದರು. 16 ಎಸೆತಗಳಲ್ಲಿ 18 ರನ್ ಗಳಿಸಿದ್ದ ಶಶಾಂಕ್ ಸಿಂಗ್ 16ನೇ ಓವರ್‌ನಲ್ಲಿ ವೈಭವ್ ಅರೋರಾ ಬೌಲಿಂಗ್‌ನಲ್ಲಿ ಎಲ್‌ಡಬ್ಲ್ಯು ಆದರು. ಕೊನೆಯಲ್ಲಿ ಕ್ಸೇವಿಯರ್ ಬಾರ್ಲೆಟ್ ರನೌಟ್ ಆಗುವುದರೊಂದಿಗೆ ಪಂಜಾಬ್ ತಂಡ ಇನ್ನೂ 27 ಎಸೆತಗಳಿರುವಂತೆಯೇ ಆಲೌಟ್ ಆಯಿತು.

ಕೋಲ್ಕತ್ತಾ ತಂಡದ ಪರ 25 ರನ್ ನೀಡಿ 3 ವಿಕೆಟ್ ಪಡೆದ ಹರ್ಷಿತ್ ರಾಣಾ ಯಶಸ್ವಿ ಬೌಲರ್ ಎನಿಸಿದರು. ವರುಣ್ ಚಕ್ರವರ್ತಿ 21 ರನ್ ಕೊಟ್ಟು 2 ವಿಕೆಟ್ ಮತ್ತು ಸುನಿಲ್ ನರೇನ್ 14 ರನ್ ನೀಡಿ 2 ವಿಕೆಟ್ ಪಡೆದರು. ನೋಟ್ಜೆ ಮತ್ತು ವೈಭವ್ ಆರೋರ ತಲಾ ಒಂದು ವಿಕೆಟ್ ಪಡೆದರು.

ಪಂದ್ಯದಲ್ಲಿ ಗಾಯಾಳು ಕಿವೀಸ್ ವೇಗಿ ಲಾಕಿ ಫರ್ಗ್ಯುಸನ್ ಬದಲಿಗೆ ಕ್ಸೇವಿಯರ್ ಬಾರ್ಟ್ಲೆಟ್ ತಂಡವನ್ನು ಸೇರಿಕೊಂಡಿದ್ದರು, ಮಾರ್ಕಸ್ ಸ್ಟೋಯ್ನಿಸ್ ಬದಲಿಗೆ ಜೋಸ್ ಇಂಗ್ಲಿಸ್ ತಂಡದಲ್ಲಿದ್ದರು.

7 ಪಂದ್ಯ ಗೆಲ್ಲುವ ಅನಿವಾರ್ಯತೆ

ಚೆನ್ನೈಗೂ ಪ್ಲೇ ಆಫ್?

ದೆಹಲಿ: ಇದೀಗ ನಡೆಯುತ್ತಿರುವ ಐಪಿಎಲ್ ಟೂರ್ನಿಯಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ತಂಡ ಕಳಪೆ ಪ್ರದರ್ಶನವನ್ನು ತೋರಿಸಿದೆ. ಮುಂಬೈ ಇಂಡಿಯನ್ಸ್ ವಿರುದ್ಧ ತನ್ನ ಮೊದಲನೇ ಪಂದ್ಯದಲ್ಲಿ ಗೆಲುವು ಪಡೆದ ಬಳಿಕ ಋತುರಾಜ್ ಗಾಯಕ್ವಾಡ್ ನಾಯಕತ್ವದ ಸಿಎಸ್‌ಕೆ, ಸತತ 5 ಪಂದ್ಯಗಳಲ್ಲಿ ಸೋಲು ಅನುಭವಿಸಿತ್ತು. ಆದರೆ ಗಾಯಕ್ವಾಡ್ ಗಾಯಕ್ಕೆ ಒಳಗಾಗಿ ಟೂರ್ನಿಯಿಂದ ಹೊರಬಿದ್ದ ಬಳಿಕ ಚೆನ್ನೈ ನಾಯಕತ್ವಕ್ಕೆ ಮರಳಿರುವ ಎಂಎಸ್ ಧೋನಿ ಸೋಮವಾರ ಸಿಎಸ್‌ಕೆಗೆ ಎರಡನೇ ಗೆಲುವು ತಂದುಕೊಟ್ಟಿದ್ದಾರೆ. ಲಖನೌ ಸೂಪರ್ ಜಯಂಟ್ಸ್ ವಿರುದ್ಧದ ಪಂದ್ಯದಲ್ಲಿ ಚೆನ್ನೈ ಸೂಪರ್ ಕಿಂಗ್ಸ್ 5 ವಿಕೆಟ್‌ಗಳ ಗೆಲುವು ಪಡೆಯುವ ಮೂಲಕ ಟೂರ್ನಿಯಲ್ಲಿ ಗೆಲುವಿನ ಲಯಕ್ಕೆ ಮರಳಿದೆ.

ಸೋಮವಾರದ ಪಂದ್ಯದಲ್ಲಿ ಗೆಲುವು ಪಡೆದ ಹೊರತಾಗಿಯೂ ಚೆನ್ನೈ ಸೂಪರ್ ಕಿಂಗ್ಸ್ ತಂಡ ಟೂರ್ನಿಯ ಅಂಕಪಟ್ಟಿಯಲ್ಲಿ ಪ್ರಗತಿ ಕಂಡಿಲ್ಲ. ಅದು ಇನ್ನೂ ಕೊನೆಯ ಸ್ಥಾನದಲ್ಲಿಯೇ ಉಳಿದಿದೆ. ಟೂರ್ನಿಯ ಮೊದಲನೇ ಅವಧಿಯನ್ನು ಮುಗಿಸಿರುವ ಚೆನ್ನೈ ಸೂಪರ್ ಕಿಂಗ್ಸ್ ತಂಡದ ಪ್ಲೇಆಫ್ಸ್ ಭವಿಷ್ಯ ಎರಡನೇ ಅವಧಿಯಲ್ಲಿನ ಪ್ರದರ್ಶನವನ್ನು ಅವಲಂಬಿಸಿದೆ.

ಚೆನ್ನೈ ಪ್ಲೇಆಫ್ ಲೆಕ್ಕಾಚಾರ: ಸಿಎಸ್‌ಕೆ ಇಲ್ಲಿಯ ತನಕ ಆಡಿದ 7 ಪಂದ್ಯಗಳ ಪೈಕಿ ಎರಡರಲ್ಲಿ ಗೆದ್ದು, ಇನ್ನುಳಿದ 5ರಲ್ಲಿ ಸೋಲು ಅನುಭವಿಸಿ ನಾಲ್ಕು ಅಂಕಗಳನ್ನು ಕಲೆ ಹಾಕಿದೆ. ಆದರೂ ಪಾಯಿಂಟ್ಸ್ ಟೇಬಲ್‌ನಲ್ಲಿ 10ನೇ ಸ್ಥಾನದಲ್ಲಿದೆ. ಸಿಎಸ್‌ಕೆಗೆ ಟೂರ್ನಿಯಲ್ಲಿ ಇನ್ನು 7 ಪಂದ್ಯಗಳು ಬಾಕಿ ಇವೆ. ಇನ್ನುಳಿದ 7 ಪಂದ್ಯಗಳಲ್ಲಿ 6ರಲ್ಲಿ ಗೆಲುವು ಪಡೆದರೆ, ಚೆನ್ನೈ ತಂಡ ಒಟ್ಟು 16 ಅಂಕಗಳೊಂದಿಗೆ ಪ್ಲೇಆಫ್ಸ್‌ಗೆ ಅರ್ಹತೆ ಪಡೆಯಲಿದೆ. ಒಂದು ವೇಳೆ ಬೇರೆ ಯಾವುದಾದರೂ ತಂಡ ಕೂಡ 16 ಅಂಕಗಳನ್ನು ಕಲೆ ಹಾಕಿದ್ದರೆ, ಆಗ ಇಲ್ಲಿ ರನ್‌ರೇಟ್ ನಿರ್ಣಾಯಕವಾಗುತ್ತದೆ. ಯಾವ ತಂಡ ಅತ್ಯುತ್ತಮ ರನ್ ರೇಟ್ ಹೊಂದಿರುತ್ತದೋ ಆ ತಂಡ ನಾಕ್‌ಔಟ್ ಹಂತಕ್ಕೆ ಲಗ್ಗೆ ಇಡಲಿದೆ. ಎಂಎಸ್ ಧೋನಿ ನಾಯಕತ್ವದ ಸಿಎಸ್‌ಕೆ ಇನ್ನುಳಿದ 7 ಪಂದ್ಯಗಳನ್ನು ಗೆದ್ದುಕೊಂಡರೆ, 2025ರ ಐಪಿಎಲ್ ಟೂರ್ನಿಯ ಪ್ಲೇಆಫ್‌ಗೆ ಖಚಿತವಾಗಿ ಅರ್ಹತೆ ಪಡೆಯಲಿದೆ, ಅಲ್ಲದೆ ಟೂರ್ನಿಯ ಪಾಯಿಂಟ್ಸ್ ಟೇಬಲ್‌ನಲಿ ಅಗ್ರ ಎರಡರಲ್ಲಿ ಸ್ಥಾನ ಪಡೆಯುವ ಸಾಧ್ಯತೆ ಕೂಡ ಇರಲಿದೆ.

ಯಾರ್ಕ್‌ಶೈರ್ ತಂಡಕ್ಕೆ 504 ರನ್‌ಗಳ ಜಯ | 105 ರನ್‌ಗಳಿಗೆ ವೋರ್ಸೆಸ್ಟರ್‌ಶೈರ್ ತಂಡ ಆಲೌಟ್

ಕೌಂಟಿ ಕ್ರಿಕೆಟ್‌ನಲ್ಲಿ ಹೊಸ ಇತಿಹಾಸ

ಲೀಡ್ಸ್: ಇಲ್ಲಿ ವೋರ್ಸೆಸ್ಟರ್‌ಶೈರ್ ಹಾಗೂ ಯಾರ್ಕ್‌ಶೈರ್ ತಂಡಗಳ ನಡುವೆ ನಡೆದ ಪಂದ್ಯದಲ್ಲಿ 504 ರನ್‌ಗಳ ಅಂತರದ ಅಮೋಘ ಜಯ ಸಾಧಿಸುವ ಮೂಲಕ ಹೊಸ ದಾಖಲೆಯೊಂದು ಸೃಷ್ಟಿಯಾಗಿದೆ.

ಪಂದ್ಯದಲ್ಲಿ ಟಾಸ್ ಗೆದ್ದ ವೋರ್ಸೆಸ್ಟರ್ ಶೈರ್ ಬೌಲಿಂಗ್ ಆಯ್ದುಕೊಂಡಿತು. ಮೊದಲು ಬ್ಯಾಟ್ ಮಾಡಿದ ಯಾರ್ಕ್‌ಶೈರ್ ಪರ ಡೇವಿಡ್ ಮಲಾನ್ 98 ರನ್ ಬಾರಿಸಿದರು. ಜಾರ್ಜ್ ಹಿಲ್ 67 ಹಾಗೂ ಜಾನ್ಸನ್ ಥಾಂಪ್ಸನ್ 70 ರನ್‌ಗಳ ಕೊಡುಗೆ ನೀಡಿದರು. ಆ ಮೂಲಕ ಮೊದಲ ಇನಿಂಗ್ಸ್‌ನಲ್ಲಿ ಯಾರ್ಕ್‌ಶೈರ್ 456 ರನ್ ಕಲೆಹಾಕಿತು.

ಇದಕ್ಕುತ್ತರವಾಗಿ ಪ್ರಥಮ ಇನಿಂಗ್ಸ್ ಶುರು ಮಾಡಿದ ವೋರ್ಸೆಸ್ಟರ್‌ಶೈರ್ ತಂಡಕ್ಕೆ ಜೇಬ್ ಲಿಬ್ಬಿ (53) ಉತ್ತಮ ಆರಂಭ ಒದಗಿಸಿದ್ದರು. ಆದರೆ ಇತರೆ ಬ್ಯಾಟರ್‌ಗಳಿಂದ ನಿರೀಕ್ಷಿತ ಪ್ರದರ್ಶನ ಮೂಡಿಬಂದಿರಲಿಲ್ಲ. ಹಾಗಾಗಿ 166 ರನ್ ಗಳಿಸಿ ವೋರ್ಸೆಸ್ಟರ್‌ಶೈರ್ ತಂಡ ಆಲೌಟ್ ಆಗಿದೆ.

294 ರನ್‌ಗಳ ಮುನ್ನಡೆಯೊಂದಿಗೆ ದ್ವಿತೀಯ ಇನಿಂಗ್ಸ್ ಆರಂಭಿಸಿದ ಯಾರ್ಕ್‌ಶೈರ್ ತಂಡದ ಪರ ಡಾಮ್ ಬೆಸ್ 117 ಎಸೆತಗಳಲ್ಲಿ 1 ಸಿಕ್ಸ್ ಹಾಗೂ 13 ಬೌಂಡರಿಗಳೊಂದಿಗೆ 107 ರನ್ ಬಾರಿಸಿದರು. ಮಧ್ಯಮ ಕ್ರಮಾಂಕದಲ್ಲಿ ಡೇವಿಡ್ ಮಲಾನ್ (76) ಆಕರ್ಷಕ ಅರ್ಧಶತಕ ಸಿಡಿಸಿ, ದ್ವಿತೀಯ ಇನಿಂಗ್ಸ್‌ನಲ್ಲಿ 315 ರನ್ ಕಲೆಹಾಕಿತು.

ಮೊದಲ ಇನಿಂಗ್ಸ್‌ನಲ್ಲಿನ 294 ರನ್‌ಗಳ ಹಿನ್ನಡೆಯೊಂದಿಗೆ ವೋರ್ಸೆಸ್ಟರ್‌ಶೈರ್ ತಂಡವು ದ್ವಿತೀಯ ಇನಿಂಗ್ಸ್‌ನಲ್ಲಿ 609 ರನ್‌ಗಳ ಗುರಿ ಪಡೆಯಿತು. ಈ ಕಠಿಣ ಗುರಿ ಬೆನ್ನತ್ತಿದ ವೋರ್ಸೆಸ್ಟರ್‌ಶೈರ್‌ಗೆ ಜಾರ್ಜ್ ಹಿಲ್ ಆರಂಭಿಕ ಆಘಾತ ನೀಡಿದರು. 7.1 ಓವರ್‌ಗಳನ್ನು ಎಸೆದ ಜಾರ್ಜ್ ಹಿಲ್ ಕೇವಲ 23 ರನ್ ನೀಡಿ 4 ವಿಕೆಟ್ ಕಬಳಿಸಿದರು. ಹಾಗಾಗಿ ಕೇವಲ 105 ರನ್‌ಗಳಿಗೆ ವೋರ್ಸೆಸ್ಟರ್‌ಶೈರ್ ತಂಡ ಆಲೌಟ್ ಆಗಿದೆ. ಆ ಮೂಲಕ ಯಾರ್ಕ್‌ಶೈರ್ ತಂಡ ಬರೋಬ್ಬರಿ 504 ರನ್‌ಗಳ ಜಯ ಸಾಧಿಸಿದೆ.

ಇಂದು ಡೆಲ್ಲಿ-ರಾಜಸ್ಥಾನ ಪಂದ್ಯ | ತವರಿನಲ್ಲಿ ಡೆಲ್ಲಿ ಕ್ಯಾಪಿಟಲ್ಸ್‌ಗೆ ಗೆಲ್ಲುವ ನಿರೀಕ್ಷೆ | ಎರಡು ಪಂದ್ಯಗಳಲ್ಲಿ ಗೆದ್ದಿರುವ ರಾಯಲ್ಸ್

ಡೆಲ್ಲಿಗೆ ರಾಜಸ್ಥಾನದ ಮೇಲೆ ಸವಾರಿ ಮಾಡುವ ತವಕ

ದೆಹಲಿ: ಐಪಿಎಲ್ ಟೂರ್ನಿಯಲ್ಲಿ ಬುಧವಾರ ಅತಿಥೇಯ ಡೆಲ್ಲಿ ಕ್ಯಾಪಿಟಲ್ಸ್ ತಂಡವು ರಾಜಸ್ಥಾನ ರಾಯಲ್ಸ್ ತಂಡವನ್ನು ಎದುರಿಸಲಿದ್ದು, ಪಂದ್ಯವು ಇಲ್ಲಿನ ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ನಡೆಯಲಿದೆ.

ಈಗಾಗಲೇ 5 ಪಂದ್ಯಗಳನ್ನು ಆಡಿರುವ ಡೆಲ್ಲಿ ತಂಡವು ಕೇವಲ 1 ಪಂದ್ಯದಲ್ಲಿ ಮಾತ್ರ ಸೋತು, 8 ಅಂಕಗಳನ್ನು ಸಂಪಾದಿಸಿದ್ದು, 6 ಪಂದ್ಯಗಳನ್ನು ಇದುವರೆಗೆ ಆಡಿರುವ ರಾಜಸ್ಥಾನ ತಂಡವು ಕೇವಲ 2 ಪಂದ್ಯಗಳಲ್ಲಿ ಮಾತ್ರ ಗೆದ್ದಿದೆ. ಮಾರ್ಚ್ 24ರಂದು ನಡೆದ ಪಂದ್ಯದಲ್ಲಿ ಡೆಲ್ಲಿ ತಂಡವು ಲಖನೌ ತಂಡದ ವಿರುದ್ಧ 1 ವಿಕೆಟ್ ರೋಮಾಂಚನಕಾರಿ ಗೆಲುವನ್ನು ಪಡೆಯುವ ಮೂಲಕ ಈ ವರ್ಷದ ಐಪಿಎಲ್ ಆವೃತ್ತಿಯಲ್ಲಿ ಶುಭಾರಂಭ ಮಾಡಿತ್ತು. ಮಾರ್ಚ್-30ರಂದು ನಡೆದ ಪಂದ್ಯದಲ್ಲಿ ಹೈದರಾಬಾದ್ ನೀಡಿದ 164 ರನ್‌ಗಳ ಗುರಿಯನ್ನು ನಿರಾಯಾಸವಾಗಿ ತಲುಪಿದ್ದ ಡೆಲ್ಲಿಯು ಆ ಪಂದ್ಯವನ್ನು 7 ವಿಕೆಟ್‌ಗಳಿಂದ ಗೆದ್ದಿತ್ತು.

ಏಪ್ರಿಲ್ 5ರಂದು ನಡೆದ ಪಂದ್ಯದಲ್ಲಿ ಡೆಲ್ಲಿ ತಂಡವು ಚೆನ್ನೈ ತಂಡವನ್ನು 25 ರನ್‌ಗಳ ಅಂತರದಿಂದ ಸೋಲಿಸಿ ಈ ಬಾರಿಯ ಐಪಿಎಲ್ ಆವೃತ್ತಿಯ ಲೀಗ್ ಪಂದ್ಯದಲ್ಲಿ ಹ್ಯಾಟ್ರಿಕ್ ಗೆಲುವನ್ನು ತನ್ನದನ್ನಾಗಿಸಿಕೊಂಡಿತ್ತು. ಮಾರ್ಚ್ 10ರಂದು ತವರಿನಲ್ಲಿ ಆಯೋಜಿಸಲಾಗಿದ್ದ ಪಂದ್ಯದಲ್ಲಿ ಆರ್‌ಸಿಬಿಯನ್ನು 163 ರನ್‌ಗಳಿಗೆ ಕಟ್ಟಿಹಾಕಿದ್ದ ಡೆಲ್ಲಿ ತಂಡವು 6 ವಿಕೆಟ್‌ಗಳ ಭರ್ಜರಿ ಜಯ ದಾಖಲಿಸಿತ್ತು. ಆದರೆ ನಾಲ್ಕೂ ಪಂದ್ಯಗಳನ್ನೂ ಗೆದ್ದ ಉಮೇದಿ ನಲ್ಲಿ ಏಪ್ರಿಲ್ 13ರಂದು ಮೈದಾನಕ್ಕಿಳಿದಿದ್ದ ಡೆಲ್ಲಿ ತಂಡವನ್ನು ಮುಂಬೈ 12 ರನ್‌ಗಳಿಂದ ಸೋಲಿಸಿ ಗೆಲುವನ್ನು ಸಂಭ್ರಮಿಸಿತ್ತು.

ಅಂಕಪಟ್ಟಿಯಲ್ಲಿ ಕೇವಲ 4 ಅಂಕಗಳನ್ನು ಸಂಪಾದಿಸಿರುವ ರಾಜಸ್ಥಾನ ತಂಡವು ಮಾರ್ಚ್ 23ರಂದು ನಡೆದಿದ್ದ ಪಂದ್ಯದಲ್ಲಿ ಹೈದರಾಬಾದ್ ವಿರುದ್ಧ 44 ರನ್‌ಗಳ ಅಂತರದಲ್ಲಿ ಸೋತು, ಈ ಸಲದ ಐಪಿಎಲ್ ಆವೃತ್ತಿಯ ತನ್ನ ಚೊಚ್ಚಲ ಪಂದ್ಯದಲ್ಲೇ ಮುಖಭಂಗ ಅನುಭವಿಸಿತ್ತು. ಮಾರ್ಚ್ 26ರಂದು ನಡೆದ ಪಂದ್ಯದಲ್ಲೂ ರಾಜಸ್ಥಾನ ತಂಡವು ಕೋಲ್ಕತ್ತಾ ವಿರುದ್ಧ ಸೋಲನ್ನು ಕಂಡಿತ್ತು.

ಆದರೆ ಮಾರ್ಚ್-30ರಂದು ಚೆನ್ನೈ ವಿರುದ್ಧದ ಕಾದಾಟದಲ್ಲಿ ರಾಜಸ್ಥಾನ ತಂಡವು 6 ರನ್‌ಗಳ ಅಂತರದಲ್ಲಿ ಪಂದ್ಯವನ್ನು ಗೆದ್ದಿತ್ತು. ಏಪ್ರಿಲ್ 5ರಂದು ನಡೆದ ಪಂದ್ಯದಲ್ಲಿ ಮತ್ತೆ ರಾಜಸ್ಥಾನವು ಪಂಜಾಬ್ ವಿರುದ್ಧ 50 ರನ್‌ಗಳ ಭಾರೀ ಅಂತರದಲ್ಲಿ ಗೆದ್ದು ಸಂಭ್ರಮಿಸಿತ್ತು.

ಏಪ್ರಿಲ್ 9ರಂದು ಗುಜರಾತ್ ನೀಡಿದ್ದ 218 ರನ್‌ಗಳ ಗುರಿಯನ್ನು ಬೆಂಬತ್ತಿದ್ದ ರಾಜಸ್ಥಾನ ತಂಡವು 159 ರನ್‌ಗಳಿಗೆ ಆಲೌಟ್ ಆಗಿ 58 ರನ್‌ಗಳ ಸೋಲನ್ನು ಅನುಭವಿಸಿತ್ತು.

ಏಪ್ರಿಲ್ 13ರಂದು ಜೈಪುರದಲ್ಲಿ ಆಯೋಜಿಸಲಾಗಿದ್ದ ಪಂದ್ಯದಲ್ಲಿ ಆರ್‌ಸಿಬಿ ತಂಡವು ರಾಜಸ್ಥಾನದ ವಿರುದ್ಧ 9 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿ ಸಂಭ್ರಮಿಸಿತ್ತು.

ಬುಧವಾರದ ಪಂದ್ಯ ದೆಹಲಿಯಲ್ಲಿ ನಡೆಯಲಿರುವುದರಿಂದ ಸಹಜವಾಗಿಯೇ ಡೆಲ್ಲಿ ಕ್ಯಾಪಿಟಲ್ಸ್ ತಂಡಕ್ಕೆ ತನ್ನ ಅಭಿಮಾನಿಗಳ ಭಾರೀ ಬೆಂಬಲ ದೊರಕುವುದು ಖಚಿತ. ಹಾಗಾಗಿ ಸದ್ಯ ದುರ್ಬಲ ತಂಡದಂತಿರುವ ರಾಜಸ್ಥಾನವು ಡೆಲ್ಲಿ ತಂಡವನ್ನು ಹೇಗೆ ಎದುರಿಸಲಿದೆ ಎಂಬುದನ್ನು ಕಾದು ನೋಡಬೇಕಿದೆ.

ಡೆಲ್ಲಿ
- ಅಕ್ಷರ್ (• ನಾಯಕ)
- ರಾಹುಲ್
- ಕರುಣ್
- ಅಭಿಷೇಕ್
- ಸ್ಟಬ್ಸ್
- ಕುಲದೀಪ್
- ನಟರಾಜನ್
- ಸ್ಟಾರ್ಕ್
- ಸಮೀರ್ ರಿಜ್ವಿ
- ಅಶುತೋಷ್
- ಡು ಪ್ಲೆಸಿಸ್
- ಮುಖೇಶ್
- ನಲ್ಕಂಡೆ
- ತಿವಾರಿ

ರಾಜಸ್ಥಾನ
- ಸ್ಯಾಮ್ಸನ್ (• ನಾಯಕ)
- ಜೈಸ್ವಾಲ್
- ರಾಣಾ
- ಪರಾಗ್
- ಹೆಟ್ಮೆಯರ್
- ಜುರೆಲ್
- ಆರ್ಚರ್
- ತೀಕ್ಷಣ
- ಫಾರೂಕಿ
- ಹಸರಂಗ
- ಸಂದೀಪ್
- ತುಷಾರ್
- ದುಬೆ
- ಯಧುವೀರ್

ಶ್ರೇಯಸ್‌ಗೆ ಐಸಿಸಿ ಮಾಸಿಕ ಪ್ರಶಸ್ತಿ

ದೆಹಲಿ: ಪ್ರಸ್ತುತ ನಡೆಯುತ್ತಿರುವ ಐಪಿಎಲ್ ಟೂರ್ನಿಯಲ್ಲಿ ಪಂಜಾಬ್ ಕಿಂಗ್ಸ್ ತಂಡವನ್ನು ಮುನ್ನಡೆಸುತ್ತಿರುವ ಶ್ರೇಯಸ್ ಅಯ್ಯರ್ ಅವರಿಗೆ ಐಸಿಸಿ ಕಡೆಯಿಂದ ದೊಡ್ಡ ಮಾನ್ಯತೆ ಲಭಿಸಿದೆ. 2025ರ ಐಸಿಸಿ ಚಾಂಪಿಯನ್ಸ್ ಟ್ರೋಫಿ ಟೂರ್ನಿಯಲ್ಲಿ ಅತ್ಯುತ್ತಮ ಪ್ರದರ್ಶನ ತೋರಿದ್ದರ ಫಲವಾಗಿ ಶ್ರೇಯಸ್ ಅಯ್ಯರ್‌ಗೆ ಮಾರ್ಚ್ ತಿಂಗಳ ಐಸಿಸಿ ಆಟಗಾರ ಪ್ರಶಸ್ತಿಯನ್ನು ನೀಡಲಾಗಿದೆ. ಐಸಿಸಿ ತಿಂಗಳ ಆಟಗಾರ ಪ್ರಶಸ್ತಿಗೆ ನ್ಯೂಜಿಲೆಂಡ್‌ನ ಜ್ಯಾಕ್ ಡಫಿ ಮತ್ತು ರಚಿನ್ ರವೀಂದ್ರ ಕೂಡ ರೇಸ್‌ನಲ್ಲಿದ್ದರು. ಆದರೆ ಅಂತಿಮವಾಗಿ ಅವರಿಬ್ಬರನ್ನೂ ಹಿಂದಿಕ್ಕಿ, ಶ್ರೇಯಸ್ ಐಯ್ಯರ್ ತಿಂಗಳ ಆಟಗಾರ ಪ್ರಶಸ್ತಿಯನ್ನು ತನ್ನದಾಗಿಸಿಕೊಂಡಿದ್ದಾರೆ. ಐಸಿಸಿ ಚಾಂಪಿಯನ್ಸ್ ಟ್ರೋಫಿಯಲ್ಲಿ ಟೀಮ್ ಇಂಡಿಯಾ ಪರ ಶ್ರೇಯಸ್ ಅಯ್ಯರ್ ಅತಿ ಹೆಚ್ಚು ರನ್ ಗಳಿಸಿದ ಆಟಗಾರ ಎಂಬ ಹಿರಿಮೆಗೆ ಪಾತ್ರರಾದವರು.

ಬಲಗೈ ಬ್ಯಾಟ್ಸ್‌ಮನ್ ಆಗಿರುವ ಅವರು ಆ ಟೂರ್ನಿಯಲ್ಲಿ ಭಾರತ ತಂಡದ ಪರ ಒಟ್ಟು 243 ರನ್ ಗಳಿಸಿದ್ದರು. ಆ ಮೂಲಕ ಐಸಿಸಿ ತಿಂಗಳ ಆಟಗಾರ ಪ್ರಶಸ್ತಿಯನ್ನು ಪಡೆದ ಎರಡನೇ ಭಾರತೀಯ ಆಟಗಾರ ಎಂಬ ಕೀರ್ತಿಗೆ ಶ್ರೇಯಸ್ ಅಯ್ಯರ್ ಭಾಜನರಾಗಿದ್ದಾರೆ. ಇದಕ್ಕೂ ಮುನ್ನ ಶುಭಮನ್ ಗಿಲ್ ಫೆಬ್ರವರಿ ತಿಂಗಳ ಐಸಿಸಿ ಆಟಗಾರ ಪ್ರಶಸ್ತಿಯನ್ನು ಗೆದ್ದಿದ್ದರು. ಇದೀಗ ಸತತ ಎರಡನೇ ಬಾರಿ ಭಾರತ ತಂಡದ ಆಟಗಾರ ಈ ಪ್ರಶಸ್ತಿಯನ್ನು ಗೆದ್ದುಕೊಂಡಿದ್ದಾರೆ.

ಪಾಕಿಸ್ತಾನ ಆತಿಥ್ಯದಲ್ಲಿ ನಡೆದಿದ್ದ ಐಸಿಸಿ ಚಾಂಪಿಯನ್ಸ್ ಟ್ರೋಫಿಯಲ್ಲಿ ರೋಹಿತ್ ಶರ್ಮಾ ನಾಯಕತ್ವದ ಭಾರತ ತಂಡ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿತ್ತು. ಟೂರ್ನಿಯಲ್ಲಿ ಶ್ರೇಯಸ್ ಅಯ್ಯರ್ ಭಾರತ ತಂಡಕ್ಕೆ ಮಧ್ಯಮ ಕ್ರಮಾಂಕದಲ್ಲಿ ಆಸರೆಯಾಗಿದ್ದರು. ಅಯ್ಯರ್ ಅವರ ಅದ್ಭುತ ಪ್ರದರ್ಶನದಿಂದಾಗಿ ಭಾರತ ತಂಡ ಆ ಟೂರ್ನಿಯಲ್ಲಿ ಚಾಂಪಿಯನ್ ಆಗುವಲ್ಲಿ ಯಶಸ್ವಿಯಾಗಿತ್ತು.

ಕಾಂಬ್ಳಿಗೆ ಗವಾಸ್ಕರ್ ಸಹಾಯ

ಮುಂಬೈ: ಆರೋಗ್ಯ ಸಮಸ್ಯೆಗಳಿಂದ ಬಳಲುತ್ತಿರುವ ಭಾರತ ತಂಡದ ಮಾಜಿ ಕ್ರಿಕೆಟಿಗ ವಿನೋದ್ ಕಾಂಬ್ಳಿ ಅವರಿಗೆ ಮಾಜಿ ಕ್ರಿಕೆಟಿಗ ಸುನಿಲ್ ಗವಾಸ್ಕರ್ ಆರ್ಥಿಕ ನೆರವು ನೀಡಲು ಮುಂದಾಗಿದ್ದಾರೆ. ಗವಾಸ್ಕರ್ ತಮ್ಮ ಚಾಂಪ್ಸ್ ಫೌಂಡೇಶನ್ ಮೂಲಕ ಕಾಂಬ್ಳಿಗೆ ತಿಂಗಳಿಗೆ 30,000 ರು. ಸಹಾಯಧನ ನೀಡಲಿದ್ದಾರೆ ಎಂದು ವರದಿಯಾಗಿದೆ. ಈ ಸಹಾಯಧನ ಏಪ್ರಿಲ್ 1ರಿಂದ ಜಾರಿಗೆ ಬಂದಿದೆ ಎಂದು ತಿಳಿಸಿದೆ.



ಕಾಂಬ್ಳಿಗೆ ತಿಂಗಳಿಗೆ 30,000 ರು. ಸಹಾಯಧನ ಮಾತ್ರವಲ್ಲದೆ, ಅದರ ಜತೆಗೆ ಅವರ ವೈದ್ಯಕೀಯ ವೆಚ್ಚಗಳಿಗಾಗಿ ವಾರ್ಷಿಕವಾಗಿ 30,000 ರು. ಕೂಡ ನೀಡಲಾಗುವುದು ಎಂದು ತಿಳಿದುಬಂದಿದೆ. ಈ ವರ್ಷದ ಆರಂಭದಲ್ಲಿ ವಾಂಖೆಡೆ ಸ್ಟೇಡಿಯಂನ 50ನೇ ವಾರ್ಷಿಕೋತ್ಸವದ ಉದ್ಘಾಟನಾ ಸಮಾರಂಭದಲ್ಲಿ ಕಾಂಬ್ಳಿ, ಗವಾಸ್ಕರ್ ಅವರನ್ನು ಭೇಟಿಯಾದರು. ಕಾಂಬ್ಳಿ ನಡೆಯಲು ಕಷ್ಟಪಡುತ್ತಿದ್ದರೂ, ಗವಾಸ್ಕರ್ ಅವರ ಪಾದಗಳನ್ನು ಮುಟ್ಟಿ ಗೌರವ ಸೂಚಿಸಿದ್ದರು. ಕಾಂಬ್ಳಿ 2013ರಲ್ಲಿ ಎರಡು ಬಾರಿ ಹೃದಯಾಘಾತಕ್ಕೆ ಒಳಗಾಗಿದ್ದರು. ಆಗ ಎರಡು ಬಾರಿಯೂ ಶಸ್ತ್ರಚಿಕಿತ್ಸೆಯ ವೆಚ್ಚವನ್ನು ಅವರ ಗೆಳೆಯ ಸಚಿನ್ ತೆಂಡೂಲ್ಕರ್ ಭರಿಸಿದ್ದರು ವಿನೋದ್ ಕಾಂಬ್ಳಿ ಕ್ರಿಕೆಟ್ ವೃತ್ತಿ ಜೀವನದಲ್ಲಿ 17 ಟೆಸ್ಟ್, 104 ಏಕದಿನ ಪಂದ್ಯಗಳನ್ನು 1991 ರಿಂದ 2000ದ ವರೆಗೆ ಭಾರತ ಕ್ರಿಕೆಟ್ ತಂಡದಲ್ಲಿ ಸಕ್ರಿಯರಾಗಿ ಆಟವಾಡಿದ್ದರು. ಕಾಂಬ್ಳಿ 1996ರ ವಿಶ್ವಕಪ್ ಕ್ರಿಕೆಟ್ ಪಂದ್ಯಾವಳಿ ವೇಳೆ ಭಾರತ ತಂಡದ ಸದಸ್ಯರಾಗಿದ್ದರು. 1983ರ ವಿಶ್ವಕಪ್ ವಿಜೇತ ಭಾರತ ತಂಡದಿಂದಲೂ ಕಾಂಬ್ಳಿಗೆ ಸಹಾಯ ಹಸ್ತ ಲಭಿಸಿತ್ತು. ವಿಪರೀತ ಕುಡಿತದ ಚಟಕ್ಕೆ ಬಿದ್ದು ಹಲವು ಕಾಯಿಲೆಗಳಿಗೆ ತುತ್ತಾಗಿದ್ದ ಕಾಂಬ್ಳಿ ಈ ವರ್ಷದ ಆರಂಭದಲ್ಲಿ ತೀವ್ರ ಅನಾರೋಗ್ಯಕ್ಕೀಡಾಗಿ ಸುಮಾರು 10 ದಿನಗಳ ಆಸ್ಪತ್ರೆಗೆ ದಾಖಲಾಗಿದ್ದರು.

ಭಾರತ-ಬಾಂಗ್ಲಾ ಪ್ರವಾಸ ಪಟ್ಟಿ

ದೆಹಲಿ: ಮುಂಬರುವ ಆಗಸ್ಟ್ ತಿಂಗಳಲ್ಲಿ ಭಾರತ ಕ್ರಿಕೆಟ್ ತಂಡವು ಬಾಂಗ್ಲಾದೇಶ ಪ್ರವಾಸ ಕೈಗೊಳ್ಳಲಿದ್ದು, 3 ಪಂದ್ಯಗಳ ಏಕದಿನ ಸರಣಿ ಹಾಗೂ 3 ಪಂದ್ಯಗಳ ಟಿ20ಐ ಸರಣಿಯನ್ನು ಆಡಲಿದೆ. ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿಯು ಮಂಗಳವಾರ ಬಾಂಗ್ಲಾ ಪ್ರವಾಸದ ವೈಟ್ ಬಾಲ್ ಸರಣಿಗಳಿಗೆ ವೇಳಾಪಟ್ಟಿಯನ್ನು ಪ್ರಕಟಿಸಿದೆ. ಆಗಸ್ಟ್ 17ರಂದು ಬಾಂಗ್ಲಾ ಪ್ರವಾಸ ಆರಂಭವಾಗಲಿದ್ದು, ಆಗಸ್ಟ್ 31ರಂದು ಅಂತ್ಯವಾಗಲಿದೆ. ಮೊದಲಿಗೆ ಏಕದಿನ ಸರಣಿ ನಡೆಯಲಿದ್ದು, ಆಗಸ್ಟ್ 17, 20 ಹಾಗೂ 23ರಂದು ಕ್ರಮವಾಗಿ ಮೂರು ಏಕದಿನ ಪಂದ್ಯಗಳು ನಡೆಯಲಿವೆ. ನಂತರ ಟಿ20ಐ ಸರಣಿ ನಡೆಯಲಿದ್ದು, ಆಗಸ್ಟ್ 26, 29 ಹಾಗೂ 31ರಂದು ಕ್ರಮವಾಗಿ ಮೂರು ಟಿ20ಐ ಪಂದ್ಯಗಳು ನಡೆಯಲಿವೆ. ಭಾರತ ತಂಡ 2022ರಲ್ಲಿ ಕೊನೆಯ ಬಾರಿ ಬಾಂಗ್ಲಾದೇಶ ಪ್ರವಾಸವನ್ನು ಹಮ್ಮಿಕೊಂಡಿತ್ತು. ಈ ವೇಳೆ 3 ಪಂದ್ಯಗಳ ಏಕದಿನ ಸರಣಿ ಹಾಗೂ ಎರಡು ಪಂದ್ಯಗಳ ಟೆಸ್ಟ್ ಸರಣಿಯನ್ನು ಆಡಿತ್ತು.

ಏಕದಿನ ಸರಣಿ		
ಮೊದಲನೇ ಏಕದಿನ ಪಂದ್ಯ	ಆಗಸ್ಟ್ 17	ಮೀರ್‌ಪುರ್
ಎರಡನೇ ಏಕದಿನ ಪಂದ್ಯ	ಆಗಸ್ಟ್ 20	ಮೀರ್‌ಪುರ್
ಮೂರನೇ ಏಕದಿನ ಪಂದ್ಯ	ಆಗಸ್ಟ್ 23	ಚಟ್ಟೋಗ್ರಾಮ್
ಟಿ20ಐ ಸರಣಿ		
ಮೊದಲನೇ ಟಿ20ಐ ಪಂದ್ಯ	ಆಗಸ್ಟ್ 26	ಚಟ್ಟೋಗ್ರಾಮ್
ಎರಡನೇ ಟಿ20ಐ ಪಂದ್ಯ	ಆಗಸ್ಟ್ 29	ಮೀರ್‌ಪುರ್
ಮೂರನೇ ಟಿ20ಐ ಪಂದ್ಯ	ಆಗಸ್ಟ್ 31	ಮೀರ್‌ಪುರ್

ಪಾಕ್‌ನ ಫರ್ಹಾನ್ ವಿಶ್ವದಾಖಲೆ

ರಾವಲ್ಪಿಂಡಿ: ಕಿಸ್ತಾನ್ ಸೂಪರ್ ಲೀಗ್‌ನ 5ನೇ ಪಂದ್ಯದಲ್ಲಿ ಭರ್ಜರಿ ಶತಕ ಬಾರಿಸಿ ಸಾಹಿಬ್‌ಝಾದ ಫರ್ಹಾನ್ ವಿಶ್ವ ದಾಖಲೆ ಬರೆದಿದ್ದಾರೆ. ಇಲ್ಲಿ ನಡೆದ ಪಂದ್ಯದಲ್ಲಿ ಇಸ್ಲಾಮಾಬಾದ್ ಯುನೈಟೆಡ್ ಹಾಗೂ ಪೇಶಾವರ್ ಝಲ್ಮಿ ತಂಡಗಳು ಮುಖಾಮುಖಿಯಾಗಿದ್ದವು. ಪಂದ್ಯದಲ್ಲಿ ಟಾಸ್ ಗೆದ್ದ ಇಸ್ಲಾಮಾಬಾದ್ ಯುನೈಟೆಡ್ ತಂಡದ ನಾಯಕ ಶಾದಾಬ್ ಖಾನ್ ಬ್ಯಾಟಿಂಗ್ ಆಯ್ದುಕೊಂಡರು. ಅದರಂತೆ ಇನ್ನಿಂಗ್ಸ್ ಆರಂಬಿಸಿದ ಯುನೈಟೆಡ್ ತಂಡಕ್ಕೆ ಸಾಹಿಬ್‌ಝಾದ ಫರ್ಹಾನ್ ಸ್ಫೋಟಕ ಆರಂಭ ಒದಗಿಸಿದರು. ಮೊದಲ ಓವರ್‌ನಿಂದಲೇ ಬಿರುಸಿನ ಬ್ಯಾಟಿಂಗ್ ಪ್ರದರ್ಶಿಸಿದ ಫರ್ಹಾನ್ ಕೇವಲ 49 ಎಸೆತಗಳಲ್ಲಿ ಶತಕ ಪೂರೈಸಿದರು.



ಈ ಶತಕದೊಂದಿಗೆ ಒಂದೇ ವರ್ಷದಲ್ಲಿ ಟಿ20 ಕ್ರಿಕೆಟ್‌ನಲ್ಲಿ ಅತ್ಯಧಿಕ ಸೆಂಚುರಿ ಸಿಡಿಸಿದ ವಿಶ್ವ ದಾಖಲೆಯನ್ನು ಸಾಹಿಬ್‌ಝಾದ ಫರ್ಹಾನ್ ತಮ್ಮದಾಗಿಸಿಕೊಂಡರು. ಅಲ್ಲದೆ ಈ ದಾಖಲೆ ಬರೆದ ಪಾಕಿಸ್ತಾನದ ಮೊದಲ ಬ್ಯಾಟರ್ ಹಾಗೂ ವಿಶ್ವದ 5ನೇ ಬ್ಯಾಟ್ಸ್‌ಮನ್ ಎಂಬ ಹೆಗ್ಗಳಿಕೆಗೆ ಪಾತ್ರರಾದರು.ಇದಕ್ಕೂ ಮುನ್ನ ಕ್ರಿಸ್ ಗೇಲ್ (2011), ವಿರಾಟ್ ಕೊಹ್ಲಿ (2016), ಜೋಸ್ ಬಟ್ಲರ್ (2022), ಶುಭ್‌ಮನ್ ಗಿಲ್ (2023) ಒಂದೇ ವರ್ಷದಲ್ಲಿ 4 ಟಿ20 ಶತಕ ಬಾರಿಸಿ ವಿಶ್ವ ದಾಖಲೆ ಬರೆದಿದ್ದರು. ಇದೀಗ ಈ ದಾಖಲೆಯನ್ನು ಸರಿಗಟ್ಟುವ ಮೂಲಕ ಸಾಹಿಬ್‌ಝಾದ ಫರ್ಹಾನ್ ಈ ಸಾಧನೆ ಮಾಡಿದ ಪಾಕಿಸ್ತಾನದ ಮೊದಲ ಬ್ಯಾಟರ್ ಎನಿಸಿಕೊಂಡಿದ್ದಾರೆ.

ಸಾಹಿಬ್‌ಝಾದ ಫರ್ಹಾನ್ ಈ ವರ್ಷ ಒಟ್ಟು 4 ಟಿ20 ಶತಕಗಳನ್ನು ಬಾರಿಸಿದ್ದಾರೆ. ಫರ್ಹಾನ್ ಬ್ಯಾಟ್‌ನಿಂದ 4 ಸೆಂಚುರಿಗಳು ಮೂಡಿಬಂದಿರುವುದು ಕೇವಲ 9 ಇನಿಂಗ್ಸ್‌ಗಳಲ್ಲಿ ಎಂಬುದೇ ವಿಶೇಷ. ಇನ್ನು ರಾವಲ್ಪಿಂಡಿಯಲ್ಲಿ ಬಾರಿಸಿದ ಶತಕದ ನೆರವಿನಿಂದ ಇಸ್ಲಾಮಾಬಾದ್ ಯುನೈಟೆಡ್ ತಂಡ 20 ಓವರ್‌ಗಳಲ್ಲಿ 243 ರನ್ ಕಲೆಹಾಕಿತು. ಈ ಗುರಿಯನ್ನು ಬೆನ್ನತ್ತಿದ ಪೇಶಾವರ ಝಲ್ಮಿ ತಂಡವು 141 ರನ್‌ಗಳಿಗೆ ಆಲೌಟ್ ಆಗಿದೆ.